ಮಂಗಳೂರು
ಗುರುವಾರ, 16 ಏಪ್ರಿಲ್ 2026
ಸಂಪುಟ 48, ಸಂಚಿಕೆ 28 ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಉತ್ತರಭಾದ್ರ

ದಿನದ ಮಾತು

ಸತ್ಯವೇ ತಾಯಿ, ಜ್ಞಾನವೇ ತಂದೆ, ಧೈರ್ಯವೇ ಸೋದರ, ದಯೆಯೇ ಸ್ನೇಹಿತ, ಕ್ಷೇಮವೇ ಮಗ.
▲ನೀತಿಸಾರ

ಕಿರುಸುದ್ದಿ

ಉಪ ಚುನಾವಣೆ ಪರಿಣಾಮ: ಕಾಂಗ್ರೆಸ್‌ನಿಂದ ಜಬ್ಬಾರ್ ವಜಾ

ಬೆಂಗಳೂರು: ದಾವಣಗೆರೆ ದಕ್ಷಿಣ ಉಪಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆಂದು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವ ಸ್ಥಾನದಿಂದ ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರನ್ನು ವಜಾ ಮಾಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ. ➡ಪುಟ ೪

ಸಿಎಂ ಸಿದ್ದರಾಮಯ್ಯ ಸ್ಥಾನ ಸುಭದ್ರ: ಡಾ.ಯತೀಂದ್ರ

ಮೈಸೂರು: ಶಾಸಕರ ದೆಹಲಿ ಪ್ರವಾಸಕ್ಕೂ, ಸಿಎಂ ಸ್ಥಾನ ಬದಲಾವಣೆಗೂ ಯಾವುದೇ ಸಂಬಂಧವಿಲ್ಲ. ಸರ್ಕಾರವೂ ಭದ್ರವಾಗಿದೆ. ಅದೇ ರೀತಿ ಸಿದ್ದರಾಮಯ್ಯನವರ ಸಿಎಂ ಸ್ಥಾನವೂ ಭದ್ರವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು. ➡ಪುಟ ೪

ಸಿಬಿಎಸ್‌ಇ ಫಲಿತಾಂಶ ಪ್ರಕಟ: ಶೇ.93 ವಿದ್ಯಾರ್ಥಿ ಉತ್ತೀರ್ಣ

• ಪುಟ ೨

180 ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ!

• ಪುಟ ೨

ಮೇ 15ರವರೆಗೂ ರಾಜ್ಯದಲ್ಲಿ ಗರಿಷ್ಠ ತಾಪಮಾನ

• ಪುಟ ೫

ಆದಿಚುಂಚನಗಿರಿಯಲ್ಲಿ ಭೈರವೈಕ್ಯ ಮಂದಿರ ಲೋಕಾರ್ಪಣೆ
ವಿಕಸಿತ ಭಾರತ ಸಾಕಾರಕ್ಕೆ 9 ಸಂಕಲ್ಪ ಕೈಗೊಳ್ಳಿ: ಪ್ರಧಾನಿ ಕರೆ
ನವ ಸಂಕಲ್ಪಕ್ಕೆ ಸಲಹೆ





ಮಂಡ್ಯ: ವಿಕಸಿತ ಭಾರತ ಸಾಕಾರಕ್ಕಾಗಿ ದೇಶದ ಜನರು ಒಂಬತ್ತು ಸಂಕಲ್ಪಗಳನ್ನು ಮಾಡುವುದು ಅಗತ್ಯವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದರು.

ನಾಗಮಂಗಲ ತಾಲೂಕಿನ ಆದಿಚುಂಚನಗಿರಿಯಲ್ಲಿ ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟಿಸಿದ ಬಳಿಕ ಬೃಹತ್ ವೇದಿಕೆಯಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾಡಿನಾಡಿದ



ಮೋದಿ, ಜಗತ್ತಿನಲ್ಲಿ ಎಲ್ಲೂ ನಮ್ಮ ತರಹದ ದೊಡ್ಡ ಪರಂಪರೆ ಇಲ್ಲ. ಈ ಮಠದಲ್ಲಿ ನಿರಂತರತೆಯ ರೂಪದಲ್ಲಿ ಪರಂಪರೆ ಮುಂದುವರಿದಿದೆ. ಶಿಕ್ಷಣ ಕ್ಷೇತ್ರದಲ್ಲಿ ಸಾವಿರಾರು ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಆರೋಗ್ಯ ಕ್ಷೇತ್ರದಲ್ಲಿ ದೂರದೃಷ್ಟಿಯ ಹೆಜ್ಜೆ ಇಟ್ಟಿದ್ದಾರೆ. ಭೈರವೈಕ್ಯ ಸ್ವಾಮೀಜಿಯವರು ಕೇವಲ ಮನುಷ್ಯರನ್ನು ಉದ್ಧಾರ ಮಾಡಿಲ್ಲ, ಜೀವ ಸಂಕುಲದ ರಕ್ಷಣೆ ಮಾಡಿದ್ದಾರೆ ಎಂದು ಸ್ಮರಿಸಿದರು. ಮಂಡ್ಯದ ಜನರಿಗೆ ನೀರಿನ ಮಹತ್ವ ಗೊತ್ತಿದೆ. ನಾವು ನೀರನ್ನು ಉಳಿಸುವ ಕೆಲಸ ಮಾಡಬೇಕು. ನೀರು ನಮಗೆ ಬಹಳ ಅಮೂಲ್ಯವಾದದು. ➡ಪುಟ ೪

ನವ ಸಂಕಲ್ಪಗಳು

1. ನೀರು ಅತ್ಯಮೂಲ್ಯವಾದದ್ದು, ನೀರಿನ ಸಂರಕ್ಷಣೆ ಮಾಡಿ
2. ಧಾರ್ಮಿಕ, ಆಧ್ಯಾತ್ಮಿಕ ಕೇಂದ್ರಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ
3. ಪರಿಸರ ಸಂರಕ್ಷಣೆಗಾಗಿ ತಾಯಿ ಹೆಸರಿನಲ್ಲಿ ಗಿಡ ನೆಡಿ
4. ಆತ್ಮನಿರ್ಭರ ಭಾರತ ಹೆಸರಿನಲ್ಲಿ ಸ್ವದೇಶಿ ವಸ್ತುಗಳ ಉತ್ಪನ್ನಗಳಿಗೆ ಆದ್ಯತೆ
5. ರಾಸಾಯನಿಕ ಮುಕ್ತ ಕೃಷಿ ಅಳವಡಿಕೆ
6. ಯೋಗ, ಕ್ರೀಡೆ-ಫಿಟ್‌ನೆಸ್ ಮೂಲಕ ಆರೋಗ್ಯಕ್ಕೆ ಮನ್ನಣೆ ನೀಡಬೇಕು
7. ಸೇವಾ ಮನೋಭಾವ ಅಳವಡಿಸಿಕೊಳ್ಳಿ
8. ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆ
9. ರಾಗಿ, ಮಿಲೆಟ್‌ನಂತಹ ಆಹಾರ ಉತ್ಪನ್ನಗಳನ್ನು ಬಳಸಬೇಕು

ಮೇಕೆದಾಟು, ಮಹದಾಯಿಗೆ ಅನುಮತಿ ನೀಡಿ: ಸಿಎಂ



ಮೋದಿ ಬಳಿ 18 ಬೇಡಿಕೆ ಇಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು: ಮಹದಾಯಿ, ಮೇಕೆದಾಟು ಯೋಜನೆಗಳಿಗೆ ಅನುಮತಿ ಮತ್ತು ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿ ಅನುದಾನ ನೀಡುವುದು ಸೇರಿದಂತೆ ರಾಜ್ಯದ 18 ವಿವಿಧ ಬೇಡಿಕೆಗಳಿಗೆ ಪ್ರಧಾನಿ ಮೋದಿ ಅವರಿಗೆ ಸಿಎಂ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ➡ಪುಟ ೪

ಯೋಗೇಶ್ ಗೌಡ ಕೊಲೆ ಪ್ರಕರಣ
ಜನಪ್ರತಿನಿಧಿಗಳ ಕೋರ್ಟ್ ತೀರ್ಪು
ವಿನಯ್ ದೋಷಿ

ಬೆಂಗಳೂರು: ರಾಜ್ಯದಲ್ಲಿ ಸಂಚಲನ ಮೂಡಿಸಿದ್ದ ಧಾರವಾಡದ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಮಾಜಿ ಸಚಿವ, ಶಾಸಕ ವಿನಯ್ ಕುಲಕರ್ಣಿ ಅಪರಾಧಿ ಎಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ.



ಕೊಲೆಯಾದ ಯೋಗೇಶ್‌ಗೌಡ

ಕಳೆದ ಹತ್ತು ವರ್ಷಗಳಿಂದ ನಡೆದ ಸುದೀರ್ಘ ಕಾನೂನು ಹೋರಾಟವು ಬುಧವಾರ ಒಂದು ಮಹತ್ವದ ಘಟ್ಟ ತಲುಪಿದ್ದು, ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು, ಈ ಪ್ರಕರಣದಲ್ಲಿ ಒಟ್ಟು 21 ಆರೋಪಿಗಳ ಪೈಕಿ ಮಾಜಿ ಸಚಿವ ಹಾಗೂ ಹಾಲಿ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ 17 ಮಂದಿಯನ್ನು ದೋಷಿಗಳೆಂದು ತೀರ್ಪು ನೀಡಿದ್ದಾರೆ. ಶಿಕ್ಷೆಯ ಪ್ರಮಾಣವನ್ನು ಗುರುವಾರ(ಏ.16) ಪ್ರಕಟಿಸುವುದಾಗಿ ತಿಳಿಸಿ, ವಿಚಾರಣೆ ಮುಂದೂಡಿದ್ದಾರೆ.

21ಆರೋಪಿಗಳಲ್ಲಿ 17 ಅಪರಾಧಿಗಳು: 21 ಆರೋಪಿಗಳ ಪೈಕಿ ಇಬ್ಬರು ಮಾಫಿ ಸಾಕ್ಷಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕೋರ್ಟ್, 19 ಆರೋಪಿಗಳನ್ನು ದೋಷಿ ಎಂದು ತೀರ್ಪು ನೀಡಿದೆ. ಎ-1 ಬಸವರಾಜ ಮುತ್ತಗಿ ಮಾಫಿ ಸಾಕ್ಷಿಯಾಗಿ ಹೇಳಿಕೆ ನೀಡಿದ್ದರೆ, ಎ-17 ಶಿವಾನಂದ ಮಾಫಿ ಸಾಕ್ಷಿಯಾದ ಬಳಿಕವೂ ಪ್ರತಿಕೂಲ ಹೇಳಿಕೆ ನೀಡಿದ್ದಾರೆ. ಹೀಗಾಗಿ ಮತ್ತೆ ಎ-17 ಆರೋಪಿಯನ್ನಾಗಿಸುವಂತೆ ಸಿಬಿಐ ಅರ್ಜಿ ಸಲ್ಲಿಸಿದೆ. ಇನ್ನು ಪ್ರಕರಣದ ಎ-20 ವಾಸುದೇವ ನಿಲೇಕಣಿ, ಎ-21 ಸೋಮಶೇಖರ ಅವರನ್ನು ಬಿಡುಗಡೆಗೆ ಕೋರ್ಟ್ ಆದೇಶಿಸಿದೆ. ➡ಪುಟ ೪

ಹತ್ಯೆ ಪ್ರಕರಣದ ಘಟನಾವಳಿಗಳು

• ಪುಟ ೪



ಸಿಬಿಐ ತನಿಖೆಯಿಂದ ಪ್ರಕರಣದ ತಿರುವು ಬಯಲು

2019ರಲ್ಲಿ ರಾಜ್ಯ ಸರ್ಕಾರ ಈ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಿದ ನಂತರ ತನಿಖೆಯ ದಿಕ್ಕು ಸಂಪೂರ್ಣವಾಗಿ ಬದಲಾಯಿತು. ಇದು ವಿನಯ್ ಕುಲಕರ್ಣಿ ಅವರ ನೇತೃತ್ವದಲ್ಲಿ ನಡೆದ ಸುಪಾರಿ ಕೊಲೆ ಎಂಬುದು ಸಿಬಿಐ ತನಿಖೆಯಿಂದ ಬಹಿರಂಗಗೊಂಡಿತ್ತು. ಸಿಬಿಐ ಅಧಿಕಾರಿಗಳು ತನಿಖೆ ಚುರುಕುಗೊಳಿಸಿ 2020ರ ನವೆಂಬರ್‌ನಲ್ಲಿ ವಿನಯ್ ಕುಲಕರ್ಣಿ ಅವರನ್ನು ಬಂಧಿಸಿದ್ದರು. ನಂತರ ಹಲವು ಬಾರಿ ಜಾಮೀನು ಅರ್ಜಿಗಳು ವಜಾಗೊಂಡಿದ್ದರೂ, ಅಂತಿಮವಾಗಿ ಸುಪ್ರೀಂ ಕೋರ್ಟ್‌ನಿಂದ ಷರತ್ತುಬದ್ಧ ಜಾಮೀನು ಪಡೆದು ಅವರು ಹೊರಬಂದಿದ್ದರು.

ಸಾಕ್ಷಿಗಳ ಮೇಲೆ ಪ್ರಭಾವ ಬೀರಿದ ಆರೋಪ

• ಪುಟ ೪

ರಾಜ್ಯದಲ್ಲಿ ಹೆಚ್ಚಲಿದೆ 14 ಲೋಕಸಭಾ ಕ್ಷೇತ್ರ

ಬೆಂಗಳೂರು: ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ನಂತರ ರಾಜ್ಯದಲ್ಲಿಯೂ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗಲಿದ್ದು, ಸುಮಾರು 14 ಕ್ಷೇತ್ರಗಳು ಹೆಚ್ಚಾಗಲಿವೆ ಎಂದು ಅಂದಾಜಿಸಲಾಗಿದೆ.

ಒಟ್ಟು ಕ್ಷೇತ್ರ 42ಕ್ಕೇರಿಕೆ



ಗುರುವಾರ (ಏ.16) ಪ್ರಾರಂಭವಾಗುವ ಮೂರು ದಿನಗಳ ಸಂಸತ್ ವಿಶೇಷ ಅಧಿವೇಶನದಲ್ಲಿ ತಿದ್ದುಪಡಿ ವಿಧೇಯಕ ಮಂಡನೆಯಾಗಲಿದ್ದು, ಈ ವಿಧೇಯಕದಿಂದ ಪ್ರಸ್ತುತ 543 ಸೀಟುಗಳ ಸಂಖ್ಯೆ 850ಕ್ಕೆ ಏರಿಕೆಯಾಗುವ ಸಾಧ್ಯತೆಯಿದೆ. ಅದರಂತೆ ರಾಜ್ಯದಲ್ಲಿಯೂ ಲೋಕಸಭಾ ಕೇತ್ರಗಳ ಸಂಖ್ಯೆ ಹೆಚ್ಚಾಗಲಿದ್ದು, ಪ್ರಸ್ತುತ ಇರುವ 28 ಕ್ಷೇತ್ರಗಳಿಗೆ 14 ಹೆಚ್ಚುವರಿ ಕ್ಷೇತ್ರಗಳು ಸೇರಲಿದ್ದು, ಒಟ್ಟು ಲೋಕಸಭಾ ಕ್ಷೇತ್ರಗಳ ಸಂಖ್ಯೆ 42ಕ್ಕೆ ಏರಲಿದೆ ಎನ್ನಲಾಗಿದೆ. ಜನಸಂಖ್ಯೆಯ ಆಧಾರದ ಮೇಲೆ ಈ ಪ್ರಕ್ರಿಯೆ ನಡೆಯಲಿದ್ದು, ದಕ್ಷಿಣದ ರಾಜ್ಯಗಳು ಸೀಟು ಕಳೆದುಕೊಳ್ಳುವ ಭೀತಿಯಿಂದ ತೀವ್ರ ವಿರೋಧ ವ್ಯಕ್ತಪಡಿಸುತ್ತಿವೆ. ಆದರೆ ಕೇಂದ್ರ ಸರ್ಕಾರವು ಇದನ್ನು ಅಭಿವೃದ್ಧಿ ದೃಷ್ಟಿಯಿಂದ ಸಮರ್ಥಿಸಿಕೊಳ್ಳುತ್ತಿದೆ. ➡ಪುಟ ೪

ಚರ್ಚೆಗೆ ಗ್ರಾಸವಾದ ಲೆನ್ಸ್‌ಕಾರ್ಟ್ ವಸ್ತ್ರಸಂಹಿತೆ
ಬಿಂದಿ, ಮೂಗುತಿ ಬೇಡ, ಹಿಜಾಬ್ ಧರಿಸಬಹುದು

ಹೊಸದಿಲ್ಲಿ: ಲೆನ್ಸ್‌ಕಾರ್ಟ್ ಕಂಪನಿಯ ಹೊಸ ವಸ್ತ್ರಸಂಹಿತೆ ನಿಯಮಗಳು ವಿವಾದಕ್ಕೆ ಕಾರಣವಾಗಿವೆ. ನಾಸಿಕ್‌ನ ಟಿಸಿಎಸ್ ಕಂಪನಿಯಲ್ಲಿ ಮತಾಂತರ ವಿಚಾರ ಚರ್ಚೆಯಾಗುತ್ತಿರುವ ಸಮಯದಲ್ಲೇ, ಲೆನ್ಸ್‌ಕಾರ್ಟ್ ತನ್ನ ಸಿಬ್ಬಂದಿಗೆ ಕಟ್ಟುನಿಟ್ಟಿನ ವಸ್ತ್ರ ಸಂಹಿತೆ ಜಾರಿ ಮಾಡಿರುವುದು ಭಾರೀ ಚರ್ಚೆಗೆ ಕಾರಣವಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವರದಿಗಳ ಪ್ರಕಾರ, ಲೆನ್ಸ್‌ಕಾರ್ಟ್ ಕಂಪನಿಯು ಉದ್ಯೋಗಿಗಳಿಗಾಗಿ ವಸ್ತ್ರ ಸಂಹಿತೆ ಜಾರಿಗೊಳಿಸಿದೆ. ಮಹಿಳಾ ಉದ್ಯೋಗಿಗಳು ಬಿಂದಿ ಇಡಬಾರದು ಎಂದು ಹೇಳಲಾಗಿದೆ. ಸಿಂಧೂರ ಇಡಲು ಅವಕಾಶ ಇದ್ದರೂ, ಅದು ಬಹಳ ಕಡಿಮೆ ಇರಬೇಕು ಮತ್ತು ಹೊರಗೆ ಕಾಣಿಸಬಾರದು ಎಂದು ಸೂಚಿಸಲಾಗಿದೆ. ಜತೆಗೆ ಕೈಗೆ ಕಟ್ಟುವ ಧಾರ್ಮಿಕ ದಾರಗಳನ್ನು ತೆಗೆದುಹಾಕಬೇಕು ಎಂದು ತಿಳಿಸಲಾಗಿದೆ. ಹಿಜಾಬ್ ಅಥವಾ ಟರ್ಬನ್ ಧರಿಸಲು ಅವಕಾಶ ನೀಡಲಾಗಿದೆ. ಆದರೆ, ಅವು ಕಪ್ಪು ಬಣ್ಣದಲ್ಲಿರಬೇಕು, ಕಂಪನಿ ಲಾಂಛನ ಮುದ್ರಿತದಂತೆ ಇರಬೇಕು ಎಂದು ನಿಯಮ ಜಾರಿ ಮಾಡಲಾಗಿದೆ. ➡ಪುಟ ೪

ಜಾಲತಾಣದಲ್ಲಿ ಜನಾಕ್ರೋಶ

• ಪುಟ ೪

ಕದನ ವಿರಾಮ ಕನಿಷ್ಠ ಇನ್ನೆರಡು ವಾರ ವಿಸ್ತರಿಸುವ ಪ್ರಯತ್ನದ ನಡುವೆ ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿಕೆ

ಅಂತಿಮ ಹಂತಕ್ಕೆ ಮಧ್ಯಪ್ರಾಚ್ಯ ಸಮರ!

ಕೈರೋ: ಇರಾನ್‌ಗೆ ಯಾವುದೇ ರೀತಿಯ ಶಸ್ತ್ರಾಸ್ತ್ರಗಳನ್ನು ಒದಗಿಸುವುದಿಲ್ಲವೆಂದು ಚೀನಾ ಒಪ್ಪಿಕೊಂಡಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದ್ದಾರೆ. ಇತ್ತೀಚಿನ ವರದಿ ಪ್ರಕಾರ, ಬೀಜಿಂಗ್ ಇರಾನ್‌ಗೆ ಸೇನಾ ನೆರವು ನೀಡುತ್ತಿದೆ ಎಂಬ ಮಾತುಗಳು ಹರಿದಾಡುತ್ತಿದ್ದರೂ, ಚೀನಾದ ವಿದೇಶಾಂಗ ಸಚಿವಾಲಯವು ಇದನ್ನು ಹಲವು ಬಾರಿ ಅಲ್ಲಗಳೆದಿದೆ.

ಬುಧವಾರ ಪ್ರಸಾರವಾದ ಸಂದರ್ಶನವೊಂದರಲ್ಲಿ ಟ್ರಂಪ್, ಇರಾನ್‌ನ ಯುದ್ಧ ಬಹುತೇಕ ಅಂತಿಮ ಹಂತಕ್ಕೆ ಬಂದಿದೆ ಎಂದಿದ್ದಾರೆ. ಯುದ್ಧ ಆರಂಭವಾದ ಕೆಲವೇ ದಿನಗಳಲ್ಲಿ ಅವರು ಅಮೆರಿಕ ಜಯ ಸಾಧಿಸಿದೆ ಎಂದು ಹಲವು ಬಾರಿ ಘೋಷಿಸಿದ್ದರು, ಆದರೆ ತಳಮಟ್ಟದ ಪರಿಸ್ಥಿತಿ ಇನ್ನೂ ಸಂಕೀರ್ಣವಾಗಿಯೇ ಇದೆ.



ಅಮೆರಿಕದ ಸೆಂಟ್ರಲ್ ಕಮಾಂಡ್ ತನ್ನ ಹೇಳಿಕೆಯಲ್ಲಿ ಸಮುದ್ರದ ಮೇಲಿನ ಸಂಪೂರ್ಣ ನಿಯಂತ್ರಣವನ್ನು ಸಾಧಿಸಲಾಗಿದೆ ಎಂದು ತಿಳಿಸಿದೆ. ಇರಾನ್‌ನ ಬಂದರುಗಳ ಮೇಲೆ ಹೇರಲಾಗಿದ್ದ ನಿರ್ಬಂಧವು ಆರಂಭವಾದ 36 ಗಂಟೆಗಳೊಳಗೆ ಸಂಪೂರ್ಣ ಜಾರಿಗೆ ಬಂದಿದೆ ಎಂದು ಸೋಮವಾರ ತಡರಾತ್ರಿ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಣೆ ನೀಡಿದೆ.

ಇದರ ನಡುವೆ, ಅಮೆರಿಕ ಮತ್ತು ಇರಾನ್ ನಡುವೆ ಇರುವ ಯುದ್ಧ ವಿರಾಮವನ್ನು ವಿಸ್ತರಿಸಲು ಮಧ್ಯವರ್ತಿಗಳ ಪ್ರಯತ್ನಗಳು ಮುಂದುವರಿದಿವೆ. ಪ್ರಾದೇಶಿಕ ಅಧಿಕಾರಿಗಳ ಪ್ರಕಾರ, ಉಭಯ ಪಕ್ಷಗಳು ಮತ್ತೆ ಮಾತುಕತೆ ಬರಲು ಸಿದ್ಧವಾಗಿವೆ. ಏಪ್ರಿಲ್ 22ರಂದು ಮುಗಿಯಲಿರುವ ಈ ಯುದ್ಧ ವಿರಾಮವನ್ನು ಕನಿಷ್ಠ ಇನ್ನೂ ಎರಡು ವಾರಗಳ ಕಾಲ ವಿಸ್ತರಿಸಲು ಪ್ರಯತ್ನಿಸಲಾಗುತ್ತಿದೆ, ಇದರಿಂದ ರಾಜತಾಂತ್ರಿಕ ಪರಿಹಾರಕ್ಕೆ ಮತ್ತೊಂದು ಅವಕಾಶ ಸಿಗಲಿದೆ.

ಅಮೆರಿಕದಿಂದ 8 ತೈಲ ನೌಕೆ ತಡೆ

ಟೆಹ್ರಾನ್: ಹಾರ್ಮುಜ್ ಜಲಸಂಧಿಯಲ್ಲಿ ದಿಗ್ಬಂಧನ ಜಾರಿಯಾದ ನಂತರ ಇರಾನ್ ಬಂದರುಗಳನ್ನು ಪ್ರವೇಶಿಸುತ್ತಿದ್ದ ಅಥವಾ ನಿರ್ಗಮಿಸುತ್ತಿದ್ದ ಕನಿಷ್ಠ ಎಂಟು ತೈಲ ನೌಕೆಗಳನ್ನು ಅಮೆರಿಕದ ನೌಕಾಪಡೆ ತಡೆಹಿಡಿದಿದೆ. ಅಮೆರಿಕದ ಮಿಲಿಟರಿ ಸಿಬ್ಬಂದಿ ರೇಡಿಯೋ ಸಂಪರ್ಕದ ಮೂಲಕ ನೌಕೆಗಳ ಸಿಬ್ಬಂದಿಯನ್ನು ಸಂಪರ್ಕಿಸಿ, ಹಿಂದಕ್ಕೆ ಹೋಗುವಂತೆ ಸೂಚನೆ ನೀಡಿದ್ದಾರೆ. ಶಾಂಘೈ ಶುವಾನ್‌ರುನ್ ಶಿಪ್ಪಿಂಗ್ ಕಂಪನಿಗೆ ಸೇರಿದ ರಿಚ್ ಸ್ಟಾರಿ ಸೇರಿದಂತೆ ಎಲ್ಲಾ ನೌಕೆಗಳು ಈ ಆದೇಶಗಳನ್ನು ಪಾಲಿಸಿವೆ. ಈ ಘಟನೆಗಳ ಸಂದರ್ಭದಲ್ಲಿ ನೌಕೆಗಳ ಒಳಪ್ರವೇಶಿಸುವ ಅಗತ್ಯ ಕಂಡುಬಂದಿಲ್ಲ ಎಂದು ತಿಳಿದುಬಂದಿದೆ. ಮರೀನ್ ಮತ್ತು ವಿಶೇಷ ಕಾರ್ಯಾಚರಣೆ ಪಡೆಗಳು ಸೇರಿದಂತೆ ಸಾವಿರಾರು ಸೈನಿಕರು ಹಾಗೂ 15ಕ್ಕೂ ಹೆಚ್ಚು ಯುದ್ಧನೌಕೆಗಳು ಈ ದಿಗ್ಬಂಧನ ಜಾರಿಗೊಳಿಸಿವೆ. ನಂತರದ 36 ಗಂಟೆಗಳ ಒಳಗೆ ಇರಾನ್‌ನ ಕಡಲ ವ್ಯಾಪಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತಿಳಿಸಿದೆ. ಕದನ ವಿರಾಮ ಮಾತುಕತೆಗಳು ವಿಫಲವಾದ ಹಿನ್ನೆಲೆಯಲ್ಲಿ ಈ ದಿಗ್ಬಂಧನ ವಿಧಿಸಲಾಗಿದೆ. ಅಮೆರಿಕದ ಪಡೆಗಳು ಎರಡು ಮಾರ್ಗದರ್ಶಿ ಕ್ಷಿಪಣಿ ಧ್ವಂಸಕ ನೌಕೆಗಳನ್ನು ಬಳಸಿ ಮೈನ್‌ಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸುತ್ತಿವೆ. ಇರಾನ್ ತಾನು ಅಳವಡಿಸಿದ್ದ ಸ್ಫೋಟಕಗಳನ್ನು ತೆಗೆಯುವ ಸಾಮರ್ಥ್ಯ ಹೊಂದಿಲ್ಲ ಎಂದು ವರದಿಯಾಗಿದೆ. ಜಾಗತಿಕ ತೈಲ ಪೂರೈಕೆಯ ಐದನೇ ಒಂದು ಭಾಗದಷ್ಟು ಹಾರ್ಮುಜ್ ಜಲಸಂಧಿಯ ಮೂಲಕವೇ ಸಾಗುತ್ತದೆ.



ಯುರೇನಿಯಂ ಸಮೃದ್ಧೀಕರಣ ಕುರಿತ ಚರ್ಚೆಗೆ ಇರಾನ್ ಸಿದ್ಧ

ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯಿ ಅವರು, ಯುರೇನಿಯಂ ಸಮೃದ್ಧೀಕರಣದ ಸ್ವರೂಪ ಮತ್ತು ಮಟ್ಟದ ಬಗ್ಗೆ ಚರ್ಚಿಸಲು ತಮ್ಮ ದೇಶ ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ. ಆದರೆ, ನಮ್ಮ ಅಗತ್ಯಗಳ ಆಧಾರದ ಮೇಲೆ ಸಮೃದ್ಧೀಕರಣವನ್ನು ಮುಂದುವರಿಸುವ ಹಕ್ಕು ನಮಗಿರಬೇಕು ಎಂದು ಅವರು ಇರಾನ್‌ನ ಸರ್ಕಾರಿ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಯುದ್ಧ ವಿರಾಮ ವಿಸ್ತರಣೆಗೆ ಇನ್ನೂ ಒಪ್ಪಂದವಾಗಿಲ್ಲ

ಯುದ್ಧ ವಿರಾಮವನ್ನು ವಿಸ್ತರಿಸುವ ಕುರಿತು ಇನ್ನೂ ಯಾವುದೇ ಅಧಿಕೃತ ಒಪ್ಪಂದವಾಗಿಲ್ಲ ಎಂದು ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು ಬುಧವಾರ ಹೇಳಿದ್ದಾರೆ. ಇರಾನ್ ಜತೆಗಿನ ಮಾತುಕತೆಗಳು ಮುಂದುವರಿದಿವೆ ಎಂದು ಅವರು ತಿಳಿಸಿದ್ದಾರೆ. ಅವರು ಈ ವಿಷಯದ ಸೂಕ್ಷ್ಮತೆಯ ಕಾರಣದಿಂದ ತಮ್ಮ ಹೆಸರನ್ನು ಬಹಿರಂಗಪಡಿಸಿಲ್ಲ.

ಅನಿಲ ಬೆಲೆ ಏರಿಕೆಯಿಂದ ನಾರ್ವೇಗೆ ಲಾಭ

ಮಧ್ಯಪೂರ್ವದಲ್ಲಿ ಉಂಟಾದ ಸಂಘರ್ಷದಿಂದ ಹಾರ್ಮುಜ್ ಜಲಸಂಧಿಯ ಮುಚ್ಚುವಿಕೆ ತೈಲ ಮಾರುಕಟ್ಟೆಯಲ್ಲಿ ದೊಡ್ಡ ಹೊಡೆತ ನೀಡಿದ್ದು, ನಾರ್ವೇಗೆ ಹೆಚ್ಚಿನ ಲಾಭ ತಂದಿದೆ. ಮಾರ್ಚ್ ತಿಂಗಳಲ್ಲಿ ನಾರ್ವೇಯ ತೈಲ ರಫ್ತು ಆದಾಯ ಸುಮಾರು 200 ಬಿಲಿಯನ್ ಕ್ರೋನರ್(ಸುಮಾರು 21 ಬಿಲಿಯನ್ ಡಾಲರ್) ತಲುಪಿದ್ದು, ಇದು ಕಳೆದ ವರ್ಷಕ್ಕಿಂತ 28% ಹೆಚ್ಚಾಗಿದೆ. ಸ್ವಾಭಾವಿಕ ಅನಿಲ ರಫ್ತು ಕೂಡ 19% ಏರಿಕೆಯಾಗಿದೆ. ತಜ್ಞರ ಪ್ರಕಾರ, ಮಧ್ಯಪೂರ್ವದ ಅಶಾಂತಿ ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ.

ಟೆಹ್ರಾನ್‌ನಲ್ಲಿ ಸ್ಫೋಟ, 3 ಜನರಿಗೆ ಗಾಯ

ಟೆಹ್ರಾನ್‌ನಲ್ಲಿ ಬುಧವಾರ ಬೆಳಗ್ಗೆ ಎರಡು ದೂರ ನಿಯಂತ್ರಿತ ತಾತ್ಕಾಲಿಕ ಸ್ಫೋಟಕ ಸಾಧನಗಳು ಸ್ಫೋಟಗೊಂಡಿವೆ. ಈ ಘಟನೆದಲ್ಲಿ ಮೂರು ಜನರಿಗೆ ಸಣ್ಣ ಮಟ್ಟದ ಗಾಯಗಳಾಗಿವೆ ಎಂದು ಇರಾನ್ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ. ಒಂದು ಸ್ಫೋಟಕ ಸಾಧನವನ್ನು ಸಮಯಕ್ಕೆ ಮುನ್ನ ನಿಷ್ಕ್ರಿಯಗೊಳಿಸಲಾಗಿದೆ. ಸ್ಥಳೀಯ ರಕ್ಷಣಾ ಅಧಿಕಾರಿಗಳ ಪ್ರಕಾರ ಪರಿಸ್ಥಿತಿ ನಿಯಂತ್ರಣದಲ್ಲಿದ್ದು ಯಾವುದೇ ದೊಡ್ಡ ಹಾನಿ ಸಂಭವಿಸಿಲ್ಲ. ಇದು ಸಣ್ಣ ಮಟ್ಟದ ಘಟನೆ ಮಾತ್ರ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಏಷ್ಯಾಕ್ಕೆ ಜಪಾನ್ 10 ಬಿಲಿಯನ್ ಡಾಲರ್ ನೆರವು

ಜಪಾನ್ ಪ್ರಧಾನಿ ಸನಾಏ ತಕೈಚಿ ದಕ್ಷಿಣ ಏಷ್ಯಾ ದೇಶಗಳ ನಾಯಕರೊಂದಿಗೆ ವೀಡಿಯೊ ಸಂವಾದ ನಡೆಸಿದ ನಂತರ, ಪವರ್ ಏಷ್ಯಾ ಎಂಬ ಹೆಸರಿನ 10 ಬಿಲಿಯನ್ ಡಾಲರ್ ನೆರವು ನಿಧಿಯನ್ನು ಘೋಷಿಸಿದರು. ಈ ಯೋಜನೆಯ ಉದ್ದೇಶ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಖರೀದಿಸಲು ಸಾಲ ಸಹಾಯ ನೀಡುವುದು ಹಾಗೂ ತುರ್ತು ಪರಿಸ್ಥಿತಿಯಲ್ಲಿ ಸರಬರಾಜು ಸರಪಳಿಯನ್ನು ಸ್ಥಿರಗೊಳಿಸುವುದು. ಈ ನಿಧಿ ಏಷ್ಯಾದಲ್ಲಿ ತೈಲ ಸಂಗ್ರಹ ವ್ಯವಸ್ಥೆಯನ್ನು ವಿಸ್ತರಿಸಲು, ಇಂಧನ ವೈವಿಧ್ಯತೆಯನ್ನು ಉತ್ತೇಜಿಸಲು ಮತ್ತು ಶಕ್ತಿ ಸಂರಕ್ಷಣೆಗೆ ಸಹಕಾರಿಯಾಗಲಿದೆ. ಜಪಾನ್, ದಕ್ಷಿಣ ಏಷ್ಯಾದಿಂದ ಆಮದು ಮಾಡುವ ವೈದ್ಯಕೀಯ ಮತ್ತು ಇತರ ಪೆಟ್ರೋಲಿಯಂ ಉತ್ಪನ್ನಗಳ ಸರಬರಾಜಿನ ಕೊರತೆಯಿಂದ ಆತಂಕಗೊಂಡಿದೆ.

ಗುಜರಾತ್ ತಲುಪಿದ 20,400 ಮೆ.ಟನ್ ಎಲ್ಪಿಜಿ ಹೊತ್ತ ನೌಕೆ

ಅಹಮದಾಬಾದ್: ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಮುಂದುವರಿದಿರುವ ನಡುವೆಯೇ, 20,400 ಮೆಟ್ರಿಕ್ ಟನ್ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್(ಎಲ್‌ಪಿಜಿ) ಹೊತ್ತ ಭಾರತೀಯ ಧ್ವಜದ ಜಗ್ ವಿಕ್ರಮ್ ನೌಕೆ ಗುಜರಾತ್‌ನ ಕಂಡ್ಲಾದಲ್ಲಿರುವ ದೀನ್‌ದಯಾಳ್ ಬಂದರು ಪ್ರಾಧಿಕಾರ ತಲುಪಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಅಮೆರಿಕ ಮತ್ತು ಇರಾನ್ ನಡುವಿನ ತಾತ್ಕಾಲಿಕ ಎರಡು ವಾರಗಳ ಕದನ ವಿರಾಮದ ಹಿನ್ನೆಲೆಯಲ್ಲಿ ಈ ಹಡಗು ಹಾರ್ಮುಜ್ ಜಲಸಂಧಿಯನ್ನು ದಾಟಿದೆ. ಮಂಗಳವಾರ ರಾತ್ರಿ ಕಛ್‌ನ ಡಿಪಿಎ ಕಂಡ್ಲಾದಲ್ಲಿರುವ ಆಯಿಲ್ ಜೆಟ್ಟಿ-1ರಲ್ಲಿ ಈ ನೌಕೆ ಲಂಗರು ಹಾಕಿದೆ ಎಂದು ದೀನ್‌ದಯಾಳ್ ಬಂದರು ಪ್ರಾಧಿಕಾರ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಮಾರ್ಚ್ ಆರಂಭದಿಂದ ಪರ್ಷಿಯನ್ ಕೊಲ್ಲಿಯಿಂದ ಹೊರಬಂದ ಒಂಬತ್ತನೇ ಭಾರತೀಯ ನೌಕೆ ಇದಾಗಿದೆ. ಇನ್ನು ಸುಮಾರು 15 ಭಾರತೀಯ ಧ್ವಜದ ಹಡಗುಗಳು ಅದೇ ಪ್ರದೇಶದಲ್ಲಿದ್ದು, ಕಾಯುತ್ತಿವೆ, ಎಂದು ಸರ್ಕಾರಿ ಅಧಿಕಾರಿಗಳು ಈ ಹಿಂದೆ ತಿಳಿಸಿದ್ದರು. ಕದನ ವಿರಾಮ ಘೋಷಣೆಯಾದ ನಂತರ ಈ ಜಲಸಂಧಿ ದಾಟಿದ ಮೊದಲ ಭಾರತೀಯ ನೌಕೆ ಇದಾಗಿದೆ.

ವಾಷಿಂಗ್ಟನ್ ಮಾತುಕತೆಯ ಬೆನ್ನಲ್ಲೇ ದ.ಲೆಬನಾನ್ ಮೇಲೆ ಇಸ್ರೇಲ್ ದಾಳಿ

ವಾಷಿಂಗ್ಟನ್‌ನಲ್ಲಿ ಲೆಬನಾನ್ ಮತ್ತು ಇಸ್ರೇಲ್ ಅಧಿಕಾರಿಗಳ ನಡುವೆ ಐತಿಹಾಸಿಕ ರಾಜತಾಂತ್ರಿಕ ಚರ್ಚೆಗಳು ಮುಕ್ತಾಯಗೊಂಡ ಬೆನ್ನಲ್ಲೇ ಬುಧವಾರ ಮುಂಜಾನೆ ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ಮಿಲಿಟರಿ ದಾಳಿ ನಡೆಸಿದೆ.

ಟೈರ್ ನಗರದ ಮಧ್ಯಭಾಗದ ಸಮೀಪ ಇಸ್ರೇಲ್ ಡ್ರೋನ್ ನಡೆಸಿದ ದಾಳಿಯಲ್ಲಿ ತನ್ನ ಮನೆಯ ಹೊರಗೆ ಕುಳಿತಿದ್ದ 19 ವರ್ಷದ ಘದಿರ್ ಬಾಲ್ಬಕಿ ಎಂಬ ಯುವತಿ ಸಾವನ್ನಪ್ಪಿದ್ದಾಳೆ. ಕರಾವಳಿ ನಗರದಾದ್ಯಂತ ಕಟ್ಟಡಗಳು ಧ್ವಂಸಗೊಂಡಿದ್ದು ಎಲ್ಲೆಲ್ಲೂ ರಸ್ತೆಯಲ್ಲಿ ಅವಶೇಷಗಳು ಹರಡಿಕೊಂಡಿವೆ. ಬೈರೂತ್‌ನಲ್ಲಿ ಬಾಂಬ್ ದಾಳಿಗಳು ಕಡಿಮೆಯಾಗಿದ್ದರೂ, ದಕ್ಷಿಣ ಭಾಗದ ಪ್ರದೇಶಗಳು ನಿರಂತರ ದಾಳಿ ಮತ್ತು ಸ್ಥಳಾಂತರದ ಭೀತಿ ಎದುರಿಸುತ್ತಿವೆ.

ವಾಷಿಂಗ್ಟನ್ ಮಾತುಕತೆಯು ಉಭಯ ರಾಷ್ಟ್ರಗಳ ನಡುವಿನ ಅಪರೂಪದ ನೇರ ಸಂಪರ್ಕವಾಗಿತ್ತು. ದೇಶವನ್ನು ಮತ್ತೊಂದು ಯುದ್ಧಕ್ಕೆ ತಳ್ಳಿದ್ದಕ್ಕಾಗಿ ಹಿಜ್ಬುಲ್ಲಾವನ್ನು ಟೀಕಿಸುತ್ತಾ ಬಂದಿರುವ ಲೆಬನಾನ್ ಸರ್ಕಾರ, ಈ ಹೋರಾಟವನ್ನು ಕೊನೆಗೊಳಿಸಲು ಮಾತುಕತೆಯೇ ಏಕೈಕ ಮಾರ್ಗ ಎಂದು ಹೇಳಿದೆ. ಆದರೆ, ಇಸ್ರೇಲ್‌ನ ವೈಮಾನಿಕ ಮತ್ತು ಭೂಸೇನಾ ಕಾರ್ಯಾಚರಣೆಗಳು ಮುಂದುವರಿಯುತ್ತಿರುವುದನ್ನು ಉಲ್ಲೇಖಿಸಿ ಹೆಜ್ಬುಲ್ಲಾ ಈ ಮಾತುಕತೆಯನ್ನು ವಿರೋಧಿಸಿದೆ.

ದುಬಾರಿ ಡ್ರೋನ್ ನಷ್ಟ ಒಪ್ಪಿಕೊಂಡ ಅಮೆರಿಕ!

ವಾಷಿಂಗ್ಟನ್: ಇರಾನ್ ಜತೆಗಿನ ತಾತ್ಕಾಲಿಕ ಕದನ ವಿರಾಮದ ವೇಳೆ ಹಾರ್ಮುಜ್ ಜಲಸಂಧಿಯ ಸಮೀಪ ಏ.9ರಂದು ಸುಮಾರು 238 ದಶಲಕ್ಷ ಡಾಲರ್ ಅಥವಾ 2,222 ಕೋಟಿ ರೂ. ಮೌಲ್ಯದ ದುಬಾರಿ ಕಣ್ಗಾವಲು ಡ್ರೋನ್ ಕಳೆದುಕೊಂಡಿದ್ದನ್ನು ಅಮೆರಿಕ ನೌಕಾಪಡೆ ಒಪ್ಪಿಕೊಂಡಿದೆ.



ಪರ್ಷಿಯನ್ ಗಲ್ಫ್ ಮತ್ತು ಹಾರ್ಮುಜ್ ಜಲಸಂಧಿಯ ಮೇಲೆ ಕಣ್ಗಾವಲು ನಡೆಸುತ್ತಿದ್ದ ಅಮೆರಿಕ ಸೇನೆಯ 238 ದಶಲಕ್ಷ ಡಾಲರ್ ಮೌಲ್ಯದ ಎಂಕ್ಯೂ-4ಸಿ ಟ್ರಿಟನ್ ಡ್ರೋನ್ ಕಾಣೆಯಾಗಿತ್ತು. ಇದು ಕೊನೆಯದಾಗಿ ಇರಾನ್ ವಾಯು ಪ್ರದೇಶದಲ್ಲಿ ಕಾಣಿಸಿಕೊಂಡಿದ್ದು, ಅಮೆರಿಕ-ಇರಾನ್ ನಡುವಿನ ಕದನ ವಿರಾಮ ಘೋಷಣೆಯ ಬಳಿಕ ಘಟನೆ ನಡೆದಿತ್ತು. ಡ್ರೋನ್ ಪತನಗೊಂಡಿತೋ ಅಥವಾ ಇರಾನಿಯನ್ನರು ಹೊಡೆದುರುಳಿಸಿದ್ದಾರೋ ಎಂಬ ಬಗ್ಗೆ ಮಾಹಿತಿಯಿಲ್ಲ. ಎಂಕ್ಯೂ-4ಸಿ ಟ್ರಿಟನ್ ಡ್ರೋನ್, ಪರ್ಷಿಯನ್ ಗಲ್ಫ್ ಮತ್ತು ಹಾರ್ಮುಜ್‌ನ ಮೇಲೆ ಸುಮಾರು 3 ಗಂಟೆಗಳ ಕಾಲ ಕಣ್ಗಾವಲು ನಡೆಸಿದ ಬಳಿಕ ಇಟಲಿಯ ಸಿಗೊನೆಲ್ಲಾ ನೌಕಾನೆಲೆಗೆ ಹೋಗುತ್ತಿತ್ತು ಎಂದು ವರದಿಯಾಗಿದ್ದು, ಆದರೆ ಅದು ತಲುಪಿಲ್ಲ. ಡ್ರೋನ್ ಕಾಣೆಯಾಗುವ ಮುನ್ನ ಸಹಾಯಕ್ಕಾಗಿ ತುರ್ತು ಪರಿಸ್ಥಿತಿ (ಎಮರ್ಜೆನ್ಸಿ) ಅಥವಾ ಅಪಾಯದ ಕೋಡ್ 7700 ಅನ್ನು ಕಳುಹಿಸಿತ್ತು. ಹಾರ್ಮುಜ್‌ನಲ್ಲಿ ಅಮೆರಿಕ ಮತ್ತು ಇರಾನ್ ಕದನ ವಿರಾಮ ಒಪ್ಪಂದಕ್ಕೆ ಒಪ್ಪಿಕೊಂಡ 2 ದಿನಗಳ ಬಳಿಕ ಡ್ರೋನ್ ಕಾಣೆಯಾಗಿತ್ತು.

ಡ್ರೋನ್ ವಿಶೇಷತೆಗಳೇನು?

ಸಾಗರೋತ್ತರ ಬೇಹುಗಾರಿಕೆ, ಗುಪ್ತಚರ, ಕಣ್ಗಾವಲು ಮತ್ತು ಸ್ಥಳಾನ್ವೇಷಣೆ (ಐಎಸ್‌ಆರ್) ಇತ್ಯಾದಿ ಉದ್ದೇಶಕ್ಕಾಗಿ ಬಳಸಲಾಗುತ್ತದೆ. ಸುಮಾರು 50,000 ಅಡಿ ಎತ್ತರದಲ್ಲಿ 24 ಗಂಟೆಗಳಿಗೂ ಹೆಚ್ಚು ಸಮಯ 13,705 ಕಿ.ಮೀ. ದೂರದವರೆಗೆ ಮತ್ತು ಕತ್ತಲಾಗುವ ಮುನ್ನ 10,000 ಅಡಿಗಿಂತ ಕೆಳಗಡೆಯೂ ಕಣ್ಗಾವಲು ನಡೆಸುವ ಸಾಮರ್ಥ್ಯವನ್ನು ಹೊಂದಿದೆ. ಗಂಟೆಗೆ 575ರಿಂದ 610 ಕಿ.ಮೀ. ವೇಗದಲ್ಲಿ ಹಾರಬಲ್ಲದು. ಕಣ್ಗಾವಲಿನ ವೇಳೆ ಹಡಗುಗಳು, ಸಬ್‌ಮೆರೀನ್ (ಜಲಾಂತರ್ಗಾಮಿ) ಮತ್ತು ಸಂಶಯಾಸ್ಪದ ಸಾಗರ ಚಲನವಲನಗಳು ಮತ್ತು ಚಟುವಟಿಕೆಗಳನ್ನು ಡ್ರೋನ್ ಪತ್ತೆಹಚ್ಚುತ್ತದೆ. ಎಲ್ಲಾ ವಾತಾವರಣಗಳಲ್ಲಿ, ಅತಿಎತ್ತರದಲ್ಲೂ ಕಾರ್ಯಾಚರಣೆ ನಡೆಸುತ್ತದೆ.

ದಿಗ್ಬಂಧನ ನಡುವೆಯೂ ಗುರಿ ತಲುಪಿದ ಇರಾನ್ ಟ್ಯಾಂಕರ್

ಟೆಹ್ರಾನ್: ಅಮೆರಿಕದ ಮಿಲಿಟರಿ ದಿಗ್ಬಂಧನದ ನಡುವೆಯೂ, ಅಮೆರಿಕದಿಂದ ಕಪ್ಪುಪಟ್ಟಿಗೆ ಸೇರಿಸಲ್ಪಟ್ಟ ಇರಾನ್‌ನ ಬೃಹತ್ ಕಚ್ಚಾ ತೈಲ ನೌಕೆ (ವಿಎಲ್‌ಸಿಸಿ) ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿ ಇರಾನ್ ತೀರವನ್ನು ತಲುಪಿದೆ.

ಮುಂಬೈನ ಇರಾನ್ ಕಾನ್ಸುಲೇಟ್ ಜನರಲ್ ವರದಿ ಮಾಡಿರುವಂತೆ, 2 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲ ಹೊತ್ತೊಯ್ಯುವ ಸಾಮರ್ಥ್ಯವಿರುವ ಈ ಸೂಪರ್‌ಟ್ಯಾಂಕರ್ ತನ್ನ ಪ್ರಯಾಣದುದ್ದಕ್ಕೂ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಚಾಲನೆಯಲ್ಲಿಟ್ಟಿತ್ತು. ಅಮೆರಿಕದ ನಿರ್ಬಂಧಗಳು ಮತ್ತು ಬೆದರಿಕೆಗಳ ನಡುವೆಯೂ ಈ ನೌಕೆ ಯಾವುದೇ ಅಡೆತಡೆಯಿಲ್ಲದೆ ಅಂತರಾಷ್ಟ್ರೀಯ ಜಲಪ್ರದೇಶ ಮತ್ತು ಆಯಕಟ್ಟಿನ ಜಲಸಂಧಿಯನ್ನು ದಾಟಿ ಬಂದಿದೆ. ಕಡಲ ಟ್ರ್ಯಾಕಿಂಗ್ ಸಂಸ್ಥೆ ಕೆಪ್ಲರ್ ಸೋಮವಾರ ಹಾದುಹೋದ ನಂತರ, ಲೈಬೀರಿಯಾ ಧ್ವಜದ ಕ್ರಿಸ್ಟಿಯಾನಾ ನೌಕೆ ದಿಗ್ಬಂಧನ ಜಾರಿಯಾದ ಎರಡು ಗಂಟೆಗಳ ನಂತರ ಲಾರಾಕ್ ದ್ವೀಪವನ್ನು ದಾಟಿದೆ. ಅದೇ ದಿನ ಮಧ್ಯಾಹ್ನ 31,000 ಟನ್ ಮೆಥನಾಲ್ ಹೊತ್ತಿದ್ದ ಕೊಮೊರೊಸ್ ಧ್ವಜದ ಎಲ್ಪಿಸ್ ನೌಕೆ ಜಲಸಂಧಿಯನ್ನು ದಾಟಿದೆ.

ಕಿರುಸುದ್ದಿ

180 ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ, ಸೆರೆ

ಮುಂಬೈ: ಮಹಾರಾಷ್ಟ್ರದ ಅಯಾನ್ ಅಹ್ಮದ್ ತನ್ವೀರ್ ಎಂಬ ಮುಸ್ಲಿಂ ಯುವಕನೋರ್ವ 180ಕ್ಕೂ ಹೆಚ್ಚು ಅಪ್ರಾಪ್ತೆಯರ ಲೈಂಗಿಕ ದೌರ್ಜನ್ಯ ಎಸಗಿದ್ದಲ್ಲದೆ, 350 ವಿಡಿಯೋಗಳನ್ನು ಚಿತ್ರೀಕರಿಸಿ, ಬೆದರಿಕೆ ಮತ್ತು ಬ್ಲ್ಯಾಕ್‌ಮೇಲ್ ಮಾಡಲು ಅವುಗಳನ್ನು ಬಳಸಿಕೊಂಡಿದ್ದು, ಪ್ರಾಥಮಿಕ ತನಿಖೆಯಲ್ಲಿ ಪೊಲೀಸರು 8 ಸಂತ್ರಸ್ತೆಯರನ್ನು ಮಾತ್ರ ಗುರುತಿಸಿದ್ದಾರೆ. ಬಿಜೆಪಿ ರಾಜ್ಯಸಭಾ ಸಂಸದ ಅನಿಲ್ ಬೊಂದೆ ದೂರಿನ ಅನ್ವಯ ಪ್ರಕರಣ ದಾಖಲಿಸಿದ್ದು, ಈತನನ್ನು ಬಂಧಿಸಲಾಗಿದೆ.

ಅಂಡಮಾನ್ ಬಳಿ ಮಗುಚಿದ ದೋಣಿ, 250 ಜನರ ಸಾವು?

ಹೊಸದಿಲ್ಲಿ: ಅಂಡಮಾನ್ ಸಮುದ್ರದಲ್ಲಿ ಮೀನುಗಾರಿಕಾ ದೋಣಿಯೊಂದು ಮಂಗಳವಾರ ಮಗುಚಿ ಬಿದ್ದಿದ್ದು, ರೊಹಿಂಗ್ಯಾ ವಲಸಿಗರು ಮತ್ತು ಬಾಂಗ್ಲಾದೇಶದ ನಾಗರಿಕರ ಸಹಿತ ಸುಮಾರು 250 ಜನರು ಮೃತಪಟ್ಟಿರುವ ಸಾಧ್ಯತೆಯಿದೆ. ಇವರ ರಕ್ಷಣೆಗಾಗಿ ಭಾರೀ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ.

ಸಿಬಿಎಸ್‌ಇ ಫಲಿತಾಂಶ ಪ್ರಕಟ: ಶೇ.93 ಉತ್ತೀರ್ಣ

ಹೊಸದಿಲ್ಲಿ: ಸಿಬಿಎಸ್‌ಇ 10ನೇ ತರಗತಿಯ ಬೋರ್ಡ್ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಲಾಗಿದೆ ಎಂದು ಮಂಡಳಿಯ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ಈ ವರ್ಷದಿಂದ 10ನೇ ತರಗತಿಗೆ ಎರಡು ಹಂತಗಳಲ್ಲಿ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ವ್ಯವಸ್ಥೆಯನ್ನು ಸಿಬಿಎಸ್‌ಇ ಪ್ರಾರಂಭಿಸಿದ್ದು, ಮೊದಲ ಹಂತದಲ್ಲಿ ಪರೀಕ್ಷೆ ಬರೆಯುವುದು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿತ್ತು. ಇದೇ ಹಂತದ ಫಲಿತಾಂಶವನ್ನು ಈಗ ಪ್ರಕಟಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಈ ಬಾರಿಯೂ ಹುಡುಗಿಯರು ಮೇಲುಗೈ ಸಾಧಿಸಿದ್ದು, ಒಟ್ಟು ಶೇ.93.7 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಳೆದ ವರ್ಷ ಈ ಪ್ರಮಾಣ ಶೇ.93.66 ಆಗಿತ್ತು.

ಅಧಿಕಾರಿಗಳ ಪ್ರಕಾರ, ಹುಡುಗಿಯರ ಉತ್ತೀರ್ಣ ಪ್ರಮಾಣ ಶೇ.94.99 ಇದ್ದು, ಇದು ಹುಡುಗರಿಗಿಂತ ಶೇ.1.3 ಹೆಚ್ಚು. ಒಟ್ಟು 55,368 ವಿದ್ಯಾರ್ಥಿಗಳು ಶೇ.95ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಇನ್ನು 2,21,574 ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ವರ್ಷ 1.47 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಕಂಪಾರ್ಟ್‌ಮೆಂಟ್ ವಿಭಾಗಕ್ಕೆ ಸೇರಿಸಲಾಗಿದೆ. ಈ ಸಂಖ್ಯೆ ಕಳೆದ ವರ್ಷಕ್ಕಿಂತ ಸ್ವಲ್ಪ ಕಡಿಮೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಬಾರಿ 8,074 ಪರೀಕ್ಷಾ ಕೇಂದ್ರಗಳಲ್ಲಿ 24.71 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಮೋದಿಗೆ ಮಾಜಿ ರಾಷ್ಟ್ರಪತಿ ಪ್ರತಿಭಾ ಮೆಚ್ಚುಗೆಯ ಪತ್ರ

ಹೊಸದಿಲ್ಲಿ: ಕೇಂದ್ರ ಸರ್ಕಾರವೀಗ ತರಲು ಉದ್ದೇಶಿಸಿರುವ ಮಹಿಳಾ ಮೀಸಲು ಮಸೂದೆಯು, ಭಾರತೀಯ ಪ್ರಜಾತಂತ್ರಕ್ಕಾಗಿ ಒಂದು ಪರಿವರ್ತನೀಯ ಹೆಜ್ಜೆ ಎಂಬುದಾಗಿ ಶ್ಲಾಘಿಸಿರುವ ಮಾಜಿ ರಾಷ್ಟ್ರಪತಿ ಪ್ರತಿಭಾ ದೇವಿ ಸಿಂಗ್ ಪಾಟೀಲ್, ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆದು ಬೆಂಬಲ ಘೋಷಿಸಿದ್ದಾರೆ.

ಕಾಂಗ್ರೆಸ್ ನಾಯಕಿಯಾಗಿದ್ದ ಪ್ರತಿಭಾ ಪಾಟೀಲ್, ದೇಶದ 12ನೇ ರಾಷ್ಟ್ರಪತಿ ಮತ್ತು ಪ್ರಥಮ ಮಹಿಳಾ ರಾಷ್ಟ್ರಪತಿಯಾಗಿ ಆಯ್ಕೆಯಾಗಿದ್ದರು. ಅವರು 2007ರಿಂದ 2012ರವರೆಗೆ ಅಽಕಾರದಲ್ಲಿದ್ದರು. ಕೇಂದ್ರ ಸರ್ಕಾರದ ನಾರೀ ಶಕ್ತಿ ವಂದನ್ ಅಽನಿಯಮ್ ಸಾಂವಿಧಾನಿಕ ತಿದ್ದುಪಡಿ ಮಸೂದೆಯು ಸಾಂವಿಧಾನಿಕ ಮಂಡಳಿಗಳಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಬಲಪಡಿಸುವ ಮಸೂದೆಯಾಗಿದೆ.

ಏ.16ರಂದು ಆರಂಭವಾಗಲಿರುವ ಸಂಸತ್ತಿನ ವಿಶೇಷ ಅಽವೇಶನ ಆರಂಭಗೊಳ್ಳುವ ಸಂದರ್ಭದಲ್ಲೇ ಅವರು ಈ ಪತ್ರ ಬರೆದಿರುವುದು ಮಹತ್ವದ್ದಾಗಿದೆ. ಮಹಿಳಾ ಸಬಲೀಕರಣ ಮತ್ತು ರಾಷ್ಟ್ರೀಯ ಪ್ರಗತಿಯತ್ತ ನಿರಂತರ ಪ್ರಯತ್ನಗಳಿಗೆ ನನ್ನ ಶುಭಾಶಯಗಳು ಎಂದಿದ್ದಾರೆ ಪ್ರತಿಭಾ.

ಕಾಂಗ್ರೆಸ್‌ಗಿಂತ ಭಿನ್ನ ನಿಲುವು: ಸೋನಿಯಾ ಗಾಂಧಿ ಸೇರಿ ಕಾಂಗ್ರೆಸ್ ನಾಯಕರು ಮಸೂದೆ ಮಂಡನೆಯ ಸಮಯದ ಬಗ್ಗೆ ಅಪಸ್ವರ ತೆಗೆದಿರುವಾಗಲೇ ಪ್ರತಿಭಾ ಪಾಟೀಲ್ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ, ಇದು ರಾಷ್ಟ್ರ ನಿರ್ಮಾಣದಲ್ಲಿ ಗ್ರಾಮೀಣ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಿಸುವ ಉಪಕ್ರಮವಾಗಿದ್ದು, ಪ್ರಜಾತಂತ್ರ ಬಲಪಡಿಸುವ ದಿಟ್ಟ ಹೆಜ್ಜೆ ಎಂದು ಪ್ರಶಂಸಿಸಿದ್ದಾರೆ.

ಟಿಸಿಎಸ್ ಎಚ್‌ಆರ್ ನಿದಾ ಖಾನ್ ಮಾಸ್ಟರ್ ಮೈಂಡ್

ಹೊಸದಿಲ್ಲಿ: ಮಹಾರಾಷ್ಟ್ರದ ನಾಸಿಕ್‌ನ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್(ಟಿಸಿಎಸ್) ಬಿಪಿಒ ಘಟಕದಲ್ಲಿ ಮಹಿಳಾ ಉದ್ಯೋಗಿಗಳ ಮೇಲೆ ಲೈಂಗಿಕ ಕಿರುಕುಳ ಮತ್ತು ಬಲವಂತದ ಮತಾಂತರಕ್ಕೆ ಯತ್ನಿಸಿದ ಪ್ರಕರಣದಲ್ಲಿ ಎಚ್‌ಆರ್ ಮ್ಯಾನೇಜರ್ ನಿದಾ ಖಾನ್ ಮಾಸ್ಟರ್ ಮೈಂಡ್ ಆಗಿದ್ದಳೆಂದು ತಿಳಿದುಬಂದಿದೆ. ಇದೀಗ ಆಕೆ ತಲೆಮರೆಸಿಕೊಂಡಿದ್ದಾಳೆ. ಈಕೆ ಟಿಸಿಎಸ್ ನಾಸಿಕ್ ಘಟಕದ ಲೈಂಗಿಕ ಕಿರುಕುಳ ತಡೆ ಕಾಯ್ದೆ (ಪಾಶ್) ಸಮಿತಿಯ ಸದಸ್ಯೆಯಾಗಿದ್ದಳು.

ಆರೋಪಿಗಳಾದ ಆಸಿಫ್ ಅನ್ಸಾರಿ, ಶಾಫಿ ಶೇಖ್, ಶಾರುಖ್ ಖುರೇಷಿ, ರಾಝಾ ಮೆಮನ್, ದಾನಿಶ್ ಶೇಖ್ ಮತ್ತು ತೌಸಿಫ್ ಅತ್ತಾರ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಮುಸ್ಲಿಂ ಪುರುಷ ಸಹೋದ್ಯೋಗಿಗಳು ಹಿಂದು ಮಹಿಳಾ ಉದ್ಯೋಗಿಗಳಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಬಗ್ಗೆ ಹಲವಾರು ಹಿಂದು ಮಹಿಳೆಯರು ನೀಡಿದ ದೂರುಗಳನ್ನು ಎಚ್‌ಆರ್ ಮ್ಯಾನೇಜರ್ ನಿದಾ ಖಾನ್ ಕಡೆಗಣಿಸಿದ್ದು, ಬೆಂಬಲವಾಗಿ ನಿಂತಿದ್ದಳು. ಹಿಂದು ಮಹಿಳಾ ಉದ್ಯೋಗಿಗಳ 78 ಇಮೇಲ್ ದೂರುಗಳನ್ನು ಖಾನ್ ಕಡೆಗಣಿಸಿದ್ದು, ಅದು ಟಿಸಿಎಸ್ ಉನ್ನತ ಮಟ್ಟದ ಅಧಿಕಾರಿಗಳಿಗೆ ತಲುಪದಂತೆ ನೋಡಿಕೊಂಡಿದ್ದಳು ಎಂದು ತನಿಖೆಯಲ್ಲಿ ತಿಳಿದುಬಂದಿದೆ. ನಾಸಿಕ್ ನಗರ ಪೊಲೀಸ್ ಠಾಣೆಯಲ್ಲಿ ಹಿಂದು ಮಹಿಳೆಯರು ದಾಖಲಿಸಿದ ದೂರಿನಲ್ಲಿ ಆಕೆಯ ಹೆಸರು ಇದೆ. 2026ರ ಜನವರಿಯಲ್ಲಿ ಈಕೆ ಕಂಪನಿ ತೊರೆದಿದ್ದಾಳೆಂದೂ ವರದಿಯಾಗಿದೆ. ಪ್ರಕರಣದ ತನಿಖೆಗಾಗಿ ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) ಸತ್ಯ ಶೋಧನಾ ಸಮಿತಿ ರಚಿಸಿದ್ದಾಗಿ ಬುಧವಾರ ಪ್ರಕಟಿಸಿದೆ.

ಇಂದಿನಿಂದ 3 ದಿನ ಅಧಿವೇಶನ

ಹೊಸದಿಲ್ಲಿ: ಏಪ್ರಿಲ್ 16ರಿಂದ 18ರವರೆಗೆ ಮೂರು ದಿನ ನಡೆಯಲಿರುವ ವಿಶೇಷ ಅಧಿವೇಶನದಲ್ಲಿ ನಾರೀಶಕ್ತಿ ವಂದನ ಅಧಿನಿಯಮಕ್ಕೆ ತಿದ್ದುಪಡಿಗಳನ್ನು ತರಲಾಗುವುದು. ಈ ಕಾಯ್ದೆ, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ಕಡ್ಡಾಯಗೊಳಿಸುತ್ತದೆ. ಇದನ್ನು 2029 ರಲ್ಲಿ ಜಾರಿಗೆ ತರಲು ಉದ್ದೇಶಿಸಲಾಗಿದೆ.ಏತನ್ಮಧ್ಯೆ, ವಿಶೇಷ ಅಧಿವೇಶನದಲ್ಲಿ ಮಂಡನೆಯಾಗಲಿರುವ ಸಂವಿಧಾನ ತಿದ್ದುಪಡಿ ಮಸೂದೆಯ ಕ್ಷೇತ್ರ ಮರುವಿಂಗಡಣೆ ನಿಬಂಧನೆಗಳ ವಿರುದ್ಧ ಮತ ಚಲಾಯಿಸಲು ಹಲವು ವಿರೋಧ ಪಕ್ಷಗಳು ನಿರ್ಧರಿಸಿವೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಮಹಿಳಾ ಮೀಸಲಾತಿಯನ್ನು ಪಕ್ಷಗಳು ಬೆಂಬಲಿಸಿದರೂ, ವಿರೋಧ ಪಕ್ಷಗಳನ್ನು ಹತ್ತಿಕ್ಕುವ ಉದ್ದೇಶದಿಂದ ಈ ಕ್ಷೇತ್ರ ಮರುವಿಂಗಡಣೆ ಅಂಶಗಳನ್ನು ಸೇರಿಸಲಾಗಿದೆ. ಇದನ್ನು ಒಗ್ಗಟ್ಟಿನಿಂದ ವಿರೋಧಿಸುವುದಾಗಿ ಖರ್ಗೆ ತಿಳಿಸಿದ್ದಾರೆ.

ಬಿಹಾರ: ಜೆಡಿಯುನ ಬಿಜೇಂದ್ರ ಯಾದವ್, ವಿಜಯ್ ಕುಮಾರ್‌ಗೆ ಡಿಸಿಎಂ ಸ್ಥಾನ

ನೂತನ ಸಿಎಂ ಸಾಮ್ರಾಟ್ ಬಳಿ 30 ಖಾತೆ

ಪಾಟ್ನಾ: ಜೆಡಿಯು ನಾಯಕರಾದ ಬಿಜೇಂದ್ರ ಪ್ರಸಾದ್ ಯಾದವ್ ಮತ್ತು ವಿಜಯ್ ಕುಮಾರ್ ಚೌಧರಿ ಅವರು ಸಾಮ್ರಾಟ್ ಚೌಧರಿ ನೇತೃತ್ವದ ಬಿಹಾರದ ಹೊಸ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಗಳಾಗಿ ನೇಮಕಗೊಂಡಿದ್ದಾರೆ.

ಸಾಮ್ರಾಟ್ ಚೌಧರಿ ಅವರು ಬುಧವಾರ ಬಿಹಾರದ 24ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಬಿಹಾರದಲ್ಲಿ ಬಿಜೆಪಿ ನಾಯಕೊಬ್ಬರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿರುವುದು ವಿಶೇಷವಾಗಿದೆ.

ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ತಾತ್ಕಾಲಿಕವಾಗಿ ಸುಮಾರು 30 ಇಲಾಖೆ ತಮ್ಮ ಬಳಿಯೇ ಇಟ್ಟುಕೊಂಡಿದ್ದಾರೆ. ಇದರಲ್ಲಿ ಗೃಹ, ಜಾಗೃತಿ(ವಿಜಿಲೆನ್ಸ್), ಆದಾಯ ಮತ್ತು ಭೂ ಸುಧಾರಣೆ, ಆರೋಗ್ಯ ಮುಂತಾದ ಪ್ರಮುಖ ಇಲಾಖೆಗಳು ಸೇರಿವೆ.

ಕ್ಯಾಬಿನೆಟ್ ಕಾರ್ಯಾಲಯ ಇಲಾಖೆಯಿಂದ ಹೊರಡಿಸಿದ ಅಧಿಸೂಚನೆಯ ಪ್ರಕಾರ,



ಮುಖ್ಯಮಂತ್ರಿಯನ್ನು ಹೊರತುಪಡಿಸಿ ಪ್ರಮಾಣವಚನ ಸ್ವೀಕರಿಸಿದ ಇಬ್ಬರು ನಾಯಕರು ವಿಜಯ್ ಕುಮಾರ್ ಚೌಧರಿ ಮತ್ತು ಬಿಜೇಂದ್ರ ಪ್ರಸಾದ್ ಯಾದವ್ ಅವರು ಉಪ ಮುಖ್ಯಮಂತ್ರಿಗಳಾಗಿ ನೇಮಕಗೊಂಡಿದ್ದಾರೆ.

ಮುಖ್ಯಮಂತ್ರಿಯವರ ಬಳಿಯಲ್ಲಿರುವ ಇತರೆ ಇಲಾಖೆಗಳು ಕೃಷಿ, ಕಾರ್ಮಿಕ ಸಂಪನ್ಮೂಲ ಮತ್ತು ವಲಸೆ ಕಾರ್ಮಿಕರ ಕಲ್ಯಾಣ, ವಿಪತ್ತು ನಿರ್ವಹಣೆ, ಪಂಚಾಯತ್ ರಾಜ್ ಮತ್ತು ಕೈಗಾರಿಕೆಗಳನ್ನು ಒಳಗೊಂಡಿವೆ.

ಅಧಿಸೂಚನೆಯಲ್ಲಿ ಸಾಮ್ರಾಟ್ ಚೌಧರಿ ಅವರ ಬಳಿ ಒಟ್ಟು 29 ಇಲಾಖೆಗಳು ಇದ್ದು, ಇನ್ನೂ ಯಾರಿಗೂ ಹಂಚಿಕೆಯಾಗದ ಎಲ್ಲಾ ಇತರೆ ಇಲಾಖೆಗಳೂ ಅವರ ಬಳಿ ಇವೆ ಎಂದು ಹೇಳಲಾಗಿದೆ.

ವಿಜಯ್ ಕುಮಾರ್ ಚೌಧರಿ ಅವರಿಗೆ ಜಲ ಸಂಪನ್ಮೂಲ, ಸಂಸದೀಯ ವ್ಯವಹಾರಗಳು ಮತ್ತು ಮಾಹಿತಿ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ ಸೇರಿದಂತೆ 10 ಇಲಾಖೆಗಳು ನೀಡಲಾಗಿದೆ. ಇವುಗಳನ್ನು ಅವರು ಹಿಂದಿನ ನಿತೀಶ್ ಕುಮಾರ್ ಸರ್ಕಾರದಲ್ಲಿಯೂ ನಿರ್ವಹಿಸಿದ್ದರು.

ಬಿಜೇಂದ್ರ ಪ್ರಸಾದ್ ಯಾದವ್ ಅವರಿಗೆ ಇಂಧನ, ಹಣಕಾಸು ಮತ್ತು ಯೋಜನೆ ಹಾಗೂ ಅಭಿವೃದ್ಧಿ ಸೇರಿದಂತೆ 8 ಇಲಾಖೆಗಳನ್ನು ನೀಡಲಾಗಿದೆ. ಇವುಗಳನ್ನೂ ಅವರು ಹಿಂದಿನ ಸರ್ಕಾರದಲ್ಲಿಯೇ ನೋಡಿಕೊಂಡಿದ್ದರು. ಅವರಿಗೆ ಮದ್ಯನಿಷೇಧ, ಅಬಕಾರಿ ಮತ್ತು ನೋಂದಣಿ ಇಲಾಖೆಯ ಜವಾಬ್ದಾರಿಯನ್ನೂ ನೀಡಲಾಗಿದೆ.

ತಮಿಳುನಾಡಿನಲ್ಲಿ ರೋಡ್ ಶೋ ಬಳಿಕ ಪ್ರಧಾನಿ ಮೋದಿ ವಿಶ್ವಾಸ

ಎಐಎಡಿಎಂಕೆ ಮಿತ್ರಕೂಟಕ್ಕೆ ಜಯ ಖಚಿತ

ನಾಗರ್‌ಕೊಯಿಲ್(ತಮಿಳುನಾಡು): ತಮಿಳುನಾಡಿನ ಏ.23ರ ವಿಧಾನಸಭಾ ಚುನಾವಣಾ ಕಣದಲ್ಲಿರುವ ಎನ್‌ಡಿಎ ಅಭ್ಯರ್ಥಿಗಳ ಪರವಾಗಿ ಪ್ರಧಾನಿ ನರೇಂದ್ರ ಮೋದಿ ಬುಧವಾರ ಕನ್ಯಾಕುಮಾರಿ ಜಿಲ್ಲೆಯ ನಾಗರಕೊಯಿಲ್‌ನಲ್ಲಿ ಭರ್ಜರಿ ರೋಡ್ ಶೋ ನಡೆಸಿದರು. ಎಐಎಡಿಎಂಕೆ ನೇತೃತ್ವದ ಮಿತ್ರಕೂಟಕ್ಕೆ ವಿಜಯ ಖಚಿತ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸಿದ ಪ್ರಧಾನಿ ಮೋದಿ, ಆಳುವ ಡಿಎಂಕೆಗೆ ನಿರ್ಗಮನ ಬಾಗಿಲು ತೆರೆದಿರುತ್ತೆ ಎಂದು ಖಚಿತವಾಗಿ ನುಡಿದರು.


ಪುಷ್ಪಾಲಂಕೃತ ವಾಹನದಲ್ಲಿ ನಿಂತುಕೊಂಡ ಪ್ರಧಾನಿ ಮೋದಿ ರಸ್ತೆಯ ಇಕ್ಕೆಲಗಳಲ್ಲೂ ಪ್ರವಾಹೋಪಾದಿಯಲ್ಲಿ ನೆರೆದಿದ್ದ ಅಭಿಮಾನಿ ಜನರತ್ತ ಪ್ರೀತಿಯಿಂದ ಕೈಬೀಸಿದರು. ಸುಮಾರು 1 ತಾಸು ರೋಡ್ ಶೋನಲ್ಲಿ ಪಾಲ್ಗೊಂಡ ಪ್ರಧಾನಿ ಅವರಿಗೆ ಜನರು ರಸ್ತೆಯ ಇಕ್ಕೆಲಗಳಿಂದ ಪುಷ್ಪಾರ್ಚನೆಗೈದು ಸಂತಸಪಟ್ಟರು. ನಾಗರಕೊಯಿಲ್‌ನ ವೆಪ್ಪಮೂಡು ಜಂಕ್ಷನ್‌ನಿಂದ ವಡಸೇರಿವರೆಗೆ ಅಂದರೆ 1.5 ಕಿಮೀ ವ್ಯಾಪ್ತಿವರೆಗೆ ರೋಡ್ ಶೋ ನಡೆಯಿತು.

ರೋಡ್ ಶೋ ಹಾದಿಯುದ್ದಕ್ಕೂ ಮೋದಿ, ಮೋದಿ, ಭಾರತ್ ಮಾತಾ ಕೀ ಜೈ ಘೋಷಣೆಗಳು ಅನುರಣಿಸಿತ್ತು. ಎನ್‌ಡಿಎ ಮಿತ್ರಪಕ್ಷಗಳಾದ



ಎಡಿಎಂಕೆ, ಬಿಜೆಪಿ , ಎಎಂಎಂಕೆ ಧ್ವಜಗಳು ಹಾದಿಯುದ್ದಕ್ಕೂ ಹಾರಾಡುತ್ತಾ ರಂಗುರಂಗಿನ ವಾತಾವರಣ ನಿರ್ಮಿಸಿತ್ತು. ನೃತ್ಯ ಕಲಾವಿದರ ಶಾಸ್ತ್ರೀಯ ನೃತ್ಯ ಪ್ರದರ್ಶನ ರೋಡ್‌ಶೋ ರಂಗೇರಿಸಿತ್ತು.

ಕಾರ್ಯಕ್ರಮಗಳಂಗ ಡಾ. ಬಿ.ಆರ್.ಅಂಬೇಡ್ಕರ್, ದ್ರಾವಿಡ ನಾಯಕರಾದ ಸಿ.ಎನ್.ಅಣ್ಣಾದುರೈ, ಎಐಎಡಿಎಂಕೆ ಸ್ಥಾಪಕ ಎಂ.ಜಿ.ರಾಮಚಂದ್ರನ್ ಅವರ ಭಾವಚಿತ್ರಗಳಿಗೆ ಪ್ರಧಾನಿ ಮೋದಿ ನಮನ ಸಲ್ಲಿಸಿದರು. ನಂತರ ಭಾಷಣ ಮಾಡಿ, ಏ.23ರ ಚುನಾವಣೆಯಲ್ಲಿ ಎನ್‌ಡಿಎಗೆ ವಿಜಯ ಖಚಿತವೆಂದು ಭರವಸೆ ವ್ಯಕ್ತಪಡಿಸಿದರು.


॥ ಓಂ ಶ್ರೀ ಮಂಜುನಾಥಾಯ ನಮಃ ॥
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪದವಿಪೂರ್ವ ಕಾಲೇಜು, ಉಜಿರೆ
(ಶ್ರೀ ಧ. ಮಂ. ಎಜ್ಯುಕೇಷನಲ್ ಸೊಸೈಟಿ (ರಿ.), ಉಜಿರೆ ಇದರ ಆಡಳಿತಕ್ಕೊಳಪಟ್ಟಿದೆ)
ಬೆಳ್ತಂಗಡಿ ತಾಲೂಕು, ದ.ಕ.574240 | ಫೋನ್ : 08256 - 237321
ಅಧ್ಯಕ್ಷರು: ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಶ್ರೀಕ್ಷೇತ್ರ ಧರ್ಮಸ್ಥಳ
STATE TOPPERS
2025–26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆಗೈದ
ನಮ್ಮ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೆ
ಹಾರ್ದಿಕ ಅಭಿನಂದನೆಗಳು
4th STATE RANK Nija Kulal 593 (Arts)
6th STATE RANK Hamsini Bhide 595 (Commerce)
9th STATE RANK Ankitha 591 (Science)
9th STATE RANK Anshula Shreshta 592 (Commerce)
9th STATE RANK Shreepoorna G L 588 (Arts)
10th STATE RANK Ramcharan S 591 (Commerce)
ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ - 903 | ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ- 893 | ವಿಶಿಷ್ಟ ಶ್ರೇಣಿ - 382 | ಪ್ರಥಮ ಶ್ರೇಣಿ - 476
SCIENCE
COMMERCE
ARTS
PRANAV KRISHNA 579
PAVITHRA JAIN 570
SHREELAKSHMI 560
KIRAN KUMAR J 560
ADI 557
SAHANA 554
LIKHITA R S 549
VATSALYA 544
FATHIMA SUFAIRA 533
MILAN K 531
KOWSHALYA M K 524
SALMATH 514
ANAGHA M D 513
PREETHAM B P 510
ಕನಿಷ್ಠ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ
ಅತ್ಯುತ್ತಮ ಫಲಿತಾಂಶ
2026-27ನೇ ಸಾಲಿನ ದಾಖಲಾತಿ ಪ್ರಾರಂಭಗೊಂಡಿದೆ
ಅಧ್ಯಕ್ಷರು ಮತ್ತು ಆಡಳಿತ ಮಂಡಳಿ
ಶ್ರೀ ಧ.ಮಂ. ಎಜ್ಯುಕೇಷನಲ್ ಸೊಸೈಟಿ (ರಿ.), ಉಜಿರೆ
ಶುಭ ಹಾರೈಸುವ
ಪ್ರಾಂಶುಪಾಲರು, ಉಪನ್ಯಾಸಕ ವೃಂದ ಹಾಗೂ ಸಿಬ್ಬಂದಿ ವರ್ಗ
ಶ್ರೀ ಧ. ಮಂ. ಪದವಿಪೂರ್ವ ಕಾಲೇಜು, ಉಜಿರೆ

ಹೈಕೋರ್ಟ್ ಮಹತ್ವದ ತೀರ್ಪು ಮುಟ್ಟಿನ ರಜೆ ಮಹಿಳೆಯ ಹಕ್ಕು


ಧಾರವಾಡ: ಮಹಿಳೆಯರ ಮುಟ್ಟಿನ ರಜೆ ಸೌಲಭ್ಯವಲ್ಲ, ಅದು ಸಂವಿಧಾನದ ವಿಧಿ 21ರ ಅಡಿಯಲ್ಲಿ ಪ್ರತಿಯೊಬ್ಬ ಮಹಿಳೆಯು 'ಘನತೆಯಿಂದ ಬದುಕುವ ಹಕ್ಕಿನ' ಅವಿಭಾಜ್ಯ ಅಂಗ ಎಂದು ಧಾರವಾಡ ಪೀಠ ಹೈಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ.



ಬೆಳಗಾವಿ ಹೋಟೆಲ್‌ನ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದ ಮಹಿಳೆಯು, ತಮಗೆ ಮುಟ್ಟಿನ ಸಮಯದಲ್ಲಿ ವೇತನ ಸಹಿತ ರಜೆ ನೀಡಬೇಕು. ಮುಟ್ಟಿನ ರಜೆ ನೀತಿ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಏಕಸದಸ್ಯ ಪೀಠ ಮುಟ್ಟಿನ ರಜೆ ಮಹಿಳೆಯರ ಜೈವಿಕ ಪ್ರಕ್ರಿಯೆ ಗೌರವಿಸುವ ಮತ್ತು ಅವರಿಗೆ ಕೆಲಸದ ಸ್ಥಳದಲ್ಲಿ ಘನತೆ ಒದಗಿಸುವ ಸಂವಿಧಾನಿಕ ಭರವಸೆಯಾಗಿದೆ ಎಂದು ಅಭಿಪ್ರಾಯಪಟ್ಟಿದೆ. ಅಸಂಘಟಿತ ವಲಯಕ್ಕೂ ಅನ್ವಯ: ಕೇವಲ ಸರ್ಕಾರಿ ಅಥವಾ ದೊಡ್ಡ ಕಂಪನಿಗಳಲ್ಲದೆ, ಹೋಟೆಲ್ ಕಾರ್ಮಿಕರು, ದಿನಗೂಲಿ ನೌಕರರು ಸೇರಿದಂತೆ 'ಅಸಂಘಟಿತ ವಲಯದ ಎಲ್ಲಾ ಮಹಿಳಾ ಉದ್ಯೋಗಿಗಳಿಗೂ' ಈ ನೀತಿ ಅನ್ವಯವಾಗಬೇಕು ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಕಟ್ಟುನಿಟ್ಟಿನ ಜಾರಿಗೆ ಸೂಚನೆ: ರಾಜ್ಯ ಸರ್ಕಾರವು 2025ರ ನವೆಂಬರ್‌ನಲ್ಲಿ ಹೊರಡಿಸಿರುವ 'ಮುಟ್ಟಿನ ರಜೆ ನೀತಿ'ಯನ್ನು (ತಿಂಗಳಿಗೆ ಒಂದು ದಿನದ ವೇತನ ಸಹಿತ ರಜೆ) ರಾಜ್ಯದ ಎಲ್ಲಾ ಸಂಸ್ಥೆಗಳಲ್ಲಿ ತಕ್ಷಣದಿಂದ ಜಾರಿಗೆ ತರುವಂತೆ ಹೈಕೋರ್ಟ್ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ರಾಜ್ಯದ ಖಾಸಗಿ ಕಂಪನಿಗಳು, ಕೈಗಾರಿಕೆಗಳು, ಸಣ್ಣಪುಟ್ಟ ಸಂಸ್ಥೆಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಮುಟ್ಟಿನ ವೇತನ ಸಹಿತ ರಜೆ ಹಾದಿ ಸುಗಮವಾಗಿದೆ. ಆದೇಶ ಉಲ್ಲಂಘಿಸುವ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ನ್ಯಾಯಾಲಯ ಸೂಚಿಸಿದೆ.

ರಾಮ ಬಾಣ



ರಾಷ್ಟ್ರೀಯ ಭೌಗೋಳಿಕ ಪಟ್ಟಿಗೆ ಯಾಣ

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನಲ್ಲಿರುವ ಯಾಣ ದಟ್ಟವಾದ ಅರಣ್ಯದ ನಡುವೆ ಇರುವ ವಿಶಿಷ್ಟ ಶಿಲಾ ರಚನೆಗಳಿಗೆ ಮತ್ತು ಭೈರವೇಶ್ವರ, ಮೋಹಿನಿ ಶಿಖರಗಳೆಂಬ ಕಪ್ಪು ಕಲ್ಲಿನ ಬೆಟ್ಟಗಳಿಗೆ ಪ್ರಸಿದ್ಧವಾದ ಪ್ರವಾಸಿ ತಾಣವಾಗಿದೆ. ಇದು ಟ್ರಕ್ಕಿಂಗ್ ಮತ್ತು ಸಾಹಸ ಪ್ರವಾಸಕ್ಕೆ ಹೇಳಿಮಾಡಿಸಿದ ಸ್ಥಳವಾಗಿದ್ದು, ಸುಂದರವಾದ ನಿಸರ್ಗದ ಮಡಿಲಿನಲ್ಲಿದೆ.

ಇಂತಹ ಅದ್ಭುತವಾದ ಪ್ರಕೃತಿ ಸೌಂಧರ್ಯವನ್ನು ಹೊಂದಿರುವ ವಿಶ್ವ ಪ್ರಸಿದ್ಧ ಯಾಣಕ್ಕೆ ಈಗ ಮತ್ತೊಂದು ಗರಿ ಮೂಡಿದ್ದು, ರಾಷ್ಟ್ರೀಯ ಭೌಗೋಳಿಕ ಪಾರಂಪರಿಕ ಪಟ್ಟಿಗೆ ಸೇರ್ಪಡೆಯಾಗಿದೆ. ದೇಶದ ಭೂ ವಿಜ್ಞಾನ ಮತ್ತು ನೈಸರ್ಗಿಕ ಸಂಪನ್ಮೂಲಗಳ ಪರಿಶೋಧನೆ ಕ್ಷೇತ್ರದಲ್ಲಿ ಸಂಶೋಧನೆಯನ್ನು ನಡೆಸುವ ಕೇಂದ್ರ ಗಣಿ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಭಾರತೀಯ ಭೂವೈಜ್ಞಾನಿಕ ಸಮೀಕ್ಷೆ (ಜಿಎಸ್‌ಐ) ಸಂಸ್ಥೆಯ ಮಹಾನಿರ್ದೇಶಕರು ಈ ಕುರಿತು ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದಾರೆ. ಭಾರತೀಯ ಭೂವೈಜ್ಞಾನಿಕ ಸಮೀಕ್ಷೆ (ಜಿಎಸ್‌ಐ) ಸಂಸ್ಥೆ ದೇಶದ ಭೌಗೋಳಿಕ ಪರಂಪರೆಗಳ ಭೂ ಸಂರಕ್ಷಣೆಗಾಗಿ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ.

ಜಿಎಸ್‌ಐ ಸಂಸ್ಥೆ ಪರಿಗಣಿಸಿರುವ ಅಂಶಗಳು

ಪಶ್ಚಿಮ ಘಟ್ಟಗಳೊಳಗೆ ನೆಲೆಗೊಂಡಿರುವ ಯಾಣ ಶಿಲೆಗಳು, ಟೆಕ್ಟೋನಿಕ್ಸ್, ಹವಾಮಾನ ಮತ್ತು ಕಾರ್ಸ್ಟ್ ಪ್ರಕ್ರಿಯೆಗಳಿಂದ ರೂಪುಗೊಂಡ ಭೂದೃಶ್ಯ ವಿಕಾಸದ ವೈಶಿಷ್ಟ್ಯ ಹೊಂದಿದೆ ಎಂದು ಹೇಳಿದೆ. ಅಲ್ಲದೇ, ಯಾಣದಲ್ಲಿನ ಗಮನಾರ್ಹ ಶಿಲಾ ದ್ರವ್ಯರಾಶಿಗಳು ಸುಮಾರು 2,700 ಮಿಲಿಯನ್ ವರ್ಷಗಳ ಹಿಂದೆ ರೂಪುಗೊಂಡವು ಮತ್ತು ಪೂರ್ವ ಕ್ಯಾಂಬ್ರಿಯನ್ ಡೊಲೊಮಿಟಿಕ್ ಸುಣ್ಣದ ಕಲ್ಲಿನಿಂದ ಕೂಡಿದೆ. ಲಕ್ಷಾಂತರ ವರ್ಷಗಳಲ್ಲಿ, ತೀವ್ರವಾದ ಉಷ್ಣವಲಯದ ಹವಾಮಾನ, ರಾಸಾಯನಿಕ ಕರಗುವಿಕೆಯೊಂದಿಗೆ ಸೇರಿಕೊಂಡು ವಿಶಿಷ್ಟವಾದ ಕಾರ್ಸ್ಟ್ ವೈಶಿಷ್ಟ್ಯಗಳ ಬೆಳವಣಿಗೆಗೆ ಕಾರಣವಾಯಿತು ಎಂದು ಜಿಎಸ್‌ಐ ಸಂಸ್ಥೆ ಅಭಿಪ್ರಾಯಪಟ್ಟಿದೆ.

ಇದು ಬೌಗೋಳಿಕ ಪರಂಪರೆ ತಾಣ ಎಂದು ಕರೆಯಲ್ಪಡುವ ಪ್ರದೇಶಗಳನ್ನು ಗುರುತಿಸುವುದು ಮತ್ತು ಇತಿಹಾಸದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ಕಾರ್ಯ ನಿರ್ವಹಿಸುತ್ತದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಭಾರತ ಹಿಂದೂ ದೇಶವೇ ಆಗಿದೆ
– ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ

– ಹಾಗಾದರೆ ಉಳಿದವರ ಗತಿಯೇನು ಎಂದು ಕೆಲವರು ಗಾಬರಿಯಾಗುತ್ತಾರೆ, ಇನ್ನು ಕೆಲವರು ಗೊತ್ತಿದ್ದೂ ಗಾಬರಿ ಪಡಿಸುತ್ತಾರೆ. ಹಿಂದೂ ಎಂದರೆ ಯಾವುದೇ ಜಾತಿ, ಮತ, ಪಂಥ, ಪಂಗಡವಲ್ಲ, ಪೂಜಾ ಪದ್ಧತಿಯನ್ನೇ ಧರ್ಮ ಅಂತ ವಾದಿಸುವ ಧರ್ಮವೂ ಅಲ್ಲ. ಭಾರತ ನನ್ನ ದೇಶ ಎಂದು ಪ್ರಾಮಾಣಿಕವಾಗಿ ಭಾವಿಸುವ, ಜೀವಿಸುವವರೆಲ್ಲರೂ ಹಿಂದುಗಳು!

ದಿನ ಭವಿಷ್ಯ

ಮೇಷ ಪೂರೈಸಲಾಗದ ಆಶ್ವಾಸನೆ ನೀಡಿ ಇಕ್ಕಟ್ಟಿಗೆ ಸಿಲುಕುವಿರಿ. ವರ್ಚಸ್ಸಿಗೆ ಧಕ್ಕೆ ತರುವ ಕಾರ್ಯ ಎಸಗದಿರಿ. ಕೌಟುಂಬಿಕ ಸಮಸ್ಯೆ ಕಾಡುವುದು.

ವೃಷಭ ಸವಾಲಿನ ದಿನ. ವೃತ್ತಿಯಲ್ಲೂ, ವೈಯಕ್ತಿಕವಾಗಿಯೂ ಹೆಚ್ಚು ಹೊಣೆ. ಸಂಬಂಧಕ್ಕೆ ಧಕ್ಕೆ. ಆರ್ಥಿಕ ಹಿಂಜರಿಕೆ. ಖರ್ಚೂ ಹೆಚ್ಚಳ.

ಮಿಥುನ ಹೊಸತನಕ್ಕೆ ಯತ್ನಿಸುವಿರಿ. ಅದರಲ್ಲಿ ಆಂಶಿಕ ಯಶ. ಮನಸ್ಸು ಉಲ್ಲಸಿತ ಗೊಳಿಸುವ ಪ್ರಸಂಗ ಉಂಟಾದೀತು. ಪ್ರೀತಿಯಲ್ಲಿ ಸಫಲತೆ.

ಕಟಕ ವೃತ್ತಿಯಲ್ಲಿ ಸಫಲತೆ. ಪರಿಶ್ರಮಕ್ಕೆ ಅಧಿಕ ಫಲ ಪಡೆಯುವಿರಿ. ಹೊಟ್ಟೆ ಕೆಡಿಸುವ ಆಹಾರ ತಿನ್ನದಿರಿ. ಪ್ರೀತಿಯ ಸಂಬಂಧ ಇನ್ನಷ್ಟು ಗಟ್ಟಿಗೊಳ್ಳಲಿದೆ.

ಸಿಂಹ ಆತ್ಮೀಯ ಸಂಬಂಧಕ್ಕೆ ಹುಳಿ ಹಿಂಡಲು ಕೆಲವರ ಯತ್ನ ನಡೆದೀತು. ನೀವು ಎಚ್ಚರದಿಂದಿರಿ. ವೃತ್ತಿಯಲ್ಲಿ ಪ್ರತಿಕೂಲ ಪರಿಣಾಮ ಎದುರಿಸುವಿರಿ.

ಕನ್ಯಾ ಒಳಿತು, ಕೆಡಕು ಎರಡನ್ನೂ ಎದುರಿಸುವಿರಿ. ಉದ್ವಿಗ್ನ ಸ್ಥಿತಿ ಕಾಣುವಿರಿ. ಆದರ ಜತೆಗೇ ಪರಿಹಾರದ ನಿರಾಳತೆಯೂ. ಆರೋಗ್ಯ ಬಗ್ಗೆ ಕಾಳಜಿ ವಹಿಸಿ.

ತುಲಾ ದುಗುಡಕ್ಕೆ ಕಾರಣವಾಗಿದ್ದ ವಿಷಯ ಇಂದು ಇತ್ಯರ್ಥ. ಆದರೆ ಸ್ವಲ್ಪ ಮಟ್ಟಿನ ಹಿನ್ನಡೆಯೂ ಉಂಟಾದೀತು. ಭಾವುಕ ಸನ್ನಿವೇಶ ಎದುರಿಸುವಿರಿ.

ವೃಶ್ಚಿಕ ಪ್ರಗತಿಯ ದಿನ. ಉದ್ಯೋಗದಲ್ಲಿ ಹೊಸ ಅವಕಾಶ. ಏಕಾಂಗಿಗಳಿಗೆ ವೈವಾಹಿಕ ಬಂಧ ಏರ್ಪಡಬಹುದು. ತೃಪ್ತಿಕರ ಆರ್ಥಿಕ ಪ್ರಗತಿ.

ಧನು ವೃತ್ತಿಯಲ್ಲಿ ಸೃಷ್ಟಿಯಾಗಿದ್ದ ಸಮಸ್ಯೆ ಪರಿಹಾರ. ಪ್ರೀತಿಯಲ್ಲಿ ಒಡಕು. ಕ್ಷುಲ್ಲಕ ವಿಷಯ ಮನಸ್ಸು ಕೆಡಿಸಬಹುದು. ದೇವರ ಪ್ರಾರ್ಥನೆ ಮಾಡಿ.

ಮಕರ ಹೊಣೆಗಾರಿಕೆ, ಒತ್ತಡ ಕಡಿಮೆ. ಯಾವುದೋ ವಿಷಯದಲ್ಲಿ ಭಾವುಕರಾಗಿ ನಿರ್ಧಾರ ತಾಳದಿರಿ. ಅದರ ಪ್ರಾಕ್ಟಿಕಲ್ ಆಯಾಮ ಪರಿಶೀಲಿಸಿ, ನಿರ್ಧರಿಸಿ.

ಕುಂಭ ವೃತ್ತಿಯಲ್ಲಿ ನಿಮ್ಮ ಕಠಿಣ ದುಡಿಮೆಗೆ ತೃಪ್ತಿಕರ ಫಲಿತಾಂಶ. ಆದರೆ ಕೆಲವು ವಿಷಯಗಳು ಮನಸ್ಸು ಕದಡುತ್ತವೆ. ನಿಮ್ಮ ಮಾತು ತಪ್ಪರ್ಥ ಬಿಂಬಿಸಬಹುದು.

ಮೀನ ದಂಪತಿಗಳು ತಮ್ಮ ಸಂಬಂಧ ಬಲಪಡಿಸುವ ಕ್ರಮ ತೆಗೆದುಕೊಳ್ಳಬೇಕು. ಸಣ್ಣ ಭೇದವು ಸಂಬಂಧ ಕೆಡಿಸದಿರಲಿ. ಮುಖ್ಯ ಕಾರ್ಯ ಅಪೂರ್ಣ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ:1,7,4,6

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ

ಮತ ಪತ್ರ ಬಳಸಲು ರಾಜ್ಯಪಾಲರ ಒಪ್ಪಿಗೆ

ಬೆಂಗಳೂರು: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಯಂತ್ರಗಳ ಬದಲಿಗೆ ಮತ ಪತ್ರವನ್ನು ಬಳಸಲು ರಾಜ್ಯಪಾಲರ ಒಪ್ಪಿಗೆ ಲಭಿಸಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್



ರಾಜ್ (ತಿದ್ದುಪಡಿ) ವಿಧೇಯಕ, 2026ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಮಂಗಳವಾರ ತಿದ್ದುಪಡಿ ವಿಧೇಯಕಕ್ಕೆ ಅಂಕಿತ ಹಾಕಿದ್ದು, ವಿಧೇಯಕವು, ಕರ್ನಾಟಕ ಗ್ರಾಮ ಸ್ವರಾಜ್, ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2026 ಆಗಿ ಬದಲಾಗಿದೆ. ರಾಜ್ಯ ಸರ್ಕಾರವು ಬುಧವಾರ ಅಧಿಕೃತ ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದೆ.

ಗ್ರಾಮ ಪಂಚಾಯತ್ ಸೇರಿದಂತೆ ಇತರೆ ಚುನಾವಣೆ ಸಂದರ್ಭದಲ್ಲಿ ಮತದಾರ ಮೇಲಿನ ದಬ್ಬಾಳಿಕೆ, ಬೆದರಿಕೆ ಹಾಗೂ ಅನಗತ್ಯ ಪ್ರಭಾವ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳುವ ಅಂಶ ಈ ಅಧಿನಿಯಮದಲ್ಲಿ ಸೇರ್ಪಡೆಗೊಂಡಿದೆ. ಸಂವಿಧಾನದ 326ನೇ ಅನುಚ್ಛೇದದಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವ ಸಲುವಾಗಿ ಈ ಅಧಿನಿಯಮ ಜಾರಿಗೊಳಿಸಲಾಗುತ್ತಿದೆ.

ಮತದಾರರ ಪಟ್ಟಿ ಸಿದ್ಧಪಡಿಸಿ

ಅಧಿನಿಯಮದ ಪ್ರಕಾರ, ಜಿಲ್ಲಾ ಪಂಚಾಯತ್‌ನ ಪ್ರತಿಯೊಂದು ಮತಕ್ಷೇತ್ರಗಳಲ್ಲಿ ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಾಧಿಕಾರಿ ಮತದಾರರ ಪಟ್ಟಿ ಸಿದ್ಧಪಡಿಸಬೇಕು. ಸಿದ್ಧಪಡಿಸಲಾದ ಮತದಾರರ ಪಟ್ಟಿಯನ್ನು ಈ ಅಧಿನಿಯಮದ ಅನುಸಾರವಾಗಿ ಪರಿಷ್ಕರಿಸಬೇಕು, ಮಾರ್ಪಡಿಸಬೇಕು ಹಾಗೂ ಪ್ರಕಟಿಸಬೇಕು. ಜಿ.ಪಂ. ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲಾಗಿರುವ ಯಾರೇ ವ್ಯಕ್ತಿ, ಆ ಮತಕ್ಷೇತ್ರದ ಚುನಾವಣೆಯಲ್ಲಿ ಮತದಾನಕ್ಕೆ ಹಕ್ಕುಳ್ಳವನಾಗಿರಲಿದ್ದಾನೆ.

ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯ ಸುರಕ್ಷಿತಗೊಳಿಸಲು ಈ ಅಧಿನಿಯಮದಲ್ಲಿ ಉಲ್ಲೇಖಿಸಲಾಗಿದೆ. ರಾಜ್ಯ ಕಾಗದ ಪತ್ರಗಳನ್ನು ಬಳಸಿಕೊಂಡು ರಹಸ್ಯ ಮತದಾನ ವ್ಯವಸ್ಥೆ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲು ಸ್ಥಳೀಯ ಸಂಸ್ಥೆಗಳನ್ನು ನಿಯಂತ್ರಿಸುವ ಸಂಬಂಧ ಈ ತಿದ್ದುಪಡಿ ಮಾಡಲಾಗಿದೆ.

ಸಿಎಂ ಸಿದ್ದರಾಮಯ್ಯ ಸ್ಥಾನ ಸುಭದ್ರ: ಡಾ.ಯತೀಂದ್ರ

ಪುಟ ೧➜ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರಕಾರಕ್ಕೆ ಎರಡೂವರೆ ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಸಂಪುಟ ಪುನಾರಚನೆ ಆಗಬೇಕೆಂದು ಕೆಲವು ಶಾಸಕರು ಕೇಳುತ್ತಿದ್ದಾರೆ. ಸಂಪುಟ ಪುನರ್ ರಚನೆ ಆಗಬೇಕಿದೆ. ಅದು ಯಾವಾಗ ಎಂಬುದನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಆದರೆ, ಸಚಿವ ಸ್ಥಾನದ



ಆಕಾಂಕ್ಷಿ ನಾನಲ್ಲ. ನಮ್ಮ ತಂದೆ ಸಿಎಂ ಆಗಿರುವವರೆಗೂ ನಾನು ಸಚಿವ ಸ್ಥಾನ ಕೇಳುವುದಿಲ್ಲ ಎಂದರು.

ನಮ್ಮ ತಂದೆ ಸಿದ್ದರಾಮಯ್ಯನವರೇ ಐದು ವರ್ಷ ಮುಖ್ಯಮಂತ್ರಿಯಾಗಿರುತ್ತಾರೆ. ಖುದ್ದು ಸಿಎಂ ಅವರೇ ಈ ವಿಷಯವನ್ನು ಅಧಿವೇಶನದಲ್ಲಿ ಸ್ಪಷ್ಟಪಡಿಸಿದ್ದಾರೆ. ಅಂದಮೇಲೆ ಮತ್ತೆ ಚರ್ಚೆ ಇಲ್ಲ. ನಾನು ಎರಡೂವರೆ ವರ್ಷದಿಂದ ಇದನ್ನೇ ಹೇಳುತ್ತಿದ್ದೇನೆ. ಈಗಲೂ ಹೇಳುತ್ತಿದ್ದೇನೆ. ನನ್ನ ತಂದೆಯ ಮಾತೇ ನನ್ನ ಮಾತು ಕೂಡ ಎಂದು ಹೇಳಿದರು.

ಎಚ್‌ಡಿಕೆ ಸಾಕ್ಷಿ ಕೊಡಲಿ: ಸಿಎಂ ತಮ್ಮ ಪುತ್ರನನ್ನು ವಸೂಲಿಗೆ ಇಟ್ಟುಕೊಂಡಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾಡಿರುವ ಆರೋಪಕ್ಕೆ ತಿರುಗೇಟು ನೀಡಿದ ಡಾ. ಯತೀಂದ್ರ ಸಿದ್ದರಾಮಯ್ಯ, ನನ್ನ ಮೇಲಿನ ಆರೋಪಕ್ಕೆ ಒಂದೇ ಒಂದು ಸಾಕ್ಷಿ ಕೊಡಿ. ವರ್ಗಾವಣೆ ದಂಧೆ ಎನ್ನುತ್ತಾರೆ, ಇದಕ್ಕೆ ಸಾಕ್ಷಿ ಇದೆಯೆ? ಕಮಿಷನ್ ದಂಧೆ ಎನ್ನುತ್ತಾರೆ ಇದಕ್ಕೆ ಸಾಕ್ಷಿ ಇದೆಯೆ? ಎಂದು ಪ್ರಶ್ನಿಸಿದರು. ಸಾಕ್ಷಿ ಇಲ್ಲದೆ ಎರಡೂವರೆ ವರ್ಷದಿಂದ ಎಚ್.ಡಿ.ಕುಮಾರಸ್ವಾಮಿಯವರು ಕೇವಲ ಆರೋಪ ಮಾಡುತ್ತಿದ್ದಾರೆ. ಸಾಕ್ಷಿ ಕೊಟ್ಟು ಆರೋಪ ಮಾಡಲಿ, ಆಗ ಅದಕ್ಕೆ ಬೆಲೆ ಇರುತ್ತದೆ. ನಾನು ಈಗ ಕುಮಾರಸ್ವಾಮಿ ವಸೂಲಿ ಮಾಡುತ್ತಿದ್ದಾರೆ ಎಂದು ಹೇಳಬಹುದಾ? ಸಾಕ್ಷಿಯಿಲ್ಲದೆ ಆರೋಪ ಮಾಡೋದು ಸುಲಭ. ನಾನು ಅನಗತ್ಯವಾಗಿ ಸಾಕ್ಷಿಗಳಿಲ್ಲದೆ ಯಾರ ಮೇಲೂ ಆರೋಪ ಮಾಡುವುದಿಲ್ಲ ಎಂದು ಹೇಳಿಕೊಂಡರು.

ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ವಿರೋಧ ಪಕ್ಷಗಳು ಇಲ್ಲಸಲ್ಲದ ಆರೋಪ ಮಾಡಿ, ಸಾರ್ವಜನಿಕರಲ್ಲಿ ನಮ್ಮ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡಬೇಕೆಂದು ಪ್ರಯತ್ನಿಸುತ್ತಿದ್ದಾರೆ. ನನ್ನ ತಂದೆ ನನ್ನನ್ನ ವಸೂಲಿಗಾಗಿ ನೇಮಿಸಿಕೊಂಡಿಲ್ಲ. ನನ್ನ ತಂದೆಯ ಪರವಾಗಿ ನಮ್ಮ ಕ್ಷೇತ್ರದಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ ಎಂದು ತಿರುಗೇಟು ನೀಡಿದರು. ನಮ್ಮ ತಂದೆಯ ರಾಜಕೀಯ ಜೀವನ ಮುಂದುವರಿಕೆ ಭಾಗವಾಗಿ ನಾನು ಶಾಸಕ-ಎಂಎಲ್ಸಿ ಆಗಿದ್ದೇನೆ. ನಮ್ಮ ಕ್ಷೇತ್ರದ ಜನರ ರಕ್ಷಣೆಗೆ ನಮ್ಮ ತಂದೆಯ ಅಭಿಮಾನಿಗಳ ರಕ್ಷಣೆಗಾಗಿ ನಾನು ರಾಜಕೀಯಕ್ಕೆ ಬಂದಿದ್ದೇನೆ. ನಮ್ಮ ಅಣ್ಣ ರಾಕೇಶ್ ಸಿದ್ದರಾಮಯ್ಯ ಇಲ್ಲದ ಕಾರಣಕ್ಕೆ ನಾನು ಬಂದೆ. ಮಕ್ಕಳನ್ನೇ ಪಕ್ಷದ ರಾಜ್ಯಾಧ್ಯಕ್ಷ, ಎಂಎಲ್‌ಎ, ಎಂಪಿ ಮಾಡುವುದು ಕುಟುಂಬ ರಾಜಕಾರಣ. ನಮ್ಮದಲ್ಲ ಎಂದು ಕುಟುಂಬ ರಾಜಕಾರಣಕ್ಕೆ ಹೊಸ ವ್ಯಾಖ್ಯಾನ ನೀಡುವ ಮೂಲಕ ಕುಮಾರಸ್ವಾಮಿಗೆ ತಿರುಗೇಟು ನೀಡಿದರು. ಮುಡಾದಲ್ಲಿ ನಡೆದಿರುವ ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿ ಸಿದಂತೆ ಕೇಂದ್ರ ಸರಕಾರದ ಒತ್ತಡಕ್ಕೆ ಮಣಿದು ಮೇಲ್ಮನವಿ ಹಾಕಿದ್ದಾರೆ.

ವಿನಯ್ ದೋಷಿ

ಪುಟ ೧➜ಎ-2 ವಿಕ್ರಮ್, ಎ-3 ಕೀರ್ತಿ ಕುಮಾರ್, ಎ-4 ಸಂದೀಪ್, ಎ-5 ವಿನಾಯಕ್, ಎ-6 ಮಹಾಬಲೇಶ್ವರ್ ಅಲಿಯಾಸ್ ಮುದಕ, ಎ-7 ಸಂತೋಷ್, ಎ-8 ದಿನೇಶ್, ಎ-9 ಅಶ್ವಥ್, ಎ-10 ಸುನಿಲ್, ಎ-11 ನಜೀರ್ ಅಹಮದ್, ಎ-12 ಷಾನವಾಜ್, ಎ-13 ನೂತನ್, ಎ-14 ಹರ್ಷಿತ್, ಎ-15 ವಿನಯ್ ಕುಲಕರ್ಣಿ, ಎ-16 ಚಂದ್ರು ಮಾಮ, ಎ-18 ವಿಕಾಸ್ ಕಲಬುರ್ಗಿ, ಎ-19 ಚನ್ನಕೇಶವ ಟಿಂಗರಿಕರ್.

ಸಿಬಿಐ ತನಿಖೆಗೆ ಕುಟುಂಬಸ್ಥರ ಆಗ್ರಹ: 2016ರ ಜೂ.15ರಂದು ಧಾರವಾಡದ ಸಪ್ತಾಪುರ ಬಡಾವಣೆಯ ಜಿಮ್‌ನಲ್ಲಿ ವ್ಯಾಯಾಮ ಮಾಡುತ್ತಿದ್ದ ಯೋಗೇಶ್ ಗೌಡ ಅವರನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಂದಿದ್ದರು. ಆರಂಭದಲ್ಲಿ ಸ್ಥಳೀಯ ಪೊಲೀಸರು ಇದೊಂದು ಆಸ್ತಿ ವಿವಾದದ ಕೊಲೆ ಎಂದು ಪ್ರಕರಣ ದಾಖಲಿಸಿ ಆರು ಮಂದಿ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದ್ದರು. ಆದರೆ, ಹತ್ಯೆಯ ಹಿಂದೆ ರಾಜಕೀಯ ಷಡ್ಯಂತ್ರವಿದೆ ಎಂದು ಸಂಶಯ ವ್ಯಕ್ತಪಡಿಸಿದ ಯೋಗೇಶ್ ಗೌಡ ಅವರ ಕುಟುಂಬಸ್ಥರು ನಿರಂತರವಾಗಿ ಸಿಬಿಐ ತನಿಖೆಗೆ ಆಗ್ರಹಿಸಿದ್ದರು.

ಸಾಕ್ಷಿಗಳ ಮೇಲೆ ಪ್ರಭಾವ ಬೀರಿದ ಆರೋಪ

ಸಾಕ್ಷಿಗಳ ಮೇಲೆ ಪ್ರಭಾವ ಬೀರಿದ ಆರೋಪದ ಮೇಲೆ ಒಮ್ಮೆ ಅವರ ಜಾಮೀನು ರದ್ದಾಗಿತ್ತು. ಈಗ ನ್ಯಾಯಾಲಯವು ಅವರನ್ನು ದೋಷಿ ಎಂದು ಘೋಷಿಸಿರುವುದರಿಂದ ಅವರು ಮತ್ತೆ ಜೈಲು ಪಾಲಾಗುವುದು ಅನಿವಾರ್ಯವಾಗಿದೆ. ಏ.16 (ಇಂದು) ರಂದು ಅಪರಾಧಿಗಳ ಶಿಕ್ಷೆಯ ಪ್ರಮಾಣವೂ ಹೊರಬೀಳಲಿದೆ. ಹತ್ತು ವರ್ಷಗಳ ಬಳಿಕ ಯೋಗೇಶ್ ಗೌಡ ಕುಟುಂಬಕ್ಕೆ ನ್ಯಾಯ ಸಿಕ್ಕಂತಾಗಿದೆ.

ಪ್ರಕರಣದ ಹಿನ್ನೆಲೆ

ಯೋಗೇಶ್ ಗೌಡ ಅವರನ್ನು 2016ರ ಜೂ.15ರಂದು ದುಷ್ಕರ್ಮಿಗಳು ಕೊಲೆ ಮಾಡಿದ್ದರು. ಪ್ರಕರಣದ ತನಿಖೆಯನ್ನು ಸ್ಥಳೀಯ ಪೊಲೀಸರ ಬಳಿಕ ಸಿಬಿಐ ಕೈಗೆತ್ತಿಕೊಂಡು ಶಾಸಕ ವಿನಯ್ ಕುಲಕರ್ಣಿ ಅವರನ್ನು ಆರೋಪಿಯನ್ನಾಗಿ ಪರಿಗಣಿಸಿ ಬಂಧಿಸಿತ್ತು. ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ವಿನಯ್ ಕುಲಕರ್ಣಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 2026ರ ಜನವರಿಯಲ್ಲಿ ಹೈಕೋರ್ಟ್ ವಜಾಗೊಳಿಸಿ ಆದೇಶಿಸಿತ್ತು. ಬಳಿಕ ಇದನ್ನು ಪ್ರಶ್ನಿಸಿ ಅವರು ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು. ಅವರಿಗೆ ಫೆಬ್ರವರಿ 27ರಂದು ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಇದರಿಂದ ಅವರು ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆ ಆಗಿದ್ದರು.

ಹತ್ಯೆ ಪ್ರಕರಣದ ಘಟನಾವಳಿಗಳು

- 2016ರ ಜೂನ್ 15ರಂದು ಜಿ.ಪಂ. ಬಿಜೆಪಿ ಸದಸ್ಯ ಯೋಗೇಶಗೌಡ ಗೌಡ ಕೊಲೆ
- ಧಾರವಾಡದ ಸಪ್ತಾಪುರ ಬಡಾವಣೆಯಲ್ಲಿನ ವಿನಯ್ ಒಡೆತನದ ಜಿಮ್‌ನಲ್ಲಿ ಬೆಳಗ್ಗೆ 6.30ಕ್ಕೆ ಕೊಲೆ
- 2016ರ ಜೂ.20ರಂದು ಕೊಲೆ ಆರೋಪಿದ ಮೇರೆಗೆ ಬಸವರಾಜ ಮುತ್ತಗಿ, ವಿನಾಯಕ ಕಟಗಿ, ಸಂದೀಪ ಸವದತ್ತಿ, ವಿಕ್ರಂ ಬಳ್ಳಾರಿ, ಕೀರ್ತಿ ಕುರಹಟ್ಟಿ, ಮುದಕಪ್ಪ ಹೊಂಗಲ್ ಅವರನ್ನು ಬಂಧಿಸಿದ ಧಾರವಾಡ ಉಪನಗರ ಠಾಣೆ ಪೊಲೀಸರು
- ಇವರು ನಿಜವಾದ ಕೊಲೆಗಾರರಲ್ಲ ಎಂದು ಆರೋಪಿಸಿದ್ದ ಯೋಗೇಶಗೌಡ ಕುಟುಂಬಸ್ಥರಿಂದ ಸಿಬಿಐ ತನಿಖೆಗೆ ಆಗ್ರಹ
- 2017ರ ಡಿಸೆಂಬರ್‌ನಲ್ಲಿ ಕಮಲ ಬಿಟ್ಟು ಕೈ ಪಾಳಯ ಸೇರಿದ ಯೋಗೇಶ ಪತ್ನಿ ಮಲ್ಲಮ್ಮ ಗೌಡರ. ಇದರ ಹಿಂದೆ ಮಾಜಿ ಸಚಿವ ವಿನಯ ಕುಲಕರ್ಣಿ ಪಾತ್ರವಿದೆ ಎಂಬ ಆರೋಪ ಕೇಳಿಬಂದಿತ್ತು. ಮಲ್ಲಮ್ಮ ಅವರು ಕಾಂಗ್ರೆಸ್ ಸೇರಿದ್ದಕ್ಕೆ ಪ್ರಕರಣಕ್ಕೆ ಹಿನ್ನಡೆ. ಮೊದಲನೇ ದೂರುದಾರಳಾಗಿದ್ದ ಮಲ್ಲಮ್ಮಳೇ ಪ್ರಕರಣದಿಂದ ಹಿಂದೆ ಸರಿದ ಕಾರಣಕ್ಕೆ ಭಾರಿ ಹಿನ್ನಡೆ ಅನುಭವಿಸಿದ್ದ ಯೋಗೀಶ ಕುಟುಂಬ
- 2018ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದ ಕುಟುಂಬಸ್ಥರು. ಪೊಲೀಸ್ ತನಿಖೆ ಹಿನ್ನೆಲೆಯಲ್ಲಿ ಅರ್ಜಿ ವಜಾಗೊಳಿಸಿದ್ದ ಹೈ

ಉಪ ಚುನಾವಣೆ ಪರಿಣಾಮ: ಕಾಂಗ್ರೆಸ್‌ನಿಂದ ಜಬ್ಬಾರ್ ವಜಾ

ಪುಟ ೧➜ಈ ಹಿಂದೆ ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಜಬ್ಬಾರ್ ನೀಡಿದ್ದ ರಾಜೀನಾಮೆ ಅಂಗೀಕರಿಸಿ, ಜಬ್ಬಾರ್ ನೇತೃತ್ವದಲ್ಲಿ ರಚಿಸಲಾಗಿದ್ದ ಅಲ್ಪಸಂಖ್ಯಾತ ವಿಭಾಗದ ಸಮಿತಿಯನ್ನು ವಿಸರ್ಜಿಸಿದ್ದ ಡಿ.ಕೆ. ಶಿವಕುಮಾರ್ ಇದೀಗ ಅವರನ್ನು ಪಕ್ಷದಿಂದ ಹೊರಹಾಕಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಉಂಟಾದ ಬಂಡಾಯದಿಂದ ಅಲ್ಪಸಂಖ್ಯಾತ ನಾಯಕರ ಮೇಲೆ ಶಿಸ್ತುಕ್ರಮಕ್ಕೆ ಮುಂದಾಗಿರುವ ಕಾಂಗ್ರೆಸ್ ಈಗಾಗಲೇ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ನಸೀರ್ ಅಹ್ಮದ್ ಅವರಿಗೆ ಕೊಕ್ ನೀಡಿದ್ದು, ಮುಂದಿನ ದಿನಗಳಲ್ಲಿ ಬೇರೆ ನಾಯಕ ತಲೆದಂಡವಾದರೂ ಅಚ್ಚರಿ ಪಡಬೇಕಾಗಿಲ್ಲ ಎಂಬ ಸ್ಥಿತಿ ನಿರ್ಮಾಣವಾಗಿದೆ.

ಉಚ್ಚಾಟನೆ ಬಗ್ಗೆ ಪ್ರತಿಕ್ರಿಯಿಸಿರುವ ಅಧಿಕೃತ ನೋಟಿಸ್ ಬಂದ ಬಳಿಕವಷ್ಟೇ ನಾನು ಉತ್ತರ ನೀಡುತ್ತೇನೆ. ನನ್ನ ವಿರುದ್ಧ ಯಾವುದೇ ಆಡಿಯೋ ಅಥವಾ ವಿಡಿಯೋ ದಾಖಲೆಗಳಿದ್ದರೆ ತೋರಿಸಲಿ. ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ ಎಂದು ಅಬ್ದುಲ್ ಜಬ್ಬಾರ್ ಆಕ್ರೋಶ ಹೊರಹಾಕಿದ್ದಾರೆ.

ಬಿಂದಿ, ಮೂಗುತಿ ಬೇಡ, ಹಿಜಾಬ್ ಧರಿಸಬಹುದು

ಪುಟ ೧➜ದೊಡ್ಡ ಕಿವಿಯೋಲೆಗಳು, ನೇತಾಡುವ ಓಲೆಗಳು ಮತ್ತು ಮೂಗುಬೊಟ್ಟುಗಳಿಗೆ ಅನುಮತಿ ಇಲ್ಲ. ಸಣ್ಣ ಓಲೆ, ಮೂಗುಬೊಟ್ಟುಗಳನ್ನು ಮಾತ್ರ ಧರಿಸಲು ಅವಕಾಶ ನೀಡಲಾಗಿದೆ. ಆದರೆ, ಈ ಬಗ್ಗೆ ಲೆನ್ಸ್‌ಕಾರ್ಟ್ ಕಂಪನಿಯಿಂದ ಇನ್ನೂ ಅಧಿಕೃತ ಸ್ಪಷ್ಟನೆ ಬಂದಿಲ್ಲ.

ಜಾಲತಾಣದಲ್ಲಿ ಜನಾಕ್ರೋಶ

ಈ ನಿಯಮಗಳು ಹೊರಬಂದ ಬಳಿಕ, ಸಾಮಾಜಿಕ ಜಾಲತಾಣಗಳಲ್ಲಿ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಲವರು, ಒಂದು ಧರ್ಮದ ಆಚರಣೆಗಳಿಗೆ ನಿರ್ಬಂಧ ಹೇರಿ ಮತ್ತೊಂದು ಮತಕ್ಕೆ ಅವಕಾಶ ನೀಡುತ್ತಿರುವುದು ಸರಿಯಲ್ಲ ಎಂದು ಪ್ರಶ್ನಿಸಿದ್ದಾರೆ. ಇದು ಹಿಂದೂ ಮಹಿಳೆಯರ ಧಾರ್ಮಿಕ ಗುರುತುಗಳನ್ನು ಕಡಿಮೆ ಮಾಡುವ ಪ್ರಯತ್ನ ಎಂದು ಆರೋಪಿಸಲಾಗಿದೆ. ಇನ್ನೂ ಕೆಲವರು ಕಂಪನಿಯ ವಿರುದ್ಧ ಬಹಿಷ್ಕಾರ ಮಾಡುವಂತೆ ಕರೆನೀಡಿದ್ದಾರೆ. ಉದ್ಯೋಗ ಸ್ಥಳದಲ್ಲಿ ಸಮಾನತೆ ಇರಬೇಕು ಎಂಬ ಮಾತು ಕೇಳಿಬರುತ್ತಿರುವ ಈ ಸಂದರ್ಭದಲ್ಲಿ, ಈ ನಿಯಮಗಳು ವಿವಾದಕ್ಕೆ ಕಾರಣವಾಗಿವೆ.

ತ್ಯಾಜ್ಯ ಸಮರ್ಪಕವಾಗಿ ಸಂಸ್ಕರಿಸಿ

ಬೆಂಗಳೂರು: ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ಸಂಸ್ಕರಿಸಿ, ಅದನ್ನು ಮೌಲ್ಯಯುತ ಸಂಪನ್ಮೂಲವಾಗಿ ಪರಿವರ್ತಿಸುವುದು ಈಗಿನ ಅವಶ್ಯಕತೆಯಾಗಿದೆ. ಕಾಂಪೋಸ್ಟ್ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸುವ ಮೂಲಕ ಪರಿಸರ ಸಂರಕ್ಷಣೆಗೂ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದಕ್ಕೂ ಸಹಕಾರಿ ಆಗಲಿದೆ ಎಂದು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ(ಕೆಸಿಡಿಸಿಎಲ್) ಅಧ್ಯಕ್ಷ ನಟರಾಜ್ ಗೌಡ ಹೇಳಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಕೇಂದ್ರ ಕಚೇರಿಯಲ್ಲಿ ನಡೆದ ಕಾಂಪೋಸ್ಟ್ ಖರೀದಿ ಮತ್ತು ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ನಗರ ತ್ಯಾಜ್ಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ರೂಪಾಂತರಗೊಳಿಸುವ ಉದ್ದೇಶದಿಂದ ಕೆಸಿಡಿಸಿಎಲ್ ಸಹಯೋಗದೊಂದಿಗೆ ಗ್ರೇಟರ್ ಬೆಂಗಳೂರು ಐಟಿ ಕಂಪನಿ ಇಂಡಸ್ಟ್ರೀಸ್ ಅಸೋಸಿಯೇಷನ್ (ಜಿಬಿಐಟಿಸಿಐಎ) ಸಂಸ್ಥೆಯು ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಚಟುವಟಿಕೆಯ ಭಾಗವಾಗಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರ ಪ್ರಕಾರ ಮೈತ್ರಿ ಸರ್ವ ಸೇವಾ ಸಮಿತಿಯ ಮೂಲಕ, ಬೆಂಗಳೂರಿನಲ್ಲಿ ಉತ್ಪಾದನೆಯಾಗುತ್ತಿರುವ ಸಾವಯವ ಗೊಬ್ಬರವನ್ನು ಖರೀದಿಸಿ ರೈತರಿಗೆ ಉಚಿತವಾಗಿ ವಿತರಿಸುವ ಕಾರ್ಯ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಹೆಚ್ಚಲಿದೆ 14 ಲೋಕಸಭಾ ಕ್ಷೇತ್ರ

ಪುಟ ೧➜ಜನಸಂಖ್ಯೆಗನುಗುಣವಾಗಿ ಕ್ಷೇತ್ರಗಳನ್ನು ಪುನರ್ ವಿಂಗಡಿಸುವುದು, ಸೀಟುಗಳ ಸಂಖ್ಯೆಯನ್ನು 543ರಿಂದ 850ಕ್ಕೆ ಹೆಚ್ಚಿಸುವುದು. ಇದು 2021ರ ಜನಗಣತಿಯ ಆಧಾರದ ಮೇಲೆ ನಡೆಯಬೇಕಿತ್ತು, ಆದರೆ ವಿಳಂಬವಾದ್ದರಿಂದ ಮುಂದಿನ ಜನಗಣತಿಯನ್ನು ಪರಿಗಣಿಸುವ ಸಾಧ್ಯತೆಯಿದೆ. ಜನಸಂಖ್ಯೆ ನಿಯಂತ್ರಣದಲ್ಲಿ ಯಶಸ್ವಿಯಾದ ದಕ್ಷಿಣದ ರಾಜ್ಯಗಳಿಗಿಂತ, ಹೆಚ್ಚು ಜನಸಂಖ್ಯೆಯುಳ್ಳ ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚಿನ ಸೀಟುಗಳು ಸಿಗಲಿದ್ದು, ಇದು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಎಂಬುದು ವಿಪಕ್ಷಗಳ ಆರೋಪ. ಆದರೆ, ಇದು ಕೇವಲ ಕ್ಷೇತ್ರಗಳ ಮರುವಿಂಗಡಣೆ ಮತ್ತು ಅಭಿವೃದ್ಧಿ ಆಧಾರಿತ ಪ್ರಕ್ರಿಯೆಯಾಗಿದ್ದು, ಯಾವುದೇ ರಾಜ್ಯಕ್ಕೆ ಅನ್ಯಾಯವಾಗುವುದಿಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸ್ಪಷ್ಟಪಡಿಸಿದ್ದಾರೆ. ಈ ಪ್ರಕ್ರಿಯೆಯು ಭಾರತದ ಸಂಸದೀಯ ಇತಿಹಾಸದಲ್ಲೇ ಅತಿ ದೊಡ್ಡ ಬದಲಾವಣೆಯಾಗಲಿದೆ ಎಂದಿದ್ದಾರೆ.

ನವ ಸಂಕಲ್ಪಕ್ಕೆ ಸಲಹೆ

ಪುಟ ೧➜ಅದನ್ನು ಮಿತವಾಗಿ ಬಳಸಿ ಸಂರಕ್ಷಣೆ ಮಾಡಲು ಆದ್ಯತೆ ನೀಡಬೇಕಿದೆ. ಪ್ರತಿಯೊಬ್ಬರೂ ತಮ್ಮ ತಾಯಿಯ ಹೆಸರಿನಲ್ಲಿ ಒಂದೊಂದು ಗಿಡ ನೆಟ್ಟು ಬೆಳೆಸಬೇಕು. ಉತ್ತಮ ಪರಿಸರ ನಿರ್ಮಾಣ ನಮ್ಮೆಲ್ಲರ ಆದ್ಯ ಕರ್ತವ್ಯ. ನಮ್ಮ ನಗರ-ಪಟ್ಟಣ, ಸಾಂಸ್ಕೃತಿಕ-ಧಾರ್ಮಿಕ ಕೇಂದ್ರಗಳಲ್ಲಿ ನಾವು ಸ್ವಚ್ಛತೆ ಕಾಪಾಡಿಕೊಳ್ಳುವುದು ಅಗತ್ಯವಾಗಿದೆ ಎಂದು ಹೇಳಿದರು.

ದೇಶದಲ್ಲಿ ಸ್ವದೇಶಿ ಉತ್ಪನ್ನಗಳ ಬಳಕೆ ಹೆಚ್ಚಾಗಬೇಕು. ವೋಕಲ್ ಫಾರ್ ಲೋಕಲ್‌ಗಾಗಿ ಬದುಕಬೇಕು. ಸ್ವದೇಶಿ ಉತ್ಪನ್ನಗಳನ್ನು ಬೆಂಬಲಿಸಬೇಕು. ದೇಶೀಯ ಪ್ರವಾಸೋದ್ಯಮ ಅಭಿವೃದ್ಧಿಗೆ ಎಲ್ಲರೂ ಒತ್ತಾಸೆಯಾಗಿ ನಿಲ್ಲಬೇಕಿದೆ ಎಂದರು. ಮುಂದಿನ ಪೀಳಿಗೆಯ ದೃಷ್ಟಿಯಿಂದ ಎಲ್ಲರೂ ರಾಸಾಯನಿಕಮುಕ್ತ ಕೃಷಿ ಅನುಸರಿಸುವುದರೊಂದಿಗೆ ಉತ್ತಮ ಆರೋಗ್ಯಕ್ಕೆ ಒತ್ತು ನೀಡಬೇಕು. ಯೋಗ-ಕ್ರೀಡೆಗೆ ಉತ್ತೇಜನ ನೀಡುವುದರೊಂದಿಗೆ ದೇಹ-ಮನಸ್ಸನ್ನು ಸದೃಢವಾಗಿಟ್ಟುಕೊಳ್ಳುವುದು. ಸೇವಾ ಮನೋಭಾವದೊಂದಿಗೆ ಭಾರತವನ್ನು ಸದೃಢ, ಸುಂದರ ರಾಷ್ಟ್ರವನ್ನಾಗಿ ನಿರ್ಮಿಸಲು 9 ಸಂಕಲ್ಪಗಳು ಪ್ರೇರಕ ಶಕ್ತಿಯಾಗಿವೆ. ಇವೆಲ್ಲವನ್ನೂ ಪಾಲಿಸಿದರೆ ವಿಕಸಿತ ಕರ್ನಾಟಕದೊಂದಿಗೆ ವಿಕಸಿತ ಭಾರತ ಸಂಕಲ್ಪ ಆಗಲಿದೆ ಎಂದು ಹೇಳಿದರು. ಸಕ್ಕರೆ ನಗರ, ಮಧುರ ಮಂಡ್ಯ ಎಂದೆಲ್ಲಾ ಕರೆಸಿಕೊಳ್ಳುವ ಈ ಊರಿಗೆ ತಾಯಿ ಕಾವೇರಿಯ ಆಶೀರ್ವಾದವಿದೆ. ಇದು ಕಬ್ಬಿಗರ ನಾಡು. ಇಲ್ಲಿನ ಜನರ ಮಾತುಗಳು ಕಬ್ಬಿನಷ್ಟೇ ಸಿಹಿಯಾಗಿವೆ. ಈ ಪ್ರದೇಶದ ಜನರು ನೀಡಿದ ಸ್ವಾಗತ ನನ್ನ ಹೃದಯವನ್ನು ಗೆದ್ದಿದೆ ಎಂದು ಬಣ್ಣಿಸಿದರು.

ತತ್ವಜ್ಞಾನ, ತಂತ್ರಜ್ಞಾನದಲ್ಲಿ ಕರ್ನಾಟಕ ಮುಂಚೂಣಿ

ಕರ್ನಾಟಕದಲ್ಲಿ ಎರಡು ಶಕ್ತಿಗಳಿವೆ. ಒಂದು ತತ್ವಜ್ಞಾನ ಮತ್ತೊಂದು ತಂತ್ರಜ್ಞಾನ. ಈ ಎರಡೂ ಶಕ್ತಿಗಳು ಇಲ್ಲಿ ಸಮೃದ್ಧವಾಗಿವೆ. ಶ್ರೀಕ್ಷೇತ್ರ ಆಧ್ಯಾತ್ಮಿಕ, ನೈತಿಕ ಮೌಲ್ಯ, ತತ್ವಜ್ಞಾನದ ಮೂಲಕ ಸಮಾಜಕ್ಕೆ ಹೊಸ ದಿಕ್ಕನ್ನು ತೋರಿಸುತ್ತಿದೆ. ಎರಡು ಸಾವಿರ ವರ್ಷಗಳಷ್ಟು ಇತಿಹಾಸವನ್ನು ಹೊಂದಿರುವ ಆದಿಚುಂಚನಗಿರಿ ಮಠ ಗುರುಪರಂಪರೆ, ಆಧ್ಯಾತ್ಮಿಕ ದರ್ಶನ, ಸೇವೆಯ ಮೂಲಕ ಇಲ್ಲಿನ ಭೂಮಿ ಸಮೃದ್ಧವಾಗಿದೆ ಎಂದರು.

ಚುಂಚಶ್ರೀ ಮಹಾನ್ ಸಂತರು: ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಮಹಾನ್ ಸಂತರು. ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಸಮರ್ಪಣಾ ಭಾವದಿಂದ ಮಠವನ್ನು ಮುನ್ನಡೆಸುತ್ತಿದ್ದಾರೆ. ಬಾಲಗಂಗಾಧರನಾಥ ಶ್ರೀಗಳು ವಿಭೂತಿ ಪುರುಷರು. ಅವರ ಶರೀರ ನಮ್ಮೊಂದಿಗೆ ಇಲ್ಲವಾದರೂ ಅವರ ಅಧ್ಯಾತ್ಮಶಕ್ತಿ ಮತ್ತು ಸಾಧನೆ ನಮ್ಮ ಜತೆ ಶಾಶ್ವತವಾಗಿದೆ ಎಂದು ಹೇಳಿದರು. ಗ್ರಾಮೀಣ ಜನರ ಅಭಿವೃದ್ಧಿ ಮತ್ತು ಬಡ ಮಕ್ಕಳ ಶಿಕ್ಷಣಕ್ಕಾಗಿ ಶ್ರೀಗಳು ಶ್ರಮಿಸಿದ್ದಾರೆ. ಶೈಕ್ಷಣಿಕವಾಗಿ ಅಸಾಧಾರಣ ಸಾಧನೆ ಮಾಡಿದ್ದಾರೆ. ಪ್ರಾಥಮಿಕ ಶಿಕ್ಷಣದಿಂದ ಮೆಡಿಕಲ್, ಇಂಜಿನಿಯರಿಂಗ್ ಶಿಕ್ಷಣ ದೊರಕಿಸುವಲ್ಲಿ ಸಫಲರಾಗಿದ್ದಾರೆ. ಗುಣಮಟ್ಟದ ಆರೋಗ್ಯ ಸೇವೆ ನೀಡುವುದರಲ್ಲೂ ಮುಂದಿದೆ. ಇದೇ ನಿಟ್ಟಿನಲ್ಲಿ ನಮ್ಮ ಸರ್ಕಾರವೂ ಕೂಡ ಬಡಜನರಿಗೆ ಉತ್ತಮ ಆರೋಗ್ಯವನ್ನು ದೊರಕಿಸಲು ಆಯುಷ್ಮಾನ್ ಆರೋಗ್ಯ ಯೋಜನೆಯನ್ನು ರೂಪಿಸಿ ಜಾರಿಗೆ ತಂದಿದ್ದೇವೆ ಎಂದು ಹೇಳಿದರು.

ನೆನಪಿನ ಕಾಣಿಕೆ: ಪ್ರಧಾನಿ ನರೇಂದ್ರಮೋದಿ ಅವರು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುತ್ಥಳಿಗೆ ಪುಷ್ಪಾರ್ಚಣೆ ಮಾಡಿದರು. ಶ್ರೀಮಠದ ವತಿಯಿಂದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಆದಿಚುಂಚನಗಿರಿ ಸಂಕೇತದಂತಿರುವ ನವಿಲನ್ನು ಮೋದಿ ಅವರಿಗೆ ನೆನಪಿನ ಕಾಣಿಕೆಯಾಗಿ ನೀಡಿದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ, ರಾಜ್‌ಕೋಟ್‌ನ ಶ್ರೀ ಪರಮಾನಂದ ಸರಸ್ವತಿ ಸ್ವಾಮೀಜಿ, ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ರಾಜ್ಯ ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ವಿಪಕ್ಷ ನಾಯಕ ಆರ್.ಅಶೋಕ ಹಾಜರಿದ್ದರು.

ಮೇಕೆದಾಟು, ಮಹದಾಯಿಗೆ ಅನುಮತಿ ನೀಡಿ: ಸಿಎಂ

ಪುಟ ೧➜ರಾಜ್ಯಕ್ಕೆ ಬುಧವಾರ ಭೇಟಿ ನೀಡಿದ್ದ ಪ್ರಧಾನಿ ಅವರನ್ನು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿ ಮನವಿ ಸಲ್ಲಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಭದ್ರಾ ಮೇಲ್ದಂಡೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿ 5,300 ಕೋಟಿ ರೂ. ನೀಡಬೇಕು, ಮಹದಾಯಿ ಯೋಜನೆಗೆ ಅರಣ್ಯ ಇಲಾಖೆಯಿಂದ



ಪರವಾನಗಿ ಕೊಡಿಸಬೇಕು ಮತ್ತು ಮೇಕೆದಾಟು ಯೋಜನೆ ಒಪ್ಪಿಗೆ ನೀಡುವಂತೆ ಮನವಿ ಪತ್ರದಲ್ಲಿ ಬೇಡಿಕೆ ಸಲ್ಲಿಸಲಾಗಿದೆ. ಗೋದಾವರಿ-ಕಾವೇರಿ, ಬೇಡ್ತಿ-ವರದಾ ನದಿ ಜೋಡಣೆಯಲ್ಲಿ ರಾಜ್ಯಕ್ಕೆ ನ್ಯಾಯಬದ್ಧ ನೀರು ನೀಡಬೇಕು. ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ 5 ಸಾವಿರ ಕೋಟಿ ರೂ.ನೀಡಬೇಕು, ಕೇಂದ್ರದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ರಾಜ್ಯ ಸರ್ಕಾರ ಗುರುತಿಸಿರುವ ಜಾತಿಗಳನ್ನು ಸೇರಿಸಿರುವ ಬಗ್ಗೆ ಸ್ಪಷ್ಟತೆ ನೀಡಬೇಕೆಂದು ಕೋರಲಾಗಿದೆ. ಶರಾವತಿ ಪಂಪ್ಡ್ ಸ್ಟೋರೇಜ್ ಕಾಮಗಾರಿಗೆ ಅರಣ್ಯ ಇಲಾಖೆಯಿಂದ ಅವಕಾಶ ಕಲ್ಪಿಸಬೇಕು, ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ, ಜಲ ಜೀವನ್ ಮಿಷನ್ ಯೋಜನೆಯ ಬಾಕಿ ಹಣ, 15ನೇ ಹಣಕಾಸು ಆಯೋಗದಿಂದ ಗ್ರಾಮ ಪಂಚಾಯಿತಿಗಳಿಗೆ ಅನುದಾನ, ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ಆದಾಯ ಕೊರತೆ ನೀಗಿಸಲು 5,495 ಕೋಟಿ ರೂ. ಹಣ ನೀಡುವಂತೆ ಬೇಡಿಕೆ ಸಲ್ಲಿಸಲಾಗಿದೆ. ಕೋಲಾರದಲ್ಲಿ ರೈಲ್ವೇ ಬೋಗಿ ತಯಾರಿಕಾ ಘಟಕ, ಮೈಸೂರು ಬೆಂಗಳೂರು ನಡುವೆ ಹೈಸ್ಪೀಡ್ ರೈಲ್ವೆ ಕಾರಿಡಾರ್, ಬೆಂಗಳೂರು ನಗರ ರೈಲ್ವೆಗೆ ಅನುದಾನ ಮತ್ತು ಬೆಂಗಳೂರು ಮುಂಬೈ ಹೈಸ್ಪೀಡ್ ರೈಲ್ವೆ ಕಾರಿಡಾರ್‌ಗೆ ಮನವಿ ಮಾಡಲಾಗಿದೆ.

9ನೇ ಶೆಡ್ಯೂಲ್‌ನಲ್ಲಿ ಸೇರಿಸಲು ಮನವಿ

ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಶೇ.56ರಷ್ಟು ಮೀಸಲಾತಿ ನೀಡುವ ರಾಜ್ಯದ ನಿರ್ಧಾರವನ್ನು ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸಬೇಕೆಂದು ಮನವಿ ಮಾಡಲಾಗಿದೆ.

ದಾಖಲಾತಿಗೆ ಸಮಗ್ರ ಯೋಜನೆ


ಬೆಂಗಳೂರು: ಶಿಕ್ಷಣ ಕ್ಷೇತ್ರದಲ್ಲಿ ಹೊಸ ಚೈತನ್ಯ ಮೂಡಿಸುವ ಪ್ರಯತ್ನವಾಗಿ, ರಾಜ್ಯ ಸರ್ಕಾರವು ಸರ್ಕಾರಿ ಶಾಲೆಗಳ ದಾಖಲಾತಿ ಹೆಚ್ಚಿಸಲು ಶಾಲಾ ಶಿಕ್ಷಣ ಇಲಾಖೆ ಸಮಗ್ರ ಕಾರ್ಯಯೋಜನೆ ರೂಪಿಸಿದೆ.

ಕಳೆದ ಕೆಲವು ವರ್ಷಗಳಿಂದ ದಾಖಲಾತಿ ಕುಸಿತ ಕಂಡು ಬಂದಿರುವುದರಿಂದ, ಸಾರ್ವಜನಿಕ ವಿಶ್ವಾಸವನ್ನು ಪುನಃ ಕಟ್ಟಿಕೊಡುವುದು ಹಾಗೂ ಗುಣಮಟ್ಟದ ಶಿಕ್ಷಣವನ್ನು ಬಲಪಡಿಸುವುದು ಸರ್ಕಾರದ ಪ್ರಮುಖ ಗುರಿಯಾಗಿದೆ. ಈ ಹಿನ್ನೆಲೆಯಲ್ಲಿ, ಇಲಾಖೆಯು ಶಾಲೆಗಳ ಸ್ಥಿರತೆ, ಮಕ್ಕಳ ಆಕರ್ಷಣೆ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಒಟ್ಟುಗೂಡಿಸಿ, ದಾಖಲಾತಿ ಆಂದೋಲನವನ್ನು ರಾಜ್ಯಾದ್ಯಂತ ಜಾರಿಗೊಳಿಸಲು ಮುಂದಾಗಿದೆ.

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸಲು ಶಿಕ್ಷಣ ಇಲಾಖೆ ಸಮಗ್ರ ಕಾರ್ಯಯೋಜನೆ ರೂಪಿಸಿರುವುದು ಇದೀಗ ರಾಜ್ಯದ ಶಿಕ್ಷಣ ವಲಯದಲ್ಲಿ ಪ್ರಮುಖ ಚರ್ಚೆಯ ವಿಷಯವಾಗಿದೆ. ಕಳೆದ ಕೆಲವು ವರ್ಷಗಳಿಂದ ಅನೇಕ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದಾಖಲಾತಿ ಕಡಿಮೆಯಾಗಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು, ಸಾರ್ವಜನಿಕ ವಿಶ್ವಾಸವನ್ನು ಪುನಃ ಕಟ್ಟಿಕೊಡುವುದು ಹಾಗೂ ಗುಣಮಟ್ಟದ ಶಿಕ್ಷಣವನ್ನು ಬಲಪಡಿಸುವುದು ಮುಖ್ಯ ಗುರಿಯಾಗಿದೆ. ಈ ಹಿನ್ನೆಲೆಯಲ್ಲಿ, 2026-27ನೇ ಶೈಕ್ಷಣಿಕ ಸಾಲಿನಲ್ಲಿ ದಾಖಲಾತಿ ಹೆಚ್ಚಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮೊದಲಿಗೆ ಯುಡಿಐಎಸ್‌ಇ+ ಆಧಾರದ ಮೇಲೆ ಕಡಿಮೆ ದಾಖಲಾತಿಯ ಶಾಲೆಗಳ ಪಟ್ಟಿ ಅಂತಿಮಗೊಳಿಸಲಾಗುವುದು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಟ್ರ್ಯಾಕಿಂಗ್ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ.

ಸಮುದಾಯ ಆಧಾರಿತ ಪ್ರವೇಶ ಅಭಿಯಾನವನ್ನು ಶಾಲಾ ಚಲೋ ಮತ್ತು ಪ್ರವೇಶೋತ್ಸವ ಕಾರ್ಯಕ್ರಮಗಳ ಮೂಲಕ ಹಮ್ಮಿಕೊಳ್ಳಲಾಗುತ್ತಿದೆ. ಎಸ್‌ಡಿಎಂಸಿ, ಪಂಚಾ ಯತ್, ಅಂಗನವಾಡಿ ಸಿಬ್ಬಂದಿ ಹಾಗೂ ಹಳೆಯ ವಿದ್ಯಾರ್ಥಿಗಳ ಸಹಭಾಗಿತ್ವವನ್ನು ಖಚಿತಪಡಿಸಲಾಗುತ್ತಿದೆ. ಪೋಷಕರಲ್ಲಿ ಸರ್ಕಾರಿ ಶಾಲೆಗಳ ಮೇಲಿನ ವಿಶ್ವಾಸವನ್ನು ಹೆಚ್ಚಿಸಲು ತೆರೆದ ಮನೆ ದಿನ, ಕಲಿಕಾ ಫಲಿತಾಂಶ ಪ್ರದರ್ಶನ, ಫಲಿತಾಂಶ ಫಲಕ, ಹಾಗೂ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳ ಪ್ರಚಾರದಂತಹ ಕ್ರಮಗಳನ್ನು ಶಿಕ್ಷಣ ಇಲಾಖೆ ಜಾರಿಗೊಳಿಸಲಾಗುತ್ತಿದೆ.

ಮೋದಿಗೆ ಸಿಎಂ ಸ್ವಾಗತ



ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಬುಧವಾರ ಸಿಎಂ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಿದರು. ಕೃಷಿ ಸಚಿವ ಕೃಷ್ಣಬೈರೇಗೌಡ ಇದ್ದರು.

ರಾಜ್ಯದಲ್ಲಿ ₹5,500 ಕೋಟಿ ಹೂಡಿಕೆ: ಪ್ರಿಯಾಂಕ್ ಖರ್ಗೆ

ಬೆಂಗಳೂರು: ರಾಜ್ಯ ಸರ್ಕಾರವು ಕೈಗೊಳ್ಳುತ್ತಿರುವ ಹಲವು ಕಾರ್ಯಕ್ರಮಗಳ ಫಲವಾಗಿ ರಾಜ್ಯಕ್ಕೆ ಸುಮಾರು 5,500 ಕೋಟಿ ರೂ. ಮೊತ್ತದ ಜಾಗತಿಕ ಬಂಡವಾಳವು ಬರಲಿದ್ದು ಸುಮಾರು 7,200 ಉದ್ಯೋಗಗಳು ಸೃಷ್ಟಿಯಾಗಲಿವೆ. 6,350 ಕೋಟಿ ರೂ. ಬಂಡವಾಳವು



ಡಾಟಾ ಕೇಂದ್ರಗಳ ಸ್ಥಾಪನೆಗೆ ಹೂಡಿಕೆಯಾಗಲಿವೆ ಎಂದು ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.ಜಾಗತಿಕ ನಾವೀನ್ಯತಾ ಮೈತ್ರಿಕೂಟದ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ರಾಜ್ಯ ಸರ್ಕಾರವು ಜಾಗತಿಕ ನಾವೀನ್ಯತಾ ಮೈತ್ರಿಕೂಟದ (ಜಿಐಎ-2.೦)-ಎರಡನೇ ಆವೃತ್ತಿಯು ಏ.17ರಂದು ದಿಲ್ಲಿಯಲ್ಲಿ ನಡೆಯಲಿರುವ ಸಂವಾದ ಸಮಾವೇಶದಲ್ಲಿ ಅನಾವರಣಗೊಳ್ಳಲಿದೆ. ಈ ಸಮ್ಮೇಳನದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ.

ಜಾಗತಿಕ ಮಟ್ಟದ ಒಡಂಬಡಿಕೆ

40ಕ್ಕೂ ಹೆಚ್ಚು ದೇಶಗಳು, 2 ಸಾವಿರಕ್ಕಿಂತ ಅಧಿಕ ನವೋದ್ಯಮಗಳ ಬೆಂಬಲ ಹಾಗೂ 60ಕ್ಕೂ ಅಧಿಕ ಜಾಗತಿಕಮಟ್ಟದ ಒಡಂಬಡಿಕೆ ಪತ್ರಗಳು (ಎಂಒಯು) ಹಾಗೂ ಬೇರೆ-ಬೇರೆ ಕಂಪನಿಗಳ ಜತೆಗಿನ ಸಹಕಾರದೊಂದಿಗೆ ಕರ್ನಾಟಕ ಸರ್ಕಾರವು ಜಾಗತಿಕ ನಾವೀನ್ಯತಾ ಮೈತ್ರಿಕೂಟದಲ್ಲಿ ಭಾರತದ ಅತ್ಯಂತ ಸುಸಜ್ಜಿತ ಮತ್ತು ದೂರದೃಷ್ಟಿಯ ಯೋಜನೆಗಳೊಂದಿಗೆ ತನ್ನದೇ ಛಾಪನ್ನು ಮೂಡಿಸುತ್ತಿದೆ.ಈ ಕಾರ್ಯಕ್ರಮಗಳು ಡೀಪ್ ಟೆಕ್, ಫಿನ್‌ಟೆಕ್, ಹೆಲ್ತ್‌ಟೆಕ್, ಕ್ಲೀನ್ ಟೆಕ್, ಬಯೋಟೆಕ್ ಮತ್ತು ಟ್ರಾವೆಲ್‌ಟೆಕ್ ಕ್ಷೇತ್ರಗಳಲ್ಲಿ ಜಾಗತಿಕ ಹೂಡಿಕೆದಾರರು, ಕಾರ್ಪೊರೇಟ್ ಸಂಸ್ಥೆಗಳು, ಮತ್ತು ನಿಯಂತ್ರಣಾ ಸಂಸ್ಥೆಗಳ ಜತೆ ಸಂಪರ್ಕ ಸಾಧಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಬಲ ಸಂಪರ್ಕ ಸೇತುವೆಯನ್ನು ಕಲ್ಪಿಸಲು ನೆರವಾಗಿವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದರು.

ಕಿರುಸುದ್ದಿ

ಕಾಂಗ್ರೆಸ್‌ನಲ್ಲಿ ದೊರೆ ಮಾಡಿದ್ರೆ ದಂಡ ಇಲ್ಲ: ಕೆ.ಎನ್. ರಾಜಣ್ಣ

ತುಮಕೂರು: ಕಾಂಗ್ರೆಸ್ ಪಕ್ಷದಲ್ಲಿ ದೊರೆ ಮಾಡಿದ್ದಕ್ಕೆ ದಂಡ ಇಲ್ಲ ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ವ್ಯಂಗ್ಯವಾಡಿದರು. ಸುದ್ದಿಗಾರರೊಂದಿಗೆ ಮಾತನಾಡಿ,



ಕಾಂಗ್ರೆಸ್ ಅಂದ್ರೆ ಶಿಸ್ತಿನ ಪಕ್ಷ. ಶಿಸ್ತು ಜಾರಿ ಮಾಡುವಾಗ, ಸದ್ಗುರು, ರಾಹುಲ್ ಗಾಂಧಿ ಅವರ ಬಗ್ಗೆ ಮಾತನ್ನಾಡಿದ್ದರು. ರಾಹುಲ್ ಗಾಂಧಿ ಅಂದ್ರೆ ನಂಗೊತ್ತಿಲ್ಲ ಅಂದ್ರು. ಅವರ ಜೊತೆಯಲ್ಲಿಯೇ ಹೋಗಿ, ಕೂತ್ಕೊಂಡ್ರೆ ಶಿಸ್ತು ಮೀರಿದಂಗೆ ಆಗಲ್ವಾ. ದೊರೆ ಮಾಡಿದ್ದಕ್ಕೆ ದಂಡ ಇಲ್ಲ ಎಂಬ ಮಾತು ಇದೆ. ವೇದಗಳು ಸುಳ್ಳಾದರೂ ಗಾದೆಗಳು ಸುಳ್ಳಾಗುವುದಿಲ್ಲ. ಈಗ ಅದೇ ರೀತಿ ನಡೀತಾ ಇದೆ. ನಡೀಲಿ ಮುಂದೆ ನೋಡೋಣ ಎಂದರು. ಸದ್ಗುರು ಅವರು ರಾಹುಲ್ ಗಾಂಧಿ ಅವರ ಬಗ್ಗೆ ಮಾತನ್ನಾಡಿದ್ದವರು ಅಂಥವರ ಜೊತೆಗೆ ವೇದಿಕೆ ಹಂಚಿಕೊಳ್ಳಬಹುದಾ.? ಆರ್ ಎಸ್ ಎಸ್ ಗೀತೆಯನ್ನು ಹಾಡಿದ್ದರು. ಅವರ ವಿರುದ್ಧ ಯಾಕೆ ಯಾವುದೇ ಕ್ರಮ ಆಗಿಲ್ಲ ಎಂಬ ಪ್ರಶ್ನೆ ಅವರದ್ದು. ದೊರೆಗಳು ಏನೇ ಮಾಡಿದರು ನಡೆಯುತ್ತೆ ಎಂದು ಹೇಳುವ ಮೂಲಕ ಡಿಕೆಶಿಗೆ ತಿರುಗೇಟು ನೀಡಿದರು.

ವೈದ್ಯರ ವರ್ಗಾವಣೆ: ವೇಳಾಪಟ್ಟಿ ಪ್ರಕಟ

ಬೆಂಗಳೂರು: 2026-27ನೇ ಸಾಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿ ವರ್ಗಾವಣೆಯನ್ನು ಕರ್ನಾಟಕ ನಾಗರೀಕ ಸೇವಾ (ವೈದ್ಯಾಧಿಕಾರಿಗಳ ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳ ಅಡಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆಯ ವೇಳಾಪಟ್ಟಿಯನ್ನು ಪರಿಷ್ಕರಿಸಿ ಸರ್ಕಾರ ಆದೇಶಿಸಿದೆ. ಒಂದೇ ಸ್ಥಳದಲ್ಲಿ ಕನಿಷ್ಠ ಸೇವಾವಧಿ ಪೂರೈಸಿರುವ ಅಧಿಕಾರಿ/ಸಿಬ್ಬಂದಿಯ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಮತ್ತು ವಿಶೇಷ ವರ್ಗದ ಕೋರಿಕೆ ವರ್ಗಾವಣೆಗಳ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಏ.30 ರಂದು ಕೊನೆಯ ದಿನಾಂಕವಾಗಿದ್ದು, ವರ್ಗಾವಣೆಗಳ ಅಂತಿಮ ಪಟ್ಟಿ ಪ್ರಕಟಿಸುವ ದಿನಾಂಕ ಮೇ 15 ಆಗಿದೆ. ಆಯುಕ್ತಾಲಯ/ನಿರ್ದೇಶನಾಲಯದಲ್ಲಿ ಅಂತಿಮ ಪಟ್ಟಿಯಂತೆ ವೃಂದವಾರು ಸಮಾಲೋಚನೆಯನ್ನು ಮೇ 20 ರಿಂದ ಪ್ರಾರಂಭಗೊಳ್ಳಲಿದೆ ಎಂದು ಆರೋಗ್ಯ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ತಿಳಿಸಿದ್ದಾರೆ.

ರೈತರ ಸಮಸ್ಯೆ ನಿವಾರಿಸಿ: ಕುರುಬೂರು

ಹುಬ್ಬಳ್ಳಿ: ರಾಜ್ಯದ 80 ಕಾರ್ಖಾನೆಗಳ ಪೈಕಿ 10 ಕಾರ್ಖಾನೆಗಳು ಮಾತ್ರ ಟನ್ ಕಬ್ಬಿಗೆ 100 ಹೆಚ್ಚುವರಿಯಾಗಿ ಪಾವತಿಸಿವೆ. ಉಳಿದ ಕಾರ್ಖಾನೆಗಳಲ್ಲಿ ಉತ್ಪಾದನೆಯಾದ ಸಕ್ಕರೆಯನ್ನು ಜಿಲ್ಲಾಧಿಕಾರಿಗಳು ಮುಟ್ಟುಗೋಲು ಹಾಕಿಕೊಳ್ಳಬೇಕು ಹಾಗೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಕಬ್ಬು ಬೆಳೆಗಾರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದರು. ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ರಸಗೊಬ್ಬರ ಕೊರತೆ ನಿಭಾಯಿಸಬೇಕು. ಸಕ್ಕರೆ ಮಾರಾಟ ಮಾಡಿ, ಹಣವನ್ನು ರೈತರಿಗೆ ನೀಡಬೇಕು. ಯುದ್ಧದಿಂದ ಇಂಧನ ಕೊರತೆಯಾಗಿದೆ. ಕಬ್ಬು ಸೇರಿದಂತೆ ವಿವಿಧ ಬೆಳೆಗಳಿಂದ ಎಥೆನಾಲ್ ಉತ್ಪಾದಿಸಬಹುದು. ಇದು ಪರಿಸರ ಸ್ನೇಹಿಯಾಗಿದ್ದು, ರೈತರಿಗೆ ಹೆಚ್ಚಿನ ಆದಾಯವು ಸಿಗಲಿದೆ. ಈ ನಿಟ್ಟಿನಲ್ಲಿ ಯೋಚಿಸಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರಿಗೆ ಮನವಿ ಮಾಡಲಾಗುವುದು ಎಂದರು. ಸಾಲ ಮರುಪಾವತಿಸದ ರೈತರ ಜಮೀನು ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶ ನೀಡುವ ಸರ್ಫೈಸಿ ಕಾಯ್ದೆ ರದ್ದು ಮಾಡಬೇಕು ಎಂದರು.

ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ

ಮೋದಿ ನಾಯಕತ್ವ ಸದೃಢ

ಮಂಡ್ಯ: ಪ್ರಧಾನಿ ಮೋದಿ ಅವರ ಸದೃಢ ನಾಯಕತ್ವ ಹಾಗೂ ರಾಷ್ಟ್ರ ನಿರ್ಮಾಣದಲ್ಲಿನ ಅವರ ಸಮರ್ಪಣ ಭಾವವು ಸಮಸ್ತ ಭಾರತೀಯರ ಹೃದಯಾಂತರದಲ್ಲಿ ಆಳವಾಗಿ ನೆಲೆಸಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರತಿಪಾದಿಸಿದರು.

ನಾಗಮಂಗಲ ತಾಲೂಕಿನ ಆದಿ ಚುಂಚನಗಿರಿಯಲ್ಲಿ ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ಮೋದಿ ಅವರ ನಾಯಕತ್ವವು ಜಾಗತಿಕ ನಾಯಕತ್ವ ಆಗಿದ್ದು. ಅವರ ನೇತೃತ್ವದಲ್ಲಿ ಭಾರತ ಪರಿವರ್ತನಾತ್ಮಕ ಅಭಿವೃದ್ಧಿ ಕಾಣುತ್ತಿದೆ. ಲಕ್ಷಾಂತರ ಭಾರತೀಯರ ಹೃದಯದಲ್ಲಿ ಅವರ ನಾಯಕತ್ವದ ಶ್ರೇಷ್ಠತೆಯು ಆಳವಾಗಿ ಬೇರೂರಿದೆ ಎಂದು ಕುಮಾರಸ್ವಾಮಿ ಅವರು ಬಣ್ಣಿಸಿದರು.

ಪ್ರಧಾನಿಗಳ ದಣಿವರಿಯದ ಸಮರ್ಪಣೆ ಮತ್ತು ಆಡಳಿತದಲ್ಲಿ ಭಾರತೀಯರು ಶಕ್ತಿ, ಸಾಮರ್ಥ್ಯವನ್ನು ವೃದ್ಧಿಸಿಕೊಂಡು, ಎಲ್ಲಾ ಆಯಾಮಗಳಲ್ಲಿಯೂ ಭಾರತವು ಸರ್ವಶಕ್ತ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ. ಶ್ರೀಮಠಕ್ಕೆ ಭೇಟಿ ನೀಡಿ ಹಿರಿಯ ಗುರುಗಳಿಗೆ ಪ್ರಧಾನಿಗಳು ಗೌರವ ಸಲ್ಲಿಸುತ್ತಿರುವುದು ನನಗೆ ಅತೀವ ಸಂತೋಷ ಉಂಟು ಮಾಡಿದೆ ಎಂದರು.

ಕರ್ನಾಟಕದ ಆಧ್ಯಾತ್ಮ ಮತ್ತು ತ್ರಿವಿಧ ದಾಸೋಹದ ಇತಿಹಾಸದಲ್ಲಿ ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರು ಅಜರಾಮರ ಧ್ರುವತಾರೆ ಆಗಿದ್ದಾರೆ ಎಂದು ನಾನು ಭಕ್ತಿಪೂರ್ವಕವಾಗಿ ಹೇಳಬಯಸುತ್ತೇನೆ. ಅನ್ನ, ಅಕ್ಷರ, ಆಶ್ರಯ ನೀಡುವ ಮೂಲಕ ಅಸಂಖ್ಯಾತ ಬಡಮಕ್ಕಳ ಪಾಲಿಗೆ ಜ್ಞಾನದ ಬೆಳಕಾಗಿ, ಅಸಂಖ್ಯಾತ ಬಡ ಕುಟುಂಬಗಳ ಪ್ರತ್ಯಕ್ಷ ದೈವವಾಗಿ ಮಹಾಸ್ವಾಮೀಜಿ ಅವರು ನಮ್ಮ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದು ಹಿರಿಯ ಶ್ರೀಗಳನ್ನು ಸ್ಮರಿಸಿದರು.

ಸಣ್ಣ ಮಠವಾಗಿದ್ದ ಶ್ರೀಕ್ಷೇತ್ರವನ್ನು ಜಾಗತಿಕ ಶ್ರದ್ಧಾಕೇಂದ್ರವನ್ನಾಗಿ ಬೆಳೆಸಿ ಮಹಾವೃಕ್ಷವನ್ನಾಗಿ ರೂಪಿಸಿದ 71ನೇ ಪೀಠಾಧ್ಯಕ್ಷರಾಗಿದ್ದ ಶ್ರೀ ಬಾಲಗಂಗಾಧರನಾಥ ಮಹಾ ಸ್ವಾಮೀಜಿ ಅವರ ಭೈರವೈಕ್ಯ ಮಂದಿರವನ್ನು ಲೋಕಾರ್ಪಣೆ ಮಾಡುವ ಈ ಪರಮಪುಣ್ಯ ಕಾರ್ಯಕ್ರಮಕ್ಕೆ ಆಗಮಿಸಿರುವ ಪ್ರಧಾನಮಂತ್ರಿಗಳು ಹಾಗೂ ಜಗತ್ತಿನ ಶ್ರೇಷ್ಠ ನಾಯಕರಾದ ನರೇಂದ್ರ ಮೋದಿ ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಕರ್ನಾಟಕದಲ್ಲಿ ಶಿಕ್ಷಣ, ಪರಿಸರ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಮೌನ ಕ್ರಾಂತಿಯನ್ನು ಮಾಡಿದವರು ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರು, ಜೋಳಿಗೆ ಹಿಡಿದು ಹಳ್ಳಿಹಳ್ಳಿಯನ್ನು ಸುತ್ತಿ ರೈತಾಪಿ ಮಕ್ಕಳ ಜ್ಞಾನಾರ್ಜನೆಗೆ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ನಗರಗಳಿಗೆ ಮಾತ್ರ ಸೀಮಿತವಾಗಿದ್ದ ಗುಣಮಟ್ಟದ ಆರೋಗ್ಯ ಸೇವೆಯನ್ನು ಹಳ್ಳಿಗಳಿಗೂ, ಅದರಲ್ಲಿ ಬಡರೈತರ ಮನೆ ಬಾಗಿಲಿಗೆ ವಿಸ್ತರಿಸಿದ ಖ್ಯಾತಿ ಪರಮಪೂಜ್ಯರದ್ದು ಎಂದು ಬಣ್ಣಿಸಿದರು.

ಪರಿಸರ ಕ್ಷೇತ್ರದಲ್ಲಿ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರದು ಅನನ್ಯ ಕೊಡುಗೆ. ಸುಮಾರು 5 ಕೋಟಿ ಸಸಿಗಳನ್ನು ಬೆಳೆಸಿದ ಮಹಾನ್ ತಪಸ್ವಿ. ಅವರು ನೆಟ್ಟ ಸಣ್ಣಸಣ್ಣ ಸಸಿಗಳು ಇಂದು ಮಹಾವೃಕ್ಷಗಳಾಗಿ ಬೆಳೆದಿವೆ. ಶ್ರೀ ಆದಿಚುಂಚನಗಿರಿ ಕ್ಷೇತ್ರ ಬಹುವಿಧದ ದಾಸೋಹಗಳಲ್ಲಿ ದೊಡ್ಡ ಹೆಸರು. ಕಷ್ಟ ಎಂದು ಬರುವ ದೀನರಿಗೆ ಕಲ್ಪವೃಕ್ಷವಾಗಿದೆ. ಜ್ಞಾನ ಎಂದು ಬರುವವರೆಗೆ ಕಾಮಧೇನು.

ಸನಾತನ ಪರಂಪರೆ ಮತ್ತು ಆಧುನಿಕತೆಯ ಮಹಾ ಸಂಗಮ ವಾಗಿ, ಮೇರು ಮಹಾ ಪುಣ್ಯಕ್ಷೇತ್ರವಾಗಿ ಇಂದು ನಮಗೆಲ್ಲರಿಗೂ ದಾರಿದೀಪವಾಗಿದೆ ಎಂದರು.



ಚುಂಚನಗಿರಿಯಲ್ಲಿ ನವಿಲುಗಳ ಪೋಷಣೆಗೆ ಶ್ಲಾಘನೆ

ಶ್ರೀಮಠದಿಂದ ನನಗೆ ನವಿಲನ್ನು ಉಡುಗೊರೆಯಾಗಿ ನೀಡಿದ್ದಾರೆ. ಚುಂಚನಗಿರಿಯಲ್ಲಿ ನವಿಲುಗಳನ್ನು ಪೋಷಣೆ ಮಾಡಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು. ನವಿಲು ಭಾರತದ ರಾಷ್ಟ್ರ ಪಕ್ಷಿ ಹಾಗೂ ಸುಬ್ರಹ್ಮಣ್ಯನ ವಾಹನವಾಗಿದೆ. ದಿಲ್ಲಿಯಲ್ಲಿ ನವಿಲುಗಳು ಇವೆ. ಅವು ನನಗೆ ದೋಸ್ತಿಗಳೂ ಆಗಿವೆ ಎಂದು ಹೇಳಿದರು.

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಭಿಮತ

ದೇಶಾಭಿವೃದ್ಧಿಗಾಗಿ ಪಿಎಂ ಮೋದಿ ಶ್ರಮ

ಮಂಡ್ಯ: ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಪ್ರತಿಮೆ ಉದ್ಘಾಟನೆಗೆ ಪ್ರಧಾನಿ ಮೋದಿಯವರು 2022ರಲ್ಲಿ ಬೆಂಗಳೂರಿಗೆ ಬಂದಿದ್ದರು. ಅಂದು ಅವರು ಮಾತನಾಡುತ್ತಾ, ಕೆಂಪೇಗೌಡರ ಆಲೋಚನೆಗಳನ್ನು ಸರ್ಕಾರಗಳು ಅಳವಡಿಸಿಕೊಳ್ಳಬೇಕು ಎಂದಿದ್ದರು. ಅದೇ ಮಾದರಿಯಲ್ಲಿ ಪ್ರಧಾನಿ ಮೋದಿಯವರು ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಆದಿಚುಂಚನಗಿರಿ ಪೀಠಾಧಿಪತಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಾಗಮಂಗಲ ತಾಲೂಕಿನ ಆದಿ ಚುಂಚನಗಿರಿಯಲ್ಲಿ ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಸಿದ್ಧಾಂತಗಳನ್ನು ಇಟ್ಟುಕೊಂಡು ಮೋದಿಯವರು ದೇಶ ಕಟ್ಟುತ್ತಿದ್ದಾರೆ. ಮೋದಿ ಅವರು ಪ್ರಧಾನಿ ಆದ ಬಳಿಕ 400 ಸಂಖ್ಯೆಯಲ್ಲಿದ್ದ ಸ್ಟಾರ್ಟಪ್‌ಗಳು ಇಂದು 2 ಲಕ್ಷಕ್ಕೂ ಅಧಿಕ ಇವೆ. ಇದು ದೇಶದ ಆರ್ಥಿಕತೆ ಹೇಗಿದೆ ಎನ್ನುವುದನ್ನು ತೋರಿಸುತ್ತದೆ ಎಂದು ಉದಾಹರಣೆ ಸಮೇತ ವಿವರಿಸಿದರು.

ಹೀಗೆ ಹಲವಾರು ಕ್ಷೇತ್ರಗಳಲ್ಲಿ ಮೋದಿಯವರು ಅಂತಾರಾಷ್ಟ್ರೀಯ ಮಟ್ಟಕ್ಕೆ ದೇಶವನ್ನು ಕೊಂಡೊಯ್ಯುತ್ತಿದ್ದಾರೆ ಎಂದು ಶ್ಲಾಘಿಸಿದರು. ನಮ್ಮ ಬಾಲಗಂಗಾಧರನಾಥ ಶ್ರೀಗಳು ಸಮಾಜಕ್ಕೆ ಹಲವು ಕೊಡುಗೆ ನೀಡಿದ್ದಾರೆ. ತ್ರಿವಳಿ ದಾಸೋಹದ ಮೂಲಕ ಅವರ ಹೆಸರು ಅಜರಾಮರವಾಗಿದೆ. ಇಂತಹ ಗುರುಗಳ ಮಂದಿರವನ್ನು ಮೋದಿಯವರು ಉದ್ಘಾಟನೆ ಮಾಡಿರುವುದು ಮಠದ ಕೋಟ್ಯಂತರ ಭಕ್ತರಿಗೂ ಸಂತಸ ತಂದಿದೆ ಎಂದು ಹೇಳಿದರು.



ಮುಗಿಲು ಮುಟ್ಟಿದ ಹರ್ಷೋದ್ಗಾರ

ಆದಿಚುಂಚನಗಿರಿಯಲ್ಲಿ ಗುರು ಶ್ರೀ ಭೈರವೈಕ್ಯ ಮಂದಿರ ಲೋಕಾರ್ಪಣೆ ಮಾಡಿದ ಪ್ರಧಾನಿ ನರೇಂದ್ರಮೋದಿಯವರು ವೇದಿಕೆಗೆ ಆಗಮಿಸುತ್ತಿದ್ದಂತೆ ನೆರೆದಿದ್ದ ಸಹಸ್ರಾರು ಮಂದಿ ಮೋದಿ ಮೋದಿ ಎಂಬ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಅವರು ವೇದಿಕೆಗೆ ಆಗಮಿಸಿ ಶ್ರೀಗಳು ಸೇರಿದಂತೆ ಎಲ್ಲ ಅತಿಥಿಗಳಿಗೂ ವಂದಿಸಿ ಜನರತ್ತ ಕೈಮುಗಿಯುತ್ತಿದ್ದಂತೆ ಜನರ ಹರ್ಷೋದ್ಗಾರ, ಕರತಾಡನ, ಸಿಳ್ಳೆ ಜೋರಾಗಿತ್ತುಫಿ. ಇದಕ್ಕೂ ಮುನ್ನ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ವೇದಿಕೆಗೆ ವ್ಹೀಲ್ ಚೇರ್‌ನಲ್ಲಿ ಬರುತ್ತಿದ್ದಂತೆಯೇ ಶಿಳ್ಳೆ, ಚಪ್ಪಾಳೆ, ಜಯಘೋಷ ಮೊಳಗಿಸಿದರು.

ಪಂಪ ಪ್ರಶಸ್ತಿಗೆ ದೇವನೂರು ಆಯ್ಕೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೀಡಲಾಗುವ ವಿವಿಧ ಪ್ರಶಸ್ತಿಗಳಿಗೆ ಗಣ್ಯರನ್ನು ಆಯ್ಕೆ ಮಾಡಲಾಗಿದ್ದು 2025-26 ನೇ ಸಾಲಿನ ಪ್ರತಿಷ್ಠಿತ ಬಸವ ರಾಷ್ಟ್ರೀಯ ಪುರಸ್ಕಾರಕ್ಕೆ ಶ್ರೀ ಸಿದ್ದರಾಮ ಶರಣರು ಬೆಲ್ದಾಳ, ಶ್ರೀ ಭಗವಾನ್ ಮಹಾವೀರ ಶಾಂತಿ ರಾಷ್ಟ್ರೀಯ ಪುರಸ್ಕಾರಕ್ಕೆ ಶ್ರೀ ಭಾನು ಕೀರ್ತಿ ಭಟ್ಟಾರಕ ಸ್ವಾಮೀಜಿಗಳು, ಕಂಬದಹಳ್ಳಿ, ಹಾಗೂ ಪ್ರತಿಷ್ಠಿತ ಪಂಪ ಪ್ರಶಸ್ತಿಗೆ ಖ್ಯಾತ ಸಾಹಿತಿ ದೇವನೂರು ಮಹಾದೇವ ಅವರು ಭಾಜನರಾಗಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ.

ಬುಧವಾರ ಪ್ರತಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧ ಸಾಧಕರನ್ನು ಗುರುತಿಸಿ ರಾಜ್ಯ ಸರ್ಕಾರದ ಪ್ರತಿಷ್ಠಿತ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಅದರಂತೆಯೂ ಈ ಬಾರಿಯೂ ಹಲವು ಎಲೆಮರೆಯ ಸಾಧಕರನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು. ಇದೇ ವೇಳೆ ರಾಜ್ಯ ಸರ್ಕಾರ ನೀಡುವ ವಿವಿಧ ಪ್ರತಿಷ್ಠಿತ ಪ್ರಶಸ್ತಿಗೆ ಹಲವು ಸಾಧಕರನ್ನು ಆಯ್ಕೆ ಮಾಡಲಾಗಿದೆ ಎಂದು ಸಚಿವ ತಂಗಡಗಿ ತಿಳಿಸಿದರು. ರಾಷ್ಟ್ರೀಯ ಪ್ರಶಸ್ತಿಗೆ ತಲಾ10 ಲಕ್ಷ, ಉಳಿದ ಎಲ್ಲಾ ಪ್ರಶಸ್ತಿಗಳಿಗೂ ತಲಾ 5 ಲಕ್ಷ ರೂಪಾಯಿ ನಗದು ಹಾಗೂ ಪ್ರಶಸ್ತಿ ಫಲಕ, ಸ್ಮರಣಿಕೆ ಒಳಗೊಂಡಿದೆ. ಶೀಘ್ರದಲ್ಲಿಯೇ ಮುಖ್ಯಮಂತ್ರಿಗಳ ದಿನಾಂಕ ಪಡೆದು ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಆಯೋಜನೆ ಮಾಡಲಾಗುವುದು ಎಂದು ಹೇಳಿದರು.



ಭಟ್ಟಾರಕ ಸ್ವಾಮೀಜಿ



ದೇವನೂರು ಮಹಾದೇವ



ಸಿದ್ದರಾಮ ಶರಣರು

ಪ್ರಶಸ್ತಿ ಪಡೆದ ಸಾಧಕರು

- ಕೆ ಜಿ ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ - ಅಲ್ಲಾಭಕ್ಷ್ ಮೀರಸಾಹೇಬ ಮಿರ್ಜಿ
- ಅತ್ತಿಮಬ್ಬೆ ಪ್ರಶಸ್ತಿ - ಡಾ. ಸುಕನ್ಯಾ ಮಾರುತಿ
- ಡಾ ಗುಬ್ಬಿ ವೀರಣ್ಣ ಪ್ರಶಸ್ತಿ - ಜಿ.ವಿ. ಶಾರದಾ
- ಬಿ. ವಿ. ಕಾರಂತ ಪ್ರಶಸ್ತಿ - ಪ್ರಸನ್ನ, ಶಿವಮೊಗ್ಗ
- ಡಾ. ಸಿದ್ದಲಿಂಗಯ್ಯ ಸಾಹಿತ್ಯ ಪ್ರಶಸ್ತಿ - ಗಂಗಾರಾಮ ಚಂಡಾಳ ,ಕೋಲಾರ.
- ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ - ವಿ. ಹರಿರಾಮ್
- ಜಕಣಾಚಾರಿ ಪ್ರಶಸ್ತಿ - ಅಶೋಕ್ ಗುಡಿಗಾರ್
- ಜಾನಪದಶ್ರೀ ಪ್ರಶಸ್ತಿ - ಎಂ. ಮಹದೇವಯ್ಯ ಹಾಗೂ ಬಿ. ಲಕ್ಷಣ
- ಸಂಗೊಳ್ಳಿ ರಾಯಣ್ಣ ಪ್ರಶಸ್ತಿ- ಸಿದ್ದನಗೌಡ ಪಾಟೀಲ್, ಧಾರವಾಡ.
- ಅಕ್ಕಮಹಾದೇವಿ ಪ್ರಶಸ್ತಿ - ಕೆ. ನೀಲಾ,
- ಶ್ರೀ ಸಿದ್ದರಾಮೇಶ್ವರ ಪ್ರಶಸ್ತಿ -ಎಸ್. ಜಿ. ಸಿದ್ದರಾಮಯ್ಯ
- ಕುಮಾರವ್ಯಾಸ ಪ್ರಶಸ್ತಿ- ಕಲ್ಲಿನಾಥ ಶಾಸ್ತ್ರಿ, ಗದಗ.
- ನಾಟ್ಯರಾಣಿ ಶಾಂತಲಾ ಪ್ರಶಸ್ತಿ- ಪ್ರತಿಭಾ ಪ್ರಹ್ಲಾದ್

ಕಾರು ಹರಿದು ಮಗು ಸಾವು: ಆಕ್ರೋಶ

ಚಿಕ್ಕಮಗಳೂರು: ಅಂಬೇಡ್ಕರ್ ಜಯಂತಿ ಅಂಗವಾಗಿ ನಡೆಯುತ್ತಿದ್ದ ಮೆರವಣಿಗೆ ಮೇಲೆ ಕಾರೊಂದು ಹರಿದ ಪರಿಣಾಮ 7 ವರ್ಷದ ಬಾಲಕಿ ಸಾವಿಗೀಡಾಗಿ ಏಳೆಂಟು ಮಂದಿ ಗಾಯಗೊಂಡ ದಾರುಣ ಘಟನೆ ನಗರ ಹೊರವಲಯದ ಬಿಳೇಕಲ್ಲು ಗ್ರಾಮದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಘಟನೆಯಲ್ಲಿ ಸಾನ್ವಿ ಎಂಬ 7 ವರ್ಷದ ಮಗು ಸ್ಥಳದಲ್ಲೇ ಪ್ರಾಣ ಕಳೆದುಕೊಂಡಿದೆ. ಸಾನ್ವಿ ಇಂದಾವರ ಗ್ರಾಮದಿಂದ ಸಂಬಂಧಿಕರ ಮನೆಗೆಂದು ಬಂದಿದ್ದಳು. ಉಳಿದಂತೆ ನಿಶ್ಚಿತ ಎನ್ನುವ 11 ವರ್ಷದ ಬಾಲಕಿ ಸೇರಿ ತೃಪ್ತಿ, ತಿಮ್ಮರಾಜು, ಉಷಾ, ಚೇತನ್, ಸೃಷ್ಟಿ, ನಾಗರಾಜ್ ಹಾಗೂ ಚೇತನ್ ಎಂಬುವವರು ತೀವ್ರ ಗಾಯಗೊಂಡಿದ್ದು ಎಲ್ಲರನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಮೆಡಿಕಲ್ ಕಾಲೇಜಿಗೆ ದಾಖಲಿಸಲಾಗಿದೆ. ಅತೀ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದು ನಂತರ ಉರುಳಿ ಬಿದ್ದಿದೆ. ಘಟನೆಯಲ್ಲಿ ಕಾರು ಚಾಲಕ ಸುಧಾಕರ್ ಎಂಬಾತನಿಗೂ ತೀವ್ರ ಗಾಯಗಳಾಗಿವೆ.

ರೊಚ್ಚಿಗೆದ್ದ ಜನರು: ಘಟನೆ ಸಂಭವಿಸುತ್ತಿದ್ದಂತೆ ತೀವ್ರ ರೊಚ್ಚಿಗೆದ್ದ ಮೆರವಣಿಗೆಯಲ್ಲಿದ್ದ ಜನರು ಕಾರಿನ ಗಾಜುಗಳನ್ನೆಲ್ಲಾ ಪುಡಿ ಮಾಡಿದ್ದಲ್ಲದೆ ಚಾಲಕ ಸುಧಾಕರ್‌ಗೆ ಹಿಗ್ಗಾ ಮುಗ್ಗ ಥಳಿಸಿದ್ದಾರೆ. ಘಟನೆ ನಂತರ ನಗರದ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದ ಪರಿಣಾಮ ಕೆಲ ಸಮಯ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಯಕುಮಾರ್ ಮತ್ತು ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ನಿಯಂತ್ರಿಸಲು ಹರಸಾಹಸಪಟ್ಟರು.

ಸಿ.ಟಿ.ರವಿ ಸಾಂತ್ವನ

ಘಟನೆ ವಿಷಯ ತಿಳಿಯುತ್ತಿದ್ದಂತೆ ವಿಧಾನ ಪರಿಷತ್ ಸದಸ್ಯ ಡಾ. ಸಿ.ಟಿ.ರವಿ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಮೃತ ಮಗುವಿನ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಘಟನೆಗೆ ಕಾರಣರಾದವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು. ನಂತರ ಹಾಸನದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುಗಳ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ರಾಜ್ಯದಲ್ಲಿ ಮೇ 15ರವರೆಗೆ ಬಿಸಿಲಿನ ತಾಪಮಾನದ ಬೇಗೆ | ತತ್ತರಿಸಿದ ಜನತೆ

ಏಪ್ರಿಲ್ ಮಧ್ಯಂತರದಲ್ಲಿ ಗರಿಷ್ಠ ತಾಪಮಾನ

ಬೆಂಗಳೂರು: ಏಪ್ರಿಲ್ ಮಧ್ಯಂತರದಲ್ಲಿ ರಾಜ್ಯದಲ್ಲಿನ ಬಹುತೇಕ ಜಿಲ್ಲೆಗಳ ಗರಿಷ್ಠ ತಾಪಮಾನ 36 ರಿಂದ 42 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದ್ದು, ಈ ನಡುವೆ ಹವಾಮಾನ ಇಲಾಖೆ 12 ಜಿಲ್ಲೆಗಳಿಗೆ ಶಾಖದ ಅಲೆ (ಹೀಟ್ ವೇವ್) ಎಚ್ಚರಿಕೆ ನೀಡಿದೆ. ಜತೆಗೆ ರಾಜ್ಯದಲ್ಲಿ ಮೇ 15ರವರೆಗೆ ಬಿಸಿಲಿನ ತಾಪಮಾನದ ಬೇಗೆ ಇರಲಿದ್ದು, ಈ ಮೂಲಕ ಮೊದಲೇ ಬೇಸಿಗೆಯ ತಾಪಕ್ಕೆ ಹೈರಾಣಾಗಿದ್ದ ಜನತೆಗೆ ಮತ್ತಷ್ಟು ಬಿಸಿ ಮುಟ್ಟಲಿದೆ.

ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಬಿಸಿಲಿನ ತೀವ್ರತೆ ಗಣನೀಯವಾಗಿ ಹೆಚ್ಚಾಗಿದೆ. ದಿನನಿತ್ಯದ ತಾಪಮಾನವು ಸಾಮಾನ್ಯ ಮಟ್ಟವನ್ನು ಮೀರಿ ಜನಜೀವನದ ಮೇಲೆ ಪರಿಣಾಮ ಬೀರು ತ್ತಿದೆ. ಈ ಪರಿಸ್ಥಿತಿಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಮಳೆಯ ಕೊರತೆ. ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡದಲ್ಲಿ ಏ.15 ರಿಂದ 5 ದಿನ ಹಾಗೂ ಬಾಗಲಕೋಟೆ, ಬೀದರ್, ಧಾರವಾಡ, ಗದಗ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ ಮತ್ತು ಯಾದಗಿರಿಯಲ್ಲಿ ಏ.16 ರಿಂದ 19ರವರೆಗೆ ಶಾಖದ ಅಲೆ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಈಸಂದರ್ಭದಲ್ಲಿಈಜಿಲ್ಲೆಗಳಲ್ಲಿಬಿರುಗಾಳಿಸಹಿತ ಸಾಧಾರಣ ಮಳೆ ಸುರಿಯುವ ಸಾಧ್ಯತೆ ಇದೆ. ಚಿಕ್ಕಮಗಳೂರು, ಕೊಡಗು, ಹಾಸನ, ಶಿವಮೊಗ್ಗದಲ್ಲಿ ಏ.15 ರಿಂದ 21 ರವರೆಗೆ, ಮೈಸೂರು, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆಯಲ್ಲಿ ಏ.16ರಂದು ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ತಜ್ಞರು ಸೂಚನೆ ನೀಡಿದ್ದಾರೆ.

ಮೇ ತಿಂಗಳ ಅಂತ್ಯದ ವೇಳೆಗೆ ರಾಜ್ಯದಲ್ಲಿ ಸರಾಸರಿಮಟ್ಟಕ್ಕಿಂತಲೂಹೆಚ್ಚುಮಳೆದಾಖಲಾಗಿತ್ತು. ಇದರಿಂದ ವಾತಾವರಣ ತಂಪಾಗಿದ್ದು, ಬಿಸಿಲಿನ ತೀವ್ರತೆ ಕಡಿಮೆ ಆಗಿತ್ತು. ಮಳೆಯ ಪರಿಣಾಮವಾಗಿ ನೆಲ ತೇವಾಂಶವನ್ನು ಉಳಿಸಿಕೊಂಡಿದ್ದು, ಗಾಳಿ ತಂಪಾಗಲು ಸಹಾಯವಾಗಿತ್ತು. ಒಟ್ಟು ಮಳೆ ಪ್ರಮಾಣದಲ್ಲಿ ಶೇ.75 ಮಳೆಯು ನೈಋತ್ಯ ಮಾನ್ಸೂನ್‌ನಲ್ಲಿ ಸುರಿಯುತ್ತದೆ. ಆದರೆ, ಮುಂಗಾರು ದುರ್ಬಲಗೊಳ್ಳಲಿದೆ. ಈ ಕಾರಣದಿಂದ ಕರ್ನಾಟಕ ಸೇರಿ ದೇಶಾದ್ಯಂತ ಮಾನ್ಸೂನ್ ಅವಧಿಯಲ್ಲಿ ಮಳೆ ಕುಂಠಿತಗೊಳ್ಳುವ ಸಾಧ್ಯತೆ ಹೆಚ್ಚಿದ್ದು, ನೈಋತ್ಯ ಮಾನ್ಸೂನ್ ಕುರಿತು ಬಿಡುಗಡೆ ಮಾಡಿರುವ ಮೊದಲ ಹಂತದ ವರದಿಯಲ್ಲಿ ಕರಾವಳಿ, ಮಲೆನಾಡು, ದಕ್ಷಿಣ ಕರ್ನಾಟಕ, ಉ.ಕರ್ನಾಟಕದ ಭೌಗೋಳಿಕ ಪ್ರದೇಶಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಂಭವ ಎದ್ದು ಕಾಣುತ್ತಿದೆ.

ಕಲಬುರಗಿಯಲ್ಲಿ ಅತೀ ಹೆಚ್ಚು ಉಷ್ಣಾಂಶ ದಾಖಲು


ರಾಜ್ಯದಲ್ಲಿ ಬಿಸಿಲಿನ ಬೇಗೆ ತೀವ್ರವಾಗಿದ್ದು, ರಾಜ್ಯದ ಇತರೆ ಜಿಲ್ಲೆಗಳಗಿಂತ ಕಲಬುರಗಿಯಲ್ಲಿ ಅತೀ ಹೆಚ್ಚು 44 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಬುಧವಾರ ದಾಖಲಾಗಿದೆ.

ರಾಜಧಾನಿಯಲ್ಲಿ ಕನಿಷ್ಠ ವಾಡಿಕೆಗಿಂತ 1.3 ಡಿ.ಸೆ ಹೆಚ್ಚಳ

ರಾಜಧಾನಿ ಬೆಂಗಳೂರಿನಲ್ಲಿಯೂ ಸುಡು ಬಿಸಿಲು ಕಾಣಿಸಿಕೊಳ್ಳುತ್ತಿದೆ. ವಾಡಿಕೆಯಂತೆ 34.6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಬೇಕಿತ್ತು. ಆದರೆ, ಪ್ರಸ್ತುತ ನಗರದಲ್ಲಿ 36.6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು, ವಾಡಿಕೆಗಿಂತ 2.6 ಡಿಗ್ರಿ ಸೆಲ್ಸಿಯಸ್ ಅಧಿಕವಾಗಿ ಕಂಡುಬಂದಿದೆ. ಕನಿಷ್ಠ ತಾಪಮಾನದಲ್ಲಿಯೂ ವಾಡಿಕೆಗಿಂತ 1.3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗಿರುವುದು ಕಂಡುಬಂದಿದೆ.

ಮಂಗಳೂರಿನಲ್ಲಿ ವಿದ್ಯುತ್ ಕೇಬಲ್ ಕಾಮಗಾರಿ ಶೀಘ್ರ: ಖಾದರ್

ಮಂಗಳೂರು: ಮಂಗಳೂರು, ಮಂಗಳೂರು ನಗರ ದಕ್ಷಿಣ ಹಾಗೂ ಮಂಗಳೂರು ನಗರ ಉತ್ತರ ಕ್ಷೇತ್ರದ ನಗರ ಪ್ರದೇಶದಲ್ಲಿ ಭೂಗತ ವಿದ್ಯುತ್ ಕೇಬಲ್ ಅಳವಡಿಕೆಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಶೀಘ್ರ ಕೆಲಸ ಆರಂಭವಾಗಲಿದೆ. ಉಳ್ಳಾಲ, ಸೋಮೇಶ್ವರ, ಕುದ್ರೋಳಿ- ಉರ್ವಸ್ಟೋರ್ ಹಾಗೂ ಕಾವೂರು ಪ್ರದೇಶಗಳಲ್ಲಿ ಭೂಗತ ಕೇಬಲ್ ಅಳವಡಿಕೆಯಾಗಲಿದೆ ಎಂದು ರಾಜ್ಯ ವಿಧಾನ ಸಭೆ ಸ್ಪೀಕರ್ ಯು.ಟಿ. ಖಾದರ್ ತಿಳಿಸಿದರು.



ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಭೂಗತ ಕೇಬಲ್ ಅಳವಡಿಸುವ ಕುರಿತು ಬಿಜೈ ಮೆಸ್ಕಾಂ ಕಚೇರಿಯಲ್ಲಿ ಬುಧವಾರ ಅಧಿಕಾರಿಗಳ ಸಭೆ ನಡೆಸಿ, ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಂಪೂರ್ಣ ಉಳ್ಳಾಲ ನಗರಸಭೆ ವ್ಯಾಪ್ತಿ, ಸೋಮೇಶ್ವರ ಪುರಸಭೆ ಸೋಮೇಶ್ವರ, ಕುಂಪಲ, ಕೊಲ್ಯ, ಉಚ್ಚಿಲ ಭಾಗದಲ್ಲಿ 186.45 ಕೋಟಿ ರೂ. ವೆಚ್ಚದಲ್ಲಿ ಭೂಗತ ಕೇಬಲ್ ಅಳವಡಿಕೆ ಆಗಲಿದೆ. ಮಂಗಳೂರು ನಗರ ದಕ್ಷಿಣ ಕ್ಷೇತ್ರದ ಮಣ್ಣಗುಡ್ಡ ಸ್ಟೇಷನ್‌ನ ಕುದ್ರೋಳಿ ಪ್ರದೇಶದಿಂದ ಉರ್ವ, ಉರ್ವಸ್ಟೋರ್, ಬಿಜೈ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಪ್ರದೇಶದಲ್ಲಿ 67.64 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ನಡೆಯಲಿದೆ. ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಕಾವೂರು ಏರ್‌ಪೋರ್ಟ್ ರಸ್ತೆಯಲ್ಲಿ 51.28 ಕೋಟಿ ರೂ.ವೆಚ್ಚದಲ್ಲಿ ಭೂಗತ ಕೇಬಲ್ ಅಳವಡಿಸಲಾಗುವುದು. ಅರ್ಧ ಮೀಟರ್ ಅಗಲ, 1.5 ಮೀಟರ್ ಆಳದಲ್ಲಿ ಕೇಬಲ್ ಅಳವಡಿಕೆ ಆಗಲಿದೆ.

ಈ ಎಲ್ಲ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತು ಟೆಂಡರ್ ನಡೆದಿದೆ. ಶೀಘ್ರದಲ್ಲಿ ಕಾರ್ಯಕ್ರಮ ನಡೆಸಿ ಕಾಮಗಾರಿ ಆರಂಭಿಸಲಾಗುವುದು. ಎರಡು ವರ್ಷದೊಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ಎಚ್‌ಟಿ ಮತ್ತು ಎಲ್‌ಟಿ ಲೈನ್‌ಗಳನ್ನು ಅಳವಡಿಸಲಾಗುತ್ತಿದ್ದು, ಕೇಬಲ್ ಹಾಕುವ ಸಂದರ್ಭ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಅಗತ್ಯ ಇರುವ ಕಡೆಗಳಲ್ಲಿ ರಸ್ತೆ ಅಗೆತ, ಪೈಪ್ ಲೈನ್ ಸ್ಥಳಾಂತರ ಮಾಡಬೇಕಿದೆ. ಮರಗಳನ್ನು ತೆರವುಗೊಳಿಸಬೇಕಾದೀತು. ಈ ಹಿನ್ನೆಲೆಯಲ್ಲಿ ಸ್ಥಳೀಯಾಡಳಿತ, ಅರಣ್ಯ ಇಲಾಖೆ, ರಾಷ್ಟ್ರೀಯ ಹೆದ್ದಾರಿ, ಲೋಕೋಪಯೋಗಿ ಇಲಾಖೆಗಳು ಸಮನ್ವಯದಿಂದ ಕೆಲಸ ನಿರ್ವಹಿಸಬೇಕು ಎಂದು ಸೂಚಿಸಲಾಗಿದೆ ಎಂದರು.

ಭೂಗತ ಕೇಬಲ್‌ನಿಂದ ಮಳೆ, ಗಾಳಿ, ಮಿಂಚು, ಮರ ಬೀಳುವುದರಿಂದ ವಿದ್ಯುತ್ ಕಡಿತವಾಗುವುದು ತಪ್ಪುತ್ತದೆ. ವಿದ್ಯುತ್ ಲೈನ್‌ನಿಂದ ಅಪಘಾತ ಉಂಟಾಗುವುದು ತಪ್ಪುತ್ತದೆ. ನಿರ್ವಹಣೆ ಸುಲಭವಾಗುತ್ತದೆ. ವಿದ್ಯುತ್ ಕಳ್ಳತನ ತಡೆಯಬಹುದು ಎಂದರು.

ತೊಕ್ಕೊಟ್ಟು ಸಬ್‌ಸ್ಟೇಶನ್ ಅನ್ನು 33 ಕೆವಿಯಿಂದ 110 ಕೆವಿಗೆ ಮೇಲ್ದರ್ಜೆಗೇರಿಸಲಾಗುವುದು. ಕೊಣಾಜೆ ಸಬ್ ಸ್ಟೇಶನ್‌ನಲ್ಲಿ ಹೆಚ್ಚುವರಿಯಾಗಿ 20 ಎಂವಿಎ ವಿದ್ಯುತ್ ಪರಿವರ್ತಕವನ್ನು ಸ್ಥಾಪಿಸಲಾಗುವುದು. ಜತೆಗೆ ಈಗ ಇರುವ ವಿದ್ಯುತ್ ಪರಿವರ್ತಕವನ್ನು 10 ಕೆ.ವಿಯಿಂದ 20ಕೆವಿಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯಿದೆ. ಇದಕ್ಕಾಗಿ ಹೆಚ್ಚುವರಿ ಭೂಮಿ ಅಗತ್ಯವಿದ್ದು, ಮಂಗಳೂರು ವಿಶ್ವವಿದ್ಯಾಲಯದ ಜಾಗ ಪಡೆಯಲಾಗುತ್ತಿದೆ ಎಂದು ಹೇಳಿದರು.

ಮೆಸ್ಕಾಂ ಅಧ್ಯಕ್ಷ ಹರೀಶ್‌ಕುಮಾರ್, ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ್ ಉಪಸ್ಥಿತರಿದ್ದರು.

ಸಂಪಾದಕೀಯ

ಮೋದಿಗೆ 'ದೇಶದ್ರೋಹಿ' ಎಂದ ರಾಹುಲ್ !

ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧ ವಿದೇಶಿ ಹಸ್ತಕ ಟೂಲ್‌ಕಿಟ್‌ಗಳು ನಡೆಸುತ್ತಿರುವ ಕುತ್ಸಿತ ನಿಂದಾಸತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಇದಕ್ಕಾಗಿ ದೇಶದೊಳಗಿನ ಕೆಲವು ಅತೃಪ್ತ ಶಕ್ತಿಗಳನ್ನು ಬಳಸಿಕೊಳ್ಳಲಾಗುತ್ತಿರುವುದು ಕೂಡ ಸರ್ವವೇದ್ಯ. ಇದೀಗ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪಶ್ಚಿಮ ಬಂಗಾಲದ ಚುನಾವಣಾ ರ್‍ಯಾಲಿಯೊಂದರಲ್ಲಿ ಪ್ರಧಾನಿ ಮೋದಿಯವರನ್ನು 'ದೇಶದ್ರೋಹಿ' ಎಂದು ದೂಷಿಸಿದ್ದಾರೆ. ಅಮೆರಿಕದ ಜತೆಗಿನ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿ ದೇಶದ ಹಿತಾಸಕ್ತಿಯನ್ನು ಮೋದಿ ಮಾರಿದ್ದಾರೆ ಎಂಬ ಆರೋಪದೊಂದಿಗೆ ರಾಹುಲ್ ಗಾಂಧಿ ಮೋದಿಯವರನ್ನು 'ದೇಶದ್ರೋಹಿ'. ಅವರಿಗೆ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡುವ ಧೈರ್ಯ ಇಲ್ಲ ಎಂದಿದ್ದಾರೆ. ರಾಹುಲ್ ಕೆಲವು ಸಮಯದಿಂದ ಪ್ರಧಾನಿ ಮೋದಿಯವರನ್ನು ಗುರಿಯಾಗಿರಿಸಿಕೊಂಡು ಆಕ್ರಮಣಕಾರಿ ರೀತಿಯ



ಆರೋಪಗಳನ್ನು ಮಾಡುತ್ತಿದ್ದಾರೆ. ಆದರಲ್ಲೂ ವಿದೇಶಕ್ಕೆ ಹೋಗಿ ಬಂದ ಬಳಿಕ ರಾಹುಲ್ ಮೋದಿಯವರ ವಿರುದ್ಧ ನಡೆಸುವ ವಾಗ್ದಾಳಿ ಮತ್ತಷ್ಟು ಆಕ್ರಮಣಕಾರಿಯಾಗಿರುವುದನ್ನು ದೇಶ ಗಮನಿಸುತ್ತಿದೆ. ಜೊತೆಗೆ ಎಂದಿನಂತೆ ಆರೆಸ್ಸೆಸ್–ಬಿಜೆಪಿ ಸಂವಿಧಾನವನ್ನು ನಾಶಗೊಳಿಸುತ್ತಿದೆ ಎಂದೂ ಸೇರಿಸಿದ್ದಾರೆ.

ರಾಜಕೀಯದಲ್ಲಿ ಟೀಕೆ–ಟಿಪ್ಪಣಿ ಸಾಮಾನ್ಯವಾಗಿರುವಂಥದ್ದೇ. ಆದರೆ ದೇಶದ ಪ್ರಧಾನಿಗೆ 'ದೇಶದ್ರೋಹಿ' ಪದ ಬಳಕೆ ಎಷ್ಟು ಸರಿ? ಮೋದಿಯವರ ವಿರುದ್ಧ ರಾಹುಲ್ ಆಗಲಿ ಅಥವಾ ಇನ್ನಾರೇ ಆಗಲಿ ಎಷ್ಟೇ ದೂಷಣೈದರೂ ದೇಶದ ಜನತೆ ಮಾತ್ರ ಮೋದಿಯವರನ್ನೇ ಬೆಂಬಲಿಸುತ್ತಿದೆ. ಈ ಬೆಂಬಲ ಕಡಿಮೆಯಾಗುವ ಬದಲಿಗೆ ಹೆಚ್ಚೆಚ್ಚಾಗುತ್ತಲೇ ಇದೆ !

ದೇಶದ ಹಿತಾಸಕ್ತಿಗಳನ್ನು ಕಾಂಗ್ರೆಸ್ ನೇತೃತ್ವದ ಹಿಂದಿನ ಸರಕಾರಗಳು ಹೇಗೆ ಕಡೆಗಣಿಸುತ್ತಾ ಬಂದಿವೆ ಮತ್ತು ವಿದೇಶಿ ಒತ್ತಡಗಳಿಗೆ ಹೇಗೆ ಮಣಿಯುತ್ತಿದ್ದವು ಎಂಬುದು ಇತಿಹಾಸದ ಪುಟಗಳಲ್ಲಿ ಎದ್ದು ಕಾಣುತ್ತಿರುವ ಸಂಗತಿ. ಅದು ಸಾವಿರಾರು ಚ.ಕಿ.ಮೀ.ಭೂಮಿಯನ್ನು ಚೀನೀ ಹಿಡಿತಕ್ಕೆ ಬಿಟ್ಟುಕೊಟ್ಟಿರುವುದು, ಡಬ್ಲ್ಯುಟಿಒ ಒಪ್ಪಂದಗಳಲ್ಲಿ ದೇಶದ ಹಿತಾಸಕ್ತಿಗಳಿಗೆ ಹಾನಿಯುಂಟು ಮಾಡಿದ್ದು, ಭಾರತೀಯ ಯೋಧರಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವಲ್ಲಿ ನಿರ್ಲಕ್ಷ್ಯ ತೋರಿದ್ದು, ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆಯ ಬದಲಿಗೆ ದಲ್ಲಾಳಿಗಳ ಮೂಲಕ ವಿದೇಶಿ ಆಮದನ್ನೇ ನೆಚ್ಚಿಕೊಂಡು ಕೋಟ್ಯಂತರ ರೂ.ಗಳ ಭ್ರಷ್ಟಾಚಾರ ನಡೆಸಿದ ಸಂದರ್ಭಗಳಲ್ಲೆಲ್ಲ ದೇಶದ ಜನತೆ ಗುರುತಿಸಿದೆ. ರಾಹುಲ್ ಗಾಂಧಿ ಮತ್ತು ಅವರ ಆಪ್ತ ಬಳಗ ಮೋದಿಯವರ ವಿರುದ್ಧ ನಡೆಸುತ್ತಿರುವ ದಾಳಿ ಒಂದೆಡೆ ಇದ್ದರೆ, ಅವರದೇ ಪಕ್ಷದ ಹಿರಿಯ ಮುತ್ಸದ್ದಿಗಳು ಮೋದಿ ಸರ್ಕಾರದ ನಿಲುವುಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ, ಸಮರ್ಥನೆ ನೀಡುತ್ತಿದ್ದಾರೆ. ಇದೀಗ ಮಹಿಳಾ ಮೀಸಲಾತಿ ಕುರಿತಂತೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಸೇರಿದಂತೆ ಕಾಂಗ್ರೆಸ್ ಮತ್ತು ಕೆಲವು ವಿಪಕ್ಷಗಳು ಉತ್ತರ–ದಕ್ಷಿಣ ಎಂದು ದೇಶದಲ್ಲಿ ಗೊಂದಲ ಹುಟ್ಟಿಸಿ ಒಕ್ಕೂಟ ತತ್ವಕ್ಕೆ ಹಾನಿಯುಂಟು ಮಾಡುತ್ತಿದ್ದರೆ, ಮಾಜಿ ರಾಷ್ಟ್ರಪತಿ ಕಾಂಗ್ರೆಸ್‌ನವರೇ ಆಗಿರುವ ಪ್ರತಿಭಾ ಪಾಟೀಲ್ ಅವರು ಪ್ರಧಾನಿ ಮೋದಿಯವರನ್ನು ಬೆಂಬಲಿಸಿ ಪತ್ರ ಬರೆದಿರುವುದೂ ಇಲ್ಲಿ ಉಲ್ಲೇಖನೀಯ.

ಎಲ್ಲವೂ ನಾನೇ ನಾನೇ, ಇದು ಟ್ರಂಪ್ ಹೊಸ ಅವತಾರ

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇತ್ತೀಚಿನ ನಡೆ ಜಗತ್ತನ್ನು ಮತ್ತೆ ಮತ್ತೆ ಒಂದೇ ಪ್ರಶ್ನೆಯ ಮುಂದೆ ನಿಲ್ಲಿಸಿದೆ: ಇದು ರಾಜಕೀಯ ತಂತ್ರವೇ, ವೈಯಕ್ತಿಕ ಅಹಂಕಾರದ ಪ್ರದರ್ಶನವೇ, ಅಥವಾ ಅಧಿಕಾರದ ಮದದಿಂದ ಹುಟ್ಟಿದ ಅಸ್ಥಿರ ಮನಸ್ಥಿತಿಯ ಫಲವೇ? ಈ ಪ್ರಶ್ನೆಗೆ ವೈದ್ಯಕೀಯ ಉತ್ತರ ನೀಡುವುದು ನನ್ನ ಕೆಲಸವಲ್ಲ. ಆದರೆ ಅವರ ನಡೆ, ಮಾತು, ಪ್ರತಿಕ್ರಿಯೆ ಮತ್ತು ಸಾಮಾಜಿಕ ಮಾಧ್ಯಮದ ವರ್ತನೆಗಳನ್ನು ಗಮನಿಸಿದರೆ, ಅದು ಸಾಮಾನ್ಯ ರಾಜಕಾರಣಿಯ ಮಿತಿಯೊಳಗೆ ನಿಲ್ಲುವುದಿಲ್ಲ ಎಂಬುದಂತೂ ಸ್ಪಷ್ಟ.

ಟ್ರಂಪ್ ಎಂದರೆ ಸದಾ ಅತಿಶಯೋಕ್ತಿ, ಅಬ್ಬರ ಮತ್ತು ತನ್ನದೇ ಸತ್ಯವನ್ನು ಸೃಷ್ಟಿಸುವ ರಾಜಕಾರಣ. ಆದರೆ ಇತ್ತೀಚೆಗೆ ಅದು ಇನ್ನಷ್ಟು ಅಪಾಯಕಾರಿ ಹಂತಕ್ಕೆ ತಲುಪಿದಂತಿದೆ. ತಾನು 8 ಯುದ್ಧಗಳನ್ನು ನಿಲ್ಲಿಸಿದ್ದೇನೆ ಎಂಬಂತಹ ಭಾರೀ ಹೇಳಿಕೆಗಳಿಂದ ಹಿಡಿದು, ನೊಬೆಲ್ ಶಾಂತಿ ಪ್ರಶಸ್ತಿಯತ್ತ ಏಕಾಂಗಿ ಓಟ ನಡೆಸುವ ತನಕ ಅವರ ನಡೆ ಸ್ವಪ್ರಚಾರದ ಗಡಿಯನ್ನು ದಾಟಿ ವಾಸ್ತವದ ಮೇಲೆಯೇ ದಾಳಿ ನಡೆಸುವ ಹಂತಕ್ಕೇರಿದೆ. ಒಂದೆಡೆ ಶಾಂತಿಯ ರಕ್ಷಕನಂತೆ ಬಿಂಬಿಸಿಕೊಳ್ಳುವ ಪ್ರಯತ್ನ, ಇನ್ನೊಂದೆಡೆ ಇರಾನ್ ಮೇಲೆ ಯುದ್ಧದ ಧ್ವನಿ ? ಈ ವಿರೋಧಾಭಾಸವೇ ಟ್ರಂಪ್ ರಾಜಕೀಯದ ನಿಜ ಬಣ್ಣ.

ಶಾಂತಿ ಪ್ರಶಸ್ತಿಯ ಕನಸು ಕಂಡವನು ಯುದ್ಧದ ಭಾಷೆ ಬಳಸಿದಾಗ ಅದು ಕೇವಲ ರಾಜಕೀಯ ಲೆಕ್ಕಾಚಾರವಾಗಿರುವುದಿಲ್ಲ; ಅದು ಜಾಗತಿಕ ಸ್ಥಿರತೆಗೆ ಚೂರಿ ಬೀಸುವ ಕ್ರಮವಾಗುತ್ತದೆ. ಒಂದು ವೇಳೆ ಇವರಿಗೆ ನೊಬೆಲ್ ಪ್ರಶಸ್ತಿಯನ್ನು ನೀಡಿದ್ದರೆ ಏನಾಗುತ್ತಿತ್ತು ಎಂಬ ಆತಂಕವೂ ಇದೇ ಕಾರಣಕ್ಕೆ ಗಂಭೀರವಾಗುತ್ತದೆ. ಯಾಕೆಂದರೆ, ಟ್ರಂಪ್‌ಗೆ ಪ್ರಶಸ್ತಿ ದೊರೆತಿದ್ದರೆ ಅದನ್ನು ನೀತಿಗೆ ದೊರೆತ ಮನ್ನಣೆ ಎಂದುಕೊಳ್ಳುವುದಕ್ಕಿಂತ, ತನ್ನದೇ ವೈಯಕ್ತಿಕ ಮಹತ್ವಾಕಾಂಕ್ಷೆಗೆ ದೊರೆತ ಅನುಮೋದನೆ ಎಂದು ಅವರು ವ್ಯಾಖ್ಯಾನಿಸಬಹುದಿತ್ತು. ಆ ಮನಸ್ಥಿತಿಯ ಪರಿಣಾಮವು ಇನ್ನಷ್ಟು ಅಪಾಯಕಾರಿ ನಿರ್ಧಾರಗಳಲ್ಲಿ ವ್ಯಕ್ತವಾಗುತ್ತಿತ್ತು.

ಅವರ ಕುರಿತು ಮತ್ತೊಂದು ಗಂಭೀರ ಅಂಶವೆಂದರೆ ಸಂಸ್ಥೆಗಳ ಮೇಲಿನ ಅವಹೇಳನೆ. ವಿಶ್ವಸಂಸ್ಥೆ, ವಿಶ್ವ ನಾಯಕರು, ಧಾರ್ಮಿಕ ಮುಖಂಡರು? ಯಾರ ಮಾತಿಗೂ ಅವರು ತಲೆಬಾಗುವ ಸ್ವಭಾವ ತೋರಿಲ್ಲ. ಇತ್ತೀಚೆಗೆ ಪೋಪ್‌ಗೂ ಎದುರುತ್ತರ ನೀಡಿದ ಅವರ ನಡೆ ಇದನ್ನು ಮತ್ತೊಮ್ಮೆ ಸಾಬೀತುಪಡಿಸಿತು. ಧಾರ್ಮಿಕ ನೈತಿಕತೆ, ಮಾನವೀಯ ಕಳಕಳಿ, ಜಾಗತಿಕ ಶಾಂತಿಯ ಮೌಲ್ಯಗಳು? ಇವೆಲ್ಲವೂ ಟ್ರಂಪ್‌ನ ರಾಜಕೀಯ ಶೈಲಿಯಲ್ಲಿ ದುರ್ಬಲವಾಗುತ್ತಿವೆ. ಇನ್ನೂ ಗಂಭೀರವಾದ ಸಂಗತಿ ಎಂದರೆ, ಅವರು ತಮ್ಮ ಸಾಮಾಜಿಕ ಮಾಧ್ಯಮದಲ್ಲಿ ತಾವೇ ಜೀಸಸ್ ಕ್ರೈಸ್ಟ್ ಎನ್ನುವ ಅರ್ಥ ಬರುವ ರೀತಿಯ ವಿಷಯವನ್ನು ಹಾಕಿಕೊಂಡ ಘಟನೆ. ನಂತರ ಅದನ್ನು ತೆಗೆಸಿದರೂ, ಆ ಕ್ಷಣವು ಅವರ ಮನೋವೈಜ್ಞಾನಿಕ ಸ್ಥಿತಿ ಮತ್ತು ಸ್ವಕೇಂದ್ರಿತ ಅಹಂಕಾರದ ಕುರಿತು ಹಲವಾರು ಪ್ರಶ್ನೆಗಳನ್ನು ಎಬ್ಬಿಸಿತು.

ಆದರೆ, ಈ ವಿಚಾರದಲ್ಲಿ ಪೋಪ್ ಅವರ ನಡೆ ಶ್ಲಾಘನೀಯ ಎಂದರೆ ತಪ್ಪಾಗಲಾರದು. ಟ್ರಂಪ್ ಅವರು ಎಷ್ಟೇ ಹೇಳಿಕೆ ನೀಡಿದರೂ, ಪೋಪ್ ಬಾಗಲಿಲ್ಲ, ಹೆಚ್ಚಾಗಿ ಪ್ರತಿಕ್ರಿಯೆಯನ್ನೂ ನೀಡಲು ಹೋಗಲಿಲ್ಲ. ಒಂದು ವೇಳೆ ಈಗಿನ ಪೋಪ್ ಅಮೆರಿಕನ್ನರಾಗಿರುವುದು ಅದೃಷ್ಟವೇ ಸರಿ. ಒಂದು ವೇಳೆ ಅವರು ಬೇರೆ ದೇಶದವರಾಗಿ, ಟ್ರಂಪ್ ವಿರುದ್ಧ ಯುದ್ಧ ಸಂಬಂಧಿ ಹೇಳಿಕೆ ನೀಡಿದ್ದರೆ ಅಮೆರಿಕ ವಿರೋಧಿ ಎಂದೇ ಕರೆದುಬಿಡುತ್ತಿದ್ದರು. ಆದರೆ, ಈಗಿನ ಪೋಪ್ ಅಮೆರಿಕನ್ನರಾಗಿರುವುದರಿಂದ ಹೆಚ್ಚಿನ ಟೀಕೆಗೆ ಆಸ್ಪದವಿರಲಿಲ್ಲ. ಆದರೂ, ಟ್ರಂಪ್ ಅವರ ಅಧಿಕ ಪ್ರಸಂಗಿ ಹೇಳಿಕೆಗಳಿಗೆ ಪೋಪ್ ಕೂಡ ತುತ್ತಾದರೂ ಎಂಬುದು ವಿಚಿತ್ರ.

ಒಬ್ಬ ರಾಜಕಾರಣಿ ತನ್ನ ಶಕ್ತಿ, ಜನಪ್ರಿಯತೆ ಅಥವಾ ಪ್ರಭಾವವನ್ನು ಅತಿಯಾಗಿ ನಂಬುವುದು ಹೊಸದೇನಲ್ಲ. ಆದರೆ ಟ್ರಂಪ್ ವಿಷಯದಲ್ಲಿ ಸಮಸ್ಯೆ ಇನ್ನಷ್ಟು ಆಳದಲ್ಲಿದೆ. ಅವರು ಕೇವಲ ತನ್ನನ್ನು ದೊಡ್ಡವನಾಗಿ ತೋರಿಸಲು ಪ್ರಯತ್ನಿಸುವುದಿಲ್ಲ; ಜಗತ್ತಿನ ಬುದ್ಧಿವಂತಿಕೆ, ಶಿಸ್ತು ಮತ್ತು ರಾಜತಾಂತ್ರಿಕ ಸಂಯಮವನ್ನೇ ಅಸ್ಥಿರಗೊಳಿಸಲು ಪ್ರಯತ್ನಿಸುತ್ತಾರೆ. ಇದನ್ನು ಕೇವಲ ಅಹಂಕಾರವೆಂದು ತಳ್ಳಿಹಾಕಲಾಗದು. ಏಕೆಂದರೆ, ಅವರ ಪ್ರತಿಯೊಂದು ಅಜಾಗರೂಕ ಹೇಳಿಕೆಯೂ ಮಾರುಕಟ್ಟೆಗಳಿಗೆ, ಯುದ್ಧದ ಸಾಧ್ಯತೆಗಳಿಗೆ, ಜಾಗತಿಕ ರಾಜತಾಂತ್ರಿಕ ಸಂಬಂಧಗಳಿಗೆ ಪರಿಣಾಮ ಬೀರುತ್ತದೆ.

ಇಲ್ಲಿ ಮತ್ತೊಂದು ಆಯಾಮವೂ ಇದೆ. ಅದು ಆರ್ಥಿಕ–ರಾಜಕೀಯ ತಂತ್ರದ ಪ್ರಶ್ನೆ. ಚೀನಾ, ಭಾರತ ಸೇರಿದಂತೆ ಹಲವು ಅಭಿವೃದ್ಧಿಶೀಲ ದೇಶಗಳು ಮುಂದಿನ ಎರಡು ದಶಕಗಳಲ್ಲಿ ಅಮೆರಿಕದ ಸಮಾನ ಶಕ್ತಿಗಳಾಗಿ ಅಥವಾ ಕೆಲವು ಕ್ಷೇತ್ರಗಳಲ್ಲಿ ಅದಕ್ಕಿಂತ ಮುಂದೆ ಸಾಗಲಿವೆ ಎಂಬ ವಿಶ್ಲೇಷಣೆಗಳು ಬಹುಕಾಲದಿಂದಲೇ ಕೇಳಿಬರುತ್ತಿವೆ. ಈ ವಾಸ್ತವ ಟ್ರಂಪ್ ಮತ್ತು ಅವರಂತಹ ಅಮೆರಿಕ ಕೇಂದ್ರಿತ ಶಕ್ತಿಗಳಿಗೆ ಅಸಹ್ಯವಾಗುವುದು ಸಹಜ. ಯಾಕೆಂದರೆ ಜಗತ್ತು ಬಹುಧ್ರುವೀಯವಾಗುವ ಪ್ರಕ್ರಿಯೆಯಲ್ಲಿ ಅಮೆರಿಕದ ಹಳೆಯ ಪ್ರಾಬಲ್ಯ ಕುಸಿಯುತ್ತಿದೆ.

ಆದರಲ್ಲೂ ಇತ್ತೀಚಿನ ದಿನಗಳಲ್ಲಿ ಬ್ರಿಕ್ಸ್ ದೇಶಗಳೇ ಸೇರಿ, ತಮ್ಮದೊಂದು ಕರೆನ್ಸಿಯಲ್ಲಿ ವ್ಯವಹಾರ ಮಾಡುವ ಬಗ್ಗೆ ಚಿಂತನೆ ನಡೆಸುತ್ತಿವೆ. ಡಾಲರ್ ಮೇಲಿನ ಅವಲಂಬನೆಯನ್ನು ತಪ್ಪಿಸಿ, ತಮ್ಮದೇ ಕರೆನ್ಸಿಯಲ್ಲಿ ವ್ಯವಹಾರ ಮಾಡಿಕೊಳ್ಳಬಾರದೇಕೆ ಎಂಬುದು ಈ ದೇಶಗಳ ನಿಲುವು. ಈಗಾಗಲೇ ಇರಾನ್, ರಷ್ಯಾ ಜತೆಗೆ ಭಾರತ, ಚೀನಾದಂಥ ದೇಶಗಳು ಸ್ಥಳೀಯ ಕರೆನ್ಸಿಯಲ್ಲೇ ವ್ಯವಹಾರ ಮಾಡಿ ಗೆದ್ದಿವೆ. ಮುಂದಿನ ದಿನಗಳಲ್ಲಿ ಇದನ್ನು ಇನ್ನಷ್ಟು ವಿಸ್ತರಿಸುವ ಬಯಕೆಯನ್ನೂ ತೋರಿವೆ. ಇದು ಟ್ರಂಪ್‌ಗೆ ಸಹಿಸಲಾರದ ಸಂಗತಿ. ಒಂದು ವೇಳೆ ಡಾಲರ್ ಮೇಲಿನ ಬೇರೆ ದೇಶಗಳ ಅವಲಂಬನೆ ತಪ್ಪಿತೆಂದರೆ, ಅಲ್ಲಿಗೆ ಅಮೆರಿಕದ ಪ್ರಭಾವವೂ ಇಳಿದಂತೆಯೇ. ಹೀಗಾಗಿಯೇ ಯಾವುದೇ ಕಾರಣಕ್ಕೂ ಡಾಲರ್ ಮೇಲಿನ ಅವಲಂಬನೆಯನ್ನು ತಪ್ಪಿಸಬಾರದು, ಮುಂದಿನ ವರ್ಷಗಳಲ್ಲೂ ಜಗತ್ತು ಡಾಲರ್‌ನಲ್ಲೇ ವ್ಯವಹರಿಸಬೇಕು ಎಂಬುದು ಟ್ರಂಪ್ ಗಟ್ಟಿ ನಿಲುವುದು. ಹೀಗಾಗಿ, ಈ ಯುದ್ಧ ಸೇರಿದಂತೆ ಗ್ಲೋಬಲ್ ಆರ್ಡರ್‌ಗಳನ್ನು ತಪ್ಪಿಸುವ ಕೆಲಸಗಳನ್ನು ಆಗಿಂದಾಗ್ಗೆ ಟ್ರಂಪ್ ಮಾಡುತ್ತಲೇ ಇರುತ್ತಾರೆ.

ವಿಚಿತ್ರವೆಂದರೆ, ಈ ಎಲ್ಲ ಸಂಗತಿಗಳಲ್ಲಿ ಟ್ರಂಪ್ ನಂಬುವುದು ಜಗತ್ತಿನ ನಂಬಿಕೆ ಕಳೆದುಕೊಂಡ ದೇಶಗಳನ್ನೇ. ಇದಕ್ಕೆ ಬಹುದೊಡ್ಡ ಉದಾಹರಣೆ ಪಾಕಿಸ್ತಾನ. ಏಕೆಂದರೆ, ಮರ್ಯಾದೆಯುಳ್ಳ ಯಾವುದೇ ದೇಶಗಳು ಟ್ರಂಪ್ ತಾಳಕ್ಕೆ ಕುಣಿಯುವುದು ತೀರಾ ಕಷ್ಟಕರ. ಆದರೆ, ಪಾಕಿಸ್ತಾನದಂಥ ದೇಶಗಳಿಗೆ ಇದು ಅನಿವಾರ್ಯವೂ ಹೌದು. ಈ ದೇಶಗಳಿಗೆ ಹೇಗೂ ಟ್ರಂಪ್ ಅವರನ್ನು ಎದುರು ಹಾಕಿಕೊಳ್ಳಲು ಆಗುವುದಿಲ್ಲ. ಹಾಕಿಕೊಂಡರೂ ಬದುಕಲು ಸಾಧ್ಯವಿಲ್ಲ. ಅಲ್ಲದೆ, ಟ್ರಂಪ್ ಹೇಗೆ ಶಾಂತಿ ಬಗ್ಗೆ ಮಾತನಾಡಿದಾಗ ಅದು ಸತ್ಯಕ್ಕೆ ದೂರವಾದ ಸಂಗತಿಯಾಗುವುದೋ, ಹಾಗೆಯೇ, ಪಾಕಿಸ್ತಾನವೂ ಶಾಂತಿ ಬಗ್ಗೆ ಮಾತನಾಡಿದಾಗ ಅದು ಹಾಸ್ಯದ ಸಂಗತಿಯೇ ಆಗುತ್ತದೆ.

ಇರಲಿ, ಟ್ರಂಪ್ ಅವರ ಗಡಿಬಿಡಿಯ ಸಂದರ್ಭದಲ್ಲಿ ಯುದ್ಧ, ತೈಲ ಮಾರುಕಟ್ಟೆಯ ಅಸ್ಥಿರತೆ, ಆಮದು–ರಫ್ತು ಸರಪಳಿಯ ವ್ಯತ್ಯಯ, ಸಾಗಣೆ ಮಾರ್ಗಗಳ ಅಡೆತಡೆ, ಹಣದುಬ್ಬರ ? ಇವೆಲ್ಲವೂ ಅಭಿವೃದ್ಧಿಶೀಲ ದೇಶಗಳ ವೇಗವನ್ನು ಕುಗ್ಗಿಸುವ ಸಾಧನಗಳಾಗುತ್ತವೆ. ಕೋವಿಡ್ ಕಾಲದಲ್ಲಿ ಜಗತ್ತು ಅನುಭವಿಸಿದ ಆರ್ಥಿಕ ಹಿನ್ನಡೆಯ ಪಾಠ ಇನ್ನೂ ಮರೆತಿಲ್ಲ. ಸರಬರಾಜು ಸರಪಳಿ ಕುಸಿತ, ಆರೋಗ್ಯ ವ್ಯವಸ್ಥೆಯ ಒತ್ತಡ, ಉದ್ಯೋಗ ನಷ್ಟ, ಆಹಾರ ಮತ್ತು ಇಂಧನ ದರ ಏರಿಕೆ? ಇವು ಮತ್ತೆ ಉಂಟಾದರೆ ಅಭಿವೃದ್ಧಿಯತ್ತ ಸಾಗುತ್ತಿರುವ ದೇಶಗಳ ಆಂತರಿಕ ಬಲವೇ ದುರ್ಬಲವಾಗಬಹುದು. ಈ ದೃಷ್ಟಿಯಿಂದ ನೋಡಿದರೆ, ಯುದ್ಧವನ್ನು ಪ್ರೇರೇಪಿಸುವ ಅಥವಾ ಉಲ್ಬಣಗೊಳಿಸುವ ಯಾವುದೇ ನಡೆ ಕೇವಲ ಪ್ರಾದೇಶಿಕ ಸಂಘರ್ಷವಲ್ಲ; ಅದು ಜಾಗತಿಕ ಆರ್ಥಿಕ ತಂತ್ರವಾಗಿಯೂ ಕಾಣಬಹುದು.

ಟ್ರಂಪ್ ಅವರ ನಡೆ ಈ ಬೆಳಕಿನಲ್ಲಿ ಇನ್ನಷ್ಟು ಗಂಭೀರವಾಗಿ ಕಾಣುತ್ತದೆ. ಅದು ಕೇವಲ ಒಂದು ದೇಶದ ಅಧ್ಯಕ್ಷನ ಅಸಹನೀಯ ಶೈಲಿ ಅಲ್ಲ; ಅದು ಜಗತ್ತಿನ ನಿಯಮಾಧಾರಿತ ವ್ಯವಸ್ಥೆಯ ವಿರುದ್ಧದ ಬಂಡಾಯದಂತೆ ತೋರುತ್ತದೆ. ಸಂಸ್ಥೆಗಳ ಮೇಲೆ ನಂಬಿಕೆ ಕುಸಿದರೆ, ನಾಯಕರ ಮಾತುಗಳು ಸತ್ಯವನ್ನು ನಿರ್ಧರಿಸಲು ಆರಂಭಿಸಿದರೆ, ಮತ್ತು ವೈಯಕ್ತಿಕ ಅಹಂಕಾರವೇ ನೀತಿಯನ್ನು ಬದಲಾಯಿಸಿದರೆ, ಆಗ ಜಗತ್ತು ಅಪಾಯದ ಅಂಚಿಗೆ ಸರಿಯುತ್ತದೆ. ಟ್ರಂಪ್ ಈ ಅಪಾಯವನ್ನು ಅರ್ಥ ಮಾಡಿಕೊಂಡಿದ್ದಾರೆ ಎನ್ನುವುದು ಕಾಣುವುದಿಲ್ಲ. ಅಥವಾ ಅರ್ಥ ಮಾಡಿಕೊಂಡಿದ್ದರೂ, ಅದನ್ನೇ ತಮ್ಮ ಲಾಭಕ್ಕೆ ಬಳಸುತ್ತಿದ್ದಾರೆ.

ಅಂತಿಮವಾಗಿ ಹೇಳಬೇಕಾದರೆ, ಟ್ರಂಪ್ ಅವರನ್ನು ಕೇವಲ ಒಬ್ಬ ವಿಚಿತ್ರ ನಾಯಕ ಎಂದು ನೋಡಿದರೆ ತಪ್ಪಾಗುತ್ತದೆ. ಅವರ ನಡೆ ಜಾಗತಿಕ ಅರಾಜಕತೆಯ ಸಂಕೇತವೂ ಆಗಿದೆ. ಅವರು ತೋರಿಸುವ ಪ್ರತಿಯೊಂದು ಅತಿರೇಕವೂ ಒಂದು ಸಂದೇಶ ನೀಡುತ್ತದೆ: ಶಾಂತಿ, ಶಿಸ್ತು, ಸಹಕಾರ ಮತ್ತು ಸಂಸ್ಥೆಗಳ ಮೇಲೆ ಆಧಾರಿತ ವಿಶ್ವಕ್ರಮ ಈಗ ಬಿಗಿ ಪರೀಕ್ಷೆಯಲ್ಲಿದೆ. ಈ ಪರೀಕ್ಷೆಯಲ್ಲಿ ಟ್ರಂಪ್ ಅವರಂತಹ ನಾಯಕರು ಕೇವಲ ವ್ಯಕ್ತಿಗಳಲ್ಲ; ಅವರು ವ್ಯವಸ್ಥೆಯ ರಂಧ್ರಗಳು.

ಆದ್ದರಿಂದ ಟ್ರಂಪ್ ಬಗ್ಗೆ ಕೇಳಬೇಕಾದ ಪ್ರಶ್ನೆ "ಅವರ ಮಾನಸಿಕ ಸ್ಥಿತಿ ಹೇಗಿದೆ?" ಎಂಬುದಕ್ಕಿಂತ ದೊಡ್ಡದು. "ಇಂತಹ ಅಸ್ಥಿರ ಮನೋಭಾವದ ರಾಜಕೀಯವು ಜಗತ್ತಿಗೆ ಏನು ಮಾಡುತ್ತದೆ?" ಎಂಬ ಪ್ರಶ್ನೆಯೇ ಇಂದು ಹೆಚ್ಚು ಪ್ರಸ್ತುತ. ಮತ್ತು ಆ ಪ್ರಶ್ನೆಗೆ ಉತ್ತರ ಸುಲಭವಲ್ಲ. ಆದರೆ ಒಂದು ಸಂಗತಿ ಸ್ಪಷ್ಟ: ಅಹಂಕಾರ, ಅಜಾಗರೂಕತೆ ಮತ್ತು ಅಧಿಕಾರದ ದುರುಪಯೋಗ ಸೇರಿಕೊಂಡಾಗ, ಅದು ಶಾಂತಿಯ ಮುಖವಾಡ ಧರಿಸಿದ ಯುದ್ಧಕ್ಕಿಂತ ಕಡಿಮೆಯಲ್ಲ.

ನಾಸ್ತಿ ಎಂದರೆ ದೇಹಿ ಎನ್ನಬೇಕಾಗುತ್ತದೆ

ಅಕ್ಷರದ್ವಯಮಭ್ಯಸ್ತಂ ನಾಸ್ತಿ ನಾಸ್ತೀತಿ ಯತ್ಪುರಾ ।
ತದಿದಂ ದೇಹಿ ದೇಹೀತಿ ವಿಪರೀತ ಮುಪಸ್ಥಿತಮ್ ॥ –ಪರಾಶರ ಧರ್ಮಸಂಹಿತಾ

'ಇಲ್ಲ ಇಲ್ಲ' ಎಂದು ಹಿಂದೆ ಯಾವ ಎರಡಕ್ಷರವನ್ನು ಅಭ್ಯಾಸ ಮಾಡಿದ್ದರೋ ಅದೇ ಈಗ ತಿರುವುಮುರುವಾಗಿ 'ಕೊಡುಕೊಡು' ಎಂದು ಗಂಟು ಬಿದ್ದಿದೆ –ಎಂಬುದು ಶ್ಲೋಕಾರ್ಥ.

ಹಿರಿಯರು ಆಗಾಗ ಹೇಳುವ ಮಾತೆಂದರೆ ಕೇಳಿದವರಿಗೆಲ್ಲ ಇಲ್ಲವೆಂದು ಕಳಿಸುವುದು ಒಳ್ಳೆಯದಲ್ಲ. ಏನನ್ನಾದರೂ ನೀಡಬೇಕು. ಎಲ್ಲರಿಗೂ ನೀಡುವುದಿಲ್ಲವೆಂದಾದರೂ ಯಾರಿಗೆ ಅನಿವಾರ್ಯವಿದೆಯೋ ಅವರಿಗೆ ಯಥಾಶಕ್ತಿ ನೀಡಬೇಕು ಎನ್ನುವುದು.

ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್



ಇನ್ನು ಕೆಲವು ಕುಟುಂಬದಲ್ಲಿ ಯಾರಾದರೂ ಭಿಕ್ಷುಕರು ಬಂದು ಬೇಡಿದಾಗಲೂ ಮಕ್ಕಳ ಮೂಲಕ ಕೊಡಿಸುವ ಸಂಪ್ರದಾಯವಿದೆ. ಇನ್ನು ಕೆಲವರಿದ್ದಾರೆ– ಪಾಪದವರನ್ನು ಕಂಡರೆ ಏನನ್ನಾದರೂ ಕೊಡದಿದ್ದರೆ ಅವರಿಗೆ ಮನಸ್ಸಿಗೆ ಸಮಾಧಾನವಿರುವುದಿಲ್ಲ.

ಹಬ್ಬ, ಹರಿದಿನಗಳಲ್ಲಿ, ಗ್ರಹಣಾದಿ ವಿಶೇಷ ಸಂದರ್ಭಗಳಲ್ಲಿ ದಾನ ಮಾಡುವುದು, ದೇಣಿಗೆ ನೀಡುವುದು ಇತ್ಯಾದಿ ಮಾಡುತ್ತಾರೆ. ಈ ಎಲ್ಲ ಬಗೆಯ ಕಾಯಕದ ಹಿನ್ನೆಲೆಯಲ್ಲಿ ಉದಾತ್ತ ಭಾವವಿದೆ. ಒಳ್ಳೆಯದಕ್ಕೆ, ಒಳಿತಾಗುವುದಕ್ಕೆ ಭಗವಂತ ತನಗೆ ಕೊಟ್ಟ ಸಂಪತ್ತಿನಲ್ಲಿ ಕಿಂಚಿತ್ತಾದರೂ ಕೊಡಬೇಕು, ಅರ್ಹರಿಗೆ ದಾನ ಮಾಡಬೇಕು. ಇದರಿಂದ ಕೊಟ್ಟವರಿಗೆ ಒಳಿತಾಗುತ್ತದೆಯೇ ವಿನಾ ಕೆಡುಕಾಗದು. ಯಾವಾಗಲೂ 'ನಾಸ್ತಿ ನಾಸ್ತಿ' ಎಂದು ಬದುಕುವವನಿಗೆ 'ದೇಹಿ ದೇಹಿ' ಎಂಬ ಕಾಲ ಬರುತ್ತದೆ. ಆದ್ದರಿಂದ ಇದ್ದುದರಲ್ಲಿ ಸ್ವಲ್ಪವನ್ನಾದರೂ ಕೊಡುವ ಅಭ್ಯಾಸ ಮಾಡಿಕೊಳ್ಳಬೇಕು. ಒಂದೆಡೆ ಸುಭಾಷಿತಕಾರ ಹೀಗೆನ್ನುತ್ತಾನೆ. ಭಿಕ್ಷೆ ಬೇಡುವ ಭಿಕ್ಷುಕ ಮನೆಯಿಂದ ಮನೆಗೆ ಓಡಾಡುತ್ತಾನೆ. ಅವನು ಬೇಡುವುದು ಅಲೆಯುವುದು ಅವನಿಗೇನೋ ಕೊರತೆಯಿದೆ ಎಂದಲ್ಲ. ಲೋಕಕ್ಕೊಂದು ಸಂದೇಶ ನೀಡುವುದಕ್ಕೆ. ಕೊಡುವವನು ಯಾವಾಗಲೂ ಶ್ರೀಮಂತ. ಆದ್ದರಿಂದ ಕೊಟ್ಟು ನೀನು ನಿನ್ನಂತೆಯೇ ಆಗು. ಯಾರಿಗೂ ಕೊಡದೇ ಇಂದು ಬೇಡುವ ಸ್ಥಿತಿಗೆ ಬಂದ ನನ್ನಂತಾಗಬೇಡ ಎಂಬುದನ್ನು ಲೋಕಕ್ಕೆ ತಿಳಿಸುವುದಕ್ಕೆ ಎಂಬುದಾಗಿ. ಕೊಡುವುದರಲ್ಲಿರುವ ಸಂತೋಷ, ನೆಮ್ಮದಿ, ಪಡೆಯುವುದರಲ್ಲಿಲ್ಲ. ಕೊಡುವಾಗ ಉಂಟಾಗುವ ಆನಂದ 'ಇಲ್ಲ' ಎನ್ನುವಾಗ ಇರುವುದಿಲ್ಲ. ಜಗತ್ತಿನಲ್ಲಿ ಕೊಟ್ಟು ಕೆಟ್ಟವರಿಲ್ಲ. ಕೊಡುವುದು ಉತ್ತಮ ಸಂಸ್ಕಾರದ ಸಂಕೇತ. ಉತ್ತಮ ಕುಟುಂಬದ ಸಂಸ್ಕಾರದ ಸಂಕೇತ. ಉತ್ತಮ ಕುಟುಂಬದ ಸಂಸ್ಕಾರದ ದ್ಯೋತಕ. ಈ ಕಾರಣಕ್ಕಾಗಿಯೇ ಸನಾತನ ಭಾರತೀಯ ಜೀವನ ಪದ್ಧತಿಯಲ್ಲಿ ಜೀವನ ಸಭ್ಯತೆಯನ್ನು ಪರಿಪರಿಯಲ್ಲಿ ಕಲಿಸಿಕೊಡುವ ಕ್ರಮವಿತ್ತು. ಮನೆಯ ಮುಂದೆ ದುರ್ಬಲ ಭಿಕ್ಷುಕರು ಬಂದು ಯಾಚಿಸಿದರೆ ಮಕ್ಕಳ ಮೂಲಕ ಕೊಡಿಸುತ್ತಿದ್ದರು. ಇದು ಕೊಡುವ ಉದಾತ್ತ ಭಾವವನ್ನು ಬಾಲ್ಯದಲ್ಲೇ ಬೆಳೆಸುವ ಕ್ರಮ. ದೇವಸ್ಥಾನಗಳಿಗೆ ಹೋದಾಗ ಮಕ್ಕಳಿಂದ ಹುಂಡಿಗೆ ಕಾಣಿಕೆ ಹಾಕಿಸುವುದು ಸತ್ಕರ್ಮಕ್ಕೆ ದಾನ ನೀಡುವುದು ಇತ್ಯಾದಿ ಸಭ್ಯತೆಯನ್ನು ಬಾಲ್ಯದಲ್ಲೇ ಕಲಿಸುವ ಪ್ರಯತ್ನ. ಇಂದಿನ ಕಲಿಕಾಲದಲ್ಲಿ ಇಂತಹ ಸತ್ ಸಂಪ್ರದಾಯಗಳು ವಿರಳವಾಗಿದೆ. ದೊಡ್ಡವರಿಗೆ ಕೊಡುವ ಸಂಸ್ಕಾರ ಇಲ್ಲದಿರುವಾಗ ಚಿಕ್ಕವರಿಗೆ ಎಲ್ಲಿಂದ ಬರಬೇಕು. ಎಲ್ಲದಕ್ಕೂ 'ಇಲ್ಲ ಇಲ್ಲ' ಎಂದುಕೊಂಡು, ಕೊಡುವ ಸಾಮರ್ಥ್ಯವಿದ್ದರೂ ಅದನ್ನು ಮರೆಮಾಚಿದರೆ ಮುಂದೊಂದು ದಿನ ಬೇಡುವ ಸ್ಥಿತಿ ಬಂದೀತು. ನಾವು ಸಂಸ್ಕಾರ ತುಂಬುವ, ಸಭ್ಯತೆಯನ್ನು ಪೋಷಿಸುವ ಉತ್ತಮ ಜೀವನ ವಿಧಾನವನ್ನು ಕಲಿತು, ಕಲಿಸಿ ಕೊಡದಿದ್ದರೆ ಮುಂದೊಮ್ಮೆ ನಾವೇ ಸಣ್ಣವರಾಗುತ್ತೇವೆ.

ಬೇರು ಮೇಲಾದ ಒಂದು ಮರ

ಬೇರು ಮೇಲೆ, ಕೊಂಬೆ ಕೆಳಗೆ ಇರುವ ಮಾಯಾ ವೃಕ್ಷದ ರಹಸ್ಯವನ್ನು ಅರಿತವನಿಗೆ ಸಂಸಾರದ ಹಂಗಿಲ್ಲ.

ಆ–ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ಭಗವದ್ಗೀತೆಯಲ್ಲಿ ಒಂದು ಮರದ ಚಿತ್ರಣವಿದೆ. ಅದು ಸಾಧಾರಣವಾಗಿ ನಾವು ನೋಡುವ ಮರದಂತಹ ಮರವಲ್ಲ. ಹಾಗೆಂದು ಮರದ ಎಲ್ಲ ಲಕ್ಷಣಗಳೂ ಅದಕ್ಕಿವೆ. ಮತ್ತು ಇನ್ನೊಂದು ಅರ್ಥದಲ್ಲಿ ನೋಡಿದರೆ ಅದು ಅಮರವಾಗಿದೆ.

ಅತ್ಯಂತ ಹಳೆಯದೂ ಹೌದು. ಅಂತಹ ಒಂದು ಮರ.

ಏನದು?

'ಊರ್ಧ್ವಮೂಲಮಧಃಶಾಖಮಶ್ವತ್ಥಮ್ ಪ್ರಾಹುರವ್ಯಯಮ್'
ಛಂದಾಂಸಿ ಯಸ್ಯ ಪರ್ಣಾನಿ ಯಸ್ತಮ್ ವೇದ ಸ ವೇದವಿತ್'

ಮೇಲೆ ಬೇರು (ಅಥವಾ ಬುಡ) ಉಳ್ಳ, ಕೆಳಗೆ ಕೊಂಬೆಗಳನ್ನು ಹೊಂದಿದ ಅಶ್ವತ್ಥ ವೃಕ್ಷವು ಅವ್ಯಯವಾಗಿದೆ ಎನ್ನುತ್ತಾರೆ. ಛಂದಸ್ಸು (ಅಥವಾ ವೇದಗಳು) ಅದರ ಎಲೆಗಳು. ಇದನ್ನು ಯಾವನು ತಿಳಿಯುತ್ತಾನೋ ಅವನು ವೇದವನ್ನು ತಿಳಿದಂತೆ ಎಂಬುದು ಇದರ ಅರ್ಥ.



ಎಲಾ! ವಿಚಿತ್ರವಾಗಿದೆಯಲ್ಲ? ಸಾಮಾನ್ಯವಾಗಿ ಮರ, ಗಿಡ, ಅಥವಾ ಸಸ್ಯವರ್ಗಕ್ಕೆ ಸೇರಿದ ಯಾವುದೇ ಆದರೂ ಬೇರನ್ನು ಕೆಳಗೆ ಅಂದರೆ ಭೂಮಿಗೆ ಇಳಿಸಿ ತಾನೇ ಬೆಳೆಯುವುದು? ಶಾಖೆಗಳನ್ನು ಮೇಲೆ ಅಂತರಿಕ್ಷಕ್ಕೆ ವಿಸ್ತರಿಸುವುದು? ಆದರೆ ಇಲ್ಲಿ ಇದು ವ್ಯತಿರೇಕವಾಗಿದೆ. ಮಣ್ಣಿನಲ್ಲಿ ಇರಬೇಕಾದ ಬೇರು ಅಂತರಿಕ್ಷದಲ್ಲಿ ಇದೆ. ಅಲ್ಲಿ ಹೀರಿಕೊಳ್ಳುವುದಕ್ಕೆ ನೀರಾಗಲಿ, ಸಾರವಾಗಲಿ ಏನೂ ಇಲ್ಲ. ಹಾಗೆಂದು ಸಾರ, ನೀರುಗಳನ್ನು ಹೊಂದಿದ ಭೂಮಿಯತ್ತ ತನ್ನ ಶಾಖೆಗಳನ್ನು ಚಾಚಿದೆ. ಅಲ್ಲಿಂದ ಏನನ್ನೂ ಅದು ಹೀರಿಕೊಳ್ಳಲಾರದು. ಅದರ ಎಲೆಗಳೂ ಸಾಧಾರಣ ಎಲೆಗಳಲ್ಲ. ಯಾವುದು ಜ್ಞಾನದ ಮೊತ್ತವೆನ್ನಲಾಗುವುದೋ ಅಂತಹ ವೇದಗಳೇ ಆ ಎಲೆಗಳು. ಅದನ್ನು ಗ್ರಹಿಸಿದರೆ ಎಲ್ಲವನ್ನೂ ಗ್ರಹಿಸಿದಂತೆ. ಪರಿಪೂರ್ಣ ಜ್ಞಾನ ಪ್ರಾಪ್ತಿಯಾಗುವುದಂತೆ. ಇದು ಅಶ್ವತ್ಥ ಎಂಬ ವೃಕ್ಷ. ಅದು ಅವ್ಯಯವಾದುದು. ಅಂದರೆ ನಾಶವಿಲ್ಲದ್ದು. ಬೆಳೆಯುತ್ತಲೇ ಇರತಕ್ಕದ್ದು. ಯಾಕೆ ನಾಶವಿಲ್ಲವೆಂದರೆ ಅವಿನಾಶಿಯಾದ ತತ್ತ್ವದಿಂದಲೇ ಅದು ಮೂಡಿಬಂದಿದೆ. ಅತ್ಯಂತ ಉನ್ನತವಾಗಿರುವುದು ಪರಾತ್ಪರವಾದ ಬ್ರಹ್ಮ. ಅದೇ ಈ ವೃಕ್ಷಕ್ಕೆ ಆಧಾರ. 'ಊರ್ಧ್ವ ಮೂಲಮ್' ಆ ತತ್ತ್ವದಿಂದ ಮೂಡಿದರೂ ಪ್ರತ್ಯೇಕವಾಗಿ ಕಾಣಿಸಿಕೊಂಡು ಸಂಸಾರಾದಿ ಮೋಹಗಳಿಗೆ ಜೀವನನ್ನು ಬಂಧಿಸಿದೆ. ತ್ರಿಗುಣಗಳಿಂದ ಪುಷ್ಟವಾದ ವಿಷಯಗಳು ಚಿಗುರುಗಳಾಗಿ ಮೊಳೆತಿವೆ.

ನಾವು ನಿತ್ಯವೂ ನೋಡುವ ಪ್ರಪಂಚದ ಮರಗಳಂತೆ ಇಲ್ಲದ ಈ ಮರವಾದರೂ ಪ್ರತಿನಿಧಿಸುವುದು ಅದನ್ನೇ. ಅಂದರೆ ಸಂಸಾರವೆಂಬ ವೃಕ್ಷವೇ ಅದು. ಜೀವನನ್ನು ಪ್ರಪಂಚಕ್ಕೆ ಬಂಧಿಸಿರುವ ಮಾಯೆ. ನಿರಾಸಕ್ತಿ (ನಿರ್ಲಿಪ್ತಿ) ಯಿಂದ ಇದನ್ನು ಮೀರಿ ನಿಲ್ಲಬೇಕು. ಹಾಗೆಂದು ವೃಕ್ಷ ಮಾತ್ರ ನಶಿಸತಕ್ಕುದಲ್ಲ. ಅದು ಅವ್ಯಯ. ಒಬ್ಬ ಜೀವನು ಬಿಡುಗಡೆಯಾದರೂ ಅದನ್ನು ಆಶ್ರಯಿಸಿದ ಅಸಂಖ್ಯ ಜೀವರಾಶಿಗಳಿದ್ದಾವಲ್ಲ!

ಈ ಮಾಯಾ ವೃಕ್ಷದ ರಹಸ್ಯವನ್ನು ಅರಿತವನಿಗೆ ಸಂಸಾರದ ಹಂಗಿಲ್ಲ.

ವಿಚಿತ್ರವೆಂದರೆ ಇಂತಹ ಒಂದು ಅಡಿ ಮೇಲಾದ ಗಿಡದ ಪ್ರಸ್ತಾವ ಪಾಂಡವರ ಮಹಾ ಪ್ರಸ್ಥಾನದ ಸಂದರ್ಭದಲ್ಲಿ ಬರುತ್ತದೆ. (ಈ ಪ್ರಕರಣ ಮಹಾಭಾರತದಲ್ಲಿ ಇದ್ದ ಹಾಗಿಲ್ಲ. ಆದರೆ ಪ್ರಸಿದ್ಧವಿದೆ) ಕೃಷ್ಣನ ನಿರ್ಯಾಣವಾಗಿ, ದ್ವಾರಕೆ ಸಮುದ್ರದಲ್ಲಿ ಮುಳುಗಿದ ಬಳಿಕ ಪಾಂಡವರು ಮಹಾ ಪ್ರಸ್ಥಾನಕ್ಕೆ ಸನ್ನದ್ಧರಾಗುತ್ತಾರೆ. ಸಮಸ್ತವನ್ನೂ ಉತ್ತರಾಧಿಕಾರಿಗಳಿಗೆ ಒಪ್ಪಿಸಿ, ದ್ರೌಪದೀ ಸಮೇತ ಐವರೂ ಉತ್ತರ ದಿಕ್ಕಿನತ್ತ ನಡೆಯಲು ಪ್ರಾರಂಭಿಸುತ್ತಾರೆ.

ದಾರಿಯಲ್ಲಿ ದೇಹಾಯಾಸದಿಂದ ದ್ರೌಪದಿ ಕುಸಿದು ಬಿದ್ದು ಮೃತಳಾಗುತ್ತಾಳೆ. ಆ ಬಳಿಕ ಸಹದೇವ, ನಕುಲ, ಅರ್ಜುನ ಕೊನೆಯದಾಗಿ ಭೀಮಸೇನ. ಅವರೆಲ್ಲರ ಮರಣಕ್ಕೂ ಪ್ರಾಜ್ಞನಾದ ಯುಧಿಷ್ಠಿರ ಕಾರಣವನ್ನು ತಿಳಿಸುತ್ತಾನೆ. ದ್ರೌಪದಿಗೆ ಅರ್ಜುನನ ಕುರಿತು ಹೆಚ್ಚು ಪ್ರೀತಿ, ಸಹದೇವನಿಗೆ ಜ್ಞಾನದ, ನಕುಲನಿಗೆ ರೂಪದ, ಅರ್ಜುನನಿಗೆ ಪರಾಕ್ರಮದ ಅಹಂಕಾರಗಳು, ಭೀಮನ ಆಹಾರದ ಅತ್ಯಾಸಕ್ತಿ ಇವು ಅವಸಾನಕ್ಕೆ ಕಾರಣವಾದವು ಎನ್ನುತ್ತಾನೆ.

ಇಷ್ಟು ತಿಳಿವಳಿಕೆ ಇದ್ದವನಿಗೂ, ಭೀಮ ಸತ್ತು ಬಿದ್ದಾಗ ದುಃಖವನ್ನು ಮೀರುವುದಕ್ಕಾಗುವುದಿಲ್ಲ. ಇದೇ ಯುಧಿಷ್ಠಿರನು ಯಕ್ಷಪ್ರಶ್ನೆ ಪ್ರಕರಣದಲ್ಲಿ, ದಿನವೂ ಜೀವರು ಯಮನಾಲಯವನ್ನು ಸೇರುತ್ತಿದ್ದರೂ, ಮನುಷ್ಯರು ತಾವು ಶಾಶ್ವತವೆಂದು ಭಾವಿಸುತ್ತಾರಲ್ಲ, ಇದೊಂದು ದೊಡ್ಡ ಆಶ್ಚರ್ಯವೆಂದು ಉತ್ತರಿಸಿದ ಮೇಧಾವಿ ಎಂಬುದನ್ನು ಗಮನಿಸಬೇಕು. ಅಂತಹ ಯುಧಿಷ್ಠಿರ ಭೀಮನ ಮರಣಕ್ಕಾಗಿ ಕಣ್ಣೀರಿಳಿಸುತ್ತ ಮುಂದೆ ನಡೆಯುತ್ತಾನೆ. (ಅವನ ಕಳೇವರವನ್ನು ಹೊತ್ತುಕೊಂಡು ಸಾಗಿದ ಅಂತಲೂ ಉಂಟು)

ಅವನಲ್ಲಿ ಉಳಿದ ಈ ಮೋಹವು ನಶಿಸುವುದಕ್ಕೆ ಕಾರಣವಾದುದು ಅಲ್ಲಿ ಕಾಣಿಸಿದ ಒಂದು ವಿಚಿತ್ರ ದೃಶ್ಯ.

ಯುಧಿಷ್ಠಿರ ಮುಂದೆ ಸಾಗುತ್ತಿರುವಾಗ ಅಲ್ಲೊಬ್ಬ ಮನುಷ್ಯ ಒಂದು ತುಳಸಿ ಗಿಡವನ್ನು ನೆಟ್ಟು ಅದಕ್ಕೆ ನೀರೆರೆಯುತ್ತಿದ್ದ. ಅದರಲ್ಲಿ ವಿಶೇಷವೇನು? ಅಂದರೆ ಅವನು ಆ ಗಿಡವನ್ನು ತಲೆಕೆಳಗಾಗಿ ನೆಟ್ಟಿದ್ದ. ಅದು ಒಣಗಿ ಹೋಗಿತ್ತು. ದೂರದ ಸರಸ್ಸಿನಿಂದ ನೀರನ್ನು ತರುತ್ತಿದ್ದ ಅವನ ತಂಬಿಗೆಗೆ ಹಲವು ರಂಧ್ರಗಳು. ಒಣಗಿ ಹೋದ ಆ ಗಿಡದ ಬಳಿಗೆ ತಲುಪುವಾಗ ನೀರೆಲ್ಲ ಸೋರಿ ಹೋಗಿ ಬರಿದಾದ ಪಾತ್ರೆ ಮಾತ್ರ ಉಳಿಯುತ್ತಿತ್ತು. ಆದರೆ ಅವನು ನಿರಂತರವಾಗಿ ನೀರು ತಂದು ಸುರಿಯುವ ಪ್ರಯತ್ನವನ್ನು ಮಾಡುತ್ತಲೇ ಇದ್ದ.

ಯುಧಿಷ್ಠಿರ, "ಇದೇನು ವಿಚಿತ್ರ! ತಲೆಕೆಳಗಾದ ಗಿಡ ಚಿಗುರುವುದೆ? ರಂಧ್ರಗಳಿಂದ ಕೂಡಿದ ಬಿಂದಿಗೆಯಲ್ಲಿ ನೀರು ಬಂದೀತೆ? ಇದೇಕೆ ಅರ್ಥವಿಲ್ಲದ ಕೆಲಸ ಮಾಡುತ್ತಿದ್ದೀಯೆ?" ಎಂದು ಅವನನ್ನು ಪ್ರಶ್ನಿಸಿದ.

"ನೀನೀಗ ಮಾಡುತ್ತಿರುವುದೇನು? ಸತ್ತವರಿಗಾಗಿ ಶೋಕಿಸುತ್ತ ಇದ್ದರೆ ಅವರು ಬದುಕಿ ಬರುತ್ತಾರೆಯೆ?" ಎಂದು ಅವನು ಮರಳಿ ಪ್ರಶ್ನಿಸಿದ. ಈಗ ಯುಧಿಷ್ಠಿರನಿಗೆ ಸತ್ಯದರ್ಶನವಾಯಿತು. ಅವನು ಶೋಕವನ್ನು ಕಳೆದುಕೊಂಡು ಮುಂದೆ ನಡೆದ.

ತಲೆ ಕೆಳಗಾದ ಗಿಡ ಬದುಕಲಾರದು. ಬದುಕುವುದೇ ಹೌದಾದರೆ ಅದು ಕೃತ್ರಿಮ ಅಥವಾ ಮಾಯೆ. ಸಂಸಾರವೆಂಬ ವೃಕ್ಷವು ಮಾಯೆಯೇ. ಆದರೆ ಅದು 'ಅವ್ಯಯಮ್' ಯಾಕೆಂದರೆ ಅದು ಪರಾತ್ಪರ ತತ್ತ್ವದ ಅಂಶ. ಜೀವನು ಮೋಹವನ್ನು ಹೊಂದಿ ಅದನ್ನು ಅವಲಂಬಿಸಿರುತ್ತಾನೆ. ಆದರಿಂದ ಮುಕ್ತನಾದರೆ ಮಾತ್ರ ಸದ್ಗತಿ. ಅದನ್ನು ಸಾಧಿಸುವ ಸಾಧನವಾಗಿಯೂ ಅದು ಉಂಟು. ಅದರ ಚಿಗುರುಗಳು ವಿಷಯಗಳು. ಇದನ್ನು ಅಂಟಿಸಿಕೊಂಡವನು ಪ್ರಪಂಚವನ್ನು ಸರಿಯಾಗಿ ದರ್ಶಿಸಲಾರ. ಅದು ತಲೆ ಕೆಳಗಾಗಿಯೇ ಕಾಣುವುದು. ತಾನು ತಲೆ ಕೆಳಗಾಗಿದ್ದು ಉಳಿದುದೆಲ್ಲ ತಲೆ ಕೆಳಗಾಗಿದೆ ಎಂದು ಭಾವಿಸುವ ತ್ರಿಶಂಕುವಿನಂತೆ. ಸರಿಯಾದ ದೃಷ್ಟಿ ಪ್ರಾಪ್ತಿಸಿದಲ್ಲಿಗೆ ಮುಗಿಯಿತು. ತಾನು ಸಾಧಿಸಬೇಕಾದುದೇನು, ಯಾವುದು ಶಾಶ್ವತ, ಯಾವುದು ಅಶಾಶ್ವತ ಎಂಬ ಅರಿವು ಮಾಯಾಜಾಲದಿಂದ ಮುಕ್ತನಾಗುವಂತೆ ಮಾಡುತ್ತದೆ. ಯುಧಿಷ್ಠಿರನಿಗೆ ಕಾಣಿಸಿದ ತಲೆ ಕೆಳಗಾಗಿ ನೆಟ್ಟ ತುಳಸಿ ಗಿಡದಿಂದ ಅವನಿಗೆ ಈ ದೃಷ್ಟಿ ಲಭಿಸಿತು. ಮೋಹ ಹಾಗೂ ಶೋಕಗಳು ಇಲ್ಲವಾದವು. ಎರಡೂ ತಲೆ ಕೆಳಗಾಗಿಯೇ ಇವೆ. ಒಂದು ಭೌತ ಪ್ರಪಂಚವನ್ನು ಮೀರಿದ್ದು. ಆದರೆ ಅದಾಗಿ ಕಾಣುತ್ತಿರುವುದು. ಅದೇ ಅಲ್ಲ. ಅಂದರೆ ಮೂಲದ್ರವ್ಯ ಬೇರೆ. ಹಾಗೆಂದು ಅದರಿಂದ ರೂಪುಗೊಂಡದ್ದು ನಶ್ವರವಾದ ಲೋಕ. ಅದು ನಶ್ವರವಾದರೂ ಅವ್ಯಯ ವಸ್ತುವಿನಿಂದಾದುದು. ಅಥವಾ ಅದನ್ನು ಹೀಗೆ ಹೇಳಬಹುದು.

ಪ್ರಾಪಂಚಿಕ ಅಥವಾ ವಿಷಯಗಳ ಮೋಹ ಶಾಶ್ವತವಾದುದು. ಸಾಧಕನೊಬ್ಬ ಅದನ್ನು ಮೀರಿದರೂ ಇತರ ಜೀವರನ್ನು ಅದು ಬಂಧಿಸಿಯೇ ಇರುತ್ತದಷ್ಟೆ? ಹಾಗಾಗಿ ಅದು ಅವ್ಯಯ. ಇದನ್ನು ಗ್ರಹಿಸಿದವನಿಗೆ ಜ್ಞಾನೋದಯವಾದಂತೆ. ಅವನ ಮಟ್ಟಿಗೆ ಅದು ನಾಶವಾಗಿದೆ. ಆದರೆ ಇನ್ನೊಬ್ಬನಿಗೆ ಶಾಶ್ವತವಾಗಿದೆ. ಇದು ತಿಳಿಯುವುದು ತಲೆಕೆಳಗು ಮಾಡಿ ನೆಟ್ಟ ಗಿಡದ ದೃಷ್ಟಾಂತದಿಂದ. ಅದು ಬದುಕುವುದೆಂದು ನಂಬಿ ನೀರು ಹಾಕುವವನಿಗೆ ಸಹಜವಾಗಿ ಕಾಣಿಸುವುದು. ಆ ನಂಬುಗೆಯಿಂದ ಹೊರಗಿರು ವವನಿಗೆ ಇದರ ಮಿಥ್ಯೆಯ ಅರಿವು ಇರುವುದು. ಯುಧಿಷ್ಠಿರ ಆ ಹಂತವನ್ನು ದಾಟಿದ ಬಳಿಕವೇ ನಿರ್ಮೋಹಿಯಾಗಿ ಸ್ವರ್ಗವನ್ನು ಸೇರಿದ.

ಸಮಯ ಬಂದಿದೆ: ಮಹಿಳಾ ಮೀಸಲಾತಿ ಭಾರತೀಯ ಪ್ರಜಾಪ್ರಭುತ್ವವನ್ನು ಹೇಗೆ ಬದಲಿಸಲಿದೆ?

▸ ಶೋಭಾ ಕರಂದ್ಲಾಜೆ, ಕೇಂದ್ರ ಎಂಎಸ್‌ಎಂಇ, ಕಾರ್ಮಿಕ, ಉದ್ಯೋಗ ಖಾತೆ ಸಹಾಯಕ ಸಚಿವರು



ಸಹಾಯಕ ಸಚಿವೆಯಾಗಿ ನಾನು ಮೊದಲ ಬಾರಿಗೆ ಪ್ರಮಾಣವಚನ ಸ್ವೀಕರಿಸುವಾಗ, ನಾನು ಕಿಕ್ಕಿರಿದ ಕೋಣೆಯ ಸುತ್ತಲೂ ನೋಡಿದೆ ಮತ್ತು ಅಲ್ಲಿದ್ದವರನ್ನು ಎಣಿಕೆ ಮಾಡಿದೆ. ಆ ಜಾಗದಲ್ಲಿ ಇದ್ದ ಮಹಿಳೆಯರ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟಿತ್ತು. ಈ ದೃಶ್ಯವು ವೈಯಕ್ತಿಕ ಸಾಧನೆಯನ್ನು ಗುರುತಿಸುವುದಕ್ಕಿಂತಲೂ, ಸಾರ್ವಜನಿಕ ಕ್ಷೇತ್ರದಲ್ಲಿ ಮಹಿಳೆಯರು ಇನ್ನೂ ದೂರ ಕ್ರಮಿಸಬೇಕಾದ ಸ್ಪಷ್ಟ ಸೂಚನೆಯನ್ನು ಸೂಚಿಸುತ್ತಿತ್ತು.

ನಾನು ಸಾಂಪ್ರದಾಯಿಕವಾಗಿ ಶ್ರೀಮಂತ ಪ್ರದೇಶವಾದ ಕರಾವಳಿ ಕರ್ನಾಟಕದ ಪುತ್ತೂರು ಬಳಿಯ ಒಂದು ಸಣ್ಣ ಹಳ್ಳಿಗೆ ಸೇರಿದವಳು. ಅಲ್ಲಿ ಮಹಿಳೆಯರು ಸದಾ ತಮ್ಮ ಸದೃಢತೆ ಮತ್ತು ಶಕ್ತಿಯನ್ನು ಪ್ರದರ್ಶಿಸಿದ್ದಾರೆ. ಆ ಶಕ್ತಿಯನ್ನು ಸಾರ್ವಜನಿಕ ಜೀವನಕ್ಕೆ ತರುವುದು ಕೆಲವೇ ಕೆಲವರು. ಈ ಮೊದಲು ನಡೆದ ಹಾದಿಯಲ್ಲಿ ನಡೆಯುವುದು ಮತ್ತು ಅದೇ ಉತ್ಸಾಹವನ್ನು ಹೊಂದಿದ್ದರೂ ಪ್ರತಿಯೊಬ್ಬರೂ ಅಂಥದ್ದೇ ಅವಕಾಶ ಪಡೆಯುವುದು ಎಷ್ಟು ಕಷ್ಟವೆಂಬುದು ನನಗೆ ತಿಳಿದಿದೆ.

ನಾರಿ ಶಕ್ತಿ ವಂದನ್ ಅಧಿನಿಯಮವನ್ನು ಈಗಾಗಲೇ ಅಂಗೀಕರಿಸಲಾಗಿದೆ. ಸಂಸತ್ತು ಸೆಪ್ಟೆಂಬರ್ 2023ರಲ್ಲಿ ಈ ಬಗ್ಗೆ ಚರ್ಚಿಸಿದೆ; ಸಂವಿಧಾನ ತಿದ್ದುಪಡಿ ಮಾಡಲಾಗಿದೆ. ಆದರೆ ಈಗ ಅತ್ಯಂತ ಸವಾಲಿನ ಭಾಗ ನಮ್ಮ ಮುಂದಿದೆ – ಅದೇ ಆ ಮಾತನ್ನು ಉಳಿಸಿಕೊಳ್ಳುವುದು.

ತನ್ನ ಜನರನ್ನು ಪ್ರತಿನಿಧಿಸುವ ಪ್ರಜಾಪ್ರಭುತ್ವ

ಭಾರತವು 670 ದಶಲಕ್ಷ ಮಹಿಳೆಯರಿಗೆ ನೆಲೆಯಾಗಿದೆ. ಆದರೆ ಸುದೀರ್ಘ ವರ್ಷಗಳಿಂದ, ನಮ್ಮ ಶಾಸಕರು ಆ ಜನಸಂಖ್ಯೆಯಲ್ಲಿ ಕೇವಲ ಶೇ.15ರಷ್ಟನ್ನು ಮಾತ್ರ ಪ್ರತಿನಿಧಿಸಿದ್ದಾರೆ. ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಿಂದ ತನ್ನ ಅರ್ಧದಷ್ಟು ನಾಗರಿಕರನ್ನು ನಿರಂತರವಾಗಿ ಹೊರಗಿಡುವ ಪ್ರಜಾಪ್ರಭುತ್ವವನ್ನು ನೈಜ ಪ್ರಜಾಪ್ರಭುತ್ವ ಎಂದು ಪರಿಗಣಿಸಲಾಗುವುದಿಲ್ಲ; ಅದು ಇನ್ನೂ ಆಗಬೇಕಿರುವ ಕೆಲಸವಾಗಿಯೇ ಉಳಿದಿದೆ. 'ನಾರಿ ಶಕ್ತಿ ವಂದನ್ ಅಧಿನಿಯಮ'ವು ಈ ಪ್ರಯತ್ನವನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಜನಗಣತಿ ನಡೆಯಬೇಕು, ಅದರ ಬಳಿಕ ಕ್ಷೇತ್ರ ಪುನರ್ವಿಂಗಡಣೆ ನಡೆಯಬೇಕು, ಮುಂದಿನ ಹಂತವಾಗಿ ಸಂಸತ್ತು ಮತ್ತು ಪ್ರತಿ ರಾಜ್ಯ ವಿಧಾನಸಭೆಯ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮಹಿಳೆಯರು ಅಲಂಕರಿಸಲಿದ್ದಾರೆ. ಕಾನೂನುಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಸೇರಿಸಿಕೊಂಡಾಗ, ಶಾಸನದ ಕೇಂದ್ರ ಬಿಂದು ಬದಲಾಗುತ್ತದೆ. ದಶಕಗಳ ಹಿಂದೆ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ಜಾರಿಗೆ ತಂದಿದ್ದ ಪಂಚಾಯತ್ ರಾಜ್ ಸಂಸ್ಥೆಗಳು ಆದ್ಯತೆಗಳಲ್ಲಿ ಆಳೆಯಬಹುದಾದ ಬದಲಾವಣೆಯನ್ನು ತೋರಿಸುತ್ತವೆ.

ಏಕತಾನತೆಯ ಚಕ್ರವನ್ನು ಭೇದಿಸುವತ್ತ

ಮಹಿಳೆಯರು ತಮ್ಮದೇ ಆದ ಅರ್ಹತೆಯ ಮೇಲೆ ಮೇಲೇರಬೇಕು ಎಂಬ ವಾದವನ್ನು ನಾನು ಕೇಳಿದ್ದೇನೆ. ಆ ಭಾವನೆಯನ್ನು ನಾನು ಗೌರವಿಸುತ್ತೇನೆ, ಆದರೆ ನಾನು ಪ್ರಮೇಯವನ್ನು ತಿರಸ್ಕರಿಸುತ್ತೇನೆ. ನಿರ್ವಾತದಲ್ಲಿ ಅರ್ಹತೆ ಅಸ್ತಿತ್ವದಲ್ಲಿ ಇರುಲು ಸಾಧ್ಯವಿಲ್ಲ. ಅವಕಾಶಗಳು ಇರುವಲ್ಲಿ ಮಾತ್ರ ಅದು ಪ್ರವರ್ಧಮಾನಕ್ಕೆ ಬರುತ್ತದೆ. ತಲೆಮಾರುಗಳಿಂದಲೂ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರಚನಾತ್ಮಕ ಅಡೆತಡೆಗಳು ಪ್ರತಿಭಾವಂತ ಮಹಿಳೆಯರನ್ನು ರಾಜಕೀಯದಿಂದ ದೂರವಿರಿಸಿವೆ. ಮೀಸಲಾತಿಯು ಅರ್ಹತೆಯನ್ನು ಕಡಿಮೆ ಮಾಡುವುದಿಲ್ಲ, ಅದು ತಡೆಗೋಡೆಯನ್ನು ತೊಡೆದುಹಾಕುತ್ತದೆ.

ಹೊಸ ನೀತಿಗೆ ಇದು ಯಾವ ಅರ್ಥ ನೀಡುತ್ತದೆ?

ನಿರ್ಧಾರ ಕೈಗೊಳ್ಳುವ ಸಮಯದಲ್ಲಿ ಕೋಣೆಯಲ್ಲಿ ಯಾರು ಇದ್ದಾರೆ ಎಂಬುದು ಅಲ್ಲಿ ಏನು ಚರ್ಚೆ ನಡೆಸಲಾಗುತ್ತದೆ ಎಂಬುದನ್ನು ನಿರ್ಧರಿಸುತ್ತದೆ. ಸರ್ಕಾರದಲ್ಲಿ ನನ್ನ ವ್ಯಾಪಕ ಅನುಭವದಿಂದ ಈ ವಿಷಯವನ್ನು ನನಗೆ ಕಲಿಸಿದೆ. ಮಹಿಳಾ ಶಾಸಕರು ತಾಯಿಯ ಆರೋಗ್ಯ ನಿಧಿಯನ್ನು ಕಡಿತಗೊಳಿಸಿದಾಗ ಅದನ್ನು ಒತ್ತಾಯಿಸುತ್ತಾರೆ. ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ.33ರಷ್ಟು ಮೀಸಲಾತಿ ಎಂದರೆ ಇದೇ ಮೊದಲ ಬಾರಿಗೆ ಈ ಧ್ವನಿಗಳಿಗೆ ಶಕ್ತಿ ಬರಲಿದೆ. ಅವು ರಚನಾತ್ಮಕವಾಗಿರುತ್ತವೆ. ಶಾಶ್ವತವಾಗುತ್ತವೆ, ಆ ದನಿಗಳನ್ನು ನಿರ್ಲಕ್ಷಿಸುವುದು ಅಸಾಧ್ಯ.

ನಾರೀಶಕ್ತಿ: ದೂರದೃಷ್ಟಿಯಿಂದ ಕಾನೂನಿನವರೆಗೆ

ಮಹಿಳೆಯರ ಸಂಪೂರ್ಣ ಮತ್ತು ಸಮಾನ ಭಾಗವಹಿಸುವಿಕೆಯಿಲ್ಲದೆ ಭಾರತವು ತನ್ನ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳಲು ಸಾಧ್ಯವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಬಹಳ ಹಿಂದಿನಿಂದಲೂ ಹೇಳುತ್ತಿದ್ದಾರೆ. ಇದು ಕೇವಲ ಮಾತಿನಲ್ಲಿ ಉಳಿದಿಲ್ಲ. ಬದಲಿಗೆ ಬೇಟಿ ಬಚಾವೋ ಬೇಟಿ ಪಡಾವೋದಿಂದ ಹಿಡಿದು ಜನ್ ಧನ್, ಉಜ್ವಲ ಮತ್ತು ಪಿಎಂ ಆವಾಸ್ ಯೋಜನೆಯಲ್ಲಿ ಮಹಿಳೆಯರನ್ನು ದಾಖಲೆಯ ಮಟ್ಟದಲ್ಲಿ ಸೇರ್ಪಡೆಗೊಳಿಸುವ ಮೂಲಕ ಪ್ರತಿ ನೀತಿಯನ್ನು ದೃಢ ನಿಶ್ಚಯದಿಂದ ಮುನ್ನಡೆಸಿದ್ದಾರೆ.

ಪಕ್ಷಾತೀತವಾಗಿ ನನ್ನ ಸಹೋದ್ಯೋಗಿಗಳಿಗೆ

ಇದು ನಮ್ಮೆಲ್ಲರಿಗೂ ಸೇರಿದ ಸಮಯ. ಯಾವುದೇ ಒಂದು ಪಕ್ಷಕ್ಕೆ ಸೀಮಿತವಾದುದಲ್ಲ, ಬದಲಿಗೆ ಒಂದು ಸಂಸ್ಥೆಯಾಗಿ ಇಡೀ ಸಂಸತ್ತಿಗೆ ಸಂಬಂಧಿಸಿದ್ದು. ಸರ್ಕಾರದ ಪ್ರತಿಯೊಂದು ಹಂತದಲ್ಲೂ ಈ ರಾಷ್ಟ್ರಕ್ಕೆ ಸೇವೆ ಸಲ್ಲಿಸಿದ ಮಹಿಳೆಯಾಗಿ ನಾನು ಎಲ್ಲರಿಗೂ ಮನವಿ ಮಾಡುತ್ತೇನೆ ಮತ್ತು ಭಾರತದ ಪ್ರಜಾಪ್ರಭುತ್ವವನ್ನು ಬಲವಾಗಿ ಮತ್ತು ಹೆಚ್ಚು ಪರಿಪೂರ್ಣವಾಗಿ ನೋಡುವ ಬಯಕೆಯನ್ನು ನಾವೆಲ್ಲರೂ ಹಂಚಿಕೊಳ್ಳುತ್ತೇವೆ ಎಂದು ನಾನು ನಂಬುತ್ತೇನೆ.

ಅನುಷ್ಠಾನ, ಮೀಸಲು ಸ್ಥಾನಗಳ ಆವರ್ತನ, ಬದಲಿ ಅಭ್ಯರ್ಥಿಗಳು, ಷರತ್ತುಗಳ ಬಗೆಗಿನ ಕಳವಳಗಳನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಇವು ಕಾನೂನುಬದ್ಧ ಚರ್ಚೆಗಳಾಗಿವೆ, ಆದರೆ ಈ ವಿಷಯದ ಬಗ್ಗೆ ತರ್ತು ಗಮನ ಹರಿಸುವುದು ಅಗತ್ಯ ಎಂದು ನಾವು ಖಚಿತಪಡಿಸಿಕೊಳ್ಳಬೇಕು. ತತ್ವವು ಸದೃಢವಾಗಿದೆ. ಅವಶ್ಯಕತೆ ತುರ್ತಾಗಿದೆ. ಪರಿಪೂರ್ಣರನ್ನು ಪರಿವರ್ತನೆಯ ಶತ್ರುವಾಗಲು ನಾವು ಅನುವು ನೀಡಬಾರದು.

ನ್ಯಾಯಸಮ್ಮತತೆಯನ್ನು ಆಯ್ಕೆ ಮಾಡಿದ ರಾಷ್ಟ್ರ

ಸೆಪ್ಟೆಂಬರ್ 2023ರಲ್ಲಿ ಇತಿಹಾಸ ನಿರ್ಮಿಸಲಾಯಿತು. ಆದರೆ ಅದರ ನಂತರ ನಡೆಯಬೇಕಾದ ಪ್ರಕ್ರಿಯೆ ನಡೆದರಷ್ಟೇ ಇತಿಹಾಸ ಅರ್ಥಪೂರ್ಣವಾಗಲಿದೆ. ನ್ಯಾಯಸಮ್ಮತತೆಯನ್ನು ಆಯ್ಕೆ ಮಾಡುವ ದೇಶವು ತಾನು ಅಂಗೀಕರಿಸುವ ಕಾನೂನುಗಳ ಪ್ರಕಾರ ಬದುಕುವ ಮೂಲಕ ಸದ್ದಿಲ್ಲದೆ ಶಾಶ್ವತ ಕೆಲಸವನ್ನು ಮಾಡುತ್ತದೆ. ತನ್ನ ದೇಶಕ್ಕೆ ಸೇವೆ ಸಲ್ಲಿಸಲು ಬಯಸುವ ಯಾವುದೇ ಸಮುದಾಯದ ಮಹಿಳೆಗೆ, ಎಂದಿಗೂ ವೇದಿಕೆ ಏರದ ನಾಯಕಿಗೆ ಮತ್ತು ಎಂದಿಗೂ ಮೈಕ್ರೊಫೋನ್ ದೊರೆಯದ ಧ್ವನಿಗಾಗಿ, ನಾವು ಕಾರ್ಯಪ್ರವೃತ್ತರಾಗುವ ಸಮಯ ಈಗ ಬಂದಿದೆ. ಈ ಕಾನೂನನ್ನು ಜಾರಿಗೆ ತರಬೇಕಿದೆ. ಕೋಣೆಯನ್ನು ಮತ್ತಷ್ಟು ದೊಡ್ಡದಾಗಿ ಮಾಡಬೇಕಿದೆ... ಭಾರತ ನೋಡುತ್ತಿದೆ.

ಕಿರುಸುದ್ದಿ

ಸುಳ್ಯ ಸ್ವರ್ಣಂ ಜ್ಯುವೆಲ್ಸ್‌ನಲ್ಲಿ ವಿಷು, ಅಕ್ಷಯ ತೃತೀಯ ಪ್ರಯುಕ್ತ ವಿಶೇಷ ಆಫರ್

ಸುಳ್ಯ: ಇಲ್ಲಿನ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಮುಂಭಾಗದ ಸೂಂತೋಡು ಎಂಪೋರಿಯಂ ಬಿಲ್ಡಿಂಗ್‌ನಲ್ಲಿರುವ ಸ್ವರ್ಣಂ ಜ್ಯುವೆಲ್ಸ್‌ನಲ್ಲಿ ಗ್ರಾಹಕರಿಗೆ ವಿಷು ಹಬ್ಬ ಸಂಭ್ರಮ ಹಾಗೂ ಅಕ್ಷಯ ತೃತೀಯ ಅಂಗವಾಗಿ ಗ್ರಾಹಕರಿಗೆ ವಿಶೇಷ ಆಫರ್ ನೀಡಲಾಗುತ್ತಿದೆ.



ಸ್ವರ್ಣಂ ಜ್ಯುವೆಲ್ಸ್ ಮಳಿಗೆಯ ಗ್ರಾಹಕರಿಗೆ ಹೊಸ ಆಯೋಜನೆಯನ್ನು ತರುತ್ತಿದ್ದು, ಇದೀಗ ಗ್ರಾಹಕರಿಗೋಸ್ಕರ ವಿಷು ಹಬ್ಬದ ಸಂಭ್ರಮ ಹಾಗೂ ಅಕ್ಷಯ ತೃತೀಯ ಆಫರ್ ಆಯೋಜನೆಗೊಂಡಿದೆ. ಅಲ್ಲದೆ ಗ್ರಾಹಕರಿಗೆ ಚಿನ್ನಾಭರಣ ಖರೀದಿಗೆ ಪ್ರತೀ ಚಿನ್ನಾಭರಣಗಳ ಪ್ರತಿ ಪವನಿಗೆ 3,000 ಕಡಿತ ಹಾಗೂ ವಿಶೇಷ ರಿಯಾಯಿತಿ ನೀಡಲಾಗುತ್ತಿದೆ. ವಿಶೇಷ ಆಕರ್ಷಣೆ ವಿವಿಎಸ್ ಗುಣಮಟ್ಟದ ಡೈಮಂಡ್ ಆಭರಣಗಳು ಹಾಗೂ ಮನಕ್ಕೊಪ್ಪುವ 250 ಅಧಿಕ ವಿವಿಧ ವಿನ್ಯಾಸಗಳ ಕರಿಮಣಿ ಹಾಗೂ 500ಕ್ಕೂ ಅಧಿಕ ವಿನ್ಯಾಸದ ಡೈಮಂಡ್ ಆಭರಣಗಳು ಲಭ್ಯವಿದೆ.ಅಲ್ಲದೇ ಗ್ರಾಹಕರ ಹಳೆಯ ಕರಿಮಣಿಯನ್ನು ಹೊಸ 916ಗೆ ಎಕ್ಸ್‌ಚೇಂಜ್ ಮಾಡಲು ಉತ್ತಮ ಅವಕಾಶವನ್ನು ಸ್ವರ್ಣಂ ಜ್ಯುವೆಲ್ಸ್ ಗ್ರಾಹಕರಿಗೆ ನೀಡಿದೆ. ಈ ಸುವರ್ಣಾವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಬೇಕಾಗಿ ಸಂಸ್ಥೆಯ ಪಾಲುದಾರರು ತಿಳಿಸಿದ್ದಾರೆ.

ವೃದ್ಧೆ ಸ್ಥಿತಿ ಚಿಂತಾಜನಕ : ವಾರಸುದಾರರಿದ್ದಲ್ಲಿ ಆಸ್ಪತ್ರೆ ಸಂಪರ್ಕಿಸಲು ಸೂಚನೆ

ಉಡುಪಿ: ಜಿಲ್ಲಾಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಗೌರಿ (90) ಎಂಬ ವೃದ್ಧೆಯ ಸ್ಥಿತಿ ಚಿಂತಾಜನಕವಾಗಿದ್ದು ವಾರಿಸುದಾರರು ಯಾರಾದರೂ ಇದ್ದಲ್ಲಿ ಜಿಲ್ಲಾಸ್ಪತ್ರೆಯ ನಾಗರಿಕ ಸಹಾಯ ಕೇಂದ್ರ ದೂ.ಸಂ: 0820-2520555, 9449827833 ಅನ್ನು ಸಂಪರ್ಕಿಸುವಂತೆ ಜಿಲ್ಲಾಸ್ಪತ್ರೆಯ ಕಚೇರಿ ಪ್ರಕಟಣೆ ತಿಳಿಸಿದೆ.

ಮೇ 1: ಬುದ್ಧ ಜಯಂತಿ ಆಚರಣೆಗೆ ಸಕಲ ಸಿದ್ಧತೆ: ಅಪರ ಜಿಲ್ಲಾಧಿಕಾರಿ ಅಬೀದ್

ಉಡುಪಿ: ಭಗವಾನ್ ಬುದ್ಧ ಜಯಂತಿಯನ್ನು ಜಿಲ್ಲಾ ಮಟ್ಟದಲ್ಲಿ ಮೇ 01 ರಂದು ಅರ್ಥಪೂರ್ಣವಾಗಿ ಆಚರಿಸಲು ಸಕಲ ಸಿದ್ಧತೆ ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ತಮ್ಮ ಕಚೇರಿಯಲ್ಲಿ ನಡೆದ ಭಗವಾನ್ ಬುದ್ಧ ಜಯಂತಿ ಆಚರಣೆ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.ವಿವಿಧ ಜಯಂತಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಹಾಗೂ ಸಮಾಜಕ್ಕೆ ಕೊಡುಗೆ ನೀಡಿದ ಮಹನೀಯರ ಸಂದೇಶಗಳನ್ನು ಸಮಾಜಕ್ಕೆ ತಿಳಿಸಲು, ಅವರ ಜೀವನ ಮೌಲ್ಯಗಳನ್ನು ಸಮಾಜಕ್ಕೆ ನೀಡಲು ಹಾಗೂ ದಾರ್ಶನಿಕರ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರದ ವತಿಯಿಂದ ಜಯಂತಿ ಕಾರ್ಯಕ್ರಮಗಳನ್ನು ಆಚರಣೆ ಮಾಡಲಾಗುತ್ತಿದೆ ಎಂದರು.

ಬೋರ್ಡ್ ಹೈಸ್ಕೂಲ್‌ನಲ್ಲಿ ಕಾರ್ಯಕ್ರಮ

ಜಿಲ್ಲಾಡಳಿತ ಹಾಗೂ ಬುದ್ಧಿಸ್ಟ್ ಸೊಸೈಟಿ ಆಫ್ ಇಂಡಿಯಾ ಉಡುಪಿ ಇವರ ಸಹಯೋಗದಲ್ಲಿ ಮೇ 1 ರಂದು ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮವನ್ನು ಉಡುಪಿಯ ಬೋರ್ಡ್ ಹೈಸ್ಕೂಲ್ ನಲ್ಲಿ ಬೆಳಗ್ಗೆ 10 ಗಂಟೆಗೆ ಆಚರಿಸಲಾಗುವುದು ಎಂದ ಅವರು, ಕಾರ್ಯಕ್ರಮದ ಯಶಸ್ಸಿಗೆ ರೂಪುರೇಷೆಗಳನ್ನು ಸಿದ್ಧಪಡಿಸಿಕೊಳ್ಳುವಂತೆ ತಿಳಿಸಿದರು.

ಕಾರ್ಯಕ್ರಮಕ್ಕೆ ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ, ಗಣ್ಯರನ್ನು, ಜನಪ್ರತಿನಿಧಿಗಳನ್ನು ಹಾಗೂ ಸಮುದಾಯದವರನ್ನು ಆಹ್ವಾನಿಸಬೇಕು. ಶಾಂತಿ, ಅಹಿಂಸೆ ಹಾಗೂ ಮಾನವೀಯತೆಯ ಸಂದೇಶವನ್ನು ಸಾರಿದ ಭಗವಾನ್ ಬುದ್ಧರ ಚಿಂತನೆಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸವನ್ನು ಏರ್ಪಡಿಸಬೇಕು ಎಂದ ಅವರು, ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ವ್ಯಾಪಕ ಪ್ರಚಾರ ನೀಡುವುದರೊಂದಿಗೆ ಕಾರ್ಯಕ್ರಮ ಯಶಸ್ವಿಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ, ಬುದ್ಧಿಸ್ಟ್ ಸೊಸೈಟಿ ಆಫ್ ಇಂಡಿಯಾ ಉಡುಪಿ ಇದರ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ರಜನಿ ಮಧುಕರ ಶೆಟ್ಟಿ, 'ರಾಧಾಕೃಷ್ಣ ನಿವಾಸ' ನಡುಗೋಡು.
2. ವಿನಯ ದೊಡ್ಡಣ್ಣ ಶೆಟ್ಟಿ ಮತ್ತು ಮಕ್ಕಳು, ಮೊಮ್ಮಕ್ಕಳು, ಮುಂಡ್ಕೂರು ದೊಡ್ಡಮನೆ.
3. ಕುಶಾಲ್ ಕುಮಾರ್ ಶೆಟ್ಟಿ, ಕಿದ್ದಲಿಕೆ ಮನೆ, ಕಾವಲಕಟ್ಟೆ, ಕಾವಲ ಮುಡೂರು, ಬಂಟ್ವಾಳ (ತಾ).
4. ರತ್ನಾಕರ ಶೆಟ್ಟಿ, ಬಾಕಿಮಾರುಗುತ್ತು, ಸೂರಿಂಜೆ.
5. ಸೀತಾರಾಮ ಶೆಟ್ಟಿ, ನೆತ್ತಿಲಬಾಳಿಕೆ, 'ಶ್ರೀ ದೇವಿ ಪ್ರಸಾದ್', ದಡಸ್, ಅಸೈಗೋಳಿ.
6. ಎನ್. ರವೀಂದ್ರ ಭಟ್ ಮತ್ತು ಪತ್ನಿ, ಪುತ್ರ, 'ಸತ್ಯ ನಿಲಯ', ಮುಲಿಮಾರು ಮಠ, ನಿಂಜೂರು, ಕಾರ್ಕಳ.
7. ಶ್ರೀಧರ ಆಚಾರ್ಯ ಮತ್ತು ಫೇಮಿಲಿ, ಅದಿತಿ ಎನ್‌ಕ್ಲೇವ್ ಬಳಿ ಬಿಜೈ, ಉರ್ವಸ್ಟೋರ್ ಶ್ರೀ ಮಹಾಗಣಪತಿ ದೇವಸ್ಥಾನ.

ಶ್ರೀ ಧರ್ಮಸ್ಥಳ ಮೇಳ
ಬಸ್ರೂರು-ಮಾರ್ಗೋಳಿಯಲ್ಲಿ
ಶ್ರೀ ಗಣೇಶ್ ಆಚಾರಿ ಮತ್ತು ಮನೆಯವರು
ರಾಧಾ ನಿಲಯ, ಚಿಲಿಮಿ ಮಠ

ಶ್ರೀ ಸಾಲಿಗ್ರಾಮ ಮೇಳ
ಮಾರಣಕಟ್ಟೆಯಲ್ಲಿ-**ರಂಗನಾಯಕಿ**

ಶ್ರೀ ಪೆರ್ಡೂರು ಮೇಳ
ಮಂಕಿ ದೇವಿಕಾನದಲ್ಲಿ-
ಭೀಷ್ಮಪರ್ವ, ದ್ರೋಣ ಪರ್ವ, ಗದಾ ಪರ್ವ

ಶ್ರೀ ಹನುಮಗಿರಿ ಮೇಳ
ಅರೆಹೊಳೆಯಲ್ಲಿ

ಶ್ರೀ ಪಾವಂಜೆ ಮೇಳ
ಉಳಿ ಶ್ರೀ ಗೋಪಾಲಕೃಷ್ಣದೇವಸ್ಥಾನದಲ್ಲಿ
ಮೇಘ ಮಯೂರಿ



ಮಂಗಳೂರು ನಗರದ ಹೊರವಲಯ ಗುರುಪುರದ ಮೂಲೂರು ಗ್ರಾಮದ ಬಡಕರೆ ಆಸುಪಾಸಿನ ಬಯಲು ಪ್ರದೇಶದಲ್ಲಿ ಬುಧವಾರ ಮಧ್ಯಾಹ್ನ ಒಣ ಹುಲ್ಲಿಗೆ ಬೆಂಕಿ ಹತ್ತಿಕೊಂಡಿದ್ದು, ಅಗ್ನಿಶಾಮಕ ಸಿಬ್ಬಂದಿ ಹಾಗೂ ಸ್ಥಳೀಯರು ಭಾರೀ ಸಾಹಸಪಟ್ಟು ಬೆಂಕಿ ನಂದಿಸಿದ್ದಾರೆ. ಬೆಂಕಿಯು ಹಿಂದೆ ಕಿಡಿಗೇಡಿ ಕೃತ್ಯವಿರಬೇಕೆಂದು ಸ್ಥಳೀಯರು ಶಂಕಿಸಿದ್ದಾರೆ.

ಸುಂಟಿಕೊಪ್ಪ: ಮೊಗೇರ ದೈವ, ಕೊರಗ ತನಿಯ ದೈವ, ಮಂತ್ರವಾದಿ ಗುಳಿಗ ನೇಮೋತ್ಸವ

ಸುಂಟಿಕೊಪ್ಪ: ಹರದೂರು ಗ್ರಾಮದ ಆದಿನಾಗಬ್ರಹ್ಮ ಮೊಗೇರ್ಕಳ ಸೇವಾ ಸಮಿತಿ ವತಿಯಿಂದ ಆದಿನಾಗಬ್ರಹ್ಮ ಮೊಗೇರ ದೈವಗಳ ಹಾಗೂ ಕೊರಗ ತನಿಯ ದೈವದ ಹಾಗೂ ಮಂತ್ರವಾದಿ ಗುಳಿನಗ 86ನೇ ನೇಮೋತ್ಸವವು ಶ್ರದ್ಧಾಭಕ್ತಿಯುವ ಮೂಲಕ ಸಂಪನ್ನಗೊಂಡಿತು.




ಏ.3 ರಂದು ಬೆಳಿಗ್ಗೆ ಗೊನೆ ಕಡಿಯುವ ಮೂಲಕ ಧ್ವಜಾರೋಹಣವನ್ನು ನಡೆಸುವ ಮೂಲಕ ವಾರ್ಷಿಕೋತ್ಸವಕ್ಕೆ ಚಾಲನೆ ನೀಡಲಾಯಿತು. ಏ. 9 ಗುರುವಾರ ಬೆಳಿಗ್ಗೆ 6ಗಂ. ಗಣಪತಿ ಹೋಮ ತಾ. 11ರಂದು ಶನಿವಾರ 12 ಗಂಟೆಗೆ ಆಯುಧಾಪೂಜೆ ಸಂಜೆ 5 ಗಂ. ನಿತ್ಯ ಪೂಜೆ ಮತ್ತು ಭಂಡಾರ ಹೊರಡುವುದರ ಮೂಲಕ ನೇಮೋತ್ಸವಕ್ಕೆ ಚಾಲನೆ ದೊರೆಯಿತು. ಸಂಜೆ 6 ಗಂಟೆಯ ನಂತರ ಮಂತ್ರವಾದಿ ಗುಳಿಗನ ನೇಮ ನಡೆದು ಭಕ್ತರಲ್ಲಿ ಭಯ ಭಕ್ತಿ ಮೂಡಿಸಿತು, ರಾತ್ರಿ 8.30 ಗಂ. ಆದಿನಾಗಬ್ರಹ್ಮ ಮೊಗೇರ ದೈವಗಳ ಆದಿಮಾಯೆ ತನ್ನಿ ಮಾನಿಗ ಗರಡಿ ಇಳಿಯಿತು. ರಾತ್ರಿ 12.30ಕ್ಕೆ ಆದಿ ಮಾಯೆ ತನಿ ಮಾನಿಗ ಗರಡಿ ಇಳಿಯುವುದು ಭಾನುವಾರ ಮುಂಜಾನೆ ತಾವು ನಂಬಿದ ಕಾರಣಿಕ ದೈವಗಳಿಗೆ ಹರಕೆ ಮತ್ತು ಕಾಣಿಕೆ ಅರ್ಪಿಸಿ ಭಕ್ತಪರಾವಶರಾದರು. ಬೆಳಿಗ್ಗೆ 9 ಗಂಟೆಯ ಕೊರಗ ತನಿಯ ದೈವದ ಕಾರಣಿಕ ನೇಮೋತ್ಸವವು ನಡೆಯಿತು. ದೇವಸ್ಥಾನ ಸಮಿತಿ ಅಧ್ಯಕ್ಷ ಬಿ. ರಾಜು, ಉಪಾಧ್ಯಕ್ಷ ಬಿ.ಎಸ್. ಆನಂದ, ಕಾರ್ಯದರ್ಶಿ ಎನ್.ಎಸ್. ನವೀನ, ಖಜಾಂಜಿ ಅಣ್ಣಿ ಸಮಿತಿ ಪದಾಧಿಕಾರಿಗಳಾದ ಎಂ.ಪಿ. ದೇವಪ್ಪ, ಗೌತಮ್ ಶಿವಪ್ಪ, ದಿನೇಶ್, ದೇವಾಲಯದ ಪ್ರಧಾನ ಪೂಜಾರಿಗಳಾದ ಯೋಗೇಂದ್ರ, ಮಂಜು, ಸತೀಶ, ರವಿ,ಪಿ.ಕೆ. ಸುಂದರ, ಪೊಣ್ಣಪ್ಪ ಪೂಜಾರಿ ಊರಿನ ಗಣ್ಯರು, ಗ್ರಾಮಸ್ಥರು ಸುಂಟಿ ಕೊಪ್ಪ, ಹರದೂರು, ಮಾದಾಪುರ, ಮಡಿಕೇರಿ, ಕುಶಾಲ ನಗರ, ಮೈಸೂರು ಸಹಿತ ವಿವಿಧ ಕಡೆಗಳಿಂದ ಭಕ್ತರು ಗಮಿಸಿ ನೇಮೋತ್ಸವ ವೀಕ್ಷಿಸಿದರು.

60 ವರ್ಷ ಪೂರೈಸಿದ ಮೂಡುಬಿದಿರೆ ಶ್ರೀ ಮಹಾವೀರ ಕಾಲೇಜ್ | ಏ.17ರಿಂದ 21ರ ವರೆಗೆ ವಿವಿಧ ಕಾರ್ಯಕ್ರಮ

ಅಕ್ಷರ ದೇಗುಲಕ್ಕೆ ವಜ್ರಮಹೋತ್ಸವ ಸಂಭ್ರಮ

ಮೂಡುಬಿದಿರೆ: 1965ರಲ್ಲಿ ಮಣಿಪಾಲದ ಪದ್ಮಶ್ರೀ ಡಾ. ಟಿ.ಎಮ್.ಎ. ಪೈ, ಎಸ್.ಎನ್. ಮೂಡುಬಿದಿರೆ ಸೇರಿದಂತೆ ಅನೇಕ ಗಣ್ಯರ ನೇತೃತ್ವದಲ್ಲಿ ಆರಂಭವಾದ ಇಲ್ಲಿನ ಶ್ರೀ ಮಹಾವೀರ ಕಾಲೇಜು, ಇದೀಗ ಅರವತ್ತು ವರ್ಷಗಳನ್ನು ಪೂರೈಸಿದ ಸಂಭ್ರಮದಲ್ಲಿದೆ. ಈ ಸುದೀರ್ಘ ಶೈಕ್ಷಣಿಕ ಪಯಣದ ನೆನಪಿಗಾಗಿ ಕಾಲೇಜಿನ ಆವರಣದಲ್ಲಿ ಏಪ್ರಿಲ್ 17ರಿಂದ 21ರ ವರೆಗೆ ವೈಭವದ ವಜ್ರಮಹೋತ್ಸವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ, ಮಾಜಿ ಸಚಿವ ಕೆ. ಅಭಯಚಂದ್ರ ಜೈನ್ ಸುದ್ದಿಗೊಷ್ಠಿಯಲ್ಲಿ ತಿಳಿಸಿದರು.



ಕಾಲೇಜು 1965ರಲ್ಲಿ ಮೂಡುಬಿದಿರೆಯ ಸಮಾಜ ಮಂದಿರ ಸಭಾದಲ್ಲಿ ಆರಂಭವಾದ ಸವಿನೆನಪಿನಲ್ಲಿ, ಏಪ್ರಿಲ್ 17ರಂದು ಮಧ್ಯಾಹ್ನ 3.30ಕ್ಕೆ ಸಮಾಜ ಮಂದಿರದ ಆವರಣದಿಂದ ಕಾಲೇಜಿನವರೆಗೆ ಆಕರ್ಷಕ ಮೆರವಣಿಗೆ ನಡೆಯಲಿದೆ. ಈ ಮೆರವಣಿಗೆಯಲ್ಲಿ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷರು, ಸದಸ್ಯರು, ಪ್ರಾಂಶುಪಾಲರು, ಬೋಧಕ- ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಹಳೆ ವಿದ್ಯಾರ್ಥಿಗಳು, ಅಭಿಮಾನಿಗಳು ಹಾಗೂ ಸಂಘ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಲಿದ್ದಾರೆ.

ವಜ್ರಮಹೋತ್ಸವ, ಸಂಸ್ಥಾಪಕರ ದಿನಾಚರಣೆ

ಏ.18ರಂದು ಬೆಳಿಗ್ಗೆ 10 ಗಂಟೆಗೆ ವಜ್ರ ಮಹೋತ್ಸವದ ಉದ್ಘಾಟನೆ ಹಾಗೂ ಕಾಲೇಜಿನ ನೂತನ ವಿದ್ಯಾರ್ಥಿ ವಸತಿ ನಿಲಯದ ಉದ್ಘಾಟನೆಯನ್ನು ಆಂಧ್ರಪ್ರದೇಶದ ರಾಜ್ಯಪಾಲ ಎಸ್. ಅಬ್ದುಲ್ ನಜೀರ್ ನೆರವೇರಿಸಲಿದ್ದಾರೆ. ಆಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಅಧ್ಯಕ್ಷ ಡಾ. ಹೆಚ್.ಎಸ್. ಬಲ್ಲಾಳ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಡಿ. ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ಡಾ. ಎಂ. ಮೋಹನ ಆಳ್ವ, ಕೆ. ಅಭಯಚಂದ್ರ ಜೈನ್, ರಾಜೇಶ್ ಚೌಟ, ಮನೋಹರ್ ಎಸ್. ಮೂಡುಬಿದಿರೆ ಹಾಗೂ ಕಿಶೋರ್ ಆಳ್ವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 2 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಂಜೆ 6.30ಕ್ಕೆ ಶಾರದಾ ಆರ್ಟ್ಸ್ ಕಲಾವಿದರಿಂದ 'ಕಥೆ ಎತ್ತೆಂದು' ತುಳು ನಾಟಕ ಪ್ರದರ್ಶನಗೊಳ್ಳಲಿದೆ. ಏ. 19ರಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಹಳೆ ವಿದ್ಯಾರ್ಥಿಗಳ



ದಿನಾಚರಣೆಯನ್ನು ಕರ್ನಾಟಕ ವಿಧಾನಸಭೆಯ ಸ್ಪೀಕರ್ ಯು. ಟಿ. ಖಾದರ್ ಉದ್ಘಾಟಿಸಲಿದ್ದಾರೆ. ಕೆ. ಅಭಯಚಂದ್ರ ಜೈನ್ ಅಧ್ಯಕ್ಷತೆ ವಹಿಸಲಿದ್ದು, ಸಾಧಕ ಹಳೆ ವಿದ್ಯಾರ್ಥಿಗಳಾದ ವಸುಂಧರಾ ದೊರೆಸ್ವಾಮಿ, ಆನಂದ್ ಎಂ. ಶೆಟ್ಟಿ, ಸಂಜಯ್ ಎ. ಭಟ್, ಸುಧಾಕರ್ ಕುಂದರ್, ಮೋಹನ್ ದಾಸ್ ಪಿ. ಶೆಟ್ಟಿ ಹಾಗೂ ಡಾ. ಸೀಮಾ ಮೆರ್ವಾಡೆ ಅತಿಥಿಗಳಾಗಿ ಆಗಮಿಸಲಿದ್ದಾರೆ. ಮಧ್ಯಾಹ್ನ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಂಜೆ 6.30ಕ್ಕೆ ನೃತ್ಯ ನಿಕೇತನ ಕೊಡವೂರು ತಂಡದಿಂದ 'ನರಸಿಂಹ' ನೃತ್ಯ ರೂಪಕ ಪ್ರದರ್ಶನ ನಡೆಯಲಿದೆ ಎಂದು ಅವರು ಹೇಳಿದರು.

ಏ. 20ರಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ವಿದ್ಯಾರ್ಥಿ ಕ್ಷೇಮಪಾಲನಾ ಸಂಘದ ಕಾರ್ಯಕ್ರಮವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಪ್ರಭಾರ ವಿ.ಸಿ. ಡಾ. ಜಯರಾಜ್ ಅಮೀನ್ ಉದ್ಘಾಟಿಸಲಿದ್ದಾರೆ. ಕೆ. ಅಭಯಚಂದ್ರ ಜೈನ್ ಅಧ್ಯಕ್ಷತೆ ವಹಿಸಲಿದ್ದು, ಡಾ. ಕೆ. ಶ್ರೀಧರ್ ರಂಗನಾಥ ಪೈ, ಪಿ. ದೇವ್ ಕುಮಾರ್ ಕಂಬ್ಳೆ ಮತ್ತು ಸುಚರಿತ ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಂಜೆ 6.30ಕ್ಕೆ ಕಾಪು ರಂಗತರಂಗ ಕಲಾವಿದರಿಂದ 'ಶೋಬಾಜಿ' ಹಾಸ್ಯಮಯ ನಾಟಕ ಪ್ರದರ್ಶನಗೊಳ್ಳಲಿದೆ.

ವೆಂಕಟೇಶ ಬಂಗೇರರಿಗೆ ಸನ್ಮಾನ

ಏ. 21ರಂದು ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಅಂತರಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ನಟ ತಾರಾನಾಥ್ ಗಟ್ಟಿ ಕಾಪಿಕಾಡ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕೆ. ಅಭಯಚಂದ್ರ ಜೈನ್ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಹಿರಿಯ ಸಾಧಕ ವೆಂಕಟೇಶ ಬಂಗೇರ ಅವರನ್ನು ಸನ್ಮಾನಿಸಲಾಗುತ್ತದೆ.

ಸಂಜೆ 4.30ಕ್ಕೆ ನಡೆಯುವ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ. ರಾಧಾಕೃಷ್ಣ ವಹಿಸಲಿದ್ದು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ ಸಮಾರೋಪ ಭಾಷಣ ಮಾಡಲಿದ್ದಾರೆ. ಚಂದ್ರಶೇಖರ್, ರಾಜೇಂದ್ರ ಕುಮಾರ್, ಗಂಗಾಧರ ಪೂಜಾರಿ, ಪ್ರೇಮನಾಥ ಮಾರ್ಲ, ಮೊಹಮ್ಮದ್ ಹರ್ಷದ್ ಮತ್ತು ವಿಲ್ಪೆಡ್ ಡಿ'ಸೋಜ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಅಭಯಚಂದ್ರ ಜೈನ್ ಮಾಹಿತಿ ನೀಡಿದರು.

ಆಡಳಿತ ಮಂಡಳಿ ಉಪಾಧ್ಯಕ್ಷ ಸಂಪತ್ ಸಾಮ್ರಾಜ್ಯ, ಪ್ರಾಂಶುಪಾಲ ಡಾ. ರಾಧಾಕೃಷ್ಣ ಕೋಶಾಧಿಕಾರಿ, ರಾಮ್ ಪ್ರಸಾದ್, ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ನಾಗರಾಜ್, ಕಾರ್ಯಾಧ್ಯಕ್ಷ ಕೆ.ಪಿ ಸುಚರಿತ ಶೆಟ್ಟಿ, ಸಮಾಜ ಮಂದಿರ ಸಭಾದ ಪ್ರಧಾನ ಕಾರ್ಯದರ್ಶಿ ಸುರೇಶ್ ಪ್ರಭು ಸುದ್ದಿಗೋಷ್ಠಿಯಲ್ಲಿದ್ದರು.

ಪಾಂಡವರ ಕೆರೆಯಲ್ಲಿ ಯುಗಾದಿಯ ಸಂಭ್ರಮ 'ವಂದೇ ಪ್ರಕೃತಿ ಮಾತರಂ'

ಕಡಬ: ಇಂದು ಪ್ರಕೃತಿ ಎನ್ನುವುದು ನಮ್ಮಿಂದ ದೂರವಾಗುತ್ತಿದೆ. ಆದರೆ, ಪ್ರಕೃತಿಯ ಹೊರತು ಮನಷ್ಯನ ಬದುಕು ಅಸಾಧ್ಯ ಎನ್ನುವುದನ್ನು ತಿಳಿದುಕೊಂಡು ಮನುಷ್ಯ ಪ್ರಕೃತಿಯ ಸಂರಕ್ಷಣೆಯಲ್ಲಿ ಕೈಜೋಡಿಸಬೇಕು ಎಂದು ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಮಂಗಳೂರು ವಿಭಾಗ ಸಂಚಾಲಕ ಸುಂದರ ಶೆಟ್ಟಿ ಹೇಳಿದರು.

ಅವರು ಮಂಗಳವಾರ ಐತಿಹಾಸಿಕ ಯಕ್ಷ ಪಾಂಡವರ (ಕೆದ್ದೊಟ್ಟೆ ಕೆರೆ) ಕೆರೆಯ ತಟದಲ್ಲಿ ನಡೆದ 'ಯುಗಾದಿ ಸಂಭ್ರಮ; ವಂದೇ ಪ್ರಕೃತಿ ಮಾತರಂ' ಕಾರ್ಯಕ್ರಮದಲ್ಲಿ ಮಾತನಾಡಿದರು.



ಮುಂದಿನ ಪೀಳಿಗೆಗೆ ಅನ್ಯಾಯ

ಮನುಷ್ಯ ತನ್ನ ಸ್ವಾರ್ಥಕ್ಕೋಸ್ಕರ ಪ್ರಕೃತಿಯನ್ನು ನಾಶ ಮಾಡಿ ಮುಂದಿನ ಪೀಳಿಗೆಗೆ ಅನ್ಯಾಯ ಮಾಡುತ್ತಿದ್ದಾನೆ. ಈ ನಿಟ್ಟಿನಲ್ಲಿ ನಾವು ಸಮಾಜದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಾಗಿದೆ. ನಾವು ಮಾಡುವ ಕಾರ್ಯಕ್ರಮ ಶೇ.100ರಷ್ಟು ಪರಿಣಾಮಕರಿಯಾಗದಿದ್ದರೂ ಒಂದಷ್ಟು ಜನ ಬದಲಾವಣೆಯಾದರೆ ಅದು ಸಾರ್ಥಕವಾಗುತ್ತದೆ. ಭಾರತೀಯ ಕಾಲಗಣನೆಗೆ ಅನುಗುಣವಾಗಿ ನಮ್ಮ ಪಾರಂಪರಿಕ ಆಚರಣೆಗಳನ್ನು, ಒಳ್ಳೆಯ ಜ್ಞಾನಗಳನ್ನು ನಮ್ಮ ಸಮಾಜಕ್ಕೆ ನೀಡುವ ಕಾರ್ಯವನ್ನು ಅಖಿಲ ಭಾರತೀಯ ಪರಿಷದ್ ವತಿಯಿಂದ ಮಾಡುವ ಸಂಕಲ್ಪ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಸಾಹಿತ್ಯ ಪರಿಷದ್ ಸಂಘಟನೆಯನ್ನು ಕಡಬ ತಾಲೂಕಿನಲ್ಲಿ ಬಲಪಡಿಸಲಾಗುವುದು ಎಂದರು.

ಜಾಗೃತಿ ಮೂಡಿಸುವ ಕಾರ್ಯ

ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಕಡಬ ತಾಲೂಕು ಘಟಕದ ಅಧ್ಯಕ್ಷ ಕರುಣಾಕರ ಗೋಗಟೆ ಮಾತನಾಡಿ, ಪಾಂಡವರು ಈ ಕೆರೆಯ ನೀರು ಕುಡಿಯಲು ಬಂದಾಗ ಸಂಕಷ್ಟ ಎದುರಾಗಿತ್ತು. ಆಗ ಧರ್ಮರಾಯ ಯಕ್ಷನ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿ ತನ್ನ ತಮ್ಮಂದಿರನ್ನು ಬದುಕಿಸಿದ ಪ್ರತೀತಿ ಇರುವ ಈ ಕರೆಯ ತಟದ ಪ್ರಕೃತಿ ಮಡಿಲಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಕಾರ್ಯಕ್ರಮ ಮಾಡಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ಮಾಡಲಾಗುತ್ತಿದೆ. ಪಕ್ಕದ ಕುಮಾರಧಾರ ನದಿಯ ಉರುಂಬಿಯಲ್ಲಿ ಪಾಂಡವರು ಬಂದಿದ್ದರು ಎನ್ನುವುದಕ್ಕೆ ಕುರುಹುಗಳು ಕಂಡು ಬರುತ್ತಿದೆ. ಮುಂದಿನ ದಿನಗಳಲ್ಲಿ ಅಲ್ಲಿ ಕೂಡಾ ಒಂದು ಕಾರ್ಯಕ್ರಮವನ್ನು ಆಯೋಜಿಸಲಾಗುವುದು ಎಂದರು.

ಕಡಬ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಎಸ್. ಬಾಲಕೃಷ್ಣ ಕೊಯಿಲ ಮಾತನಾಡಿದರು. ಕವಯತ್ರಿ ಸುನೀತ ಶ್ರೀರಾಮ ಕೆಮ್ಮಾರ ಅವರು ಪರಿಸರದ ಬಗೆಗಿನ ವಿಡಂಬನಾತ್ಮಕ ಸ್ವರಚಿತ ಕವನ ವಾಚನ ಮಾಡಿದರು. ಸಾಹಿತ್ಯಾಭಿಮಾನಿಗಳಾದ ಬಾಲಕೃಷ್ಣ ಇಡಾಳ, ಯಾದವ ಬೀರಂತಡ್ಕ, ವಸುಧಾ ಗೋಗಟೆ, ಸುಂದರ ಗೌಡ ಉಳಿಪ್ಪು ಮತ್ತಿರರು ಉಪಸ್ಥಿತರಿದ್ದರು. ಅಖಿಲ ಭಾರತೀಯ ಸಹಿತ್ಯ ಪರಿಷದ್‌ನ ಕಡಬ ತಾಲೂಕು ಘಟಕದ ಕಾರ್ಯದರ್ಶಿ, ಪತ್ರಕರ್ತ ನಾಗರಾಜ್ ಎನ್.ಕೆ. ಕಾರ್ಯಕ್ರಮ ನಿರ್ವಹಿಸಿದರು.

ಒಕ್ಕಲಿಗ ಗೌಡ ಸೇವಾ ಸಂಘದ ನೇತೃತ್ವ: ನೂತನ ಶಿಲಾಮಯ ಕಟ್ಟೆ ಲೋಕಾರ್ಪಣೆ

ಪುತ್ತೂರು: ತಾಲೂಕು ಒಕ್ಕಲಿಗ ಗೌಡ ಸೇವಾ ಸಂಘದ ನೇತೃತ್ವದಲ್ಲಿ ತೆಂಕಿಲ ಒಕ್ಕಲಿಗ ನಗರದ ಒಕ್ಕಲಿಗ ಗೌಡ ಸಮುದಾಯ ಭವನ ಬಳಿ ನಿರ್ಮಾಣಗೊಂಡ ಶಾಶ್ವತ ನೂತನ ಶಿಲಾಮಯ ಕಟ್ಟೆಗೆ ಕಲಶ ಪ್ರತಿಷ್ಠೆಯೊಂದಿಗೆ ಕಟ್ಟೆಯ ಸಮರ್ಪಣೆ ನಡೆಯಿತು.



ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಸ್ಥಾನದ ಪ್ರಧಾನ ಅರ್ಚಕ ರವಿ ನೆಲ್ಲಿತ್ತಾಯ ವೈದಿಕತ್ವದಲ್ಲಿ ಬೆಳಗ್ಗೆ ವಾಸ್ತು ಹೋಮ, ತುಳಸಿಕಟ್ಟೆಯನ್ನು ಪ್ರತಿಷ್ಠೆ ಮಾಡಿ, ಬಳಿಕ ಗಣಪತಿ ಹೋಮ, ನೂತನ ಶಿಲಾಮಯಕಟ್ಟೆಗೆ ಕಲಶ ಪ್ರತಿಷ್ಠೆ ನೆರವೇರಿಸಲಾಯಿತು.

ವೇ. ಮೂ. ರವಿ ನೆಲ್ಲಿತ್ತಾಯ ಅವರು ಪೂಜೆಯ ಬಳಿಕ ಪ್ರಾರ್ಥನೆ ಸಲ್ಲಿಸಿದರು. ಸೀಮಾಧಿಪತಿ ಶ್ರೀ ಮಹಾಲಿಂಗೇಶ್ವರ ದೇವರ ಜಾತ್ರೆಯ ಸಂದರ್ಭ ಶ್ರೀ ದೇವರು ನಾವಿದ್ದಲ್ಲಿಗೆ ಬಂದು ಪೂಜೆ ಸ್ವೀಕರಿಸುವ ಪರ್ವ ಕಾಲದಲ್ಲಿ ಗೌಡ ಸಮಾಜದಿಂದ ಶ್ರೀ ದೇವರಿಗೆ ನೂತನ ಆರೂಢವನ್ನು ಎಲ್ಲರ ಸಹಕಾರ ದೊಂದಿಗೆ ನಿರ್ಮಾಣ ಮಾಡಲಾಗಿದೆ. ಆರೂಢಕ್ಕೆ ಸೇವೆ ನೀಡಿದವರಿಗೆ ಮತ್ತು ಸಮಾಜ ಬಾಂಧವರಿಗೆ, ಕಟ್ಟೆ ನಿರ್ಮಾಣದಲ್ಲಿ ದುಡಿದವರಿಗೆ ದೇವರು ಒಳ್ಳೆಯ ಆರೋಗ್ಯ, ಸಂಪತ್ತು, ರಕ್ಷಣೆ ನೀಡಲಿ. ಶ್ರೀ ಮಹಾಲಿಂಗೇಶ್ವರ ದೇವರು ಕಟ್ಟೆ ಪೂಜೆ ಸ್ವೀಕರಿಸಿ ಎಲ್ಲರನ್ನು ಹರಸಲಿ ಎಂದು ಪ್ರಾರ್ಥಿಸಿದರು.

ಸೇವಾರ್ಥಿಗಳಿಗೆ ಗೌರವಾರ್ಪಣೆ

ಕಟ್ಟೆ ನಿರ್ಮಾಣಕ್ಕೆ ಆರ್ಥಿಕ ರೂಪದಲ್ಲಿ ಸೇವೆ ನೀಡಿದ ಸೇವಾರ್ಥಿಗಳನ್ನು ಒಕ್ಕಲಿಗ ಗೌಡ ಸೇವಾ ಸಂಘದ ಅಧ್ಯಕ್ಷ ಸುಂದರ ಗೌಡ ನಡುಬೈಲು ಮತ್ತು ಸಮಿತಿ ಪದಾಧಿಕಾರಿಗಳು ಸೇರಿಕೊಂಡು ಪ್ರಸಾದ ನೀಡಿ ಶಲ್ಯ ತೊಡಿಸಿ ಗೌರವಿಸಿದರು.

ಗಣ್ಯರ ಉಪಸ್ಥಿತಿ

ಒಕ್ಕಲಿಗ ಗೌಡ ಸೇವಾ ಸಂಘದ ಅಧ್ಯಕ್ಷ ಸುಂದರ ಗೌಡ ನಡುಬೈಲು, ಪ್ರಧಾನ ಕಾರ್ಯದರ್ಶಿ ಡಾ. ಶ್ರೀಧರ್ ಗೌಡ ಪಾಣತ್ತಿಲ, ಸಂಘದ ಸಲಹಾ ಸಮಿತಿ ಅಧ್ಯಕ್ಷರಾಗಿರುವ ಮಾಜಿ ಶಾಸಕ ಸಂಜೀವ ಮಠಂದೂರು, ಸಲಹಾ ಸಮಿತಿ ಉಪಾಧ್ಯಕ್ಷರೂ ಮತ್ತು ಒಕ್ಕಲಿಗ ಸಮುದಾಯ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚಿದಾನಂದ ಬೈಲಾಡಿ, ಒಕ್ಕಲಿಗ ಗೌಡ ಸೇವಾ ಸಂಘದ ಗೌರವಾಧ್ಯಕ್ಷ ವಿಶ್ವನಾಥ ಗೌಡ ಕೆಯ್ಯೂರು, ನಿಕಟಪೂರ್ವ ಅಧ್ಯಕ್ಷ ರವಿ ಮುಂಗ್ಲಿಮನೆ, ಯುವ ಗೌಡ ಸೇವಾ ಸಂಘದ ಅಧ್ಯಕ್ಷ ಪ್ರಶಾಂತ್ ಕೆಮ್ಮಾಯಿ, ಮಹಿಳಾ ಸಂಘದ ಅಧ್ಯಕ್ಷೆ ಕುಸುಮ, ಸಮುದಾಯ ಭವನದ ಉಸ್ತುವಾರಿ ಸಮಿತಿ ಅಧ್ಯಕ್ಷ ಲಿಂಗಪ್ಪ ಗೌಡ ತೆಂಕಿಲ, ಮಹಾಲಿಂಗೇಶ್ವರ ಕಟ್ಟೆ ಸಮಿತಿ ಕೋಶಾಧಿಕಾರಿ ಯತೀಶ್ ದೇವ, ಸದಸ್ಯರಾದ ದಯಾನಂದ ಕೆ.ಎಸ್, ಪುರುಷೋತ್ತಮ ಮುಂಗ್ಲಿಮನೆ, ಅಮರನಾಥ ಗೌಡ ಬಪ್ಪಳಿಗೆ, ಮೀನಾಕ್ಷಿ ಡಿ. ಗೌಡ, ಪ್ರೇಮಾನಂದ, ಶಿವರಾಮ ಮತಾವು, ಶ್ರೀಧರ ಗೌಡ ಕಣಜಾಲು, ವಾರಿಜ ಕೆ., ಮನೋಹರ ಡಿ.ವಿ ಸಹಿತ ಹಿರಿಯರಾದ ಕಿಟ್ಟಣ್ಣ ಗೌಡ ಬಪ್ಪಳಿಗೆ ಹಲವಾರು ಮಂದಿ ಉಪಸ್ಥಿತರಿದ್ದರು.

ಜಿಮ್‌ಗಳಲ್ಲಿ ಲೈಂಗಿಕ ಶೋಷಣೆ, ಲವ್ ಜಿಹಾದ್ | ಹಿಂದೂ ಜನಜಾಗೃತಿ ಸಮಿತಿ ರಣರಾಗಿಣಿ ಶಾಖೆಯಿಂದ ಜಿಲ್ಲಾಧಿಕಾರಿಗೆ ಮನವಿ

ಬಂಧಿತರ ಸಮಗ್ರ ವಿಚಾರಣೆ, ಕಠಿಣ ಕಾನೂನು ಕ್ರಮಕ್ಕೆ ಒತ್ತಾಯ

ಮಂಗಳೂರು: ಹುಬ್ಬಳ್ಳಿ ಜಿಮ್‌ಗಳಲ್ಲಿ ಸಂಘಟಿತ ಲೈಂಗಿಕ ಶೋಷಣೆ, ಲವ್ ಜಿಹಾದ್ ಘಟನೆ ನಡೆದಿದ್ದು, ಈ ಬಗ್ಗೆ ಸೂಕ್ತ ಕಠಿಣ ಕ್ರಮಕ್ಕೆ ಒತ್ತಾಯಿಸಿ ಹಿಂದೂ ಜನಜಾಗೃತಿ ಸಮಿತಿಯ ರಣರಾಗಿಣಿ ಶಾಖೆ ವತಿಯಿಂದ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಲಾಯಿತು.



ಮನವಿಯಲ್ಲಿ ಪ್ರಕರಣಕ್ಕೆ ಸಂಬಂಧಿಸಿ ಸಮೀರ್ ಮುಲ್ಲಾ, ತೈಸೀಮ್ ಮುಲ್ಲಾ ಮತ್ತು ಸಂಬಂಧಿತ ಜಿಮ್ ಜಾಲದ ಕುರಿತು ಸಮಗ್ರ ತನಿಖೆ ನಡೆಸಿ, ಎಲ್ಲಾ ಮೊಬೈಲ್, ಡಿಜಿಟಲ್ ಸಾಧನಗಳನ್ನು ಪರಿಶೀಲಿಸಿ, ಇತರ ಪೀಡಿತರ ಹಾಗೂ ಶಾಹಿನ್ ಗ್ಯಾಂಗ್ ಸಂಪರ್ಕಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕು. ಈ ಪ್ರಕರಣಕ್ಕೆ ವಿಶೇಷ ತನಿಖಾ ದಳವನ್ನು ರಚನೆ ಮಾಡಿ, ಕೋಕಾ, ಪೋಕ್ಸೋ ಕಾಯ್ದೆ, ಅತ್ಯಾಚಾರ, ವಸೂಲಿ, ಐಟಿ ಕಾಯ್ದೆ ಮತ್ತು ಕರ್ನಾಟಕದ ಮತಾಂತರ ವಿರೋಧಿ ಕಾಯ್ದೆಗಳಡಿ ಎಫ್‌ಐಆರ್ ದಾಖಲಿಸಿ, ಆರೋಪಿಗಳನ್ನು ಕಸ್ಟಡಿಗೆ ಪಡೆದು ಫಾಸ್ಟ್ ಟ್ರ್ಯಾಕ್ ಕೋರ್ಟ್‌ನಲ್ಲಿ ವಿಚಾರಣೆ ನಡೆಸಬೇಕು ಎಂದು ಒತ್ತಾಯಿಸಲಾಗಿದೆ.

ಜಿಮ್ ಟ್ರೈನರ್ ಪರಿಶೀಲನೆ, ಸಿಸಿಟಿವಿ ವ್ಯವಸ್ಥೆ

ಸಂಬಂಧಿತ ಜಿಮ್‌ನ್ನು ಸೀಲ್ ಮಾಡಿ, ಹುಬ್ಬಳ್ಳಿ, ಧಾರವಾಡ ಸೇರಿದಂತೆ ರಾಜ್ಯದ ಎಲ್ಲಾ ಜಿಮ್‌ಗಳಲ್ಲಿ ಟ್ರೈನರ್‌ಗಳ ಪರಿಶೀಲನೆ, ಸಿಸಿಟಿವಿ ವ್ಯವಸ್ಥೆ ಮತ್ತು ಮಹಿಳೆಯರಿಗಾಗಿ ಪ್ರತ್ಯೇಕ ವ್ಯವಸ್ಥೆಗಳಿರುವುದನ್ನು ಖಚಿತಪಡಿಸಬೇಕು ಎಂದು ಒತ್ತಾಯಿಸಲಾಗಿದೆ.

ಮಹಿಳಾ ಆಯೋಗ ಮಧ್ಯ ಪ್ರವೇಶ ಮಾಡಲಿ

ರಾಜ್ಯ ಮಹಿಳಾ ಆಯೋಗವು ಕೂಡಲೇ ಮಧ್ಯ ಪ್ರವೇಶ ಮಾಡಿ, ಪ್ರಕರಣದ ತನಿಖೆ ಮಾಡಬೇಕು. ಉತ್ತರ ಪ್ರದೇಶದಲ್ಲಿ ಕೈಗೊಂಡಿರುವಂತೆ ಶೂನ್ಯ ಸಹಿಷ್ಣುತೆ ನೀತಿಯನ್ನು ಅನುಸರಿಸಿ, ಇಂತಹ ಘಟನೆಗಳು ಮರುಕಳಿಸದಂತೆ ಕಠಿಣ ಕ್ರಮ ಕೈಗೊಳ್ಳಬೇಕು. ಸಂತ್ರಸ್ತ ಮಹಿಳೆಯ ಗೌಪ್ಯತೆ ಕಾಪಾಡಿ, ಆಕೆಗೆ ಸರಕ್ಷತೆಯನ್ನು ನೀಡಬೇಕು. ಆಕೆಗೆ ಸಂಬಂಧಿಸಿದ ವಿಡಿಯೋ ಎಲ್ಲಿಯೂ ಬಿಡುಗಡೆ ಆಗದಂತೆ ನೋಡಿಕೊಳ್ಳಬೇಕು ಎಂದು ಕೂಡಾ ನೀಡಿರುವ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಮಹಿಳಾ ವಿಭಾಗಗಳಿಗೆ ಮಹಿಳಾ ತರಬೇತುದಾರೆ

ಎಲ್ಲಾ ಜಿಮ್ ಸಿಬ್ಬಂದಿಗೆ ಪೊಲೀಸ್ ಇಲಾಖೆಯಿಂದ ವೆರಿಫಿಕೇಶನ್ ಕಡ್ಡಾಯಗೊಳಿಸಬೇಕು. ಜಿಮ್‌ಗಳಲ್ಲಿ ಮಹಿಳಾ ವಿಭಾಗಗಳಿಗೆ ಮಹಿಳಾ ತರಬೇತುದಾರರನ್ನು ನೇಮಕ ಮಾಡಬೇಕು ಹಾಗೂ ಸಾರ್ವಜನಿಕ ಜಾಗೃತಿ ಅಭಿಯಾನಗಳನ್ನು ನಡೆಸಬೇಕು ಎಂದು ಕೂಡಾ ಮನವಿಯಲ್ಲಿ ಒತ್ತಾಯಿಸಲಾಗಿದೆ.

ವಿವಿಧ ವಿಭಾಗ ಮುಖಂಡರುಗಳ ನಿಯೋಗ

ಅಯ್ಯಪ್ಪ ಸೇವಾ ಸಮಾಜಂನ ಕಾತ್ಯಾಯಿನಿ ರಾವ್, ಗಣೇಶ್, ಹ್ಯೂಮನ್ ರೈಟ್ಸ್ ವಿಭಾಗದ ಗೀತಾ ಶೆಟ್ಟಿ, ರಾಷ್ಟ್ರ ಭಕ್ತ ಅಭಿವಕ್ತ ಸಮಿತಿಯ ವಕೀಲರಾದ ಸುಮಂಗಲಾ, ತೀರ್ಥೇಶ್, ವಿಜಯಶ್ರೀ, ರಣರಾಗಿಣಿಯ ಪವಿತ್ರಾ ಕುಡ್ವ, ಜ್ಯೋತಿ, ಸುಮನಾ ಮಾತೃಮಂಡಳಿಯ ಲಲಿತ ಉಪಾಧ್ಯಾಯ, ಮಂಗಳ ಜೋಶಿ, ಬ್ರೀಥಿಂಗ್ ಹಿಸ್ಟ್ರಿಯ ಚೇತನ ಉಪಾಧ್ಯಾಯ, ಹಿಂದೂ ಸೇವಾ ಸಮಿತಿಯ ಯೋಗೀಶ್ ರೈ, ಸ್ವಯಂಸೇವಕರಾದ ರಾಮನಾಥ್, ಸತೀಶ್, ಸೂರ್ಯ, ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯ ಸುರೇಂದ್ರ ಜಪ್ಪಿನಮೊಗರು, ಹಿಂದೂ ಜನಜಾಗೃತಿ ಸಮಿತಿಯ ವಿಜಯ್ ಕುಮಾರ್, ಹಿಂದೂ ಸಭಾದ ಲೋಹಿತ್ ಸುವರ್ಣ, ಲೋಕೇಶ್ ಕುತ್ತಾರ್, ಧರ್ಮಾಭಿಮಾನಿಗಳಾದ ಜಯಪ್ರಕಾಶ್, ಗಿರಿಧರ್ ಪರ್ಜಿಲ, ಶ್ರೀಪತಿ ಕದ್ರಿ, ಚಂದ್ರಕಾಂತ್ ವಾಮಂಜೂರು ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಸರಕಾರ

ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (ರಿ)

ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಪಿಡಬ್ಲ್ಯುಡಿ ಬಿಲ್ಡಿಂಗ್, ಆರ್.ಟಿ.ಓ. ಕಛೇರಿಯ ಹತ್ತಿರ, ದ.ಕ. ಮಂಗಳೂರು. ಇಮೇಲ್: dpdodakshinakannada@gmail.com ಫೋನ್ ನಂಬ್ರ: 0824-2424501

ನಂ. DPMU/DK/BPHU /15th FC/94/2025-26/Call-3 ದಿನಾಂಕ: 15.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ-3ನೇ ಕರೆ

ದಕ್ಷಿಣ ಕನ್ನಡ ಜಿಲ್ಲೆಯ 15ನೇ ಹಣಕಾಸು ಯೋಜನೆಯಡಿ ಬಂಟ್ವಾಳ ಮತ್ತು ಪುತ್ತೂರು ತಾಲೂಕು ಆಸ್ಪತ್ರೆಯ Block Public Health Unit(BPHU)ಗಳಿಗೆ ಪೀಠೋಪಕರಣಗಳನ್ನು ಪೂರೈಸಿ ಸ್ಥಾಪಿಸಲು ಹಾಗೂ ಸುಳ್ಯ,ಬಂಟ್ವಾಳ ಮತ್ತು ಬೆಳ್ತಂಗಡಿ ತಾಲೂಕು ಆಸ್ಪತ್ರೆಗಳಲ್ಲಿ Dumb Waiter Lift ಪೂರೈಸಿ ಸ್ಥಾಪಿಸಲು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಎರಡು ಟೆಂಡರ್ ಡಾಕ್ಯೂಮೆಂಟ್ ಸಿಸ್ಟಂನಲ್ಲಿ ಪ್ರತ್ಯೇಕ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಉಚಿತ ಟೆಂಡರ್ ನಮೂನೆಗಳಿಗಾಗಿ,ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್ ಸೈಟ್ https://kppp.karnataka.gov.in ನಲ್ಲಿ ನೋಡಬಹುದಾಗಿದೆ.

ಆಕ್ಷೇಪಣೆಗಳಿಗೆ ಅಂತಿಮ ದಿನಾಂಕ: 20.04.2026ರ ಸಂಜೆ 4.00 ಘಂಟೆಯವರೆಗೆ, ಟೆಂಡರ್ ಅರ್ಜಿ ಹಾಕಲು ಅಂತಿಮ ದಿನಾಂಕ: 22.04.2026ರ ಸಂಜೆ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.04.2026 ಸಂಜೆ 4.30 ಘಂಟೆಯ ನಂತರ.

ಸಹಿ/- ಸದಸ್ಯ ಕಾರ್ಯದರ್ಶಿ
ಜಿಲ್ಲಾ ಆರೋಗ್ಯ ಮತ್ತು ಕು.ಕ. ಸೊಸೈಟಿ
ದ.ಕ. ಮಂಗಳೂರು.

DIPR/DK/MPL/74/26-27

IN THE COURT OF DISTRICT JUDGE AT MADIKERI, KODAGU
R.A.No:05/2025

Appellant:
1. Mr.Chenapanda K.Doddaiah
Aged 68 years,
S/o Late Mr.Kalappa,
R/o Nidavathu Village and post,
Madikeri Taluk, Kodagu.
2. Mr.Chenapanda K. Ponnappa
Aged 66 years,
S/o Late Mr.Kalappa,
R/o Nidavathu Village and post,
Madikeri Taluk, Kodagu.

V/s

Respondents :
M/s Deep Valley Home stay
a registered Partnership Firm registered before the registrar of Firms, Mangalore a firm No:DKM-F63-2015-16 dated 28.5.2015 having its principle place of business at D/No:8-138/27, situated in ground floor of Padavu Village, Mangalore.
By its partners and others.

Respondent No:2(a):
Smt. Veena, aged 50 years
W/o Dharmeshwar V Shriyan
R/o D/No:8-138/27, Plot No:16,
Mithila U. Srinivas Mallya
Nagar Bikarnakatta,
Mangalore 575 005

COURT NOTICE

Petitioner has filed this regular appeal challenging the judgment and decree passed treal by the court in O.S.No:29/2017. The case is posted for the appearance of respondent No:2 (a) on **06/06/2026** on the day fixed you the respondent No:2 (a) have to appear to the court either personally or through duly appointed advocate failing you will be placed Ex-Parte and the matter will be heard and determined Exparte.

(By this court)
Sd/- Chief Administrative Officer
PRL. District & Sessions Court
Kodagu, Madikeri
Sd/- Sumanth Palaksha
Advocate, Madikeri

IN THE COURT OF THE PRINCIPAL CIVIL JUDGE (JR. DN) AT BANTWAL, D.K.
O.S. No.: 198/2022

Between:
MRS. PREMA
W/o Kamalaksha Bangera,
D/o Late Manju Moolya,
aged about 53 years,
residing at #13-279,
Erimaru House, Bantwal Muda Village. Jodumarga Post,
Bantwal Taluk, D.K.
...PLAINTIFF

AND

MRS. LAKSHMI & OTHERS
...DEFENDANTS

NOTICE

To,
MRS. BABY
D/o Late Manju Moolya,
Aged about 55 years,
...Defendant No.3
MRS. HEMAVATHI
D/o Late Manju Moolya,
Aged about 53 years
...Defendant No.4
MRS. KESHAVATHI
D/o Late Manju Moolya,
Aged about 51 years
...Defendant No.5
MR. UMESHA
S/o Late Manju Moolya,
Aged about 47 years
...Defendant No.6
MR. KRISHNAPPA
S/o Late Manju Moolya
Aged about 45 years
...Defendant No.7
MR. YASHODHARA
S/o Late Manju Moolya,
Aged about 43 years,
...Defendant No.8
MR. RAGHAVENDRA
S/o Late Manju Moolya,
Aged about 41 years,
...Defendant No.9
MRS. SUJAYA
D/o Late Manju Moolya,
Aged about 39 years,
...Defendant No.10
MR. OBAYYA H/o Late Mohini
Aged about 65 years,
...Defendant No.11
NALINI D/o Late Mohini,
Aged about 25 years,
...Defendant No.12
NAVEENA S/o Late Mohini,
Aged about 23 years,
...Defendant No.13
NAGESHA S/o Late Mohini,
Aged about 21 years,
...Defendant No.14

All are R/at native of Padil House, Thenkakajekaru Village & Post, Bantwal Taluk, D.K.

Take notice that the suit is one for partition of family property where in Physical division in the suit schedule properties by metes and bounds to the extent of 4/48th undivided share of the Plaintiff.

By causing division in the properties by metes and bounds by way of succession to the properties in O.S. No. 198/2022 before the Court of Principal civil judge & JMFC Court Bantwal under section 26 order VII rule 1 of civil procedure code. Immovable Property Situated at Thenkakajekaru Village of Bantwal Taluk within the Registration Sub-District of Bantwal Taluk,

The Plaintiff seek to direct entry of their names with Defendants 3 to 14 in the suit.

The matter is posted on **25-04-2026 at 11.00 A.M.** before this Court.

You are hereby called upon to appear in person or through counsel, failing which the matter will be heard and decided exparte.

Given under my hand and seal of this Hon'ble Court, this day of 10th day April 2026.

(BY ORDER OF THE COURT)
Sd/- Chief ministerial Officer
Court of Prl. Civil Judge
& JMFC Bantwal, D.K.
Sd/- Arun Roshan D'Souza N.
Advocate for Plaintiffs

ಪುತ್ತೂರು ಮಾರುಕಟ್ಟೆ ಧಾರಣೆ

15-04-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	445 - 485
ಚೋಲ್ ಅಡಿಕೆ	530 - 555
ಡಬಲ್ ಚೋಲ್	530 - 555
ಹೊಸ ಪಟೋರ	350 - 400
ಹಳೆ ಪಟೋರ	375 - 405
ಹೊಸ ಉಳ್ಳಿ	120 - 290
ಹಳೆ ಉಳ್ಳಿ	110 - 290
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	235 - 265
ಹಳೆ ಕರಿಗೋಟು	235 - 265
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 310

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 685

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	226.00
ಆರ್‌ಎಸ್‌ಎಸ್ 2	196.00
ಸ್ಕ್ರಾಪ್ 1	137.50
ಸ್ಕ್ರಾಪ್ 2	125.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮೀ (ನಂ.DL-48) ಡ್ರಾ ಏಪ್ರಿಲ್ 15ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DN 889830 (THIRUR)

Consolation Prize Rs.5,000/-
DO 889830 DP 889830 DR 889830 DS 889830
DT 889830 DU 889830 DV 889830 DW 889830
DX 889830 DY 889830 DZ 889830

2nd Prize Rs.30,00,000/- [30 Lakhs]
DU 984582 (KARUNAGAPPALLY)

3rd Prize Rs.5,00,000/- [5 Lakhs]
DX 197558 (MALAPPURAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0541 0783 2791 2927 3349 3467 3551 3892 3928 4443 5048 5479 7284 7700 8238 8254 8389 8825 8932

5th Prize Rs.2,000/-
1989 4121 5872 6827 6936 8197

6th Prize Rs.1,000/-
0061 1006 1310 1707 1909 3304 4278 4888 4899 5096 5799 6146 6373 7271 7877 7970 8229 8509 8573 8888 8945 9198 9531 9633 9645

7th Prize Rs.500/-
0071 0091 0255 0820 0873 0940 1156 1381 1398 1892 1994 2098 2170 2380 2603 2695 2742 2853 3210 3509 3624 3650 3741 4100 4106 4152 4203 4231 4234 4413 4509 4624 4696 4782 4864 4874 4952 5218 5241 5428 5435 5443 5688 5848 6026 6103 6366 6381 6544 6588 6768 6787 7038 7080 7150 7218 7393 7424 7438 7484 7503 7567 7857 8336 8377 8783 8806 9103 9105 9286 9400 9497 9754 9780 9798 9847

8th Prize Rs.200/-
0119 0215 0244 0278 0416 0768 0901 1115 1345 1423 1525 1579 1602 1869 2000 2063 2109 2247 2355 2563 2621 2648 2955 3059 3083 3232 3370 3407 3578 3668 3714 3792 3945 4090 4261 4337 4557 4594 4960 5053 5148 5180 5229 5404 5453 5534 5711 5715 5720 5782 5793 5867 5925 5935 5965 5985 6068 6106 6250 6286 6556 6720 6979 6997 7060 7061 7087 7092 7154 7219 7226 7266 7290 7382 7448 7522 7538 7618 7625 7708 7784 7811 7896 8143 8427 8486 8694 8768 8882 8893 8983 9020 9478 9767 9834 9886

9th Prize Rs.100/-
0019 0040 0099 0168 0364 0396 0495 0505 0517 0521 0590 0646 1056 1089 1223 1259 1269 1279 1424 1467 1787 1879 1931 2097 2129 2242 2358 2432 2477 2497 2504 2680 2689 2803 2863 2941 3085 3442 3452 3591 3692 3710 3736 3816 3834 3843 3882 3930 3952 3953 3980 4076 4120 4142 4274 4286 4344 4374 4408 4451 4500 4609 4701 4783 4804 4857 4880 4898 4940 5136 5279 5348 5386 5419 5489 5563 5572 5622 5631 5682 5813 6072 6189 6237 6240 6315 6329 6349 6386 6387 6493 6536 6557 6568 6657 6779 6844 6847 6929 6990 7178 7201 7233 7273 7422 7520 7549 7575 7670 7720 7799 7851 7924 7932 7971 8122 8130 8216 8226 8303 8352 8434 8584 8650 8785 8793 8851 9178 9210 9224 9272 9311 9324 9742 9782 9812 9829 9968

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ
BELAGAVI URBAN DEVELOPMENT AUTHORITY, BELAGAVI.

ಫ್ಯಾಕ್ಸ್/ದೂರವಾಣಿ: 0831-2470342, 2470257 E-mail: belagavibuda@gmail.com

No BUDA/PWD/E-TENDER/2026-27/93 ದಿನಾಂಕ: 15-04-2026

ಟೆಂಡರ ಪ್ರಕಟಣೆ (e-procurement ಮುಖಾಂತರ)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳಲ್ಲಿನ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಅನ್ವಯ ಇ-ಪ್ರೋಕ್ಯೂರಮೆಂಟ-2 ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಆಸಕ್ತ ಮತ್ತು ಅರ್ಹ ಗುತ್ತಿಗೆದಾರರು ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (**ದೂರವಾಣಿ ಸಂಖ್ಯೆ: 0831-2470342**) ಮತ್ತುಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: **kppp.karanataka.gov.in** ರಲ್ಲಿ ಪಡೆಯಬಹುದು.

Sl No	Name of Work	Indent No	EMD Amt in Rupees
1	E Auction for the deposit BUDA Fund for Maximum one year Period (Around 60.00 Crore) only Public sector Banks should participate	BGMUDA/2026-27/ AUCTION146	2,10,000/-

ಟೆಂಡರ್ ಫಾರ್ಮ ಬೆಲೆ ಇ-ಪ್ರೋಕ್ಯೂರಮೆಂಟ್‌ದಲ್ಲಿದ್ದಂತೆ:
1) ಆಕ್ಷನ್ ಕ್ವಾರೀಸ್ ಸಲ್ಲಿಸಲು ಕೊನೆಯ ದಿನಾಂಕ: 08-05-2026 ರಂದು ಸಾಯಂಕಾಲ 4.30 ಗಂಟೆವರೆಗೆ
2) ಆಕ್ಷನ್‌ನಲ್ಲಿ ಭಾಗವಹಿಸುವ ಕೊನೆಯ ದಿನಾಂಕ: 14.05.2026 ರಂದು ಸಾಯಂಕಾಲ 4.30 ಗಂಟೆವರೆಗೆ
3) ಆಕ್ಷನ್ ಪ್ರಾರಂಭ ದಿನಾಂಕ: 15.05.2026 ರಂದು ಮುಂಜಾನೆ 10.00 ಗಂಟೆಗೆ.
4) ಆಕ್ಷನ್ ಮುಕ್ತಾಯ ದಿನಾಂಕ: 16.05.2026 ರಂದು ಸಾಯಂಕಾಲ 04.00 ಗಂಟೆಗೆ.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು,
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ

ವಾ.ಸಾ.ಇ./ಬೆಳಗಾವಿ/102/2026-27/ದೇಶಪಾಂಡೆಪಬ್ಲಿಸಿಟಿ

ಸಹಿ/-
ಆಯುಕ್ತರು,
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಬೆಳಗಾವಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-1/2026-27/169 ದಿನಾಂಕ:13-04-2026.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಮತ್ತು ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https://kppp.karnataka.gov.in/**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2026-27/BD/WORK_INDENT35375	25.00
2)	PWD/2025-26/RD/WORK_INDENT35251	500.00
3)	PWD/2026-27/RD/WORK_INDENT35594	500.00
4)	PWD/2026-27/RD/WORK_INDENT35598	300.00
5)	PWD/2026-27/BD/WORK_INDENT35590	310.00
6)	PWD/2025-26/BR/WORK_INDENT34347	600.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **16-04-2026 ರಂದು 12.00 ಗಂಟೆಯ ವರೆಗೆ.** ಆ)ಕೆಪಿಪಿ-ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **21-04-2026 ರಂದು 16.00 ಗಂಟೆಯ ವರೆಗೆ.** ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **22-04-2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/54

ಸೇಂಟ್ ಆನ್ಸ್ ಪ್ರೌಢಶಾಲೆ, ಪಾಲಹಳ್ಳಿ, ಶ್ರೀರಂಗಪಟ್ಟಣ (ತಾ) ಮಂಡ್ಯ ಜಿಲ್ಲೆ

ಸೇಂಟ್ ಆನ್ಸ್ ಎಜುಕೇಷನ್ ಸಂಸ್ಥೆ, ಮಿಲ್ಲರ್ ರಸ್ತೆ, ಬೆಂಗಳೂರು ಇವರ ವತಿಯಿಂದ ನಡೆಸುತ್ತಿರುವ ಸೇಂಟ್ ಆನ್ಸ್ ಪ್ರೌಢಶಾಲೆ, ಪಾಲಹಳ್ಳಿ ಈ ಶಾಲೆಯಲ್ಲಿ ಖಾಲಿಯಾಗಿರುವ **"ಸಹ ಶಿಕ್ಷಕರು"** ಕನ್ನಡ ಹುದ್ದೆ ತುಂಬಲು ನಿರ್ದೇಶಕರು ಪ್ರೌಢಶಿಕ್ಷಣ ಶಾಲಾ ಶಿಕ್ಷಣ ಸಂಸ್ಥೆ ಬೆಂಗಳೂರುರವರ ಆದೇಶ ಸಂಖ್ಯೆ DPI, CPIO ಸಿ 8 (2):Fov 4/E 201/3883/ ಖಾಹುಭ ಅನು/77)2025-26 ದಿನಾಂಕ 12.04.2026ರ ಅನ್ವಯ ಈ ಕೆಳಗಿನಂತೆ ಹುದ್ದೆ ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಹುದ್ದೆಯ ವಿವರ ಅರ್ಹತೆ	ಅನುಮತಿ ನೀಡಿದ ವಿಷಯ	ಮೀಸಲಾತಿ
ಸಹ ಶಿಕ್ಷಕರು ಬಿ.ಎ., ಬಿ.ಇಡಿ	ಸಹ ಶಿಕ್ಷಕರು ಕನ್ನಡ ಬಿ.ಎ., ಬಿ.ಇಡಿ	ಮತೀಯ ಅಲ್ಪಸಂಖ್ಯಾತ ಶಾಲೆಯಾಗಿದ್ದು ಮೀಸಲಾತಿ ಅನ್ವಯಿಸುವುದಿಲ್ಲ

ಈ ಜಾಹೀರಾತು ಪ್ರಕಟಣೆಯಾದ **21 ದಿನಗಳೊಳಗಾಗಿ** ಅರ್ಹ ಅಭ್ಯರ್ಥಿಗಳು ಕೈಬರಹ ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ.ಯಿಂದ ಬಿ.ಎಡ್ ಅಂಕಪಟ್ಟಿಗಳು. ಪಾಸಿಂಗ್ ಸರ್ಟಿಫಿಕೇಟ್ ಹಾಗೂ ಜಾತಿ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಎಲ್ಲಾ ದಾಖಲೆಗಳೊಂದಿಗೆ **ಕರೆಸ್ಪಾಂಡೆಂಟ್. ಪಾಲಹಳ್ಳಿ ಸೇಂಟ್ ಆನ್ಸ್ ಪ್ರೌಢಶಾಲೆ** ಈ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಯ ಒಂದು ಪ್ರತಿಯನ್ನು **ಮಾನ್ಯ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಮಂಡ್ಯ** ಇವರಿಗೆ ನೋಂದಾಯಿತ ಅಂಚೆ ಮೂಲಕ ಕಳಿಸತಕ್ಕದ್ದು. ಅಪೂರ್ಣ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು.

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತುಕುಟುಂಬ ಕಲ್ಯಾಣ ಇಲಾಖೆ
ಜಿಲ್ಲಾ ಅಂಧತ್ವ ನಿವಾರಣಾಧಿಕಾರಿಗಳ ಕಛೇರಿ ವಿಜಯನಗರ

ಜಿಲ್ಲೆ,ಹೊಸಪೇಟೆ-583201 ದೂರವಾಣಿ ಸಂಖ್ಯೆ : 9449842086
ಈಮೇಲ್:dlovijayanagara@gmail.com

ಸಂಖ್ಯೆ:ಜಿ.ಅ.ನಿ.ಕಾ /05/2026-27 ದಿನಾಂಕ: 10.04.2026

ತಿದ್ದುಪಡಿ ಟೆಂಡರ್ ಪ್ರಕಟಣೆ

ದಿನಾಂಕ 2.04.2026 ರಂದು ಇದೇ ದಿನಪತ್ರಿಕೆಯಲ್ಲಿ ಹೊರಡಿಸಲಾದ ಟೆಂಡರ್ ಅಧಿಸೂಚನೆ **(DHFWS/2025-26/PREQUAL_TENDER_NUMBER_90)** ರ ವೇಳಾಪಟ್ಟಿಯನ್ನು, ಈ ಕೆಳಗೆ ನಮೂದಿಸಿದಂತೆ ಪರಿಷ್ಕೃತಗೊಳಿಸಲಾಗಿದೆ.

ಟೆಂಡರ್ ಸಲ್ಲಿಸಲು ನಿಗದಿಪಡಿಸಿರುವ ಪ್ರಸ್ತುತ ವೇಳಾಪಟ್ಟಿ: ದಿನಾಂಕ:31-03-2026 ರಿಂದ ದಿನಾಂಕ:15-04-2026 ರ ಸಮಯ ಸಾಯಂಕಾಲ 05:00 ಗಂಟೆಯವರೆಗೆ
ಟೆಂಡರ್ ಸಲ್ಲಿಸಲು ನಿಗದಿಪಡಿಸಿರುವ ಪರಿಷ್ಕೃತ ವೇಳಾಪಟ್ಟಿ: ದಿನಾಂಕ:08-04-2026 ರಿಂದ ದಿನಾಂಕ:24-04-2026 ರ ಸಮಯ ಸಾಯಂಕಾಲ 05:00 ಗಂಟೆಯವರೆಗೆ
ಷರಾ: ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 9449842086 ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮುದ್ದಾಂ ಪಡೆಯಬಹುದಾಗಿದೆ.

ಸಹಿ/-ಜಿಲ್ಲಾ ಅಂಧತ್ವ ನಿವಾರಣಾ ಅಧಿಕಾರಿಗಳು, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/23

ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಚಿತ್ರದುರ್ಗ ಪ್ರಾದೇಶಿಕ ಉಪ-ವಿಭಾಗ, ಚಿತ್ರದುರ್ಗ-577501

ದೂ. ಸಂಖ್ಯೆ: 08194-230402 ಇಮೇಲ್:acfchitradurga@gmail.com

ಸಂಖ್ಯೆ: ಎ2-ಬಿಜಿಟಿ-ಟೆಂಡರ್-ಸಿಆರ್-01/2026-27 ದಿನಾಂಕ: 09.04.2026

ಟೆಂಡರ್ ಪ್ರಕಟಣೆ

ಚಿತ್ರದುರ್ಗ ವಿಭಾಗದಲ್ಲಿ "ಕೆಎಂಇಆರ್‌ಸಿ" ಯೋಜನೆಯಡಿಯಲ್ಲಿ 2026-27 ನೇ ಸಾಲಿನಲ್ಲಿ ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ರೂ. 1400.977 ಲಕ್ಷಗಳ ಮೊತ್ತದ ಒಟ್ಟು 70 ಯೂನಿಟ್‌ಗಳಿಗೆ ದಿನಾಂಕ: 09.04.2026 ರಿಂದ 24.04.2026 ರವರೆಗೆ ನಿಗಧಿಪಡಿಸಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24.04.2026 ರಂದು 16:00 ಗಂಟೆಗೆ [ಸಂಜೆ: 04:00 ಗಂಟೆ] ನಿಗಧಿಪಡಿಸಲಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: 25.04.2026 ರಂದು ಸಂಜೆ 04:00 ಗಂಟೆಯ ನಂತರ ತೆರೆಯಲಾಗುತ್ತದೆ. ಕಾಮಗಾರಿಗಳ ಹೆಚ್ಚಿನ ವಿವರಗಳಿಗೆ: https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

RO.No.31:DIPR/CTA/KSMCA/2026-27

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು,
ಚಿತ್ರದುರ್ಗ ಉಪ-ವಿಭಾಗ, ಚಿತ್ರದುರ್ಗ

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ

ದೂರವಾಣಿ: 08384-226381 ಇ-ಮೇಲ್: ee_zpedsirsi@yahoo.co.in

ಕ್ರ.ಸಂ: ಪಂ.ರಾ.ಇಂ/ವಿಶಿ/ಪಿ.ಬಿ-1/ಟೆಂಡರ್-44/CMIDP/2025-26/37
ದಿನಾಂಕ: 09-04-2026

ಟೆಂಡರ್ ಪ್ರಕಟಣೆ 44/2025-26 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನವಿಕೃತ ನೊಂದಾಯಿತ 2019-20ನೇ ಸಾಲಿನ ನವಿಕೃತ ನೋಂದಾಯಿಸಿದ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ CMIDP ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ http://www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿ ಹೆಸರು: SC Category: (1) RDPR/2026-27/RD/WORK_INDENT25946
ST Category: (2) RDPR/2026-27/BD/WORK_INDENT25915
Others Category: (3) (3) RDPR/2026-27/BD/WORK_INDENT25917 (4) RDPR/2026-27/BD/WORK_INDENT25931 (5) RDPR/2026-27/BD/WORK_INDENT25930 (6) RDPR/2026-27/BR/WORK_INDENT25944 (7) RDPR/2026-27/BD/WORK_INDENT25914
(1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 28-04-2026 ರ ಸಂಜೆ 16.00 ಘಂಟೆವರೆಗೆ (2) ಟೆಂಡರನ್ನು ತೆರೆಯುವ ದಿನಾಂಕ: 29-04-2026 ಸಂಜೆ 16.30 ಘಂಟೆಗೆ (ಸಾಧ್ಯವಾದಲ್ಲಿ) ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟಿನಲ್ಲಿ ಅಥವಾ ಈ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ

DIPR/KWR/KSMCA/47/25-26 dt.15.04.2026

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಗದಗ ವಿಭಾಗ, ಗದಗ

ಸಂಖ್ಯೆ/ವಾಕರಸಾ/ಗವಿ/ಸಂಚಾರ/ವಾಣಿಜ್ಯ:129/26-27 ದಿನಾಂಕ: 13-04-2026

ಇ-ಟೆಂಡರ್ ಪ್ರಕಟಣೆ ಸಂಖ್ಯೆ :05/2026 (ಕೆ.ಪಿ.ಪಿ ಪೋರ್ಟಲ್ ಮೂಲಕ)

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗದಗ ವಿಭಾಗದ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ, ಮತ್ತು ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳಿಗೆ ಹಾಗೂ ಬಸ್ ನಿಲ್ದಾಣಗಳಾದ ನರಗುಂದ, ಕೊಣ್ಣೂರು, ಮುಂಡರಗಿ, ಗಜೇಂದ್ರಗಡ, ನರೇಗಲ್, ಹೊಳೆಆಲೂರ ಬಸ್ ನಿಲ್ದಾಣಗಳಲ್ಲಿರುವ ವಿಶಾಲವಾದ (501 ಚ.ಅ ಮೇಲ್ಪಟ್ಟ ವಿಸ್ತೀರ್ಣದ) ತೆರೆದ ಸ್ಥಳ/ನಿವೇಶನಗಳಲ್ಲಿ ಶಾಪಿಂಗ್ ಕಾಂಪ್ಲೆಕ್ಸ್, ಗೋಡೋನ್, ಸೂಪರ್ ಮಾರ್ಕೇಟ್ ಮತ್ತು ಇತರೆ ಕಾನೂನಾತ್ಮಕ ವ್ಯವಹಾರ ಮಾಡಲು **ಹತ್ತು(10)** ವರ್ಷದ ಅವಧಿಗೆ ಪರವಾನಗಿದಾರರನ್ನು ಲೈಸನ್ಸ್ ಆಧಾರದ ಮೇಲೆ ಆಯ್ಕೆಗೊಳಿಸಲು, (ಕೊಟೇಷನ್) ಇ-ವೇದಿಕೆಯ Karnataka Public Procurement Portal (KPP Portal) ಮೂಲಕ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜಗಳನ್ನು ಇ-ಪ್ರೊಕ್ಯೂರಮೆಂಟ್ ವೆಬ್‌ಸೈಟ್ ವಿಳಾಸ: **"http/www.kppp.karnataka.gov.in/#/portal-home"** ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ನಿಗದಿತ ದಾಖಲಾತಿಗಳೊಂದಿಗೆ **ದಿನಾಂಕ: 05-05-2026 ರಂದು 17:00 ಗಂಟೆಯವರೆಗೆ** ಆನ್‌ಲೈನ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಇ-ಪ್ರೊಕ್ಯೂರಮೆಂಟ್ ಸೆಲ್‌ನಿಂದ DSC(Digital Signature Certificate) ಪಡೆದಿರುವ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. **ದಿನಾಂಕ: 07-05-2026 ರಂದು ಬೆಳಿಗ್ಗೆ 11.00 AM ಗಂಟೆಗೆ** ಟೆಂಡರ್ ತೆರೆಯಲಾಗುವದು. (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ). ಹೆಚ್ಚಿನ ವಿವರಗಳಿಗಾಗಿ ಹೆಲ್ಪಡೆಸ್ಕ್ ಸಂಖ್ಯೆ: **91+8046010000, 8068948777** ನ್ನು ಸಂಪರ್ಕಿಸಿ ಅಥವಾ ವಿಭಾಗೀಯ ಕಚೇರಿ, ವಾ.ಕ.ರ.ಸಾ ಸಂಸ್ಥೆ ಗದಗ ವಿಭಾಗ ಗದಗ ಇವರಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: **7760991802 (ವಿಭಾಗೀಯ ಸಂಚಲನಾಧಿಕಾರಿಗಳು), 9986802447/ 7026047644 (ವಿಷಯ ನಿರ್ವಾಹಕ)** ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಇ-ಟೆಂಡರ್‌ನಲ್ಲಿ ಭಾಗವಹಿಸುವವರು ಇ-ಟೆಂಡರ್ ಪ್ರಕಟಣೆ ಸಂಖ್ಯೆ: 05/2026ರ ಮತ್ತು ಇ-ಟೆಂಡರ್ Document ನಲ್ಲಿ ನಮೂದಿಸಿದ ಷರತ್ತು ಮತ್ತು ನಿಭಂದನೆಗಳಿಗೆ ಭದ್ದರಾಗಿರತಕ್ಕದ್ದು. ಕಾರಣ ನೀಡದೇ ಇ-ಟೆಂಡರ್‌ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಆಯ್ಕೆ ಮಾಡುವ ಅಥವಾ ಇ-ಟೆಂಡರ್ ಪ್ರಕಟಣೆಯನ್ನು ಮುಂದೂಡುವ, ಮಾರ್ಪಾಡು ಮಾಡುವ ಅಥವಾ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

ಸಹಿ/
ವಿಭಾಗೀಯ ನಿಯಂತ್ರಣಾಧಿಕಾರಿ,
ವಾ.ಕ.ರ.ಸಾ ಸಂಸ್ಥೆ: ಗದಗ ವಿಭಾಗ,
ಗದಗ

ವಾ.ಸಾ.ಇ./ಗದಗ/23/2026-27/ದೇಶಪಾಂಡೆಪಬ್ಲಿಸಿಟಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ನೋಂದಾಯಿತ ಕಛೇರಿ: ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560001
ದೂರವಾಣಿ ಸಂಖ್ಯೆ: 080-22289966/22256688 ಫ್ಯಾಕ್ಸ್: 080-22264477
ಇ-ಮೇಲ್: mail@vjnl.in, ವೆಬ್‌ಸೈಟ್: www.vjnl.in CIN No: U41000KA2016SGC097260

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ-572132
ಫೋನ್ ನಂ.: 08137- 282112 ಇ-ಮೇಲ್:eeyetmadhugiri4@gmail.com

ಕ್ರ.ಸಂ: ಕಾಂ/ವಿಜನಿನಿ/ಎಹೊಯೋ/ಮ/ವಿ.04/ಟೆ.ಅ-01/2026-27 ದಿನಾಂಕ: 08.04.2026

ಟೆಂಡರ್ ಪ್ರಕಟಣೆ: (ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನಲ್ಲಿ ಮಧುಗಿರಿ ವಿಭಾಗ ವ್ಯಾಪ್ತಿಯಲ್ಲಿ **1) Construction Of Rcc Box Under NH-48 (Old NH-4) By Box Pushing Technique At Ch: 26+895 Km (NH LHS Ch: 40+395 Km & NH RHS Ch: 40+425 Km) To Provide Crossing Of Gravity Main Of TG Halli And Ramanagara Gravity Feeder Under Yettinahole Project (Indent No. VJNL/2025-26/BR/WORK_INDENT493)** ಮತ್ತು **2) Construction Of Rcc Box Under NH-75 (Old NH-48) By Box Pushing Technique At Ch:40+762 Km (NH Ch: 35+65 Km) To Provide Crossing Of Gravity Main Of TG Halli And Ramanagara Gravity Feeder Under Yettinahole Project. (Indent No. VJNL/2025-26/BR/WORK_INDENT495)** ಒಟ್ಟು 02 ಕಾಮಗಾರಿಗಳ ರೂ.490.69 ಲಕ್ಷ ಮತ್ತು ರೂ.454.42 ಲಕ್ಷದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಸದರಿ ಕಾಮಗಾರಿಗಳಿಗೆ Percentage Tender ಮೂಲಕ ಅರ್ಹ ಬಿಡ್ಡುದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನ **https://kppp.karnataka.gov.in** ವೆಬ್‌ಸೈಟ್ ಮೂಲಕ ದಿನಾಂಕ: 10.04.2026 ರಿಂದ ದಿನಾಂಕ: 12.05.2026 ರ ಸಂಜೆ 5:00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಬಿಡ್ಡುದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ **ದಿನಾಂಕ: 30.04.2026 ರ ಸಂಜೆ 3:00 ಗಂಟೆಯವರೆಗೆ** ಸಂಪರ್ಕಿಸಬಹುದು ಹಾಗೂ ಸ್ವೀಕೃತ ಟೆಂಡರ್‌ಗಳನ್ನು ಕೆ.ಪಿ.ಪಿ-ಪೋರ್ಟಲ್‌ನಲ್ಲಿ **ದಿನಾಂಕ:14.05.2026 ರಂದು ಬೆಳಗ್ಗೆ 11:00 ಗಂಟೆಗೆ** ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ. 04 ಮಧುಗಿರಿ ರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ವಿ.ಜ.ನಿ.ನಿ, ಎತ್ತಿನಹೊಳೆ ಯೋಜನಾ ವಿಭಾಗ-04
ಮಧುಗಿರಿ.

DIPR/TUM/RO-11/26-27/Oysters

ಮಾಲೂರು ನಗರ ಯೋಜನಾ ಪ್ರಾಧಿಕಾರ, ಮಾಲೂರು

ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು-563 130, ಕೋಲಾರ ಜಿಲ್ಲೆ, ಕಛೇರಿ ದೂರವಾಣಿ ಸಂಖ್ಯೆ: 08151-299920,
Web Site:www.malur.tpa.gov.in, Email:ms.malur.planning.authority@gmail.com

ಸಂಖ್ಯೆ:ಮಾಯೋಪ್ರಾ/ಭೂ.ಬ/2025-26/10 ದಿನಾಂಕ: 04.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ/ಗು	ಅನುಮೋದಿತ ಮಹಾ ಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪ ಯೋಗ	ಷರಾ
1.	ಪ್ರದೀಪ್ ಕುಮಾರ್.ಆರ್.ಹೆಚ್	ಮಾಲೂರು	ಕಸಬಾ	ಚಿಕ್ಕಕಡತೂರು	72/4	0-24ಗು	ಕೃಷಿ	ವಾಣಿಜ್ಯ	-
2.		ಮಾಲೂರು	ಕಸಬಾ	ಚಿಕ್ಕಕಡತೂರು	72/8	0-17ಗು	ಕೃಷಿ	ವಾಣಿಜ್ಯ	-
3.		ಮಾಲೂರು	ಕಸಬಾ	ಚಿಕ್ಕಕಡತೂರು	72/9	0-16ಗು	ಕೃಷಿ	ವಾಣಿಜ್ಯ	-
4.		ಮಾಲೂರು	ಕಸಬಾ	ಚಿಕ್ಕಕಡತೂರು	72/11	0-23ಗು	ಕೃಷಿ	ವಾಣಿಜ್ಯ	-

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿ ಪಡಿಸುವುದರಿಂದ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಸೃಷ್ಠಿಯಾಗುತ್ತದೆ. ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಿದಂತಾಗುತ್ತದೆ. ಇದರಿಂದ ನಗರ ಪ್ರದೇಶದ ಸಮಗ್ರ ಅಭಿವೃದ್ಧಿ ಹೊಂದುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಸದಸ್ಯ ಕಾರ್ಯದರ್ಶಿ
ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:30/ಕೆಎಸ್‌ಎಂಸಿಎ/2026-27

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಜಾತ್ರೋತ್ಸವ ನಡುವೆಯೇ ತುರ್ತು ಕಾರ್ಯಾಚರಣೆ

ಭಕ್ತರ ಅನುಕೂಲಕ್ಕೆ ದೇವಳ ಪಕ್ಕದ ಕಟ್ಟಡ ತೆರವು

ಪುತ್ತೂರು: ಪುತ್ತೂರು ಶ್ರೀ ಮಹಾಲಿಂಗೇಶ್ವರ ಜಾತ್ರೋತ್ಸವ ನಡೆಯುತ್ತಿರುವ ಮಧ್ಯೆಯೇ, ಮಂಗಳವಾರ ಮಧ್ಯರಾತ್ರಿ ದೇವಳದ ಅನತಿ ದೂರದಲ್ಲಿ ಹಠಾತ್ ಕಾರ್ಯಾಚರಣೆಯೊಂದು ನಡೆದಿದೆ.

ದೇವಸ್ಥಾನದ ಪಶ್ಚಿಮ ದ್ವಾರದ ಎದುರು, ಮುಖ್ಯರಸ್ತೆಯ ಇನ್ನೊಂದು ಭಾಗದಲ್ಲಿದ್ದ ಹಳೆಯ ಕಟ್ಟಡವೊಂದನ್ನು ಶಾಸಕ ಅಶೋಕ್ ರೈ ಮತ್ತು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ಅವರ ಮಾರ್ಗದರ್ಶನದಲ್ಲಿ ಕೆಡವಲಾಗಿದೆ. ರಾತ್ರಿಯಿಡೀ ಕಾರ್ಯಾಚರಣೆ ನಡೆದು, ಬುಧವಾರ ಬೆಳಗ್ಗೆ ಉಳಿಕೆ ಕಾಮಗಾರಿ ನಡೆಸಿ ಪೂರ್ಣಪ್ರಮಾಣದ ಸ್ವಚ್ಛತೆ ನಡೆಸಲಾಗಿದೆ.

ಕಿರುವಾಳು ಬರುವ ಜಾಗ

ಪ್ರತೀ ವರ್ಷ ಪುತ್ತೂರು ಜಾತ್ರೋತ್ಸವ ಸಂದರ್ಭ ಏ.16ರಂದು ರಾತ್ರಿ ಬಲ್ನಾಡಿನಿಂದ ಉಳ್ಳಾಲ್ತಿ- ದಂಡನಾಯಕ ದೈವಗಳ ಕಿರುವಾಳು ಭಂಡಾರ ಸಾವಿರಾರು ಜನರ ಮೆರವಣಿಗೆಯೊಂದಿಗೆ, ಸೂಟೆಯ ಬೆಳಕಿನಲ್ಲಿ ಬರುವುದು ವಾಡಿಕೆ. ಕಿರುವಾಳು ಭಂಡಾರ ದೇವಸ್ಥಾನಕ್ಕೆ ಪ್ರವೇಶಿಸುವ ಮುನ್ನ ಪುಷ್ಕರಿಣಿಯ ಎದುರು ಭಾಗದ ಹಳೆಯ ಕಟ್ಟಡದ



ಹಿಂಭಾಗದಲ್ಲಿರುವ ಬಂಗೇರ್ ಕಾಯರ್ ಕಟ್ಟೆಯಲ್ಲಿ ಉಳ್ಳಾಲ್ತಿ ಭಂಡಾರವಿರುವ ಪಲ್ಲಕ್ಕಿಯನ್ನು ಇರಿಸಿ ಭಕ್ತರಿಂದ ಮಲ್ಲಿಗೆ ಸ್ವೀಕರಿಸಲಾಗುತ್ತದೆ. ಅಲ್ಲಿಂದ ದೇವಳದತ್ತ ಬರುವ ದಾರಿ ಅತ್ಯಂತ ಕಡಿದಾಗಿದ್ದು, ಕಟ್ಟಡವೂ ಹಳೆಯದಾಗಿದೆ. ಸಾವಿರಾರು ಜನ ಈ ಇಕ್ಕಟ್ಟಾದ ಜಾಗದಲ್ಲಿ ಬರುವುದು ಅಪಾಯಕಾರಿಯಾಗಿದೆ ಎಂಬ ದೂರು ದೇವಸ್ಥಾನಕ್ಕೆ ಬಂದಿತ್ತು.

ಈ ಹಿನ್ನೆಲೆಯಲ್ಲಿ ಮಂಗಳವಾರ ಶಾಸಕರು ಸ್ಥಳ ಪರಿಶೀಲನೆ ಮಾಡಿದ್ದರು. ಈ ಸಂದರ್ಭ ಹಳೆಯ ಕಟ್ಟಡದಲ್ಲಿದ್ದ ಅಂಗಡಿಗಳ ಮಾಲೀಕರು ಶಾಸಕರ ಜತೆ ಮಾತುಕತೆ ನಡೆಸಿದರು. ಕೋರ್ಟ್ ತಡೆಯಾಜ್ಞೆಯ ಹಿನ್ನೆಲೆಯಲ್ಲಿ ಒಂದು ಅಂಗಡಿಯನ್ನು ಬಿಟ್ಟು ಉಳಿದುದನ್ನು ತೆರವು ಮಾಡಲು ಶಾಸಕರು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಿಗೆ ಸೂಚನೆ ನೀಡಿದರು. ಒಂದು ಅಂಗಡಿಯವರಿಗೆ ದೇವಸ್ಥಾನದ ಸಭಾಭವನ ಕಟ್ಟಡದಲ್ಲಿ ಉಚಿತವಾಗಿ ಕೋಣೆ ಕೊಡುವುದಾಗಿ ಶಾಸಕರು ಭರವಸೆ ನೀಡಿದರು. ಉಳ್ಳಾಲ್ತಿ ಕಿರುವಾಳು ಭಂಡಾರ ದೇವಸ್ಥಾನದ ಹಿಂಭಾಗದ ರಸ್ತೆಯನ್ನು ಪ್ರವೇಶಿಸುವ ಜಾಗದಲ್ಲಿ ಹಳೆ ಕಟ್ಟಡವನ್ನು ಮಂಗಳವಾರ ರಾತ್ರಿಯೇ ತೆರವು ಮಾಡುವ ಕಾರ್ಯ ಆರಂಭಿಸಲಾಯಿತು. ಬೆಳಗ್ಗಿನವರೆಗೂ ಕೆಲಸ ಮುಂದುವರಿದಿತ್ತು. ಬಳಿಕ ಎಲ್ಲ ತ್ಯಾಜ್ಯಗಳನ್ನು ತೆರವು ಮಾಡಿ, ಭಂಡಾರ ಪ್ರವೇಶಿಸುವ ಸ್ಥಳದಲ್ಲಿ ವಿಶಾಲ ರಸ್ತೆ ನಿರ್ಮಿಸಲಾಗಿದೆ.

ಬೆಟ್ಟಂಪಾಡಿ ಗ್ರಾಪಂ, ಇರ್ದೆ ಗ್ರಾಮದಲ್ಲಿ ವಿವಿಧ ಕಾಮಗಾರಿಗಳ ಶಿಲಾನ್ಯಾಸ ಹಾಗೂ ಉದ್ಘಾಟನೆ

ಗ್ಯಾರಂಟಿ ಯೋಜನೆಯಿಂದ ಅನುಕೂಲ: ಅಶೋಕ್ ರೈ

ಪುತ್ತೂರು: ದೇಶದಲ್ಲಿ ಅಥವಾ ರಾಜ್ಯದಲ್ಲಿ ಇದುವರೆಗೆ ಆಡಳಿತ ನಡೆಸಿದ ಯಾವುದೇ ಸರಕಾರ ಬಡವರ ಪರ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿಲ್ಲ. 2023ರಲ್ಲಿ ಅಧಿಕಾರಕ್ಕೆ ಬಂದ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅರ್ಹ ಪ್ರತೀ ಕುಟುಂಬಕ್ಕೂ ಪಂಚ ಗ್ಯಾರಂಟಿ ಯೋಜನೆಯನ್ನು ನೀಡಿದೆ. ಇದು ಪ್ರತೀ ಕುಟುಂಬಕ್ಕೂ ಅನುಕೂಲ ಕಲ್ಪಿಸಿದೆ ಎಂದು ಪುತ್ತೂರು ಶಾಸಕ ಅಶೋಕ್ ರೈ ಹೇಳಿದರು.

ಅವರು ಬೆಟ್ಟಂಪಾಡಿ ಗ್ರಾಪಂ ಹಾಗೂ ಇರ್ದೆ ಗ್ರಾಮದಲ್ಲಿ ವಿವಿಧ ಕಾಮಗಾರಿಗಳ ಶಿಲಾನ್ಯಾಸ ಹಾಗೂ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಕಾಂಗ್ರೆಸ್ ಸರಕಾರ ಗ್ಯಾರಂಟಿ ಯೋಜನೆಯ ಭರವಸೆ ನೀಡಿದಾಗ ವಿರೋಧ ಪಕ್ಷಗಳು ಅದನ್ನು ಗೇಲಿ ಮಾಡಿದ್ದವು. ಕಾಂಗ್ರೆಸ್ ಸರಕಾರ ಜನರನ್ನು ದಿಕ್ಕು ತಪ್ಪಿಸುತ್ತಿದೆ ಎಂದು ಹೇಳಿತ್ತು. ಆದರೆ, ಅಧಿಕಾರಕ್ಕೆ ಬಂದ ಮೂರೇ ತಿಂಗಳಲ್ಲಿ ಪಂಚ ಗ್ಯಾರಂಟಿ ಯೋಜನೆಯನ್ನು ಜನತೆಗೆ ನೀಡಿತ್ತು. ಇದೀಗ ಕರ್ನಾಟಕ ಸರಕಾರದ ಗ್ಯಾರಂಟಿ ಯೋಜನೆಯನ್ನು ಬೇರೆ ರಾಜ್ಯಗಳಲ್ಲಿ ಜಾರಿ ಮಾಡಲಾಗುತ್ತಿದೆ. ಈ ಯೋಜನೆ ದೇಶಕ್ಕೆ ಕಾಂಗ್ರೆಸ್ ಸರಕಾರದ ಕೊಡುಗೆಯಾಗಿದೆ. ನಾವು ಎಂದೆಂದೂ ಕಾಂಗ್ರೆಸನ್ನು ಮರೆಯಬಾರದು ಇಂಥಹ ಸರಕಾರ ಜನರ ಪಾಲಿನ ಭಾಗ್ಯವಾಗಿದೆ ಎಂದು ಹೇಳಿದರು.



ಚೆಲ್ಯಡ್ಕದಲ್ಲಿ ಸೇತುವೆ

ಕಳೆದ 40 ವರ್ಷದಲ್ಲಿ ಪ್ರತೀ ಮಳೆಗಾಲದಲ್ಲಿ ಮುಳುಗಿ ಸಂಚಾರಕ್ಕೆ ಅಡಚಣೆಯಾಗುತ್ತಿದ್ದ ಚೆಲ್ಯಡ್ಕದಲ್ಲಿ ಹೊಸ ಸೇತುವೆಯ ನಿರ್ಮಾಣ ಮಾಡಿದ್ದೇನೆ. ಹಿಂದೆ ಇದ್ದ ಶಾಸಕರು ಚೆಲ್ಯಡ್ಕ ಸೇತುವೆಯ ಬಳಿಕ ರೂ.2 ಕೋಟಿ ವೆಚ್ಚದಲ್ಲಿ ಸರ್ಕಲ್ ಮಾಡಿದ್ದರು. ಸರ್ಕಲ್ ಮಾಡುವ ಬದಲು ಚೆಲ್ಯಡ್ಕದಲ್ಲಿ ಸೇತುವೆ ನಿರ್ಮಾಣ ಮಾಡಬಹುದಿತ್ತಲ್ಲ. ಜನ ಪ್ರತೀ ಮಳೆಗಾಲದಲ್ಲಿ ಸಂಕಷ್ಟ ಎದುರಿಸುತ್ತಿದ್ದರೂ ಈ ಹಿಂದಿನವರು ಅದಕ್ಕೆ ಮುಕ್ತಿ ಕಾಣಿಸಲು ಯಾಕೆ ಹೋಗಿಲ್ಲ? ಶಾಸಕನಾದ ಬಳಿಕ ನಾನು ಮೊದಲನೇ ಬಾರಿಗೆ ಅನುದಾನ ತಂದಿದ್ದು ಚೆಲ್ಯಡ್ಕ ಸೇತುವೆಗೆ ಎಂದು ಅವರು ಹೇಳಿದರು. ಪುತ್ತೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಪ್ರಸಾದ ಆಳ್ವ, ಬೆಟ್ಟಂಪಾಡಿ ವಲಯ ಕಾಂಗ್ರೆಸ್ ಅಧ್ಯಕ್ಷ ನವೀನ್ ರೈ ಚೆಲ್ಯಡ್ಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಪುತ್ತೂರು ಬ್ಲಾಕ್ ಪ್ರ. ಕಾರ್ಯದರ್ಶಿ ಪೂರ್ಣೇಶ್ ಭಂಡಾರಿ, ಆರ್ಯಾಪು ವಲಯ ಅಧ್ಯಕ್ಷ ಗಿರೀಶ್ ರೈ, ಸತೀಶ್ ನಿಡ್ಪಳ್ಳಿ, ಮೊಯಿದು ಕೋನಡ್ಕ, ಶಾಫಿ ಕೇಕನಾಜೆ ಮತ್ತಿತರರು ಪಾಲ್ಗೊಂಡಿದ್ದರು.

ದಲಿತ ಕಾರ್ಯಕರ್ತನ ಮನೆಯಲ್ಲಿ ಊಟ

ಮಧ್ಯಾಹ್ನ ದಲಿತ ಮುಖಂಡ ಕಾಂಗ್ರೆಸ್ ಕಾರ್ಯಕರ್ತ ಅಮುನಿ ಗುಂಡ್ಯಡ್ಕ ಅವರ ಮನೆಯಲ್ಲಿ ಮಧ್ಯಾಹ್ನದ ಭೋಜನ ಸವಿದರು. ಅವರ ಮನೆಯಲ್ಲೇ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಮಾಡಿದರು. ಕಾರ್ಯಕ್ರಮದಲ್ಲಿ ಅಮುನಿ ದಂಪತಿಯನ್ನು ಶಾಸಕರು ಸನ್ಮಾನಿಸಿ ಗೌರವಿಸಿದು. ಬಳಿಕ ಅವರ ಮನೆಯಲ್ಲಿ ಊಟ ಮಾಡಿದರು.

ಬಲಮುರಿ ಈಶ್ವರ ದೇವಸ್ಥಾನದ ಆಡಳಿತ ಮಂಡಳಿಗೆ ನೂತನ ಗೃಹ ಹಸ್ತಾಂತರ

ನಾಪೋಕ್ಲು: ಇಲ್ಲಿಗೆ ಸಮೀಪದ ಇತಿಹಾಸ ಪ್ರಸಿದ್ಧ ಕೊಡಗಿನ ಎರಡನೇ ಕಾವೇರಿ ಪುಣ್ಯಕ್ಷೇತ್ರ ಬಲಮುರಿ ಈಶ್ವರ ದೇವಸ್ಥಾನದ ಅರ್ಚಕರಿಗೆ ದಾನಿಗಳು ನೂತನ ಗೃಹ ನಿರ್ಮಿಸಿ ಮನೆಯನ್ನು ಮಂಗಳವಾರ ದೇವಸ್ಥಾನದ ಆಡಳಿತ ಮಂಡಳಿಗೆ ಹಸ್ತಾಂತರಿಸಲಾಯಿತು. ಬಲಮುರಿ ಗ್ರಾಮದ ನಿವೃತ್ತ ಮೇಜರ್ ಬೊಳ್ಳಚೆಟ್ಟಿರ ಅಪ್ಪಚ್ಚು ಹಾಗೂ ಗ್ರಾಮಸ್ಥರ ನೆರವಿನಿಂದ ನೂತನ ಗೃಹ ನಿರ್ಮಿಸಿ ಅರ್ಚಕರು ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ಬೊಳ್ಳಚಟ್ಟಿರ ಸುರೇಶ್ ಅವರು



ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷರಾದ ಕೊಂಗೀರಂಡ ಸಾಧು ತಮ್ಮಯ್ಯ ಅವರಿಗೆ ಮನೆಯನ್ನು ಹಸ್ತಾಂತರಿಸಲಾಯಿತು . ಏಪ್ರಿಲ್ 29ರಂದು ಸಭೆ ನಡೆಸಿ ನೂತನ ಮನೆಯನ್ನು ಅರ್ಚಕರಿಗೆ ಹಸ್ತಾಂತರಿಸಲಾಗುವುದು ಎಂದು ಆಡಳಿತ ಮಂಡಳಿ ತಿಳಿಸಿದೆ.

ಈ ಸಂದರ್ಭ ಬಲಮುರಿ ಈಶ್ವರ ದೇವಸ್ಥಾನದ ಆಡಳಿತ ಮಂಡಳಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ವ್ಯಕ್ತಿಯನ್ನು ಕಾರಿನಲ್ಲಿ ಅಪಹರಿಸಿ ನಗ್ನ ಫೋಟೋ ತೆಗೆದು ಬೆದರಿಸಿ ಹಣ ಎಗರಿಸಲೆತ್ನ: ನಾಲ್ವರ ವಿರುದ್ಧ ಕೇಸು

ಕಾಸರಗೋಡು: ಕೂಡ್ಲು ನಿವಾಸಿಯೋರ್ವನನ್ನು ಕಾರಿನಲ್ಲಿ ಅಪಹರಿಸಿ ಅವರ ನಗ್ನ ಫೋಟೋ ತೆಗೆದು ಹಣ ನೀಡುವಂತೆ ಬೆದರಿಸಿ ಹಲ್ಲೆ ನಡೆಸಿರುವುದಾಗಿ ಆರೋಪಿಸಲಾಗಿದೆ. ಅದರಂತೆ ಕಾಸರಗೋಡು ಪೊಲೀಸರು ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕೂಡ್ಲು ಬಳ್ಳಿಮೊಗರು ಹೌಸ್‌ನ ಸುರೇಶ್ ನಾಯ್ಕ್ (57) ಎಂಬವರು ನೀಡಿದ ದೂರಿನಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಾರ್ಚ್ 31ರಂದು ರಾತ್ರಿ ಕೂಡ್ಲು ಎರಿಯಾಲ್ ರಸ್ತೆ ಬಳಿಯಿಂದ ಕಂಡರೆ ಪತ್ತೆಹಚ್ಚಬಹುದಾದ ಇಬ್ಬರು ಸೇರಿದಂತೆ ನಾಲ್ವರ ತಂಡ ತನ್ನನ್ನು ಕಾರಿನಲ್ಲಿ ಅಪಹರಿಸಿ ಕಾಸರಗೋಡು ವೆಂಕಟ್ರಮಣ ದೇವಸ್ಥಾನ ಪರಿಸರದ ನಿರ್ಜನ ಪ್ರದೇಶಕ್ಕೆ ಸಾಗಿಸಿ ಅಲ್ಲಿ ಕೊಠಡಿಯೊಂದಕ್ಕೆ ಕರೆದುಕೊಂಡು ಹೋಗಿ ಮೊಬೈಲ್‌ನಲ್ಲಿ ನಗ್ನ ಫೋಟೋಗಳನ್ನು ತೆಗೆದು ಆ ದೃಶ್ಯಗಳನ್ನು ನನ್ನ ಸಂಬಂಧಿಕರಿಗೆ ಕಳುಹಿಸಿಕೊಡುವುದಾಗಿ ಬೆದರಿಸಿ ಹಣ ಎಗರಿಸಲೆತ್ನಿಸಿದರೆಂದೂ ಆ ವೇಳೆ ಓರ್ವ ನನ್ನ ಮುಖಕ್ಕೆ ಹೊಡೆದನೆಂದೂ ಪೊಲೀಸರಿಗೆ ನೀಡಿದ ದೂರಿನಲ್ಲಿ ಸುರೇಶ್ ನಾಯ್ಕ್ ಆರೋಪಿಸಿದ್ದಾರೆ. ಈ ಕುರಿತು ಕಾಸರಗೋಡು ಪೊಲೀಸರು ಕೇಸು ದಾಖಲಿಸಿದ್ದಾರೆ.

ಕಿರುಸುದ್ದಿ

ಶಬರಿಮಲೆ: ಏ.17ರಂದು ಸಹಸ್ರ ಕಲಶ ಪೂಜೆ, ಏ.18ರಂದು ಸಹಸ್ರ ಕಲಶ ಅಭಿಷೇಕ

ಕಾಸರಗೋಡು: ಸಾವಿರಾರು ಮಂದಿ ಅಯ್ಯಪ್ಪ ಭಕ್ತರು ಶಬರಿಮಲೆಗೆ ಭೇಟಿ ನೀಡಿ ವಿಷು ಮೇಷ ಮಾಸ ದರ್ಶನ ಪಡೆದರು. ಬುಧವಾರ ಮುಂಜಾನೆ 4ಕ್ಕೆ ಗರ್ಭಗುಡಿಯ ಬಾಗಿಲು ತೆರೆಯಲಾಯಿತು. ವಿಷು ಕಣಿ ದರ್ಶನಕ್ಕೆ ಬೆಳಗಿನ ಜಾವ 4.05 ರಿಂದ ಬೆಳಗ್ಗೆ 7 ಗಂಟೆಯ ವರೆಗೆ ವ್ಯವಸ್ಥೆ ಮಾಡಲಾಗಿತ್ತು. ಬಳಿಕ ಅಭಿಷೇಕ, ಉಷಃಪೂಜೆ ಮತ್ತು ತುಪ್ಪದ ಅಭಿಷೇಕ ನಡೆಯಿತು. ಸಹಸ್ರಾರು ಮಂದಿ ಭಕ್ತರು



ಕಣಿ ದರ್ಶನ ಪಡೆದರು. ಏ.17ರಂದು ಸಹಸ್ರ ಕಲಶಪೂಜೆ ಮತ್ತು ಏ.18ರಂದು ಸಹಸ್ರ ಕಲಶ ಅಭಿಷೇಕ ನಡೆಯಲಿದೆ. ರಾತ್ರಿ 10 ಗಂಟೆಗೆ ವಿಷು ಮೇಷಮಾಸ ಪೂಜೆ ಪೂರ್ಣಗೊಳ್ಳಲಿದ್ದು, ಗರ್ಭಗುಡಿಯ ಬಾಗಿಲು ಮುಚ್ಚಲಾಗುವುದು.

ಏ.17: ನೇರ ಸಂದರ್ಶನ

ಉಡುಪಿ: ನಗರದ ಕಿನ್ನಿಮೂಲ್ಕಿ ಬಸ್ ನಿಲ್ದಾಣದ ಬಳಿಯ ಕೈಗಾರಿಕಾ ಸಹಕಾರ ಸಂಘ ಪ್ರಧಾನ ಕಛೇರಿಯ ಎರಡನೇ ಮಹಡಿಯ ಗ್ರೋಸ್ಟ್ರೈರ್ ಗ್ರೂಪ್ ಇಲ್ಲಿ ಏಪ್ರಿಲ್ 17 ರಂದು ಬೆಳಗ್ಗೆ 10.30 ಕ್ಕೆ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ನಡೆಯಲಿದೆ. ಪಿಯುಸಿ, ಡಿಪ್ಲೋಮಾ ಮತ್ತು ಇತರೆ ಪದವಿ ವಿದ್ಯಾರ್ಹತೆಯೊಂದಿಗೆ ಉತ್ತೀರ್ಣರಾದ ಅಭ್ಯರ್ಥಿಗಳು ತಮ್ಮ ಅಂಕಪಟ್ಟಿ, ಸ್ವವಿವರವುಳ್ಳ ರೆಸ್ಯೂಮ್/ಸಿವಿ ಹಾಗೂ ಆಧಾರ್ ಕಾರ್ಡ್ಪ್ರತಿಯೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಜಿಲ್ಲಾಧಿಕಾರಿ ಸಂಕೀರ್ಣ, ರಜತಾದ್ರಿ ಮಣಿಪಾಲ ಉಡುಪಿ ಅಥವಾ ದೂರವಾಣಿ ಸಂಖ್ಯೆ: 8105618291, 9945856670 ಹಾಗೂ 9901472710 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳ ಕಛೇರಿ ಪ್ರಕಟಣೆ ತಿಳಿಸಿದೆ.

ಅಪಹರಣ ಪ್ರಕರಣ: ಸಮಗ್ರ ತನಿಖೆಗೆ ಆಗ್ರಹ

ಮಂಗಳೂರು: ಮಂಗಳೂರಿನ ಮಂಗಳಮುಖಿಯರು ತನ್ನನ್ನು ಅಪಹರಣ ಮಾಡಿ ಕಿರುಕುಳ ನೀಡಿದ್ದಾರೆ ಎಂದು ಮೈಸೂರಿನ ಅನಿಲ್ ಕುಮಾರ್ ಎಂಬಾತ ಆರೋಪಿಸಿದ್ದು, ಇದರ ಹಿಂದೆ ವ್ಯವಸ್ಥಿತ ಷಡ್ಯಂತ್ರ ಇದೆ. ಪೊಲೀಸರು ಸಮಗ್ರ ತನಿಖೆ ನಡೆಸುವ ಮೂಲಕ ಸತ್ಯಾಂಶವನ್ನು ಬಹಿರಂಗಪಡಿಸಬೇಕು ಎಂದು ಮಂಗಳೂರಿನ ಮಂಗಳಮುಖಿ ಅನಿ ಒತ್ತಾಯಿಸಿದ್ದಾರೆ. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನಿಲ್ ಕುಮಾರ್ ತಾನು ಮಂಗಳಮುಖಿಯಾಗಿದ್ದು, ನನಗೆ ದಿಕ್ಕುದೆಸೆಯಿಲ್ಲ ಎಂದು ಇನ್‌ಸ್ಟಾಗ್ರಾಂ ಮೂಲಕ ಪರಿಚಯಿಸಿಕೊಂಡು ತನ್ನ ಮನೆಗೆ ಬಂದು ನೆಲೆಸಿದ್ದ. ಕಳೆದ ನಾಲ್ಕೈದು ತಿಂಗಳು ನಮ್ಮ ಬಾಡಿಗೆ ಮನೆಯಲ್ಲಿಯೇ ಇದ್ದು, ಆಗಾಗ ಮೈಸೂರಿಗೆ ಹೋಗಿ ಬರುತ್ತಿದ್ದ. ಇದೀಗ ಸುಖಾಸುಮ್ಮನೆ ನನ್ನ ಮೇಲೆ ಅಪಹರಣದ ಆರೋಪ ಹೊರಿಸಿದ್ದಾನೆ. ಇದರಿಂದ ತನಗೆ ತುಂಬಾನೆ ಆಘಾತವಾಗಿದ್ದು, ಇದರ ಹಿಂದಿನ ಸತ್ಯಾಂಶ ಹೊರಬರಬೇಕು. ಆತನನ್ನು ಪೊಲೀಸರು ಸಮಗ್ರವಾಗಿ ವಿಚಾರಣೆಗೊಳಪಡಿಸಬೇಕು ಎಂದು ಆಗ್ರಹಿಸಿದರು. ತಾನು ಆಟೋ ರಿಕ್ಷಾ, ಕೆಫೆ ಇತ್ಯಾದಿಗಳನ್ನು ಹೊಂದುವ ಮೂಲಕ ಸಮಾಜದಲ್ಲಿ ಸಭ್ಯತೆಯ ಜೀವನ ನಡೆಸುವುದನ್ನು ಸಹಿಸಲಾಗದ ನಮ್ಮದೇ ಬಳಗದ ಕೆಲವರು ಪಿತೂರಿ ನಡೆಸಿದ್ದಾರೆ. ನಾನೂ ಸಹ ಅವರಂತೆ ಬದುಕಬೇಕು ಎಂದು ನನ್ನ ಬೆಳವಣಿಗೆ ಸಹಿಸದೆ ಷಡ್ಯಂತ್ರ ರೂಪಿಸಿದ್ದಾರೆ. ಇದರ ಸತ್ಯಾಂಶ ಹೊರಬರಬೇಕಾದರೆ ಆರೋಪ ಹೊರಿಸಿರುವ ಅನಿಲ ಕುಮಾರ್‌ನ ವಿಚಾರಣೆಯಾಗಬೇಕು. ಆತನಿಗೆ ನಾನು ಆಧಾರ್ ಮಾಡಿಕೊಟ್ಟಿಲ್ಲ. ಅದು ಹೇಗೆ ಮಾಡಿಸಿಕೊಂಡಿದ್ದಾನೆ ಎಂಬುದರ ತನಿಖೆಯೂ ಆಗಬೇಕು ಎಂದು ಅನಿ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಅನುಷಾ ಉಪಸ್ಥಿತರಿದ್ದರು.

ವಿಷು ಆಚರಣೆಯ ವೇಳೆ ಪಟಾಕಿ ಸಿಡಿದು ಬಾಲಕ ಮೃತ್ಯು

ಕಾಸರಗೋಡು: ವಿಷು ಆಚರಣೆಯ ಸಂದರ್ಭದಲ್ಲಿ ಪಟಾಕಿ ಸಿಡಿದು 16 ವರ್ಷದ ಬಾಲಕನೊಬ್ಬ ದಾರುಣವಾಗಿ ಮೃತಪಟ್ಟ ಘಟನೆ ಬುಧವಾರ ನಡೆದಿದೆ. ಕಲ್ಲಿಕೋಟೆ ಜಿಲ್ಲೆಯ ಕೊಯಿಲಾಂಡಿ ನಿವಾಸಿ ಅದ್ವೈತ್ (16) ಮೃತಪಟ್ಟ ಬಾಲಕ. ಗೆಳೆಯರೊಂದಿಗೆ ವಿಷು ಆಚರಿಸುತ್ತಿದ್ದಾಗ ಅದ್ವೈತ್‌ನ ಕೈಯ್ಯಲ್ಲಿದ್ದ ಸುಡುಮದ್ದು ಅಕಸ್ಮಾತ್ ಸ್ಫೋಟಗೊಂಡಿತು. ಇದರಿಂದ ಗಂಭೀರ ಗಾಯಗೊಂಡ ಆತನನ್ನು



ಕೊಯಿಲಾಂಡಿ ಆಸ್ಪತ್ರೆಗೆ ಕೊಂಡೊಯ್ಯಲಾಗಿತ್ತಾದರೂ ಅಷ್ಟರಲ್ಲಿ ಕೊನೆಯುಸಿರೆಳೆದರು. ಕೊಯಿಲಾಂಡಿ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಉದ್ಯಮಿ ಲಾಡ್ಜ್‌ನ ರೂಮಿನಲ್ಲಿ ಆತ್ಮಹತ್ಯೆ

ಬ್ರಹ್ಮಾವರ: ಸಾಲದ ವಿಚಾರವಾಗಿ ಉದ್ಯಮಿಯೊಬ್ಬರು ಲಾಡ್ಜ್‌ನ ರೂಮಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಏ.13ರಂದು ರಾತ್ರಿ ನಡೆದಿದೆ. ಮೃತರನ್ನು ನರಸಿಂಹ ಎಚ್.ಎಸ್. (66) ಎಂದು ಗುರುತಿಸಲಾಗಿದೆ. ಇವರು ಬೆಂಗಳೂರಿನ ನೆಲಮಂಗಲದಲ್ಲಿ ಶ್ರೀಕೃಷ್ಣ ಎಂಟರ್‌ಪ್ರೈಸಸ್ ಎಂಬ ಲೇಬರ್ ಕಾಂಟ್ರಾಕ್ಟ್ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದು, ವ್ಯವಹಾರ ದಲ್ಲಿ ಆರ್ಥಿಕವಾಗಿ ತೊಂದರೆಯಾದ ಹಿನ್ನೆಲೆಯಲ್ಲಿ ಬಡ್ಡಿಗಾಗಿ ಹಣ ಪಡೆದು ವ್ಯವಹಾರ ನಡೆಸುತ್ತಿದ್ದರು. ಕಳೆದ ಎರಡು ತಿಂಗಳಿನಿಂದ ನರಸಿಂಹ ಅವರಿಗೆ ಸರಿಯಾದ ಸಮಯಕ್ಕೆ ಸಾಲದ ಬಡ್ಡಿಯನ್ನು ಪಾವತಿ ಮಾಡಲು ಸಾಧ್ಯವಾಗದ ಕಾರಣ, ಮನನೊಂದು ಬ್ರಹ್ಮಾವರದ ಆಶ್ರಯ ಲಾಡ್ಜ್‌ನ ರೂಮಿನಲ್ಲಿ ಫ್ಯಾನಿಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವತಿ ನಾಪತ್ತೆ

ಉಡುಪಿ: ಕುಂದಾಪುರ ತಾಲೂಕು ಅಂಪಾರು ಗ್ರಾಮದ ಬರ್ಲಾಡಿ ನಿವಾಸಿ ಜಯಶ್ರೀ (27) ಎಂಬ ಯುವತಿಯು ಏಪ್ರಿಲ್ 7ರಿಂದ ನಾಪತ್ತೆಯಾಗಿರುತ್ತಾರೆ. 5 ಅಡಿ 2 ಇಂಚು ಎತ್ತರ, ಸಪೂರ ಶರೀರ, ಕೋಲು ಮುಖ, ಬಿಳಿ ಮೈಬಣ್ಣ ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಶಂಕರನಾರಾಯಣ ಪೊಲೀಸ್ ಠಾಣೆಯ ಪಿ.ಎಸ್ ದೂ.ಸಂಖ್ಯೆ: 08259-280299, ಸಿ.ಪಿ.ಐ ದೂ.ಸಂಖ್ಯೆ: 08254-230338, ಎಸ್.ಡಿ.ಪಿ.ಓ ದೂ.ಸಂಖ್ಯೆ: 08254-232338, ಡಿ.ಪಿ.ಓ ದೂ.ಸಂಖ್ಯೆ: 0820-2534777 ಹಾಗೂ ರೇಂಜ್ ದೂ.ಸಂಖ್ಯೆ: 8242220501 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಶಂಕರನಾರಾಯಣ ಪೊಲೀಸ್ ಠಾಣೆಯ ಉಪನಿರೀಕ್ಷಕರ ಕಚೇರಿ ಪ್ರಕಟಣೆ ತಿಳಿಸಿದೆ.

ಪುತ್ತೂರು ಮುಖ್ಯ ರಸ್ತೆಯ ಸುರಕ್ಷಿತ, ವ್ಯವಸ್ಥಿತ ಸಂಚಾರ ಕನಸಿಗೆ ತಣ್ಣೀರು

ಕೊನರಿ ಹೋಯ್ತು ಕೊನೆಯ ಕೋನ್!

ಪುತ್ತೂರು: ಸದಾ ಜನಸಂದಣಿಯಿಂದ ಕೂಡಿರುವಂತಹ ನಗರದ ಮುಖ್ಯ ರಸ್ತೆಯಲ್ಲಿ ವಾಹನಗಳ ಓಡಾಟ ನಿರಂತರವಾಗಿ ನಡೆಯುತ್ತಿರುತ್ತದೆ. ಮಂಗಳೂರು, ಉಪ್ಪಿನಂಗಡಿ ಕಡೆಯಿಂದ ಆಗಮಿಸುವಂತಹ ಖಾಸಗಿ, ಸರಕಾರಿ ಬಸ್ಸುಗಳು ಈ ರಸ್ತೆಯಲ್ಲಿರುವ ಅಂಚೆ ಕಚೇರಿಯ ಮುಂಭಾಗದ ಬಸ್ ಸ್ಟಾಪ್‌ನಲ್ಲಿ ಪ್ರಯಾಣಿಕರನ್ನು ಇಳಿಸಿ ಮುಂದಕ್ಕೆ ಸಾಗುತ್ತದೆ. ಈ ಹಿನ್ನಲೆಯಲ್ಲಿ ಸುಗಮ ಸಂಚಾರಕ್ಕಾಗಿ ಮತ್ತು ಪ್ರಯಾಣಿಕರ ಅನುಕೂಲತೆಗಾಗಿ ಬಸ್ ಸ್ಟಾಪ್‌ನ ಎದುರುಗಡೆ ಸುರಕ್ಷತೆಯ ಕೋನ್‌ಗಳನ್ನು ಅಳವಡಿಸಲಾಗಿತ್ತು. ಆದರೆ, ಬಸ್ ಮತ್ತಿತರ ವಾಹನಗಳ ಚಾಲಕರ ನಿರ್ಲಕ್ಷ್ಯತನದ ಚಾಲನೆಯಿಂದ ಸಾವಿರಾರು ರೂ. ವೆಚ್ಚದಲ್ಲಿ ಇಲ್ಲಿ ಅಳವಡಿಸಲಾಗಿದ್ದ ಕೋನ್‌ಗಳು ಒಂದೊಂದಾಗಿ ಬಸ್ಸಿನ ಚಕ್ರದಡಿ ಸಿಲುಕಿ ಅಪ್ಪಚ್ಚಿಯಾಗಿ ಹೋಗಿವೆ.



ಹಣ, ಶ್ರಮ ಮಣ್ಣುಪಾಲು

'ಬಸ್ ಬೇ'ಗಾಗಿ ಸಾಲಾಗಿ ಅಳವಡಿಸಲಾಗಿದ್ದ ಕೋನ್‌ಗಳ ಪೈಕಿ ಉಳಿದಿದ್ದ ಕೊನೆಯ ಒಂದು ಕೋನ್ ಕೂಡಾ ಇತ್ತೀಚೆಗೆ ಬಸ್ಸಿನಡಿ ಸಿಲುಕಿ ಅಪ್ಪಚ್ಚಿಯಾಗಿ ಹೋಗಿದೆ. ಅಪ್ಪಚ್ಚಿಯಾಗಿ ಹೋಗಿರುವ ಕೋನ್‌ಗಳನ್ನು ಸಂಚಾರಿ ಪೊಲೀಸರು ತೆರವುಗೊಳಿಸಿದ್ದಾರೆ. ಬಸ್ ಬೇಯಲ್ಲಿ ಸುರಕ್ಷತೆಗಾಗಿ ಅಳವಡಿಸಲಾಗಿದದ ಕೋನ್‌ಗಳನ್ನು ನಾಶಪಡಿಸಿರುವ ಬಸ್ ಚಾಲಕರ ವಿರುದ್ಧ ಯಾವುದೇ ಕ್ರಮಗಳಿಲ್ಲ. ಕೋನ್‌ಗಳು ಪ್ಲಾಸ್ಟಿಕ್‌ನದ್ದಾಗಿರುವುದರಿಂದ ಚಾಲಕರು ನಿರ್ಭೀತಿಯಿಂದ ವಾಹನ ಚಲಾಯಿಸಿ ಕೋನ್‌ಗಳನ್ನು ಅಪ್ಪಚ್ಚಿ ಮಾಡುತ್ತಾರೆ. ಇದರಿಂದಾಗಿ ಕೋನ್‌ಗಳಿಗಾಗಿ ವ್ಯಯಿಸಿದ ಮೊತ್ತ ಇದೀಗ ಮಣ್ಣುಪಾಲು...!

ಸಂಕಟದ ಸಂಚಾರ

ಪುತ್ತೂರಿನ ಮುಖ್ಯ ರಸ್ತೆಯಲ್ಲಿ ಸುಗಮ ಸಂಚಾರವೇ ಒಂದು ಸವಾಲು. ಪಾದಾಚಾರಿಗಳು ರಸ್ತೆ ದಾಟಬೇಕಾದರೆ ಹರಸಾಹಸ ಪಡಬೇಕಾದಂತಹ ಪರಿಸ್ಥಿತಿ. ಆದರೂ ಆಯಾಕಟ್ಟಿನ ಸ್ಥಳಗಳಲ್ಲಿ ಸಂಚಾರಿ ಪೊಲೀಸರು ಸುಗಮ ಸಂಚಾರಕ್ಕಾಗಿ ಕರ್ತವ್ಯನಿರತರಾಗಿರುತ್ತಾರೆ. ಮಾತ್ರವಲ್ಲದೆ, ನಿರ್ದಿಷ್ಟ ಸ್ಥಳಗಳಲ್ಲಿ ಪೊಲೀಸ್ ಇಲಾಖೆ, ನಗರಸಭೆಯ ವತಿಯಿಂದ ವಾಹನಗಳಿಗೆ, ಪಾದಾಚಾರಿಗಳಿಗೆ ಸೂಚನಾ ಫಲಕಗಳು, ಫುಟ್‌ಪಾತ್‌ಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಆದರೆ, ಇದ್ಯಾವುದೂ ಸುಸ್ಥಿತಿಯಲ್ಲಿಲ್ಲ. ವಾಹನಗಳ ವೇಗವನ್ನು ನಿಯಂತ್ರಿಸಲು ಕೆಲವೆಡೆ ಹಂಪ್ಸ್‌ಗಳನ್ನು ಹಾಕಲಾಗಿದ್ದರೂ ಅದಕ್ಕೆ ಬಿಳಿ ಬಣ್ಣದ ಪಟ್ಟೆಗಳನ್ನು ಹಾಕದೆ ಅಪಘಾತ ಸಂಭವಿಸುವಂತಹ ಪರಿಸ್ಥಿತಿ. ಇದೀಗ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಜಾತ್ರಾ ಉತ್ಸವ ನಡೆಯುತ್ತಿರುವುದರಿಂದ ಜನರ, ವಾಹನಗಳ ಓಡಾಟ ಅತ್ಯಧಿಕವಾಗಿದೆ. ಇದನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾದಂತಹ ಸಂದಿಗ್ಧತೆ.

ಸಿಮೆಂಟ್ ಬ್ಲಾಕ್ ಅಳವಡಿಸಲಿ

ಸಂಚಾರ ಸುರಕ್ಷತೆಗಾಗಿ ಅಳವಡಿಸಲಾಗುವ ಕೋನ್‌ಗಳು ವಾಹನಗಳ ಚಾಲಕರ ನಿರ್ಲಕ್ಷ್ಯಕ್ಕೆ ನಾಶವಾಗಿ ಹೋಗುತ್ತಿದೆ. ಇದು ಪುತ್ತೂರು ಮಾತ್ರವಲ್ಲ, ಇತರ ಕಡೆಗಳಲ್ಲೂ ಇದೇ ಪರಿಸ್ಥಿತಿ. ಈ ನಿಟ್ಟಿನಲ್ಲಿ ರಸ್ತೆ ಮಧ್ಯೆ ಕೋನ್‌ಗಳನ್ನು ಅಳವಡಿಸುವುದರ ಬದಲು ರಿಫ್ಲೆಕ್ಟರ್ ಒಳಗೊಂಡ ಸಿಮೆಂಟಿನ ಬ್ಲಾಕ್‌ಗಳನ್ನು ಇರಿಸಬೇಕು. ಆಗಲಾದರೂ ವಾಹನ ಚಾಲಕರು ಜಾಗ್ರತೆಯಿಂದ ವಾಹನಗಳನ್ನು ಚಲಾಯಿಸುತ್ತಾರೆ.

■ ರಂಜಿತ್ ಎಂ. ಸ್ಥಳೀಯ ನಾಗರಿಕರು

ಜಾತ್ರೆ ಬಳಿಕ ಕ್ರಮ

ಸಂಚಾರ ಸುರಕ್ಷತೆಗಾಗಿ ಬಸ್ ಬೇ ಬಳಿ ರಸ್ತೆ ವಿಭಜಕ(ಕೋನ್)ಗಳನ್ನು ಅಳವಡಿಸಲಾಗಿತ್ತು. ಇದೀಗ ಪುತ್ತೂರು ಜಾತ್ರೆ ನಡೆಯುತ್ತಿದ್ದು, ಇಂತಹ ಸಂದರ್ಭದಲ್ಲಿ ಸುರಕ್ಷಿತ ಸಂಚಾರಕ್ಕಾಗಿ ಬ್ಯಾರಿಕೇಡ್, ಕೋನ್‌ಗಳನ್ನು ಅಳವಡಿಸಬೇಕಾದದ್ದು ಅನಿವಾರ್ಯ ಕೂಡಾ. ಆದರೆ, ಈಗ ಕೋನ್‌ಗಳನ್ನು ಅಳವಡಿಸುವುದು ಕಷ್ಟ. ಜಾತ್ರೆ ಮುಗಿದ ಬಳಿಕ ರಿಫ್ಲೆಕ್ಟರ್ ಇರುವಂತಹ ಕೋನ್‌ಗಳನ್ನು ಅಳವಡಿಸಲಾಗುವುದು.

■ ಜಾನ್ಸನ್ ಡಿ'ಸೋಜಾ, ಸಿಐ, ಪುತ್ತೂರು

ಮೆಸ್ಕಾಂ ವ್ಯಾಪ್ತಿಯಲ್ಲಿ 465 ಲೈನ್‌ಮ್ಯಾನ್‌ಗಳ ನೇಮಕಾತಿ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆ ಒಳಗೊಂಡ ಮೆಸ್ಕಾಂ ವ್ಯಾಪ್ತಿಯಲ್ಲಿ ಪ್ರಸ್ತುತ 465 ಮಂದಿ ಲೈನ್‌ಮ್ಯಾನ್‌ಗಳ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಮೇ ಅಂತ್ಯದೊಳಗೆ ಹೊಸ ಲೈನ್‌ಮ್ಯಾನ್‌ಗಳು ಕರ್ತವ್ಯಕ್ಕೆ ಹಾಜರಾಗಲಿದ್ದಾರೆ ಎಂದು ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್ ತಿಳಿಸಿದರು.

ಮೆಸ್ಕಾಂ ಕಚೇರಿಯಲ್ಲಿ ಬುಧವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.




ಮೆಸ್ಕಾಂನಲ್ಲಿ 9,248 ಮಂಜೂರು ಆಗಿರುವ ಲೈನ್‌ಮೆನ್‌ಗಳ ಹುದ್ದೆ ಇದ್ದು, ಪ್ರಸ್ತುತ 5,283 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದ ಹುದ್ದೆಗಳು ಖಾಲಿ ಇವೆ. 400 ಮಂದಿ ಈಗಾಗಲೇ ವರ್ಗಾವಣೆಗೊಂಡಿದ್ದು ಹೊಸಬರು ಸೇರ್ಪಡೆಯಾದಾಗ ವರ್ಗಾವಣೆಗೊಂಡವರನ್ನು ಬಿಡುಗಡೆಗೊಳಿಸಲಾಗುತ್ತದೆ. ಹಾಗಾಗಿ ಕೊರತೆ ಮುಂದುವರಿಯಲಿದೆ ಎಂದರು.

ಮಂಗಳೂರು, ಉಡುಪಿ ಸಹಿತ ಮೆಸ್ಕಾಂ ವ್ಯಾಪ್ತಿಯ ಜಿಲ್ಲೆಗಳಿಂದ ಲೈನ್‌ಮ್ಯಾನ್‌ಗಳಾಗಿ ನೇಮಕಗೊಳ್ಳುತ್ತಿರುವವರ ಸಂಖ್ಯೆ ತುಂಬಾ ಕಡಿಮೆಯಾಗಿದೆ. ಹೊರ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ನೇಮಕಗೊಳ್ಳುತ್ತಿದ್ದಾರೆ. ಅವರು ವರ್ಗಾವಣೆಯಾಗುತ್ತಿರುವುದರಿಂದ ಕೊರತೆ ಉಂಟಾಗುತ್ತಿದೆ ಎಂದು ಹೇಳಿದರು.

ಮಳೆಗಾಲದ ವೇಳೆ ನೈಸರ್ಗಿಕ ವಿಕೋಪಗಳು ಸಂಭವಿಸಿದರೆ ತಕ್ಷಣ ಸ್ಪಂದಿಸಲು ಹೆಚ್ಚುವರಿ ಸಿಬ್ಬಂದಿಯನ್ನು ತಾತ್ಕಾಲಿಕ ನೆಲೆಯಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಪ್ರತಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅಡಿಯಲ್ಲಿ ಐದು ಮಂದಿಯ ತಂಡ ಕಾರ್ಯನಿರ್ವಹಿಸುತ್ತದೆ. ಅವಘಡ ಸಂಭವಿಸಿದರೆ ಲೈನ್‌ಮೆನ್‌ಗಳ ಸಹಾಯಕರಾಗಿ ಅವರು ಕೆಲಸ ಮಾಡುತ್ತಾರೆ ಎಂದು ಹೇಳಿದರು.

ಗ್ರಾಮ ಪಂಚಾಯತ್‌ಗಳಿಂದ ಮೆಸ್ಕಾಂಗೆ 251.39 ಕೋ.ರೂ. ವಿದ್ಯುತ್ ಬಿಲ್ ಪಾವತಿ ಬಾಕಿ ಇದೆ. 2026ರ ಫೆ.28ರವರೆಗೆ ಗ್ರಾ.ಪಂಗಳ ಕುಡಿಯುವ ನೀರಿನ 218.84 ಕೋ.ರೂ. ಹಾಗೂ ಬೀದಿ ದೀಪದ ವಿದ್ಯುತ್ ಬಿಲ್ 32.55 ಕೋ.ರೂ. ಸಹಿತ 251.39 ಕೋ.ರೂ. ಬಾಕಿ ಇದೆ. ಪುರಸಭೆ, ನಗರಸಭೆಗಳಿಂದ 261.54 ಕೋ.ರೂ. ಬಾಕಿ ಇದೆ. ಸರಕಾರದ ನೀರಾವರಿ ಹಾಗೂ ಇತರ ಇಲಾಖೆಗಳಿಂದ 517.53 ಕೋ.ರೂ ಪಾವತಿ ಬಾಕಿ ಇದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಸೋಲಾರ್ ಘಟಕಗಳ ಮೂಲಕ ವಿದ್ಯುತ್ ಉತ್ಪಾದಿಸಿ ಮೆಸ್ಕಾಂಗೆ ನೀಡುವವರ ಪ್ರಮಾಣ ಅತಿ ಕಡಿಮೆ ಇದೆ. ಸುಳ್ಯದ ಬೆಳ್ಳಾರೆ ಹಾಗೂ ಮಂಗಳೂರಿನಲ್ಲಿ ತಲಾ ಒಂದು ಸಂಸ್ಥೆ ಸೋಲಾರ್ ಘಟಕ ಅಳವಡಿಸಿ ವಿದ್ಯುತ್ ಉತ್ಪಾದಿಸಲು ಮುಂದೆ ಬಂದಿದೆ ಎಂದರು.



ಮುಲ್ಕಿ ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಸೌರಮಾನ ಯುಗಾದಿಯ ಪ್ರಯುಕ್ತ ವಿಶುಕಣಿ ಪೂಜೆ ನಡೆಯಿತು. ಈ ಸಂದರ್ಭ ದೇವಸ್ಥಾನದ ಅರ್ಚಕರಾದ ನರಸಿಂಹ ಭಟ್, ಶ್ರೀಪತಿ ಉಪಾಧ್ಯಾಯ, ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ನಾಗಸ್ವರ ವಾದಕ ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್ ವರ್ಮ ಕಾರ್ತಿಕ್ ಕೋಟ್ಯಾನ್ ಮತ್ತಿತರರು ಉಪಸ್ಥಿತರಿದ್ದರು.

ಹೊಸ ಬದಲಾವಣೆ ತರಲಿದೆ ನಾರಿ ಶಕ್ತಿ ವಂದನಾ ಮಸೂದೆ: ಆರ್.ಶ್ರೀಲೇಖಾ

ಕಾಸರಗೋಡು: ದೇಶದ ಶಾಸಕಾಂಗ ಸಭೆಗಳಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿ ಖಾತರಿಪಡಿಸುವ ನಾರಿ ಶಕ್ತಿ ವಂದನಾ ತಿದ್ದುಪಡಿ ಮಸೂದೆ ಸಮಾಜದಲ್ಲಿ ದೊಡ್ಡ ಬದಲಾವಣೆ ತರಲಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮತ್ತು ಮಾಜಿ ಡಿಜಿಪಿ ಆರ್. ಶ್ರೀಲೇಖಾ ಹೇಳಿದರು.

ಮಹಿಳೆಯರನ್ನು ಕಾನೂನುಗಳ ಫಲಾನುಭವಿಗಳಾಗಿ ನೋಡುವ ಬದಲು ಶಾಸನದ ಭಾಗವಾಗಿಸುವುದು ಮಸೂದೆಯ ಉದ್ದೇಶವಾಗಿದೆ ಎಂದು ಶ್ರೀಲೇಖಾ ಮತ್ತು ರಾಜ್ಯ ಕಾರ್ಯದರ್ಶಿ ಎನ್.ಪಿ ಅಂಜನಾ ತಿರುವನಂತಪುರದಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಮಹಿಳೆಯರನ್ನು ಯಾರೂ ಕಡೆಗಣಿಸಲು ಸಾಧ್ಯವಿಲ್ಲ. ಮಹಿಳೆಯರಿಗೆ ಗೌರವ ಸಿಗುವ ಕಡೆ ಮಾತ್ರ ಸಮಾಜ ಸುಧಾರಿಸಬಹುದು. ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಈಗ ಶೇಕಡಾ 50ರಷ್ಟು ಮೀಸಲಾತಿ ಇದ್ದರೂ, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಅದು ಶೇಕಡಾ15ಕ್ಕಿಂತ ಕಡಿಮೆಯಿದೆ. ಹೊಸ ಕಾನೂನು ಭಾರತದ ಸಂವಿಧಾನದ 106ನೇ ತಿದ್ದುಪಡಿಯಾದಾಗ, ಅದು ರಾಜ್ಯ ವಿಧಾನಸಭೆಗಳು ಮತ್ತು ಲೋಕಸಭೆಯಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿಯನ್ನು ಖಚಿತಪಡಿಸುತ್ತದೆ.



ಇದರ ಪ್ರತಿಬಿಂಬವು 2029ರ ಚುನಾವಣೆಗಳಿಂದ ಕಾಣಲು ಪ್ರಾರಂಭವಾಗುತ್ತದೆ. 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಪ್ರಧಾನಿ ನರೇಂದ್ರ ಮೋದಿಯವರ ಗುರಿಯಲ್ಲಿ ಮಹಿಳೆಯರಿಗೆ ಸಮಾನ ಭಾಗವಹಿಸುವಿಕೆ ಇರುತ್ತದೆ. ಬಹಳ ಸಮಯದಿಂದ ಮಹಿಳಾ ಮೀಸಲಾತಿ ಮಸೂದೆಯು ಹಲವು ಅಡೆತಡೆಗಳನ್ನು ಎದುರಿಸುತ್ತಿದೆ. ಈಗ ಮಸೂದೆಯನ್ನು ಬೆಂಬಲಿಸುವ ಸಮಯ ಮತ್ತು ಎಲ್ಲಾ ಪಕ್ಷಗಳು ತಿದ್ದುಪಡಿ ಮಸೂದೆಯನ್ನು ಬೆಂಬಲಿಸಬೇಕು ಎಂದು ಶ್ರೀಲೇಖಾ ಹೇಳಿದರು. ಮಸೂ ದೆಯನ್ನು ಬೆಂಬಲಿಸಿ ಬುಧವಾರ ಪಾದಯಾತ್ರೆಗಳು ಮತ್ತು ಬೈಕ್ ರ್ಯಾಲಿಗಳು ಆರಂಭಗೊಂಡಿದೆ. ಏ.16ರಂದು ವಿವಿಧ ಸ್ಥಳಗಳಲ್ಲಿ ಪಾದಯಾತ್ರೆಗಳು ಮತ್ತು ಬೈಕ್ ರ್ಯಾಲಿಗಳು ನಡೆಯಲಿವೆ ಎಂದು ಅವರು ತಿಳಿಸಿದರು.

ಮಹಿಳಾ ಮೋರ್ಚಾ ನೇತೃತ್ವದಲ್ಲಿ ರಾಜ್ಯ, ಜಿಲ್ಲಾ ಮತ್ತು ಮಂಡಲ ಮಟ್ಟದಲ್ಲಿ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಮಸೂದೆಯನ್ನು ಬೆಂಬಲಿಸುವಂತೆ ಎನ್.ಪಿ.ಅಂಜನಾ ಅವರು ಇಡೀ ಸಮಾಜವನ್ನು ಕೇಳಿಕೊಂಡರು.

ಏ.20: ಉಡುಪಿ ನೂತನ ಧರ್ಮಾಧ್ಯಕ್ಷರ ಪೀಠಾರೋಹಣ, ಅಭಿಷೇಕ ಸಮಾರಂಭ

ಉಡುಪಿ: ಉಡುಪಿ ಧರ್ಮಕ್ಷೇತ್ರದ ದ್ವಿತೀಯ ಧರ್ಮಾಧ್ಯಕ್ಷರಾಗಿ ಅತಿ ಗೌರವಾನ್ವಿತ ಡಾ. ಲೆಸ್ಲಿ ಕ್ಲಿಫರ್ಡ್ ಡಿ'ಸೋಜಾ ಅವರ ಧರ್ಮಾಧ್ಯಕ್ಷರ ಅಭಿಷೇಕ ಹಾಗೂ ಪೀಠಾರೋಹಣ ಸಮಾರಂಭವು ಏಪ್ರಿಲ್ 20, 2026ರಂದು ಸೋಮವಾರ ಬೆಳಗ್ಗೆ 9 ಗಂಟೆಗೆ ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜು ಮೈದಾನದಲ್ಲಿ ನೆರವೇರಲಿದೆ ಎಂದು ಉಡುಪಿ ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ವಂ।ಡೆನಿಸ್ ಡೆಸಾ ತಿಳಿಸಿದರು.

ಅವರು ಬುಧವಾರ ಉಡುಪಿ ಶೋಕಮಾತಾ ಚರ್ಚಿನ ಅವೆ ಮರಿಯಾ ಸಭಾಂಗಣದಲ್ಲಿ ಆಯೋಜಿಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಗೋವಾ ಮತ್ತು ದಮನ್ ಮಹಾಧರ್ಮಪ್ರಾಂತ್ಯದ ಮಹಾಧರ್ಮಾಧ್ಯಕ್ಷರು ಹಾಗೂ ಎಫ್‌ಎಬಿಸಿ ಮತ್ತು ಸಿಸಿಬಿಐ ಅಧ್ಯಕ್ಷರಾದ ಕಾರ್ಡಿನಲ್ ಫಿಲಿಪ್ ನೆರಿ ಫೆರಾವೊ ಅವರ ನೇತೃತ್ವದಲ್ಲಿ ಪವಿತ್ರ ಬಲಿಪೂಜೆ



ಸಂದರ್ಭದಲ್ಲಿ ನೂತನ ಧರ್ಮಾಧ್ಯಕ್ಷರಿಗೆ ಅಭಿಷೇಕ ನಡೆಯಲಿದೆ. ಬೆಂಗಳೂರು ಮಹಾಧರ್ಮಾಧ್ಯಕ್ಷ ಡಾ. ಪೀಟರ್ ಮಚಾದೊ ಹಾಗೂ ಉಡುಪಿ ಧರ್ಮಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಡಾ. ಜೆರಾಲ್ಡ್ ಐಸಾಕ್ ಲೋಬೊ ಸಹ-ಅಭಿಕ್ಷೇಕಕಾರರಾಗಿ ಭಾಗವಹಿಸಲಿದ್ದಾರೆ.

ಈ ಐತಿಹಾಸಿಕ ಸಮಾರಂಭದಲ್ಲಿ ಭಾರತ ಮತ್ತು ನೇಪಾಳದ ಅಪೊಸ್ಟೊಲಿಕ್ ನುನ್ಸಿಯೋ (ಪೋಪ್ ಅವರ ವ್ಯಾಟಿಕನ್ ರಾಯಭಾರಿ) ಡಾ. ಲಿಯೋಪೋಲ್ಡೊ ಗಿರೆಲ್ಲಿ, ವಿವಿಧ ಮಹಾ ಧರ್ಮಾಧ್ಯಕ್ಷರು, ಧರ್ಮಾಧ್ಯಕ್ಷರು, ಧರ್ಮಗುರುಗಳು, ಸಾವಿರಾರು ಭಕ್ತರು ಸೇರಿದಂತೆ ಸುಮಾರು 5000ಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ ಇದೆ.

ಧಾರ್ಮಿಕ ವಿಧಿವಿಧಾನಗಳ ನಂತರ ಅದೇ ವೇದಿಕೆಯಲ್ಲಿ ನೂತನ ಧರ್ಮಾಧ್ಯಕ್ಷರಿಗೆ ಪೌರ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ್ ಹಾಗೂ ಉಡುಪಿ ಶಾಸಕ ಶ್ರೀ ಯಶಪಾಲ್ ಸುವರ್ಣ ಅವರು ಜಿಲ್ಲೆಯ ನಾಗರಿಕರ ಪರವಾಗಿ ಅಭಿನಂದನೆ ಸಲ್ಲಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಉಡುಪಿ ಧರ್ಮಪ್ರಾಂತ್ಯದಪ್ರೇಷಿತಆಡಳಿತಾಧಿಕಾರಿ ವಂ।ಡಾ।ಜೆರಾಲ್ಡ್ ಐಸಾಕ್ ಲೋಬೊ, ಕಾರ್ಯಕ್ರಮದ ಸಂಚಾಲಕರು ಹಾಗೂ ಕಲ್ಯಾಣಪುರ ಮಿಲಾಗ್ರಿಸ್ ಕ್ಯಾಥೆಡ್ರಲ್ ಧರ್ಮಗುರುಗಳಾದ ವಂ।ಫರ್ಡಿನಾಂಡ್ ಗೊನ್ಸಾಲ್ವಿಸ್, ಧರ್ಮಪ್ರಾಂತ್ಯದ ಕುಲಪತಿಗಳಾದ ವಂ।ಸ್ಟೀವನ್ ಡಿಸೋಜಾ, ಮಾಧ್ಯಮ ಸಂಯೋಜಕರಾದ ಮೈಕಲ್ ರೊಡ್ರಿಗಸ್ ಉಪಸ್ಥಿತರಿದ್ದರು.

ಸುಬ್ರಹ್ಮಣ್ಯ ಪರಿಸರದ ಮನೆಗಳಲ್ಲಿ ಶ್ರದ್ಧಾ ಭಕ್ತಿಯ ವಿಷು ಹಬ್ಬ ಆಚರಣೆ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ ಪರಿಸರದ ಮನೆಮನೆಗಳಲ್ಲಿ ವಿಷು ಹಬ್ಬವನ್ನು ಶ್ರದ್ಧಾ ಭಕ್ತಿಯಿಂದ ಬುಧವಾರ ಆಚರಿಸಲಾಯಿತು.

ಮನೆಯ ತೋಟದಲ್ಲಿ ಬೆಳೆದ ಫಲವಸ್ತುಗಳ ವಿಷುಕಣಿಯನ್ನು ಮಾಡಿ ಅದಕ್ಕೆ ಭಕ್ತಿಯಿಂದ ಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಕಿರಿಯರು ಹಿರಿಯರ ಪಾದಸ್ಪರ್ಶಿಸಿ ಆಶೀರ್ವಾದ ಪಡೆದುಕೊಂಡರು.ಕುಟುಂಬ ದೈವಗಳ ಚಾವಡಿಗಳಿರುವ ತರವಾಡು ಮನೆಗಳಲ್ಲಿ ವಿಷು ಹಬ್ಬ ಆಚರಿಸಲಾಯಿತು.ಅಲ್ಲದೆ ಮನೆ ಮನೆಗಳಲ್ಲಿ ವಿಷು ಕಣಿ ಇರಿಸಿ ಪೂಜೆ ಸಮರ್ಪಿಸಲಾಯಿತು.

ದಾಸ ನಿವಾಸ ಕಲಾ ವೇದಿಕೆಯಲ್ಲಿ

ಸುಬ್ರಹ್ಮಣ್ಯದ ದಾಸ ನಿವಾಸ ಕಲಾ ವೇದಿಕೆಯ ಆಶ್ರಯದಲ್ಲಿ ವಿಷು ಹಬ್ಬವನ್ನು ಆಚರಿಸಲಾಯಿತು. ಈ ಪ್ರಯುಕ್ತ ಫಲವಸ್ತುಗಳು, ತರಕಾರಿಗಳು, ಹಣ್ಣುಹಂಪಲು, ಪಂಚಾಂಗ, ನಂದಾದೀಪ, ಇತರ ವಸ್ತುಗಳಿಂದ ಸಿಂಗರಿಸಲ್ಪಟ್ಟ



ವಿಷುಕಣಿಯನ್ನು ಇರಿಸಲಾಯಿತು. ಬಳಿಕ ಇದಕ್ಕೆ ವೇದಿಕೆಯ ಸಂಚಾಲಕ ಕೆ. ಯಜ್ಞೇಶ್ ಆಚಾರ್ ಪೂಜೆ ನೆರವೇರಿಸಿದರು. ಬಳಿಕ ಪ್ರಸಾದ ವಿತರಣೆ ನೆರವೇರಿತು. ಈ ಮೊದಲು ವೇದಿಕೆಯ ಆಶ್ರಯದಲ್ಲಿ ಭಕ್ತಿ ಸಂಗೀತ ನೆರವೇರಿತು.

ಆರಂಭಗೊಂಡ ಕೃಷಿ ಚಟುವಟಿಕೆ

ಗ್ರಾಮೀಣ ಭಾಗದಲ್ಲಿ ಕೃಷಿಕರು ತಮ್ಮ ಕೃಷಿ ಚಟುವಟಿಕೆಯನ್ನು ಬಿಸು ಹಬ್ಬದ ಆಚರಣೆ ಮೂಲಕ ಆರಂಭಿಸಿದರು. ಧವಸ ಧಾನ್ಯಗಳಿಗೆ ಬೀಜ ಬಿತ್ತುವ ಮೂಲಕ ಕೃಷಿ ಚಟುವಟಿಕೆಗೆ ರೈತರು ಚಾಲನೆ ನೀಡಿದರು. ಗದ್ದೆಯಲ್ಲಿ ಭತ್ತವನ್ನು ಹಾಕುವುದರ ಮೂಲಕ ಭತ್ತ ಕೃಷಿಗೆ ಕೂಡಾ ಕೆಲವು ಕೃಷಿಕರು ಚಾಲನೆ ನೀಡಿದರು.

ಮನೆಮನೆಗಳಲ್ಲಿ ಹಬ್ಬದೂಟ

ವಿಷು ಹಬ್ಬವನ್ನು ಗ್ರಾಮಿಣ ಪ್ರದೇಶದ ಮನೆಮನೆಗಳಲ್ಲಿ ಆಚರಿಸಲಾಯಿತು. ಮನೆಗಳಲ್ಲಿ ಹಬ್ಬದೂಟ ಮಾಡಲಾಗಿತ್ತು. ಸಿಹಿ ತಿನಿಸುಗಳನ್ನು ಮಾಡಿ ಹಬ್ಬದ ಸಂಭ್ರಮವನ್ನು ಸವಿಯಲಾಯಿತು. ಮಕ್ಕಳು ಹಿರಿಯರು ಎನ್ನದೆ ಎಲ್ಲರೂ ಹೊಸ ಬಟ್ಟೆಗಳನ್ನು ತೊಟ್ಟು ಸಂಭ್ರಮಿಸಿದರು.

ರೈತರ, ಗ್ರಾಮಸ್ಥರ ಹಿತದೃಷ್ಟಿಯಿಂದ ಸರ್ಕಾರ ಪಾರದರ್ಶಕತೆ ಕಾಪಾಡಿಕೊಂಡು ನಿರ್ಧಾರ ಕೈಗೊಳ್ಳುವ ವಿಶ್ವಾಸ: ಡೆನ್ನಿಸ್ ಡಿಸೋಜ

ಬಳ್ಕುಂಜೆ ಭೂಸ್ವಾಧೀನ ಪ್ರಕ್ರಿಯೆ ರದ್ಧತಿಗೆ ಹಿತರಕ್ಷಣಾ ಸಮಿತಿ ಸ್ವಾಗತ

ಕಿನ್ನಿಗೋಳಿ: ಬಳ್ಕುಂಜೆ ಕೊಲ್ಲೂರು ಉಳಿಪಾಡಿ ಪ್ರದೇಶಗಳಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಇತ್ತೀಚೆಗೆ ಕೈಗೊಂಡಿರುವ ನಿರ್ಧಾರವನ್ನು ಭೂ ಸಂತಸ್ತರ ಹಿತರಕ್ಷಣಾ ಸಮಿತಿ ಸ್ವಾಗತಿಸುತ್ತದೆ ಅಧ್ಯಕ್ಷ ಡೆನ್ನಿಸ್ ಡಿಸೋಜ ತಿಳಿಸಿದ್ದಾರೆ.

ಈ ಭೂಸ್ವಾಧೀನ ಪ್ರಕ್ರಿಯೆ ಆರಂಭದಿಂದಲೇ ಸಂಪೂರ್ಣ ಅವೈಜ್ಞಾನಿಕವಾಗಿದ್ದು, ಕೆಲ ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವದಿಂದ ಕೈಗಾರಿಕೆಗೆ ಸೂಕ್ತವಲ್ಲದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಯತ್ನ ನಡೆದಿದೆ. ಮೂಲತಃ ಬೇರೆ ಗ್ರಾಮದಲ್ಲಿ ಅನುಷ್ಠಾನಗೊಳ್ಳಬೇಕಿದ್ದ ಯೋಜನೆಯನ್ನು ಯಾವುದೇ ಸಮಗ್ರ ಅಧ್ಯಯನವಿಲ್ಲದೆ ಹಾಗೂ ಸ್ಥಳೀಯ ಪರಿಸ್ಥಿತಿಗಳ ಮೌಲ್ಯಮಾಪನವಿಲ್ಲದೆ ನಮ್ಮ ಬಳ್ಕುಂಜೆ, ಕೊಲ್ಲೂರು ಮತ್ತು ಉಳಿಪಾಡಿ ಗ್ರಾಮಗಳಿಗೆ ಸ್ಥಳಾಂತರ ಮಾಡಿರುವುದು ಗಂಭೀರ ವಿಚಾರವಾಗಿದೆ. ಮಾಹಿತಿ ಹಕ್ಕಿನಡಿ ಪಡೆದ ಸರ್ಕಾರಿ ದಾಖಲೆಗಳಿಂದ ಈ ವಿಷಯ ಸ್ಪಷ್ಟವಾಗಿ ಹೊರಬಂದಿದ್ದು, ಅಷ್ಟೇ ಅಲ್ಲದೇ ಕೆಲವರ ವೈಯಕ್ತಿಕ ಹಿತಾಸಕ್ತಿಗಳಿಗಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂಬುದು ದೃಢಪಟ್ಟಿದೆ. ಇದಲ್ಲದೆ ಯಾವುದೇ ಪೂರ್ವಾಪರ ಹಿನ್ನೆಲೆ ಇಲ್ಲದೆ, ತಾಂತ್ರಿಕ ಹಾಗೂ ವೈಜ್ಞಾನಿಕ ಮಾನದಂಡಗಳನ್ನು ಪಾಲಿಸದೆ, ಒಬ್ಬರ ಪತ್ರದ ಮೂಲಕ ಸೂಚಿಸಲಾದ ಸರ್ವೇ ಸಂಖ್ಯೆಗಳನ್ನೇ ಆಧಾರವಾಗಿಸಿಕೊಂಡು ಭೂಸ್ವಾಧೀನದ ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವುದು ದಾಖಲೆಗಳಿಂದಲೇ ಬಹಿರಂಗಗೊಂಡಿದೆ. ಇದು ಆಡಳಿತಾತ್ಮಕ ವೈಫಲ್ಯವಾಗಿದೆ ಎಂದು ಅವರು ಹೇಳಿದ್ದಾರೆ.

ಈ ಅನ್ಯಾಯದ ವಿರುದ್ಧ ಭೂ ಸಂತಸ್ತರ ಹಿತರಕ್ಷಣಾ ಸಮಿತಿಯ ನೇತೃತ್ವದಲ್ಲಿ ಸ್ಥಳೀಯರು ನಿರಂತರ ಹಾಗೂ ಸಂಘಟಿತ ಹೋರಾಟ ನಡೆಸಿ, ಜನಪ್ರತಿನಿಧಿಗಳ ಸಹಕಾರದೊಂದಿಗೆ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿ, ಈ ವಿಷಯದ ಕಡೆ ಗಮನ ಸೆಳೆದಿದ್ದಾರೆ. ಪ್ರಸ್ತಾವಿತ ಭೂಸ್ವಾಧೀನದಿಂದ ಯಾವುದೇ



ಸಾರ್ವಜನಿಕ ಪ್ರಯೋಜನವಾಗುವುದಿಲ್ಲ, ಸರ್ಕಾರದ ಬೊಕ್ಕಸಕ್ಕೂ ಅನಗತ್ಯ ಆರ್ಥಿಕ ನಷ್ಟ ಉಂಟಾಗುತ್ತದೆ ಎಂಬುದನ್ನು ಸಮಗ್ರವಾಗಿ ವಿವರಿಸಿ ಪುನರ್ಪರಿಶೀಲನೆ ಮಾಡುವಂತೆ ಒತ್ತಾಯಿಸಲಾಗಿತ್ತು. ಈ ಹೋರಾಟದ ಫಲವಾಗಿ ಸರ್ಕಾರ ಸಂಬಂಧಿತ ಇಲಾಖೆಗಳ ಮೂಲಕ ಪುನರ್ ಸರ್ವೇ ಕಾರ್ಯ ನಡೆಸಿದ್ದು, ಪ್ರಸ್ತುತ ಈ ಭೂಮಿ ಕೈಗಾರಿಕಾ ಉದ್ದೇಶಗಳಿಗೆ ಸೂಕ್ತವಲ್ಲ ಎಂಬ ನಿರ್ಣಯಕ್ಕೆ ಬಂದಿರುವುದು ಅತ್ಯಂತ ಸ್ವಾಗತಾರ್ಹ ಹಾಗೂ ಸಮಂಜಸ ಕ್ರಮವಾಗಿದೆ. ಇದು ಗ್ರಾಮಸ್ಥರ ಹಿತದೃಷ್ಟಿಯಿಂದ ಮಹತ್ವದ ಜಯವಾಗಿದ್ದು, ನಮ್ಮ ಹೋರಾಟಕ್ಕೆ ನ್ಯಾಯ ದೊರೆತಂತಾಗಿದೆ ಎಂದು ಅವರು ಹೇಳಿದ್ದಾರೆ.

ಈ ಹೋರಾಟದಲ್ಲಿ ಬೆಂಬಲ ನೀಡಿದ ಜನಪ್ರತಿನಿಧಿಗಳು, ವಿಶೇಷವಾಗಿ ಮಾಧ್ಯಮಗಳು ಹಾಗೂ ಭಾಗವಹಿಸಿದ ಎಲ್ಲಾ ಗ್ರಾಮಸ್ಥರಿಗೆ ಭೂ ಸಂತಸ್ತರ ಹಿತರಕ್ಷಣಾ ಸಮಿತಿಯ ಕಡೆಯಿಂದ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತದೆ ಎಂದು ಡೆನ್ನಿಸ್ ಡಿಸೋಜ ತಿಳಿಸಿದ್ದಾರೆ.

ಸರ್ಕಾರ ಇನ್ನೂ ಮುಂದೆಯೂ ಪಾರದರ್ಶಕತೆಯನ್ನು ಕಾಪಾಡಿಕೊಂಡು ರೈತರ ಹಾಗೂ ಗ್ರಾಮಸ್ಥರ ಹಿತದೃಷ್ಟಿಯಿಂದ ನಿರ್ಧಾರಗಳನ್ನು ಕೈಗೊಳ್ಳಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸುತ್ತೇವೆ ಎಂದು ಭೂ ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಡೆನ್ನಿಸ್ ಡಿಸೋಜ ತಿಳಿಸಿದ್ದಾರೆ.

ಸೂಕ್ತ ಕ್ರಮ ಕೈಗೊಳ್ಳಬೇಕು

ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಹಿಂಪಡೆಯುವುದರ ಜೊತೆಗೆ, ಈ ಪ್ರಕ್ರಿಯೆಯಲ್ಲಿ ನಡೆದ ಅನಿಯಮಿತತೆಗಳ ಬಗ್ಗೆ ಸಮಗ್ರ ತನಿಖೆ ನಡೆಸಿ, ಹೊಣೆಗಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಾವು ಬಲವಾಗಿ ಆಗ್ರಹಿಸುತ್ತೇವೆ. ಗ್ರಾಮಸ್ಥರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಅತಿ ಶೀಘ್ರವಾಗಿ ಭೂಸ್ವಾಮ್ಯ ಹಕ್ಕುಗಳನ್ನು ಸ್ಪಷ್ಟಪಡಿಸಿ, ಕಂದಾಯ ದಾಖಲೆಗಳನ್ನು ಸರಿಪಡಿಸುವ ಮೂಲಕ ಶಾಶ್ವತ ಪರಿಹಾರ ಒದಗಿಸಬೇಕು ಎಂದು ಮನವಿ ಮಾಡುತ್ತೇವೆ.

■ ಡೆನ್ನಿಸ್ ಡಿಸೋಜ, ಭೂ ಸಂತ್ರಸ್ತರ ಹಿತರಕ್ಷಣಾ ಸಮಿತಿ ಅಧ್ಯಕ್ಷ

ಕಿರುಸುದ್ದಿ

ಸ್ಥಳೀಯ ಸಂಸ್ಥೆ ಚುನಾವಣೆ ನಡೆಸದ ಸರಕಾರ: ಪ್ರತಿಭಟನೆಗೆ ಬಿಜೆಪಿ ನಿರ್ಧಾರ

• **ಮಡಿಕೇರಿ:** ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರ ಸ್ಥಳೀಯ ಸಂಸ್ಥೆಗಳಾದ ಜಿ.ಪಂ, ತಾ.ಪಂ ಮತ್ತು ಗ್ರಾ.ಪಂ ಚುನಾವಣೆಯನ್ನು ನಡೆಸದೆ ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ ಎಂದು ಕೊಡಗು ಜಿಲ್ಲಾ ಬಿಜೆಪಿ ಆರೋಪಿಸಿದೆ. ಪತ್ರಿಕಾ ಹೇಳಿಕೆ ನೀಡಿರುವ ಜಿಲ್ಲಾ ಬಿಜೆಪಿ ವಕ್ತಾರ ತಳೂರು ಎ. ಕಿಶೋರ್ ಕುಮಾರ್ ಅವರು, ಚುನಾವಣೆ ನಡೆಸದ ಕಾಂಗ್ರೆಸ್ ಸರಕಾರ ಆಡಳಿತದಲ್ಲಿ ನಿಷ್ಕ್ರಿಯವಾಗಿದೆ. ಪಂಚಾಯಿತಿಗಳ ಅಧಿಕಾರ ಅಧಿಕಾರಿಗಳ ಕಪಿಮುಷ್ಟಿಯಲ್ಲಿರುವುದರಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂದು ಟೀಕಿಸಿದ್ದಾರೆ. ಸರಕಾರದ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಮತ್ತು ಶೀಘ್ರ ಚುನಾವಣೆ ನಡೆಸುವಂತೆ ಆಗ್ರಹಿಸಿ ಬಿಜೆಪಿ ವತಿಯಿಂದ ಕೊಡಗು ಜಿಲ್ಲೆಯ ತಾಲೂಕು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಯಲಿದೆ. ಅದರಂತೆ ಏ.24 ರಂದು ಬೆಳಗ್ಗೆ 11 ಗಂಟೆಗೆ ಮಡಿಕೇರಿಯಲ್ಲಿ ಹಾಗೂ ಏ.27 ರಂದು ಬೆಳಗ್ಗೆ 11 ಗಂಟೆಗೆ ಪೊನ್ನಂಪೇಟೆ ಮತ್ತು ಸೋಮವಾರಪೇಟೆ ತಾಲೂಕು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಕಚೇರಿ ಎದುರು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಳೂರು ಎ.ಕಿಶೋರ್ ಕುಮಾರ್ ತಿಳಿಸಿದ್ದಾರೆ.



ಏ.16 ಮತ್ತು 17 ರಂದು ಕಾಂತೂರು ಶ್ರೀಪನ್ನಂಗಾಲ ತಾಯಿಯ ವಾರ್ಷಿಕೋತ್ಸವ

• **ಮಡಿಕೇರಿ :** ಕಾಂತೂರು–ಮೂರ್ನಾಡು ಶ್ರೀ ಪನ್ನಂಗಾಲ ತಾಯಿಯ ವಾರ್ಷಿಕೋತ್ಸವವು ಏ.16 ಮತ್ತು 17 ರಂದು ನಡೆಯಲಿದೆ. ಏ.16 ರಂದು ಬೆಳಿಗ್ಗೆ ದೇವರ ಶುದ್ಧ ಕಳಸ ಪೂಜೆ, ಕೆರೆಮನೆಯಿಂದ ಭಂಡಾರ ತರುವುದು, ಎತ್ತೇರಾಟ, ದೇವರ ದರ್ಶನ ಹಾಗೂ ಸಂಜೆ 7 ಗಂಟೆಗೆ ಕುರುಂದ ಭಾರಣಿ ಜರುಗಲಿದೆ. ಏ.17 ರಂದು ಬೆಳಿಗ್ಗೆ ದೇವರ ದರ್ಶನ, ಮಧ್ಯಾಹ್ನ ಅನ್ನಸಂತರ್ಪಣೆ, ಚಾಮುಂಡಿ ಉತ್ಸವ, ದೇವರಿಗೆ ಹರಕೆ ಒಪ್ಪಿಸುವುದು ಹಾಗೂ ಕುರುಂದಾಟ ದೇವರ ಜಳಕ ನಡೆಯಲಿದೆ. ಎರಡು ದಿನ ಶ್ರದ್ಧಾಭಕ್ತಿಯಿಂದ ಜರುಗುವ ಧಾರ್ಮಿಕ ವಿಧಿ ವಿಧಾನಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ದೇವಾಲಯದ ಆಡಳಿತ ಮಂಡಳಿ ಹಾಗೂ ತಕ್ಕ ಮುಖ್ಯಸ್ಥರು ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.



ವಿಪರೀತ ಜ್ವರ: ಅಡುಗೆ ಕೆಲಸಗಾರ ಮೃತ್ಯು

• **ಬಂಟ್ವಾಳ:** ವಿಪರೀತ ಜ್ವರದಿಂದ ಬಳಲುತ್ತಿದ್ದ ವ್ಯಕ್ತಿಯೋರ್ವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟ ಘಟನೆ ಬಂಟ್ವಾಳ ತಾಲೂಕಿನ ಸಜೀಪದ ಕೊಳಕೆ ಎಂಬಲ್ಲಿ ನಡೆದಿದೆ. ಕೊಳಕೆ ನಿವಾಸಿ ರಾಜೇಶ್ ಬೆಳ್ಚಾಡ (50) ಮೃತಪಟ್ಟವರಾಗಿದ್ದಾರೆ. ಮೆಲ್ಕಾರ್‌ನ ಬಾರ್ ಮತ್ತು ರೆಸ್ಟೋರೆಂಟ್ ನಲ್ಲಿ ಅಡುಗೆ ಕೆಲಸಗಾರರಾಗಿದ್ದ ಇವರು ಕಳೆದ ನಾಲ್ಕು ದಿನಗಳಿಂದ ವಿಪರೀತ ಜ್ವರದಿಂದ ಬಳಲುತ್ತಿದ್ದ ಹಿನ್ನಲೆಯಲ್ಲಿ ಕೆಲಸಕ್ಕೆ ರಜೆ ಹಾಕಿ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಬಂಟ್ವಾಳ ಸರಕಾರಿ ಆಸ್ಪತ್ರೆಯಿಂದ ಔಷಧಿಯನ್ನು ಪಡೆದುಕೊಂಡರೂ ಜ್ವರ ಕಡಿಮೆಯಾಗದ ಹಿನ್ನೆಲೆಯಲ್ಲಿ ಮಂಗಳವಾರ ರಾತ್ರಿ ಬಿ.ಸಿ.ರೋಡಿನ ಖಾಸಗಿ ಆಸ್ಪತ್ರೆಯಲ್ಲಿ ತಪಾಸಣೆಗೊಳಪಡಿಸಿದಾಗ ವಿಪರೀತ ಜ್ವರವಿದ್ದ ಹಿನ್ನೆಲೆಯಲ್ಲಿ ಮಂಗಳೂರಿಗೆ ಕರೆದುಕೊಂಡು ಹೋಗುವಂತೆ ಸಲಹೆ ನೀಡಿದ್ದಾರೆ. ಅದರಂತೆ ಮಂಗಳೂರು ವೆನ್ ಲಾಕ್ ಆಸ್ಪತ್ರೆಯಲ್ಲಿ ಪರೀಕ್ಷಿಸಿ ಔಷಧಿ ಪಡೆದುಕೊಂಡು ವಾಪಸು ಮನೆಗೆ ಬಂದಿದ್ದರು. ಮುಂಜಾನೆ ವೇಳೆ ಜ್ವರ ಮತ್ತೆ ಉಲ್ಬಣಿಸಿದರಿಂದ ತಕ್ಷಣ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪರೀಕ್ಷೆ ನಡೆಸಿದಾಗ ಅವರು ಮೃತಪಟ್ಟಿದ್ದರು. ಈ ಬಗ್ಗೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುನೀತ್ ಕೆರೆಹಳ್ಳಿ ಬಂಧನ

• **ಬೆಳ್ತಂಗಡಿ:** 2025ರ ಪ್ರಕರಣಕ್ಕೆ ಸಂಬಂಧಿಸಿ ಬೆಳ್ತಂಗಡಿ ಪೊಲೀಸರು ಪುನೀತ್ ಕೆರೆಹಳ್ಳಿ ಅವರನ್ನು ಬೆಂಗಳೂರಲ್ಲಿ ಬಂಧಿಸಿರುವುದಾಗಿ ತಿಳಿದು ಬಂದಿದೆ. ಕೆರೆಹಳ್ಳಿ ಅವರಿಗೆ 2025ರಲ್ಲಿ ಉಜಿರೆಗೆ ಪ್ರವೇಶವನ್ನು ಜಿಲ್ಲಾಧಿಕಾರಿಯವರು ನಿರ್ಬಂಧಿಸಿದ್ದರು. ಆದರೆ ಅವರು ಆದೇಶ ಮೀರಿ ಉಜಿರೆಗೆ ಬಂದಿದ್ದರು. ಆರೋಪವಡಿ ಬೆಳ್ತಂಗಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ಸಂಬಂಧ ಮೂರು ಬಾರಿ ನೋಟೀಸ್ ಕೊಟ್ಟರೂ ವಿಚಾರಣೆಗೆ ಹಾಜರಾಗದ ಹಿನ್ನಲೆಯಲ್ಲಿ ಕೋರ್ಟ್‌ನಿಂದ ಅರೆಸ್ಟ್ ವಾರೆಂಟ್ ಪಡೆದು ಬಂಧಿಸಲಾಗಿದೆ.

ನಿಧನ ಸುದ್ದಿ

ಶಾರದಾ ಸಪಲಿಗ

ಕೈಕಂಬ: ತೆಂಕ ಎಡಪದವು ಗುತ್ತುಮನೆ ದಿ. ಡೊಂಬಯ ಸಪಲಿಗರ ಪತ್ನಿ ಶಾರದಾ (90) ಅಲ್ಪಕಾಲದ ಅನಾರೋಗ್ಯದಿಂದ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನ ಹೊಂದಿದರು. ಇವರು ಮೂವರು ಪುತ್ರರು, ಹಾಗೂ ಇಬ್ಬರು ಪುತ್ರಿಯರನ್ನು ಆಗಲಿರುತ್ತಾರೆ. ನುರಿತ ಸೂಲಗಿತ್ತಿಯಾಗಿದ್ದ ಇವರು ಗ್ರಾಮೀಣ ಪದ್ಧತಿಯಲ್ಲಿ ಸುಲಲಿತವಾಗಿ ನೂರಾರು ಹೆರಿಗೆ ಮಾಡಿಸುವಲ್ಲಿ ಹೆಸರುವಾಸಿಯಾಗಿದ್ದರು. ಇವರ ಈ ಸೇವೆಗೆ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿದೆ. ತೆಂಕ ಎಡಪದವು ಗ್ರಾಮ ಪಂಚಾಯತ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.



ಸೀತಾ ಕಾರಂತ

ಕೈಕಂಬ: ಎಡಪದವು ಸ್ವಾಮಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷ ಗೋಪಾಲ ಕಾರಂತರ ಪತ್ನಿ ಸೀತಾ ಜಿ. ಕಾರಂತ (85) ಅಲ್ಪಕಾಲದ ಅಸೌಖ್ಯದಿಂದ ಸ್ವಗೃಹದಲ್ಲಿ ಬುಧವಾರ ನಿಧನರಾದರು. ಮೃತರು ಪತಿ ಹಾಗೂ ಆರು ಪುತ್ರಿಯರನ್ನು ಅಗಲಿದ್ದಾರೆ. ಸೀತಾ ಕಾರಂತರ ನಿಧನಕ್ಕೆ ಮೂಡಬಿದ್ರಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ, ಎಡಪದವು ಸ್ವಾಮಿ ವಿವೇಕಾನಂದ ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಹಾಗೂ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.





ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಕಾಮಗಾರಿಯ ಸಂದರ್ಭ ಗುತ್ತಿಗೆದಾರ ಕಂಪೆನಿಯು ಕಲ್ಲುಗಳನ್ನು ಸ್ಫೋಟಕ ಬಳಸಿ ಸ್ಫೋಟಿಸಿ ನೀರಕಟ್ಟೆ ಎಂಬಲ್ಲಿ ಸುಮಾರು 60 ಮನೆಗಳು ಬಿರುಕು ಬಿಟ್ಟಿದ್ದು, ಈ ಹಿನ್ನೆಲೆಯಲ್ಲಿ ಸ್ಥಳೀಯರಿಂದ ಆಕ್ರೋಶ ವ್ಯಕ್ತಗೊಂಡ ಹಿನ್ನೆಲೆಯಲ್ಲಿ ಉಪವಿಭಾಗಾಧಿಕಾರಿ, ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಏ.19–21: ಶ್ರೀ ಕೋಟೆ ಮಾರಿಯಮ್ಮ ದೇವಿ ಪ್ರತಿಷ್ಠಾಪನಾ ವಾರ್ಷಿಕೋತ್ಸವ, ಮಹೋತ್ಸವ, ನಾಗದರ್ಶನ, ದೈವ ಕೋಲ

• **ಮಡಿಕೇರಿ:** ನಗರದ ನಾಲ್ಕು ಶಕ್ತಿ ದೇವತೆಗಳಲ್ಲಿ ಒಂದಾದ ಶ್ರೀ ಕೋಟೆ ಮಾರಿಯಮ್ಮ ದೇವಾಲಯದಲ್ಲಿ ಏ.19 ರಿಂದ 21ರ ವರೆಗೆ ಶ್ರೀ ಕೋಟೆ ಮಾರಿಯಮ್ಮ ದೇವಿಯ ಪ್ರತಿಷ್ಠಾಪನಾ ವಾರ್ಷಿಕೋತ್ಸವ, ನಾಗ ಪ್ರತಿಷ್ಠಾಪನಾ ಮಹೋತ್ಸವ, ನಾಗದರ್ಶನ, ಪ್ರಾಣಮೂರ್ತಿ ದೈವದ ಪ್ರತಿಷ್ಠಾಪನಾ ವಾರ್ಷಿಕೋತ್ಸವ, ಕೋಲ, ಅಗೆಲು ಸೇವೆ ನಡೆಯಲಿದೆ.



ಏ.19 ರಂದು ಸಂಜೆ 6 ಗಂಟೆಗೆ ಪಯ್ಯನೂರು ಹೆಸರಾಂತ ತಂತ್ರಿಗಳಾದ ಆಚಾರ್ಯ ಈಶ್ವರನ್ ನಂಬೂದರಿರವರ ನೇತೃತ್ವದಲ್ಲಿ ದೇವಿಯ ಸನ್ನಧಿಯಲ್ಲಿ ಧಾರ್ಮಿಕ ವಿಧಿವಿಧಾನಗಳಾದ ಆಚಾರ್ಯ ವರಣಂ, ಪುಣ್ಯಾಹ ಶುದ್ಧಿ, ಸುದರ್ಶನ ಹೋಮ, ದೇವಿ ಪೂಜೆ, ಲಲಿತಾ ಸಹಸ್ರನಾಮಾರ್ಚನೆ, ಪ್ರಸಾದ ವಿತರಣೆ ನೆರವೇರಲಿದೆ.

ಏ.20 ರಂದು ಬೆಳಿಗ್ಗೆ 6 ಗಂಟೆಗೆ ಮಹಾಗಣಪತಿ ಹೋಮ, ನವಕ ಪಂಚಗವ್ಯ ಕಳಶ ಪೂಜೆ, ನವಕ ಪಂಚಗವ್ಯ ಕಳಶಾಭಿಷೇಕ, ಸರ್ವಾಲಂಕಾರ ಮಹಾಪೂಜೆ, ಪ್ರಾಣಮೂರ್ತಿ ದೈವದ ಕಳಶ ಪೂಜೆ, ಅಲಂಕಾರ ಪೂಜೆ ಹಾಗೂ ಮಂಗಳಾರತಿ ನಡೆಯಲಿದೆ. ನಾಗ ಪ್ರತಿಷ್ಠಾಪನೆ ವಾರ್ಷಿಕೋತ್ಸವ ಪ್ರಯುಕ್ತ ಬೆಳಿಗ್ಗೆ 8 ಗಂಟೆಗೆ ಆಶ್ಲೇಷ ಬಲಿ, ನಾಗಪೂಜೆ, ಕ್ಷೀರಾಭಿಷೇಕ, 10 ಗಂಟೆಯಿಂದ ದೇವಿಯ ಸನ್ನಧಿಯಲ್ಲಿ ತುಲಾಭಾರ ಸೇವೆ, 11.30 ಗಂಟೆಗೆ ಉಡುಪಿಯ ಪೆರ್ಲಂಬಾಡಿಯ ಖ್ಯಾತ ನಾಗಪಾತ್ರಿಗಳಾದ ಶ್ರೀ ರಮಾನಂದ ಭಟ್ ಅವರಿಂದ ನಾಗದರ್ಶನ, ಮಹಾಪೂಜೆ, ಪ್ರಸಾದ ವಿತರಣೆ, ರಾತ್ರಿ 7.30ರಿಂದ ಪ್ರಾಣಮೂರ್ತಿ ದೈವ ಕೋಲ ಜರುಗಲಿದೆ.

ಏ.21 ರಂದು ಸಂಜೆ 5 ಗಂಟೆಗೆ ಪ್ರಾಣಮೂರ್ತಿಯ ಅಗೆಲು ಸೇವೆ ನಡೆಯಲಿದೆ. ವರ್ಷಕ್ಕೊಮ್ಮೆ ನಡೆಯುವ ಅಗೆಲು ಸೇವೆಗೆ ಸೇವಾರ್ಥಿಗಳು ಮುಂಚಿತವಾಗಿ ದೇವಾಲಯದಲ್ಲಿ ರಶೀದಿಯನ್ನು ಪಡೆದುಕೊಳ್ಳಬೇಕು. ಮೂರು ದಿನಗಳ ಕಾಲ ನಡೆಯುವ ಧಾರ್ಮಿಕ ವಿಧಿ ವಿಧಾನಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಶ್ರೀ ಕೋಟೆ ಮಾರಿಯಮ್ಮ ದೇವಾಲಯ ಟ್ರಸ್ಟ್ ಮನವಿ ಮಾಡಿದೆ. ಹೆಚ್ಚಿನ ಮಾಹಿತಿಗೆ 9845836204, 9902612829, 8431747514, 9902234431ನ್ನು ಸಂಪರ್ಕಿಸಬಹುದಾಗಿದೆ.

ಕುಕ್ಕೆ ಶ್ರೀ ಸುಬ್ರಹ್ಮಣ್ಯ, ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಳ: ಸೌರ ಯುಗಾದಿ ವಿಷು ಆಚರಣೆ

ಪುಣ್ಯ ಕ್ಷೇತ್ರಗಳಲ್ಲಿತ್ತು ಸಂಭ್ರಮ ಸಡಗರ

• **ಪುತ್ತೂರು/ಸುಬ್ರಹ್ಮಣ್ಯ:** ಸೌರ ಯುಗಾದಿ ವಿಷುವಿನ ಅಂಗವಾಗಿ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯ ಹಾಗೂ ಸುಬ್ರಹ್ಮಣ್ಯದ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು.

ನಾಗಾರಾಧನೆಯ ಪುಣ್ಯಕ್ಷೇತ್ರ ಸುಬ್ರಹ್ಮಣ್ಯದ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪೂರ್ವಶಿಷ್ಠ ಸಂಪ್ರದಾಯದ ಪ್ರಕಾರ ಬಿಸು ಕಣಿ ಮತ್ತು ಸೌರಮಾನ ಯುಗಾದಿಯನ್ನು ಬುಧವಾರ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಉತ್ಸವದ ನಂತರ ಸೇವೆ

ಬಿಸು ಹಬ್ಬದ ಅಂಗವಾಗಿ ಕುಕ್ಕೆ ದೇವಳದಲ್ಲಿ ಆರಂಭದಲ್ಲಿ ಬಿಸು ಕಣಿಯನ್ನು ಶ್ರೀ ದೇವರಿಗೆ ದರ್ಶನ ಮಾಡಲಾಯಿತು. ಬಳಿಕ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವರಿಗೆ ಬಿಸು ರಥೋತ್ಸವ ನಡೆಯಿತು. ರಥೋತ್ಸವ ವೇಳೆ ದೇವಸ್ಥಾನದ ಆನೆ ಯಶಸ್ವಿ ಉತ್ಸವದಲ್ಲಿ ಹೆಜ್ಜೆ ಹಾಕಿತು. ಬೆಳಗ್ಗಿನ ನಿತ್ಯ ಪೂಜೆ ಮತ್ತು ಸೇವಾದಿಗಳು ಉತ್ಸವದ ಬಳಿಕ ನಡೆಯಿತು. ಸೇವಾದಿಗಳು ನೆರವೇರದೆ ಪ್ರಪ್ರಥಮವಾಗಿ ಶ್ರೀ ದೇವರು ಉತ್ಸವ ಸ್ವೀಕರಿಸುವುದು ವರ್ಷದಲ್ಲಿ ಬಿಸುವಿನ ದಿನ ಮಾತ್ರ ಎಂಬುದು ಕ್ಷೇತ್ರದ ವಿಶೇಷವಾಗಿದೆ.

ಮುಂಜಾನೆ ಶ್ರೀ ದೇವಳದ ಗರ್ಭಗೃಹದ ಮುಂಭಾಗದಲ್ಲಿ ವಿಷು ಕಣಿಯನ್ನು ಇಡಲಾಯಿತು. ಬಳಿಕ ಶ್ರೀ ದೇವರಿಗೆ ವಿಷುಕಣಿ ದರ್ಶನ ನಡೆಯಿತು. ನಂತರ ಶ್ರೀ ದೇವರ ಹೊರಾಂಗಣ ಉತ್ಸವ ನಡೆಯಿತು. ಬಳಿಕ ರಾಜಬೀದಿಯಲ್ಲಿ ಕುಕ್ಕೆಸುಬ್ರಹ್ಮಣ್ಯ ದೇವರಿಗೆ ಚಿಕ್ಕರಥೋತ್ಸವ ನೆರವೇರಿತು. ರಥೋತ್ಸವದ ಬಳಿಕ ಶ್ರೀ ದೇವಳದ ಹೊರಾಂಗಣದಲ್ಲಿರುವ ದ್ವಾದಶಿ ಮಂಟಪದಲ್ಲಿ ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವರಿಗೆ ಪೂಜೆ ನೆರವೇರಿತು.

ಸಂಜೆ ಶ್ರೀ ದೇವಳದ ಹೊರಾಂಗಣದಲ್ಲಿ ಶ್ರೀ ದೇವರ ಬಲಿ ಉತ್ಸವ ನಡೆದ ಬಳಿಕ ಪೂರ್ವಶಿಷ್ಟ ಸಂಪ್ರದಾಯದಂತೆ ಶ್ರೀ ದೇವರ ಚಂದ್ರಮಂಡಲ ಉತ್ಸವ ನಡೆದು ಅನಂತರ ಶ್ರೀ ದೇವರ ಪೇಟೆ ಸವಾರಿ ನಡೆಯಿತು.





ಪುತ್ತೂರು ದೇವಳದಲ್ಲಿ ಆಚರಣೆ

ಸೌರ ಯುಗಾದಿ ವಿಷುವಿನ ಅಂಗವಾಗಿ ಬುಧವಾರ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದ ಒಳಾಂಗಣದಲ್ಲಿ ವಿಶೇಷವಾಗಿ ವಿಷು ಕಣಿ ಉತ್ಸವ ಬಲಿ ನಡೆಯಿತು.

ಪ್ರಾತ:ಕಾಲ ಶ್ರೀ ದೇವರ ಗರ್ಭಗುಡಿಯ ನಡೆ ತೆರೆದು ವಿಷು ಕಣಿ ದರ್ಶನದ ಬಳಿಕ ಭಕ್ತರು ಶ್ರೀ ದೇವರನ್ನು ಭೇಟಿ ಮಾಡಿ ವಿಷು ಕಾಣಿಕೆ ಸಲ್ಲಿಸಿ ಪ್ರಸಾದ ಸ್ವೀಕರಿಸಿದರು. ಅನಂತರ ದೇವಾಲಯದ ಒಳಾಂಗಣದಲ್ಲಿ ವಿಷು ಕಣಿ ಪ್ರಯುಕ್ತ ಶ್ರೀ ದೇವರ ಉತ್ಸವ ಬಲಿ ನಡೆಯಿತು. ವಿಶೇಷವಾಗಿ ಮೊದಲಿಗೆ ತಂತ್ರ ಸುತ್ತು, ಅನಂತರ ಉಡಿಕೆ ಸುತ್ತು, ಚೆಂಡೆ ಸುತ್ತಿನ ಬಳಿಕ ವಸಂತಕಟ್ಟೆ ಪೂಜೆ, ಸೇವೆಯ ವಾದ್ಯ ಸುತ್ತುಗಳು, ಶಂಖ, ಜಾಗಟೆ ಸುತ್ತು, ಬ್ಯಾಂಡ್ ವಾಲಗ ಸುತ್ತು ಮತ್ತು ಸರ್ವ ವಾದ್ಯ ಸುತ್ತು ನಡೆಯಿತು. ಬಳಿಕ ಶ್ರೀ ದೇವರು ಒಳಗಾಗಿ ಮಹಾಪೂಜೆ ನಡೆದು ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಯಿತು.

ಮಧ್ಯಾಹ್ನ ವಿಷು ಕಣಿಯ ಅಂಗವಾಗಿ ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು. ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಸೌರಮಾನ ಯುಗಾದಿ ವಿಷು ಕಣಿಯು ಜಾತ್ರೆಯ ಸಂದರ್ಭದಲ್ಲಿಯೇ ಬರುವುದರಿಂದ ಪ್ರತಿ ವರ್ಷವೂ ಬೆಳಗ್ಗಿನ ಶ್ರೀ ದೇವರ ಉತ್ಸವ ಬಲಿ ವೀಕ್ಷಿಸಲು ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳುತ್ತಾರೆ. ಮಧ್ಯಾಹ್ನ ಸಾವಿರಾರು ಮಂದಿ ವಿಷುವಿನ ವಿಶೇಷ ಅನ್ನಪ್ರಸಾದ ಸ್ವೀಕರಿಸಿದರು.

ಉತ್ಸವದ ಬಳಿಕ ನಿತ್ಯ ಪೂಜೆ

ಪ್ರತಿದಿನ ಮುಂಜಾನೆ ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವರಿಗೆ ನಡೆಯುವ ನಿತ್ಯಪೂಜೆ ಮತ್ತು ಬೆಳಗಿನ ಮಹಾಪೂಜೆಯು ಉತ್ಸವದ ಬಳಿಕ ನಡೆಯಿತು. ಬೆಳ್ಳಬೆಂಳಗೆ ಆರಂಭದಲ್ಲಿ ಪ್ರತಿನಿತ್ಯ ನಡೆಯುವ ಗೋಪೂಜೆ ಕೂಡಾ ಉತ್ಸವದ ಬಳಿಕ ನೆರವೇರಿತು. ಬೆಳಗ್ಗೆ 6ಗಂಟೆಗೆ ಆರಂಭವಾಗುವ ಆಶ್ಲೇಷ ಬಲಿ ಸೇರಿದಂತೆ ಇತರ ಸೇವೆಗಳು ಉತ್ಸವದ ನಂತರ ಆರಂಭವಾಯಿತು. ಪೂರ್ವಶಿಷ್ಠ ಸಂಪ್ರದಾಯದ ಪ್ರಕಾರ ವಿಷು ದಿನ ಶ್ರೀ ಕ್ಷೇತ್ರದಲ್ಲಿ ದೇವರ ಬೆಳಗ್ಗಿನ ನಿತ್ಯಪೂಜೆ, ದೇವರ ದರುಶನ ಮತ್ತು ಸೇವಾಧಿಗಳು ಉತ್ಸವದ ಬಳಿಕ ಆರಂಭವಾಯಿತು. ಮಂಗಳವಾರ ರಾತ್ರಿ ಮಹಾಪೂಜೆಯ ನಂತರ ವಿಷು ಪ್ರಯುಕ್ತ ಶ್ರೀ ದೇವರಿಗೆ ವಿಶೇಷ ಪಾಲಕಿ ಮತ್ತು ಬಂಡಿ ರಥೋತ್ಸವ ನೆರವೇರಿತು.

ಎಲ್ಲರ ಮನಸೂರೆಗೊಳಿಸಿತು ಕೊಡಗಿನ ಪ್ರಪ್ರಥಮ ಮಕ್ಕಳ ತಂಡದ ಯಕ್ಷಗಾನ!



• **ಮಡಿಕೇರಿ:** ಸ್ಥಳೀಯ ಮಕ್ಕಳಿಂದಲೇ ರೂಪುಗೊಂಡ ಕೊಡಗಿನ ಪ್ರಪ್ರಥಮ ಮಕ್ಕಳ ಯಕ್ಷಗಾನ ತಂಡ ನಡೆಸಿಕೊಟ್ಟ ಎರಡು ಪ್ರಸಂಗಗಳು, ಮೈತ್ರಿ ಸಮುದಾಯ ಭವನದಲ್ಲಿ ಯಶಸ್ವಿ ಪ್ರದರ್ಶನ ಕಂಡವು.

ಕಲಾಕಾವ್ಯ ನಾಟ್ಯಶಾಲೆ ಪ್ರಸ್ತುತಪಡಿಸಿದ 'ವೀರ ಅಭಿಮನ್ಯು' ಮತ್ತು 'ಶ್ರೀದೇವಿ ಮಹಾತ್ಮೆ' ಎಂಬ ಪ್ರಸಂಗಳನ್ನು ಪುಟಾಣಿ ಮಕ್ಕಳು ಅಮೋಘವಾಗಿ ಪ್ರದರ್ಶಿಸುವ ಮೂಲಕ ಪ್ರೇಕ್ಷಕರ ಹೃದಯ ಗೆದ್ದರು.

ಲೋಕ ಕಂಟಕನಾದ ಮಹಿಷಾಸುರನನ್ನು ಜಗನ್ಮಾತೆ ಸಂಹರಿಸುವ 'ಶ್ರೀದೇವಿಮಹಾತ್ಮೆ' ಪ್ರಸಂಗದಲ್ಲಿ ಮಹಿಷ, ದೇವಿ ಮತ್ತು ಸಿಂಹದ ಪಾತ್ರ ಮನೋಜ್ಞವಾಗಿತ್ತು. ಮಹಿಷಾಸುರ ಮತ್ತು ಸಿಂಹ ಪ್ರೇಕ್ಷಕರ ನಡುವಿಂದ ಎದ್ದು ಬರುವ ಸನ್ನಿವೇಶ ಮತ್ತು ಅಷ್ಟಭುಜೆ ಶ್ರೀದೇವಿಯ ರಂಗಪ್ರವೇಶ ರೋಮಾಂಚಕಾರಿಯಾಗಿತ್ತು.

ಮೊದಲ ಬಾರಿಗೆ ಯಕ್ಷಗಾನ ವೇದಿಕೆ ಏರುತ್ತಿರುವ ಮಕ್ಕಳು, ಯಾವುದೇ ಭಯ ಸಂಕೋಚಗಳಿಲ್ಲದೆ ಅಭಿನಯಿಸಿ, ಪ್ರೇಕ್ಷಕರು ಮೂಗಿನ ಮೇಲೆ ಬೆರಳಿಡುವಂತೆ ತಮ್ಮ ಪ್ರತಿಭೆ ಮೆರೆದರು. ಕೌರವರ 'ಚಕ್ರವ್ಯೂಹ' ಬೇಧಿಸುವ ವೀರ ಅಭಿಮನ್ಯುವಿನ ಸಾಹಸಗಾಥೆಯನ್ನು ಮಕ್ಕಳು ಪ್ರಸ್ತುತಪಡಿಸಿದರು. ಭಾಗವತರ ಹಾಡು, ಚಂಡೆ ಮದ್ದಲೆಗಳ ತಾಳಕ್ಕೆ ತಕ್ಕಂತೆ ನರ್ತಿಸುತ್ತಾ, ಸಂಭಾಷಣೆ ಹೇಳುತ್ತಾ ಯಕ್ಷಗಾನ ವೈಭವಕ್ಕೆ ಕಳೆತಂದುಕೊಟ್ಟರು.

ಸುಳ್ಯದ ಬಾಲಕೃಷ್ಣ ನಾಯರ್ ಗರಡಿಯಲ್ಲಿ ಕಳೆದ ಆರು ತಿಂಗಳ ತರಬೇತಿ ಪಡೆದಿರುವ ಕಲಾ ಕಾವ್ಯ ನಾಟ್ಯ ಶಾಲೆಯ ಮಕ್ಕಳು, ಕೊಡಗಿನಲ್ಲೂ ಯಕ್ಷಗಾನ ಕಲೆಯನ್ನು ಗಟ್ಟಿಗೊಳಿಸಬಹುದು ಎಂದು ನಿರೂಪಿಸಿದರು.

ಇದಕ್ಕೂ ಮುನ್ನ ನಡೆದ ಉದ್ಘಾಟನಾ ಸಮಾರಂಭದಲ್ಲಿ ಕಲಾ ಕಾವ್ಯ ನಾಟ್ಯ ಶಾಲೆಯ ಸ್ಥಾಪಕಿ ಕಾವ್ಯಶ್ರೀ, ಯಕ್ಷಗಾನ ಗುರುಗಳಾದ ತಾರಾನಾಥ ಸವಣೂರು, ಭಾಗವತರಾದ ಸುಬ್ರಾಯ ಸಂಪಾಜೆ ಹಾಗೂ ಬಾಲಭವನದ ಅಧ್ಯಕ್ಷ ರವೀಂದ್ರ ರೈ ಉಪಸ್ಥಿತರಿದ್ದರು. ಮಕ್ಕಳಿಗೆ ತರಬೇತಿ ನಿಡಿದ ಬಾಲಕೃಷ್ಣ ನಾಯರ್ ಮತ್ತು ಭರತನಾಟ್ಯ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಮಕ್ಕಳನ್ನು ಸನ್ಮಾನಿಸಲಾಯಿತು.

ಪಿಯು ಸಾಧಕರಿಗೆ ಕರವೇ ಸ್ವಾಭಿಮಾನಿ ಬಣದ ಕೊಡಗು ಘಟಕದಿಂದ ಸನ್ಮಾನ

• **ಮಡಿಕೇರಿ:** ಪಿ.ಕೃಷ್ಣೇಗೌಡ ನೇತೃತ್ವದ ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಬಣ ಕೊಡಗು ಜಿಲ್ಲಾ ಘಟಕ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ತಾಲೂಕಿನ ನಾಲ್ವರು ವಿದ್ಯಾರ್ಥಿಗಳನ್ನು ಸನ್ಮಾನಿಸಿತು.

ನಗರ ಖಾಸಗಿ ಹೊಟೇಲ್ ಸಮುದ್ರ ಸಭಾಂಗಣದಲ್ಲಿ ನಡೆದ ಸನ್ಮಾನ ಕಾರ್ಯಕ್ರಮವನ್ನು ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ದೀಪ ಬೆಳಗುವ ಮೂಲಕ ಬಣದ ಪ್ರಮುಖರು ಉದ್ಘಾಟಿಸಿದರು.

ಶಿಕ್ಷಣ ಕ್ಷೇತ್ರದಲ್ಲೂ ಬದಲಾವಣೆ

ಕರವೇ ಸ್ವಾಭಿಮಾನಿ ಬಣದ ಕೊಡಗು ಜಿಲ್ಲಾ ಉಸ್ತುವಾರಿ ತನು ಕಿಶೋರ್, ಕರವೇ ಸ್ವಾಭಿಮಾನಿ ಬಣ, ಕೊಡಗು ಜಿಲ್ಲೆಯಲ್ಲಿಯೂ ಸಮಾಜಿಕ ಸಮಸ್ಯೆಗಳ ಬಗ್ಗೆ ಹಲವು ಹೋರಾಟ ರೂಪಿಸಿದ್ದು, ಮುಂದೆಯೂ ನಡೆಯಲಿದೆ ಎಂದರು. ಕರವೇ ಸ್ವಾಭಿಮಾನಿ ಬಣದ ಜಿಲ್ಲಾಧ್ಯಕ್ಷ ಫ್ರಾನ್ಸಿಸ್ ಡಿಸೋಜಾ ಮಾತನಾಡಿ, ಕೊಡಗು ಜಿಲ್ಲಾ ಕೇಂದ್ರದಲ್ಲೂ ಪಿಯುಸಿ ಪರೀಕ್ಷೆ ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ಮೂಲಕ ಪ್ರೋತ್ಸಾಹ ನೀಡುವ ಕಾರ್ಯಕ್ರಮ ಆಯೋಜಿಸುವಂತೆ ರಾಜ್ಯ ಸಂಘಟನೆ ಸೂಚಿಸಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲಾ ಕೇಂದ್ರದಲ್ಲಿಯೂ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕಾರ್ಯಕ್ರಮ ನಡೆಯುತ್ತಿದೆ ಎಂದರು.



ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಇದೇ ಸಂದರ್ಭ ಸಂಘಟನೆಯ ಪ್ರಮುಖರು ರಾಜ್ಯಕ್ಕೆ 4ನೇ ರ್‍ಯಾಂಕ್ ಪಡೆದ ಮಡಿಕೇರಿ ನಿವಾಸಿ ಸಿಂಚನ ಪ್ರಸನ್ನ ಹೊಸಮನೆ (ಶೇ.99.5), ಎಸ್.ಎ.ಫಾತಿಮ (ಶೇ.98.66) ಚಿತ್ರಕಲಾ ಚಂದ್ರ (ಶೇ.97.6) ಹಾಗೂ ಜಿ.ಜಿ.ಮೋನಿಷಾ (ಶೇ.97) ಅವರನ್ನು ಸನ್ಮಾನಿಸಿ ಪ್ರೋತ್ಸಾಹಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವಿದಾರ್ಥಿಗಳು ಕರವೇ ಸ್ವಾಭಿಮಾನಿ ಬಣ ನಮ್ಮಗಳ ಶ್ರಮವನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಸಂತೋಷ ತಂದಿದೆ. ಇಂತಹ ಕಾರ್ಯಕ್ರಮಗಳನ್ನು ಮತ್ತಷ್ಟು ಆಯೋಜಿಸುವ ಮೂಲಕ ಇತರ ವಿದ್ಯಾರ್ಥಿಗಳಿಗೂ ಪ್ರೇರಣೆ ನೀಡುವಂತಾಗಬೇಕು. ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಶಿಕ್ಷಣ, ಸಂಘಟನೆ ಮತ್ತು ಹೋರಾಟ ಎಂಬ ವೇದವಾಕ್ಯ ಮತ್ತಷ್ಟು ವ್ಯಾಪಿಸಲಿ ಎಂದು ಆಶಿಸಿದರು.

ಸಂಘಟನೆ ಸೇರ್ಪಡೆ

ಕರವೇ ಸ್ವಾಭಿಮಾನಿ ಬಣದ ಸಾಮಾಜಿಕ ಸೇವೆಯನ್ನು ಮನಗಂಡು ಗೋಣಿಕೊಪ್ಪ ಕಾವೇರಿ ಪದವಿ ಪೂರ್ವ ಕಾಲೇಜು ಶಿಕ್ಷಕಿ, ಮೂರ್ನಾಡು ನಿವಾಸಿ ಜಶ್ಮಿ ಅವರು ಸಂಘಟನೆಗೆ ಸೇರ್ಪಡೆಯಾದರು. ಜಿಲ್ಲಾ ಉಸ್ತುವಾರಿ ತನು ಕಿಶೋರ್, ಜಿಲ್ಲಾಧ್ಯಕ್ಷ ಫ್ರಾನ್ಸಿಸ್ ಡಿಸೋಜಾ ಹಾಗೂ ಜಿಲ್ಲಾ ಘಟಕದ ಪ್ರಮುಖರು ಜಶ್ಮಿ ಅವರನ್ನು ಆತ್ಮೀಯವಾಗಿ ಸಂಘಟನೆಗೆ ಬರಮಾಡಿಕೊಂಡರು. ಸಂಘಟನೆಯ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಜಯಶ್ರೀ ಮುರುಗೇಶ್, ಜಿಲ್ಲಾ ಕಾರ್ಯದರ್ಶಿ ಸುರೇಶ್, ವಿರಾಜಪೇಟೆ ತಾಲ್ಲೂಕು ಉಸ್ತುವಾರಿ ಕಾರ್ಯಪ್ಪ, ಜಿಲ್ಲಾ ಉಪಾಧ್ಯಕ್ಷ ರಾಜೇಶ್ ಗೌಡ, ಜಿಲ್ಲಾ ಸಲಹೆಗಾರ ಸಜಿಲ್, ಮಡಿಕೇರಿ ತಾಲ್ಲೂಕು ಅಧ್ಯಕ್ಷೆ ದೀರ್ಘ, ಉಪಾಧ್ಯಕ್ಷೆ ನಂದಿನಿ ಉಪಸ್ಥಿತರಿದ್ದರು.

ಹನುಮಗಿರಿ ಶ್ರೀ ಕ್ಷೇತ್ರದಲ್ಲಿ ಧನ್ಯೋತ್ಸವ | ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್‌ಗೆ 'ಧರ್ಮ ಸೇನಾನಿ' ಬಿರುದು ಪ್ರದಾನ

ಊಹೆಗೂ ಮೀರಿ ಪುಣ್ಯ ಕಾರ್ಯ ಶಿಸ್ತುಬದ್ಧವಾಗಿ ಪೂರ್ಣ

• **ಪುತ್ತೂರು:** ಹನುಮಗಿರಿಕ್ಷೇತ್ರದ ಬ್ರಹ್ಮಕಲಶದಲ್ಲಿ ಹಲವು ಪ್ರಥಮಗಳನ್ನು ಕಂಡಿದ್ದೇವೆ. ಹತ್ತಾರು ದೇವಸ್ಥಾನದ ಬ್ರಹ್ಮಕಲಶದಲ್ಲಿ ಭಾಗವಹಿಸಿದ್ದೇನೆ. ಎಲ್ಲೂ ನಡೆಯದ ವಿಶೇಷ ಕಾರ್ಯಕ್ರಮಗಳು ಇಲ್ಲಿ ನಡೆದಿದೆ. ಹಲವು ಸಮಿತಿಗಳ ಎಲ್ಲರೂ ರಾಮ–ಹನುಮ ಸೇವಕ ಕಾರ್ಯಕರ್ತರಂತೆ ದುಡಿದು ಬ್ರಹ್ಮಕಲಶವನ್ನು ಯಶಸ್ವಿಗೊಳಿಸಿದ್ದಾರೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಹನುಮಗಿರಿ ಕೋದಂಡರಾಮ ಹಾಗೂ ಪಂಚಮುಖಿ ಆಂಜನೇಯ ದೇವರ ಬ್ರಹ್ಮಕಲಶೋತ್ಸವ ಏ.9ರಿಂದ 12ರವರೆಗೆ ಯಶಸ್ವಿಯಾಗಿ ಸಂಪನ್ನಗೊಂಡ ಹಿನ್ನಲೆಯಲ್ಲಿ ಏರ್ಪಡಿಸಲಾಗಿದ್ದ ಮಂಗಳವಾರ ಧನ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಧರ್ಮ ಸೇನಾನಿ' ಬಿರುದು ಪ್ರದಾನ

ಹನುಮಗಿರಿ ಧರ್ಮ ಶ್ರೀ ಪ್ರತಿಷ್ಠಾನದ ವತಿಯಿಂದ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ಸನ್ಮಾನಿಸಿ 'ಧರ್ಮ ಸೇನಾನಿ' ಬಿರುದು ಪ್ರದಾನ ಮಾಡಲಾಯಿತು.



ಹನುಮಗಿರಿ ಕ್ಷೇತ್ರದ ಆಡಳಿತ ಧರ್ಮದರ್ಶಿ ನನ್ಯ ಅಚ್ಚುತ ಮೂಡೆತ್ತಾಯ ಪ್ರಾಸ್ತಾವಿಸಿ, ಬ್ರಹ್ಮಕಲಶ ಎಂದರೆ ದೇವರ ಚೈತನ್ಯವನ್ನು ಪುನರಪಿ ಸೃಷ್ಟಿಸುವುದಾಗಿದೆ. ಹನುಮಂತನೊಂದಿಗೆ ರಾಮ ದೇವರಿಗೂ ಬ್ರಹ್ಮಕಲಶ ಮಾಡಬೇಕು ಎಂದು ದೈವಜ್ಞರ ಸೂಚನೆಯಂತೆ ಮಾಡಲಾಯಿತು.

> ಕಂಚಿ ಕಾಮಕೋಟಿ ಶ್ರೀಗಳ ಉಪಸ್ಥಿತಿಯಲ್ಲಿ ಬ್ರಹ್ಮಕಲಶ ನಡೆದಿರುವುದು ನಮಗೆ ಸಿಕ್ಕ ಯೋಗ. ನಾವು ಊಹಿಸದ ರೀತಿಯಲ್ಲಿ ಬ್ರಹ್ಮಕಲಶ ಕಾರ್ಯಕ್ರಮ ಶಿಸ್ತುಬದ್ಧವಾಗಿ ನಡೆದಿದೆ.
> ■ ನನ್ಯ ಅಚ್ಚುತ ಮೂಡೆತ್ತಾಯ

81 ದ್ರವ್ಯಗಳನ್ನು ಸೇರಿಸಿ ರಾಮನಿಗೆ ಹಾಗೂ ಹನುಮಂತನಿಗೆ ಬ್ರಹ್ಮಕಲಶ ಮಾಡಲಾಗಿದೆ. ದೈವಜ್ಞರು ತಿಳಿಸಿದಂತೆ ತಂತ್ರಿಗಳ ಮೂಲಕ ಸಮರ್ಪಣೆ ಮಾಡಲಾಗಿದೆ. ಕಂಚಿ ಕಾಮಕೋಟಿ ಶ್ರೀಗಳ ಉಪಸ್ಥಿತಿಯಲ್ಲಿ ಬ್ರಹ್ಮಕಲಶ ನಡೆದಿರುವುದು ನಮಗೆ ಸಿಕ್ಕ ಯೋಗ. ನಾವು ಊಹಿಸದ ರೀತಿಯಲ್ಲಿ ಬ್ರಹ್ಮಕಲಶ ಕಾರ್ಯಕ್ರಮ ಶಿಸ್ತುಬದ್ಧವಾಗಿ ನಡೆದಿದೆ. ಮೇ 29ಕ್ಕೆ ಕ್ಷೇತ್ರದಲ್ಲಿ ದೃಢಕಲಶ ನಡೆಯಲಿದೆ ಎಂದು ಹೇಳಿದರು.

ಸಮಿತಿಗಳ ಪ್ರಮುಖರಾದ ಸಾಜ ರಾಧಾಕೃಷ್ಣ ಆಳ್ವ, ಸೀತಾರಾಮ ರೈ ಕೆದಂಬಾಡಿ ಗುತ್ತು, ಶಶಿಕುಮಾರ್ ರೈ ಬಾಲ್ಯೊಟ್ಟು, ಮಹೇಶ್ ಕಜೆ, ವಿದ್ಯಾಗೌರಿ, ರಾಮಕೃಷ್ಣ ಕಾಟುಕುಕ್ಕೆ, ಆನಂದ ರೈ ಸಾಂತ್ಯ ಮತ್ತಿತರರು ಮಾತನಾಡಿದರು.

ಸದಸ್ಯರಿಗೆ ಆಯೋಧ್ಯಾ ಪ್ರಸಾದ

ಎಲ್ಲಾ ಗ್ರಾಮ ಸಮಿತಿಗಳ ಸದಸ್ಯರಿಗೆ ಆಯೋಧ್ಯೆಯಿಂದ ತಂದ ಮೃತ್ತಿಕೆ ಹಾಗೂ ಗಂಗಾಜಲವನ್ನು ನೀಡಲಾಯಿತು. ಬ್ರಹ್ಮಕಲಶದ ಸಂದರ್ಭದಲ್ಲಿ ರಾಮನಿಗೆ ಅಭಿಷೇಕ ಮಾಡಿದ ದ್ರವ್ಯಗಳಲ್ಲಿ ಒಂದಾದ ಮುತ್ತುನ್ನು ಆಗಮಿಸಿದ ಕಾರ್ಯಕರ್ತರಿಗೆ ಪ್ರಸಾದ ರೂಪವಾಗಿ ವಿತರಿಸಲಾಯಿತು. ಅದರೊಂದಿಗೆ ಹನುಮಗಿರಿ ಲಾಂಛನವಿರುವ ಟೀಶರ್ಟ್ ಕೂಡ ನೀಡಲಾಯಿತು. ಧರ್ಮದರ್ಶಿ ಶಿವರಾಮ್ ಶರ್ಮ, ನಾರಾಯಣಿ ಅಮ್ಮ ಕೊನೆತೋಟ ಮತ್ತಿತರರು ಉಪಸ್ಥಿತರಿದ್ದರು. ಶಿಕ್ಷಕಿ ರಾಜಶ್ರೀ ಪ್ರಾರ್ಥಿಸಿದರು. ಧರ್ಮದರ್ಶಿ ಶಿವರಾಮ ಪಿ. ಸ್ವಾಗತಿಸಿದರು. ಪೂಜಶ್ರೀ ನಿರ್ವಹಿಸಿದರು.



ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	5	4	1	0	8	+1.503
ರಾಜಸ್ಥಾನ	5	4	1	0	8	+0.889
ಪಂಜಾಬ್	4	3	0	1	7	+0.720
ಹೈದರಾಬಾದ್	5	2	3	0	4	+0.576
ದಿಲ್ಲಿ	4	2	2	0	4	+0.322
ಗುಜರಾತ್	4	2	2	0	4	-0.029
ಲಖನೌ	5	2	3	0	4	-0.804
ಚೆನ್ನೈ	5	2	3	0	4	-0.846
ಮುಂಬೈ	4	1	3	0	2	-0.772
ಕೆಕೆಆರ್	5	0	4	1	1	-1.383

ಕಿರುಸುದ್ದಿ

ರಹಾನೆಗೆ 12 ಲಕ್ಷ ರೂ. ದಂಡ

ಚೆನ್ನೈ: ನಿಧಾನಗತಿ ಓವರ್ ಮಾಡಿದ್ದಕ್ಕಾಗಿ ಕೆಕೆಆರ್ ತಂಡದ ಅಜಿಂಕ್ಯಾ ರಹಾನೆ ಅವರಿಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ. ಮಂಗಳವಾರ ನಡೆದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯವೂ ತಡವಾಗಿ ಮುಕ್ತಾಯಗೊಂಡಿತು. ಮೊದಲ ಇನ್ನಿಂಗ್ಸ್ ನಿಗದಿತ 1 ಗಂಟೆ 30 ನಿಮಿಷದಲ್ಲಿ ಮುಕ್ತಾಯಗೊಂಡಿರಲಿಲ್ಲ. ಪರಿಣಾಮ ನಾಯಕ ರಹಾನೆಗೆ ದಂಡ ವಿಧಿಸಲಾಗಿದೆ. ಬಹುತೇಕ ಪ್ರತಿ ಪಂದ್ಯದಲ್ಲೂ ದಂಡ ವಿಧಿಸಲಾಗುತ್ತಿದೆ. ಈಗಾಗಲೇ ಗಾಯಕ್ವಾಡ್, ಗಿಲ್, ಶ್ರೇಯಸ್, ಅಕ್ಷರ್ ಮತ್ತು ಇತ್ಯಾದಿ ನಾಯಕರಿಗೂ ದಂಡ ವಿಧಿಸಲಾಗಿದೆ. ಎರಡನೇ ನಿರಂತರ ಪಂದ್ಯದಲ್ಲೂ ಹೀಗಾದರೆ 24 ಲಕ್ಷ ರೂ. ದಂಡ ವಿಧಿಸಲಾಗುತ್ತದೆ.

ಇಟಲಿ ಟೆನಿಸ್ ಕ್ರಾಂತಿಗೆ ಸಿನ್ನರ್ ಸ್ಫೂರ್ತಿ

ಹೊಸದಿಲ್ಲಿ: ಇಟಲಿಯ ಟೆನಿಸ್ ವಲಯ ದಿನೇದಿನೇ ಬಲವಾಗುತ್ತಿದ್ದು, ವಿಶ್ವದ ಗಮನ ಸೆಳೆಯುತ್ತಿದೆ. ವಿಶ್ವ ನಂ.1 ಆಟಗಾರ ಯಾನಿಕ್ ಸಿನ್ನರ್ ನೇತೃತ್ವದಲ್ಲಿ ಇಟಲಿ ಮತ್ತೊಂದು ಮಹತ್ವದ ಟೂರ್ನಿಯನ್ನು ಸೇರ್ಪಡೆಗೊಳಿಸಿದೆ. ಇಟಾಲಿಯನ್ ಟೆನಿಸ್ ಮತ್ತು ಪ್ಯಾಡೆಲ್ ಫೆಡರೇಶನ್ ಬ್ರುಸೆಲ್ಸ್‌ನಲ್ಲಿ ನಡೆಯುತ್ತಿದ್ದ ಎಟಿಪಿ 250 ಮಟ್ಟದ ಟೂರ್ನಿಯ ಹಕ್ಕುಗಳನ್ನು ಖರೀದಿಸಿದ್ದು, 2028ರಿಂದ ಪ್ರತಿ ಜೂನ್‌ನಲ್ಲಿ ಈ ಸ್ಪರ್ಧೆಯನ್ನು ಆಯೋಜಿಸಲು ನಿರ್ಧರಿಸಿದೆ. ಈ ಕುರಿತು ಫೆಡರೇಶನ್ ಅಧ್ಯಕ್ಷ ಅಂಜೆಲೊ ಬಿನಾಘಿ ಮಾಹಿತಿ ನೀಡಿದ್ದಾರೆ. ಈ ಟೂರ್ನಿಯನ್ನು ಉತ್ತರ ಇಟಲಿಯಲ್ಲಿ ಆಯೋಜಿಸುವ ಸಾಧ್ಯತೆ ಹೆಚ್ಚಿದ್ದು, ಸ್ಥಳದ ಕುರಿತು ಇನ್ನೂ ಅಂತಿಮ ನಿರ್ಧಾರವಾಗಿಲ್ಲ. ಮಿಲಾನ್‌ನ ಸಾನ್ ಸಿರೋ ಕ್ರೀಡಾಂಗಣದಲ್ಲಿಯೇ ಫುಟ್‌ಬಾಲ್ ಮೈದಾನದಲ್ಲಿ ಈ ಸ್ಪರ್ಧೆ ನಡೆಯುವ ಸಾಧ್ಯತೆಯೂ ಚರ್ಚೆಯಲ್ಲಿದೆ. ಇದಕ್ಕೂ ಮೊದಲು ಮ್ಯಾಡ್ರಿಡ್ ಓಪನ್‌ನಲ್ಲಿ ಸಾಂಟಿಯಾಗೋ ಬೆರ್ನಬೇವು ಕ್ರೀಡಾಂಗಣದಲ್ಲಿ ಅಭ್ಯಾಸ ಕೋರ್ಟ್‌ಗಳನ್ನು ನಿರ್ಮಿಸುವ ಯೋಜನೆ ಜಾರಿಯಲ್ಲಿದೆ. ಇದೇ ಮಾದರಿಯಲ್ಲಿ ಸಾನ್ ಸಿರೋ ಕೂಡ ಬಳಸುವ ಯೋಚನೆ ಇದೆ. ಇಟಲಿ ಈಗಾಗಲೇ ಎಟಿಪಿ ಫೈನಲ್ಸ್ (ಟುರಿನ್‌ನಲ್ಲಿ 2030ರವರೆಗೆ) ಮತ್ತು ಡೆವಿಸ್ ಕಪ್ ಫೈನಲ್ಸ್ (ಬೊಲೋನಿಯಾದಲ್ಲಿ ಮುಂದಿನ ವರ್ಷವರೆಗೆ) ಆತಿಥ್ಯ ವಹಿಸುತ್ತಿದೆ. ಜೊತೆಗೆ ಮುಂದಿನ ತಿಂಗಳು ಇಟಾಲಿಯನ್ ಓಪನ್ ಕೂಡ ನಡೆಯಲಿದೆ.

ಹೈದರಾಬಾದ್ ಪಂದ್ಯಕ್ಕೆ ಧೋನಿ?

ಚೆನ್ನೈ: ಮಹೇಂದ್ರ ಸಿಂಗ್ ಧೋನಿ ಅವರನ್ನು ನೋಡಲು ಕಾತರದಿಂದ ಕಾಯುತ್ತಿರುವ ಸಹಸ್ರಾರು ಕ್ರಿಕೆಟ್ ಅಭಿಮಾನಿಗಳಿಗೆ ಖುಷಿ ವಿಚಾರ ಸಿಕ್ಕಿದ್ದು ಭಾನುವಾರ ನಡೆಯಲಿರುವ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವುದಕ್ಕೆ ಸಿದ್ಧರಾಗಿದ್ದಾರೆ. ಕಾರ್ಫ್ ಸ್ಟ್ರೈನ್‌ನಿಂದ ಬಳಲುತ್ತಿರುವ ಅವರು 2026 ಆವೃತ್ತಿಯಲ್ಲಿ ಯಾವುದೇ ಪಂದ್ಯದಲ್ಲ ಕಣಕ್ಕಿಳಿದಿಲ್ಲ. ಕೆಕೆಆರ್ ವಿರುದ್ಧದ ಪಂದ್ಯದಲ್ಲಿ ಗೆದ್ದ



ನಂತರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡುವಾಗ ಚೆನ್ನೈ ತಂಡದ ಪ್ರಧಾನ ಕೋಚ್ ಸ್ಟೀಫನ್ ಫ್ಲೆಮ್ಮಿಂಗ್, ಧೋನಿ ಶೇ. 100ರಷ್ಟು ಚೇತರಿಸಿಕೊಂಡಿದ್ದಾರೆ. ತೀಕ್ಷ್ಣವಾಗಿ ಅಭ್ಯಾಸವೂ ಶುರು ಮಾಡಿದ್ದಾರೆ. ನಮಗೆ ಮುಂದಿನ ಪಂದ್ಯ ಅಂದರೆ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವ ನಿರೀಕ್ಷೆಯಿದೆ ಎಂದಿದ್ದಾರೆ.

ಚಿನ್ನಸ್ವಾಮಿಯಲ್ಲಿ ಲಖನೌದಿಂದ ಸಾಮಾನ್ಯ ಗುರಿ | ರಸಿಖ್, ಭುವನೇಶ್ವರ್ ದಾಳಿಗೆ ಬಸವಳಿದ ಪಂತ್ ಪಡೆ

ಕೆಂಪು ಸಾಗರದಲ್ಲಿ ಮಿಂಚಿದ ಆರ್‌ಸಿಬಿ

ಚಿತ್ರ: ಮೋಹನ್ ಕುಮಾರ್ ಬಿ.ಎನ್.



ಪೃಥ್ವಿರಾಜ್ ಕುಲಕರ್ಣಿ

ಬೆಂಗಳೂರು: ಮೈದಾನವೆಂಬ ಮರಳಲ್ಲಿ ಸಾಗರದಂತೆ ಹರಡಿದ್ದ ಬೆಂಗಳೂರಿನ ಅಭಿಮಾನಿಗಳು ಬುಧವಾರ ಪಂದ್ಯದುದ್ದಕ್ಕೂ ಸಂಭ್ರಮದಲ್ಲಿ ತೇಲಾಡಿದರು. ಲಖನೌ ತಂಡದ ಲಗಾಮು ಹಿಡಿದು ಸಾಗರದಲ್ಲಿ ಮಿಂಚಿದ ಬೆಂಗಳೂರು ಮತ್ತೊಮ್ಮೆ ರಾಯಲ್ ಆಟ ಪ್ರದರ್ಶಿಸಿದ್ದು, ಚಿನ್ನಸ್ವಾಮಿಯ ಅಂಗಳದಲ್ಲಿ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಲಖನೌ ತಂಡವನ್ನು 146 ರನ್‌ಗಳಿಗೆ ಆಲೌಟ್ ಮಾಡಿದ ಆರ್‌ಸಿಬಿ 15.2 ಓವರ್‌ಗಳಲ್ಲಿ ಹೊಡೆದಿದೆ.

ವೇಗಿಗಳ ಆರ್ಭಟಕ್ಕೆ ಸ್ಪಿನ್ನರ್‌ಗಳ ಕರಾರುವಾಕ್ ದಾಳಿ ಕೂಡಿದ ನಂತರ ಲಖನೌ ಒಂದೊಂದು ರನ್ ಪಡೆಯಲು ತಿಣುಕಾಡಿತು. ರಸಿಕ್ ಸಲಾಂ ದಾರ್ (4-0-24-4) ಆರ್‌ಸಿಬಿ ಅಭಿಮಾನಿಗಳ ಪಾಲಿನ ಹೀರೋ. ಭುವನೇಶ್ವರ್ ಕುಮಾರ್ (4-0-27-3) ಲಖನೌ ಪಾಲಿನ ದುಃಸ್ವಪ್ನವಾದರು. ಕೃಣಾಲ್ ಪಾಂಡ್ಯ(4-0-38-2) ಕೂಡ ಮಿಂಚಿದರು. ಇನ್ನು ಕೊಹ್ಲಿ 49 ರನ್ ಗಳಿಸಿ ಬೆಸ್ಟ್ ಬ್ಯಾಟರ್ ಅನ್ನಿಸಿಕೊಂಡರು. ಪಾಟಿದಾರ್, ಜಿತೇಶ್ ಕೂಡ ಮಿಂಚಿದರು.

ಲಖನೌ ಗಿ/ಖ ಆರ್‌ಸಿಬಿ ರನ್ ಮಟ್ಟ: ಮೊದಲು ಬ್ಯಾಟಿಂಗ್ ಗಿಳಿದ ಲಖನೌ ಸೂಪರ್ ಜೇಂಟ್ಸ್ ಆರಂಭದಿಂದಲೂ ಸಿಂಗಲ್‌ಗಳ ಮೇಲೆ ಅವಲಂಭಿತವಾಗಿತ್ತು. ಕಡಿವಾಣ ಹಾಕಿದ ಆರ್‌ಸಿಬಿ ವೇಗಿಗಳು ಉತ್ತಮ ಬೌಲಿಂಗ್‌ನೊಂದಿಗೆ ಮಿಂಚಿದರು. ಮರ್ಕ್ರಂ 12 ರನ್‌ಗೆ ವಿಕೆಟ್ ಕಳೆದುಕೊಂಡರು. ಮಾರ್ಷ್ ಸಿಂಗಲ್-ಟುಡಿಗಳ ಮೂಲಕ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. ಆದಾಗ್ಯೂ ಒಂದೆರಡು ಬೌಂಡರಿಗಳೊಂದಿಗೆ ಮಿಂಚಿದ ನಂತರ ಲಖನೌ ಪವರ್‌ಪ್ಲೇನಲ್ಲಿ 1 ವಿಕೆಟ್‌ಗೆ 35 ರನ್ ಗಳಿಸಿತು.

ಇತ್ತ ಆರ್‌ಸಿಬಿ ಪವರ್‌ಪ್ಲೇನಲ್ಲಿ ಹೆಚ್ಚು ಬೌಂಡರಿಗಳಿಂದ ರನ್ ಮಾಡಿತು. ವಿರಾಟ್ ಕೊಹ್ಲಿ ಮೊದಲಿನಿಂದಲೂ ಅಬ್ಬರದ ಬ್ಯಾಟಿಂಗ್ ಶುರು ಮಾಡಿದರು. 6 ಭರ್ಜರಿ ಬೌಂಡರಿಗಳೊಂದಿಗೆ ಮಿಂಚಿದ ಅವರು ಲಖನೌ ಬೌಲರ್‌ಗಳ ಮೇಲೆ ಒತ್ತಡ ಹೇರಿದರು. ಇತ್ತ ಸಾಲ್ಟ್ ಔಟಾದ ನಂತರ ಪಡಿಕ್ಕಲ್ ಸೆಟ್ ಆಗುವತ್ತ ಸಾಗಿದರು. ಪವರ್‌ಪ್ಲೇನಲ್ಲಿ ಬೆಂಗಳೂರು 60 ರನ್ ಗಳಿಸಿತು.

ಕೃಣಾಲ್ ಸ್ಟ್ರೈಕ್: ಆರ್‌ಸಿಬಿ ವಿರುದ್ಧ 53 ರನ್ ಅವರೇಜ್ ಹೊಂದಿರುವ ರಿಷಭ್ ಪಂತ್ ಮೊಣಕೈ ಗಾಯದಿಂದಾಗಿ ಹೊರನಡೆದರು. ಮಧ್ಯಮ ಓವರ್ ಶುರುವಿನಲ್ಲಿ ಎರಡು ವಿಕೆಟ್ ಕಳೆದುಕೊಂಡಿದ್ದ ಲಖನೌ ರನ್‌ರೇಟ್ ಹೆಚ್ಚಿಸುವ ಜವಾಬ್ದಾರಿಗೆ ಬಿದ್ದಿತು. ಆದರೆ ಏಳನೇ ಓವರ್ ಮೊದಲನೇ ಬಾಲ್‌ನಲ್ಲೇ ಪೂರಣ್ ಕ್ಲೀನ್ ಬೋರ್ಡ್ ಆದರು. ಆಯುಷ್ ಮತ್ತು ಮಾರ್ಷ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡಿದ್ದ ಮಾರ್ಷ್ ಇನ್ನೇನು ದಂಡಿಸಲಾರಂಭಿಸುತ್ತಿದ್ದಂತೆ ದಾಳಿಗಿಳಿದ ಕೃಣಾಲ್ ಪಾಂಡ್ಯ ತಮ್ಮ ಐಪಿಎಲ್ ವೃತ್ತಿಜೀವನದ 100ನೇ ವಿಕೆಟ್ ಪಡೆದು ಸಂಭ್ರಮಿಸಿಬಿಟ್ಟರು. ಅಷ್ಟಕ್ಕೆ ನಿಲ್ಲದೆ ಅಬ್ದುಲ್ ಸಮದ್‌ಗೂ ಪೆವಿಲಿಯನ್ ಹಾದಿ ತೋರಿಸಿದರು. ಮುಕುಲ್ ಮತ್ತು ಆಯುಷ್ ಮಧ್ಯಮ ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ ನಿಂತರು. ಬೌಂಡರಿ ಮತ್ತು ಸಿಕ್ಸರ್‌ಗಳ ಮೂಲಕ 38 ರನ್ ಬಾರಿಸಿದ್ದ ಆಯೂಷ್ ಬದೋನಿ ಜಿತೇಶ್ ಶರ್ಮ ಮಾಡಿದ ಅದ್ಭುತ ಕ್ಯಾಚ್‌ಗೆ ಕೊಟ್ಟರು. ಮಧ್ಯಮ ಓವರ್‌ಗಳಲ್ಲಿ (7-15) ಲಖನೌ 83 ರನ್ ಗಳಿಸಿತು. ಆರ್‌ಸಿಬಿ ಅಲ್ಲೂ 4 ವಿಕೆಟ್ ಪಡೆಯಿತು.

ಇತ್ತ ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ ಹೆಚ್ಚಿನ ರನ್ ಗಳಿಸುವ ಒತ್ತಡವೇನು ಹೊಂದಿರಲಿಲ್ಲ. ಕೊಹ್ಲಿ ಸೆಟ್ ಆಗಿ ಅರ್ಧಶತಕದತ್ತ ಸಾಗಿದ್ದರು. ಪಡಿಕ್ಕಲ್ 10 ರನ್‌ಗೆ ವಿಕೆಟ್ ಒಪ್ಪಿಸಿದರು. ಬಳಿಕ ಬ್ಯಾಟಿಂಗ್‌ಗಿಳಿದ ನಾಯಕ ರಜತ್ ಪಾಟಿದಾರ್ ಅಬ್ಬರದ ಬ್ಯಾಟಿಂಗ್‌ಗೆ ಮುಂದಾದರು. ಸೆಟ್ ಆಗುವ ಯಾವುದೇ ಮುಲಾಜಿಗೆ ಬೀಳದ ಅವರು, ಸಿಕ್ಸರ್‌ಗಳೊಂದಿಗೆ ಡೀಲ್ ಮಾಡಲಿಳಿದರು. ಕೊಹ್ಲಿ 49 ರನ್‌ಗೆ ವಿಕೆಟ್ ಒಪ್ಪಿಸಿದರು. ಅವರ 34 ಬಾಲ್‌ಗಳ ಇನ್ನಿಂಗ್ಸ್‌ನಲ್ಲಿ 6 ಬೌಂಡರಿ, 1 ಸಿಕ್ಸರ್ ಕೂಡ ಸೇರಿದೆ. ಅವರು ವಿಕೆಟ್ ಒಪ್ಪಿಸಿದ ನಂತರ ಜಿತೇಶ್ ಪಾಟಿದಾರ್‌ಗೆ ಸಾಥ್ ನೀಡಿದರು. ಬಾನೆತ್ತರದ ಸಿಕ್ಸರ್‌ಗಳಿಗೆ ಮೈದಾನವೇ ಸಂಭ್ರಮಿಸಿತು. ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲೇ ಪಂದ್ಯ ಗೆದ್ದುಕೊಂಡಿತು. ಈ ಸರದ್ದಿನಲ್ಲಿ ಒಂದೆರಡು ವಿಕೆಟ್ ಪಡೆದ ಲಖನೌ ಕೇವಲ ಓವರ್ ಹಿಗ್ಗಿಸಲೆತ್ನಿಸಿತು. ಆರ್‌ಸಿಬಿ 15.2 ಓವರ್‌ಗಳಲ್ಲಿ ಪಂದ್ಯ ಮುಗಿಸಿತು.

ಡೆತ್ ಓವರ್: ಆರ್‌ಸಿಬಿಗೆ ನಾಗಾಲೋಟ್. ಮಧ್ಯಮ ಓವರ್‌ಗಳ ನಂತರ ಲಖನೌ 118 ರನ್ ಮಾತ್ರ ಗಳಿಸಿತ್ತು. ನಿರೀಕ್ಷಿತ ಡೆತ್ ಓವರ್‌ಗಳಲ್ಲಿ ರನ್ ಹೊಳೆ ಹರಿಸುವ ಲಖನೌ ಯತ್ನಕ್ಕೆ ಭುವನೇಶ್ವರ್ ಕುಮಾರ್ ತಡೆಯೊಡ್ಡಿದರು. ಬದೋನಿ ವಿಕೆಟ್ ಬಿದ್ದ ನಂತರ ಪಂತ್ ಮೈದಾನಕ್ಕೆ ಮರಳಿದರು. 1 ರನ್ ಮಾತ್ರ ಗಳಿಸಿ ಸಾಲ್ಟ್ ಅವರ ಅದ್ಭುತ ಕ್ಯಾಚ್‌ಗೆ ಬಲಿಯಾದರು. 19ನೇ ಓವರ್ ಬೌಲಿಂಗ್ ಮಾಡಲು ಬಂದ ಭುವನೇಶ್ವರ್ ಕುಮಾರ್ ಸರಸರನೇ ಲಿಂಡೆ, ಶಮಿ ವಿಕೆಟ್ ಪಡೆದರು. ಮುಕುಲ್ ಚೌಧರಿ ಒಂದು ಹಂತದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡುವುದಕ್ಕೆ ಕಾಯುತ್ತಿದ್ದರು. ಆದರೆ ಕೊನೆಯ ಓವರ್‌ನಲ್ಲಿ ರಸಿಖ್ ಸಲಾಂ ಆಡಲಾಗದ ಯಾರ್ಕರ್ ಎಸೆದುಬಿಟ್ಟರು. ಅಲ್ಲದೆ, ಕೊನೆಯ ವಿಕೆಟ್ ಅನ್ನೂ ಪಡೆದು ದಿನದ ಹೀರೋ ಅನ್ನಿಸಿಕೊಂಡರು. ಡೆತ್ ಓವರ್‌ನಲ್ಲಿ ಲಖನೌ 28 ರನ್‌ಗೆ 5 ವಿಕೆಟ್ ಕಳೆದುಕೊಂಡಿತು.

ಕೊಹ್ಲಿ ಇಂಪ್ಯಾಕ್ಟ್ ಪ್ಲೇಯರ್


ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಹಿಂದೆಂದೂ ನಡೆಯದ ವಿಸ್ಮಯ ನಡೆಯಿತು. ಅಭಿಮಾನಿಗಳ ಹೀರೋ, ಆರ್‌ಸಿಬಿ ತಂಡದ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಇಂಪ್ಯಾಕ್ಟ್ ಆಟಗಾರರಾದರು. ಭಾನುವಾರ ನಡೆದಿದ್ದ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದ ವೇಳೆ ಗಾಯಗೊಂಡಿದ್ದ ಕೊಹ್ಲಿ ಫೀಲ್ಡಿಂಗ್ ಮಾಡಿರಲಿಲ್ಲ. ಆದರೆ ಪಂದ್ಯಕ್ಕೂ ಮುನ್ನ ನಡೆದ ಅಭ್ಯಾಸದ ವೇಳೆ ಕೊಹ್ಲಿ ಕಾಣಿಸಿಕೊಂಡಿದ್ದನ್ನು ನೋಡಿದ ಅಭಿಮಾನಿಗಳು ಹಿರಿಹಿರಿ ಹಿಗ್ಗಿದ್ದರು. ಆದರೆ ಅದೇ ಗಾಯದ ಸಮಸ್ಯೆಯಿಂದ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಕೊಹ್ಲಿ ಕಣಕ್ಕಿಳಿಯಲಿಲ್ಲ. ಆದರೆ ಬ್ಯಾಟಿಂಗ್‌ಗೆ ಬಂದರು.

ಸಂಕ್ಷಿಪ್ತ ಸ್ಕೋರ್

ಲಖನೌ: 146/10 (20)
ಮಾರ್ಷ್ 40(32), ಬಡೋನಿ 38(24), ಮುಕುಲ್ 39(28), ಭುವನೇಶ್ವರ್ 27ಕ್ಕೆ 3, ರಸಿಕ್ 24ಕ್ಕೆ 4, ಕೃಣಾಲ್ 38ಕ್ಕೆ 2, ಹೆಜೆಲ್‌ವುಡ್ 20ಕ್ಕೆ 1
ಆರ್‌ಸಿಬಿ: 149/5 (15.1)
ವಿರಾಟ್ 49(34), ರಜತ್ 27(13), ಜಿತೇಶ್ 23(9), ಡೇವಿಡ್ 14(8)★, ಶೆಫರ್ಡ್ 14(8)★.
ಪ್ರಿನ್ಸ್ 32ಕ್ಕೆ 3, ಆವೇಶ್ 23ಕ್ಕೆ 2.

ಚೆನ್ನೈಗೆ ಸೂಪರ್ ಗೆಲುವು | ಕೆಕೆಆರ್‌ಗೆ ಮತ್ತೆ ಸಿಎಸ್‌ಕೆ

ನೂರ್ ಸ್ಪಿನ್, ಚೆನ್ನೈ ವಿನ್



ಚೆನ್ನೈ: ಸೋಲಿನ ಸರಪಳಿ ಮುರಿದುಕೊಂಡಿದ್ದ ಚೆನ್ನೈ ಸತತ ಎರಡನೇ ಗೆಲುವು ಸಾಧಿಸಿ ಪುಟಿದೇಳುವ ಭರವಸೆಯಲ್ಲಿ ಕಾಣಿಸಿಕೊಂಡಿದೆ. ದಿಲ್ಲಿ ಪಂದ್ಯದ ಗೆಲುವಿನ ನಂತರ ಕೆಕೆಆರ್ ತಂಡವನ್ನು 32 ರನ್‌ಗಳಿಂದ ಸೋಲಿಸಿದೆ. ಸಂಜು ಸ್ಯಾಮ್ಸನ್, ಡೆವಾಲ್ಡ್ ಬ್ರೇವಿಸ್ ಹಾಗೂ ಆಯುಷ್ ಮಾತ್ರೆ ಅವರ ಸ್ಫೋಟಕ ಬ್ಯಾಟಿಂಗ್ ನಂತರ ನೂರ್ ಅಹ್ಮದ್ ಹಾಗೂ ಅಕೀಲ್ ಹುಸೈನ್ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಗೆಲುವಿನೋಟಕ್ಕೆ ಮರಳಿದೆ.

ಹಿಂದಿನ ಆವೃತ್ತಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಚೆನ್ನೈ ಹೊಸ ಆವೃತ್ತಿಯಲ್ಲೂ ಆರಂಭಿಕ ಆಘಾತ ಎದುರಿಸಿತ್ತು. ಬೆಂಗಳೂರು, ಪಂಜಾಬ್ ಮತ್ತು ರಾಜಸ್ಥಾನ ವಿರುದ್ಧದ ಪಂದ್ಯಗಳಲ್ಲಿ ಭಾರೀ ಸೋಲನುಭವಿಸಿತು.

ದಿಲ್ಲಿ ವಿರುದ್ಧದ ಪಂದ್ಯದಲ್ಲಿ ಗೆದ್ದ ನಂತರ ಕಂಬ್ಯಾಕ್ ಮಾಡಿರುವ ಚೆನ್ನೈ ಮಂಗಳವಾರದಂದು ಕೆಕೆಆರ್ ಪಡೆಯನ್ನು ಮಣಿಸಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ 192 ರನ್ ಗಳಿಸಿತು. ಗುರಿ ಬೆನ್ನತ್ತಿದ ಕೆಕೆಆರ್ 7 ವಿಕೆಟ್ ನಷ್ಟಕ್ಕೆ 167 ರನ್ ಮಾತ್ರ ಗಳಿಸಿ ಸೋಲೊಪ್ಪಿಕೊಂಡಿತು. ನೂರ್ ಅಹ್ಮದ್ ಗೆಲುವಿನ ಶ್ರೇಯ ಪಡೆದರು. 21 ರನ್ ಮಾತ್ರ ನೀಡಿ 3 ವಿಕೆಟ್ ಪಡೆದ ಅವರು ಪಂದ್ಯ ಗೆಲ್ಲಿಸಿದ ಹೀರೋ ಅನ್ನಿಸಿಕೊಂಡರು. ಇತ್ತ ಕೆಕೆಆರ್ ಪರ ಯಾವುದೇ ಬ್ಯಾಟಿಗರೂ ಗೆಲುವಿನಾಟ ಆಡಲೇ ಇಲ್ಲ. ಬೌಲಿಂಗ್‌ನಲ್ಲಿ ಸುನಿಲ್ ನರೈನ್ ಅಲ್ಪ ಪ್ರಯತ್ನ ಪಟ್ಟರು.

ಪಂದ್ಯದಲ್ಲಿ ಇಬ್ಬನಿ ತೀರಾ ದೊಡ್ಡ ಪಾತ್ರ ವಹಿಸಿದರೂ, ಕೆಕೆಆರ್ ತಂಡದ ಮೇಲೆ ಭಾರೀ ಒತ್ತಡ ಹೇರಿದ ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯವನ್ನು ಅಲ್ಲೇ ಗೆದ್ದಿತು. ಮೊದಲು ಬ್ಯಾಟಿಂಗ್ ಮಾಡುವಾಗ ಪವರ್‌ಪ್ಲೇನಲ್ಲಿ 72, ಮಧ್ಯಮ ಓವರ್‌ಗಳಲ್ಲಿ 90 ಮತ್ತು ಅಂತಿಮ ಓವರ್‌ಗಳಲ್ಲಿ 30 ರನ್ ಗಳಿಸಿತು.

ತತ್ತರಿಸಿದ ಕೆಕೆಆರ್: ಕೆಕೆಆರ್ ಪರ ಸುನಿಲ್ ನರೈನ್ 24, ರಹಾನೆ 28 ಮತ್ತು ರಘುವಂಶಿ 27 ರನ್ ಗಳಿಸಿದ್ದರು. ಪವರ್‌ಪ್ಲೇನಲ್ಲಿ 36 ರನ್ ಮಾತ್ರಕ್ಕೆ 2 ವಿಕೆಟ್‌ಗಳನ್ನು ಕಳೆದುಕೊಂಡಿದ್ದ ಕೋಲ್ಕತ್ತಾ ಮಧ್ಯಮ ಓವರ್‌ಗಳಲ್ಲಿ ಭಾರೀ ಹಿನ್ನಡೆ ಅನುಭವಿಸಿತು. ಚೆನ್ನೈನ ಸ್ಪಿನ್ ದಾಳಿಗೆ ಉರುಳಿದ ನಂತರ 84 ರನ್ ಗಳಿಸಿ 4 ವಿಕೆಟ್ ಕಳೆದುಕೊಂಡಿತು. ಆದಾಗ್ಯೂ ಅಂತಿಮದಲ್ಲಿ ರಮಣದೀಪ್ ಹಾಗೂ ಪೋವೆಲ್ ಅವರ 63 ರನ್‌ಗಳ ಜೊತೆಯಾಟದ ನೆರವಿನಿಂದ ಆಲೌಟ್ ಆಗದೆ ಕೊನೆಯ ಓವರ್‌ಗಳಲ್ಲಿ 41 ರನ್‌ಗಳಿಸಿತು. ಒಟ್ಟು 160 ರನ್ ಗಳಿಸಿತು. ಚೆನ್ನೈ ಪರ ನೂರ್ 3, ಕಂಬೋಜ್ 2 ಮತ್ತು ಅಕೀಲ್ 1 ವಿಕೆಟ್ ಪಡೆದುಕೊಂಡರು.

ಸಂಕ್ಷಿಪ್ತ ಸ್ಕೋರ್

ಚೆನ್ನೈ: 20 ಓವರ್‌ಗಳಲ್ಲಿ 192/5: ಸಂಜು 48, ಆಯುಷ್ 38, ಬ್ರೇವಿಸ್ 41; ತ್ಯಾಗಿ 35/2
ಕೆಕೆಆರ್: 20 ಓವರ್‌ಗಳಲ್ಲಿ 160/7: ರಮಣದೀಪ್ 35, ಪೋವೆಲ್ 31★; ನೂರ್ 21/3

ಮುಂಬೈಗೆ ಪಂಜಾಬ್ ಸವಾಲು

ಮುಂಬೈ: ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಮುಂಬೈ ಇಂಡಿಯನ್ಸ್ ತವರು ಪಂದ್ಯದಲ್ಲಿ ಪಂಜಾಬ್ ತಂಡವನ್ನು ಎದುರಿಸಲಿದ್ದು ಗೆಲುವಿನ ಹುಟುಕಾಟದಲ್ಲಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 24ನೇ ಪಂದ್ಯಕ್ಕೆ ಮುಂಬೈನ ವಾಂಖೆಡೆ ಕ್ರೀಡಾಂಗಣ ಆತಿಥ್ಯ ನೀಡಲಿದೆ. ಕಳೆದ ತವರು ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಹೀನಾಯ ಸೋಲು ಕಂಡಿರುವ ಮುಂಬೈ ಪಲ್ಟಾನ್ಸ್, ಟೂರ್ನಿಯಲ್ಲಿ ಇಲ್ಲಿಯವರೆಗೇ ಒಂದೂ ಸೋಲನುಭವಿಸದ ಪಂಜಾಬ್ ಪಡೆಯನ್ನು ಎದುರಿಸಲಿದೆ. ಅಂಕಪಟ್ಟಿಯಲ್ಲಿ 9ನೇ ಸ್ಥಾನ ಹೊಂದಿರುವ ಮುಂಬೈ ಪುಟಿದೇಳುವ ತವಕದಲ್ಲಿದೆ. ಶ್ರೇಯಸ್ ಅಯ್ಯರ್ ಪಡೆ ಗೆಲುವಿನ ನಾಗಾಲೋಟ ಮುಂದುವರಿಸುವ ಭರವಸೆಯಲ್ಲಿದೆ.

ದೇಶಿ ಕ್ರಿಕೆಟ್‌ನಲ್ಲಿ ಮುಂಬೈ ಪರ ಆಡುವ ಶ್ರೇಯಸ್ ಅಯ್ಯರ್ ಇದೀಗ ತಮ್ಮ ತವರಿನೆದುರು ಎದುರಾಳಿ ತಂಡದ ನಾಯಕನಾಗಿ ಮುನ್ನಡೆಸುತ್ತಿರುವುದು ಗಮನಾರ್ಹ.

ಮುಂಬೈಗೆ ಲಯದ ಕೊರತೆ: ಆವೃತ್ತಿಯಲ್ಲಿ ತೀರಾ ಹಿನ್ನಡೆ ಅನುಭವಿಸುತ್ತಿರುವ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಗೆಲುವಿನ ಹುಡುಕಾಟದಲ್ಲಿ ಕಾಣಿಸಿಕೊಂಡಿದೆ. ರೋಹಿತ್ ಶರ್ಮ, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ ಅಂಥವರು ತಂಡದಲ್ಲಿದ್ದರೂ ಭಾರೀ ಹಿನ್ನಡೆ ಅನುಭವಿಸುತ್ತಿದೆ. ಯಾರೊಬ್ಬರೂ ಲಯದಲ್ಲಿಲ್ಲ. ರಯಾನ್ ರಿಕೆಲ್ಟನ್, ರುದರ್‌ಫೋರ್ಡ್ ಮಾತ್ರ ಲಯದಲ್ಲಿದ್ದಾರೆ. ಇನ್ನು ಬೂಮ್ರಾ, ಬೋಲ್ಟ್, ದೀಪಕ್ ಅಂಥವರಿದ್ದರೂ ಬೌಲಿಂಗ್ ಪಡೆ ಭಾರೀ ದುಬಾರಿಯಾಗುತ್ತಿದೆ.

ಪಂಜಾಬ್ ತಂಡದಲ್ಲಿ ಆತ್ಮವಿಶ್ವಾಸ: ಇನ್ನು ಗೆಲುವಿನ ಹಳಿಯಲ್ಲಿರುವ ಪಂಜಾಬ್ ಕಿಂಗ್ಸ್ ತಂಡದಲ್ಲಿ ಭರವಸೆಯ ಬೆಳಕಿದೆ. ಯುವ ಬ್ಯಾಟರ್ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್ ಲಯದಲ್ಲಿದ್ದಾರೆ. ಶ್ರೇಯಸ್ ಅಯ್ಯರ್ ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದು ತಂಡದಲ್ಲಿ ವಿಶ್ವಾಸ ಹೆಚ್ಚಿದೆ. ಮಧ್ಯಮ ಕ್ರಮಾಂಕದಲ್ಲಿ ಕೂಪರ್ ಕೊನೊಲಿ, ಸ್ಟೋನಿಸ್, ಶಶಾಂಕ್ ಸಿಂಗ್, ನಿಹಾಲ್ ವಧೇರಾ ಅಂಥವರು ಭರವಸೆ ಹೆಚ್ಚಿಸಿದ್ದಾರೆ. ಬೌಲಿಂಗ್‌ನಲ್ಲಿ ಅರ್ಶದೀಪ್ ಸಿಂಗ್, ಯಾನ್ಸನ್, ಬಾರ್ಟ್ಲೆಟ್, ಚಾಹಲ್ ಅಂಥಹ ಘಟಾನುಘಟಿ ಬೌಲರ್‌ಗಳಿದ್ದು ಬಲವಾದ ನಂಬಿಕೆಯಲ್ಲಿದೆ ಪಂಜಾಬ್.



ಪಂದ್ಯದ ವಿವರ:
ಯಾವಾಗ: ಗುರುವಾರ
ಎಲ್ಲಿ: ಮುಂಬೈ
ಸಮಯ: ಸಂಜೆ 7:30
ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

13ನೇ ಸುತ್ತಿನ ಪಂದ್ಯ ಡ್ರಾ | ಜಂಟಿ ಅಗ್ರಸ್ಥಾನದಲ್ಲಿ ಆಟಗಾರ್ತಿ

ಚೆಸ್: ವೈಶಾಲಿ ಆಸೆ ಇನ್ನೂ ಜೀವಂತ

ಹೊಸದಿಲ್ಲಿ: ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್ ವೈಶಾಲಿ ಅವರು ಫಿಡೆ ಮಹಿಳಾ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿಗಾಗಿ ಸ್ಪರ್ಧೆಯಲ್ಲಿ ಮುಂದುವರಿದಿದ್ದಾರೆ. ಮಂಗಳವಾರ ನಡೆದ 13ನೇ ಸುತ್ತಿನಲ್ಲಿ ಅವರು ಟಾನ್ ಝೊಂಗ್ಯಿ ವಿರುದ್ಧ ಡ್ರಾ ಸಾಧಿಸಿದರು.

ಈ ಫಲಿತಾಂಶದೊಂದಿಗೆ ವೈಶಾಲಿ 7.5 ಅಂಕಗಳೊಂದಿಗೆ ಸಂಯುಕ್ತ ಮುನ್ನಡೆಯಲ್ಲಿದ್ದಾರೆ. ಬಿಬಿಸಾರಾ ಅವರೂ ಇದೇ ಅಂಕಗಳನ್ನು ಹೊಂದಿದ್ದಾರೆ. ಅಂತಿಮ ಸುತ್ತಿನಲ್ಲಿ ವೈಶಾಲಿ ಅವರು ಲಾಗ್ನೋ ಕಟೇರಿನಾ ಅವರನ್ನು ಎದುರಿಸಲಿದ್ದಾರೆ.

ಪ್ರಶಸ್ತಿ ಗೆಲ್ಲಲು ವೈಶಾಲಿ ಅವರಿಗೆ ಅಂತಿಮ ಸುತ್ತಿನಲ್ಲಿ ಬಿಬಿಸಾರಾ ಗಿಂತ ಹೆಚ್ಚು ಅಂಕ ಗಳಿಸಬೇಕು. ಜೊತೆಗೆ ಎರಡನೇ ಸ್ಥಾನದಲ್ಲಿರುವ ಝು ಜಿನರ್ ಅವರು ತಮ್ಮ ಪಂದ್ಯವನ್ನು ಗೆಲ್ಲದೇ ಇರಬೇಕು.

13ನೇ ಸುತ್ತಿನ ಪಂದ್ಯದಲ್ಲಿ ವೈಶಾಲಿ ಅವರು ಕ್ವೀನ್ಸ್ ಗ್ಯಾಂಬಿಟ್ ಅಕ್ಸೆಪ್ಟೆಡ್ ಎಂಬ ಸುರಕ್ಷಿತ ಆರಂಭವನ್ನು ಆಯ್ಕೆ ಮಾಡಿಕೊಂಡರು. 15ನೇ ನಡೆಗೆ ಬಂದಾಗ ಇಬ್ಬರ ನಡುವಿನ ಸ್ಥಿತಿ ಸಮಬಲದಲ್ಲಿತ್ತು. ಟಾನ್ ಅವರು ಕಿಂಗ್ಸೈಡ್ ಮೇಲೆ ಒತ್ತಡ ತರಲು ಪ್ರಯತ್ನಿಸಿದರೂ, ವೈಶಾಲಿ ಬಲವಾದ ರಕ್ಷಣಾತ್ಮಕ ಆಟದ ಮೂಲಕ ಅದನ್ನು ಸಮರ್ಥವಾಗಿ ಎದುರಿಸಿದರು.

ನಂತರ ಟಾನ್ ಅವರು ಕ್ವೀನ್ ಮೂಲಕ ಚೆಕ್ ನೀಡಿದಾಗ ವೈಶಾಲಿಯ ರಾಜ ಹಚ್ ಏಳನೇ ಚೌಕಕ್ಕೆ ಸರಿಯಬೇಕಾಯಿತು. ಆಟ ಇನ್ನೂ ಉದ್ವಿಗ್ನವಾಗಿದ್ದರೂ, ವೈಶಾಲಿಯ ಕುದುರೆಗಳು ಡಿ3 ಮತ್ತು ಎಫ್4 ಚೌಕಗಳಲ್ಲಿ ಬಲವಾಗಿ ನೆಲೆಗೊಂಡು ಕಿಂಗ್ಸೈಡ್ ಮೇಲೆ ಒತ್ತಡ ತರುತ್ತಿದ್ದವು. ಹೆಚ್ಚಿನ ಅಪಾಯ ತೆಗೆದುಕೊಳ್ಳುವುದನ್ನು ಟಾನ್ ತಪ್ಪಿಸಿಕೊಂಡರು. ಕೊನೆಗೆ ಇಬ್ಬರೂ ಒಂದೇ ನಡೆಗಳನ್ನು ಮರುಕಳಿಸಿ ಮೂರು ಬಾರಿ ಪುನರಾವರ್ತನೆಯ ಮೂಲಕ ಡ್ರಾಗೆ ಒಪ್ಪಿಕೊಂಡರು. ಹಿಂದಿನ ವಿಶ್ವ ಚಾಂಪಿಯನ್ ವಿರುದ್ಧ ಈ ಫಲಿತಾಂಶ ವೈಶಾಲಿಗೆ ತೃಪ್ತಿದಾಯಕವಾಗಿದ್ದು, ಅಂತಿಮ ಸುತ್ತಿನ ಮೊದಲು ಪ್ರಶಸ್ತಿ ಗೆಲ್ಲುವ ಹೋರಾಟದಲ್ಲಿ ಅವರು ಇನ್ನೂ ಬಲವಾಗಿ ಉಳಿದಿದ್ದಾರೆ.



ಬ್ಯಾಡ್ಮಿಂಟನ್‌ಗೆ ದಿಗ್ಗಜ ವಿಕ್ಟರ್ ನಿವೃತ್ತಿ

ಹೊಸದಿಲ್ಲಿ: ಎರಡು ಬಾರಿ ಒಲಿಂಪಿಕ್ ಹಾಗೂ ವಿಶ್ವ ಚಾಂಪಿಯನ್ ಆಗಿರುವ ವಿಕ್ಟರ್ ಆಕ್ಸಲೇನ್ ಅವರು 32ನೇ ವಯಸ್ಸಿನಲ್ಲಿ ವೃತ್ತಿಪರ ಬ್ಯಾಡ್ಮಿಂಟನ್‌ಗೆ ನಿವೃತ್ತಿ ಘೋಷಿಸಿದ್ದಾರೆ.

ಪದೆ ಪದೆ ಗಾಯದ ನಿಟ್ಟಿನಲ್ಲಿ ನಿರ್ಧಾರ

ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ ಸಂದೇಶದಲ್ಲಿ ಡೆನ್ಮಾರ್ಕ್ ಆಟಗಾರ, ನನಗೆ ನಿವೃತ್ತಿ ಸುಲಭವಾದ ವಿಚಾರವಲ್ಲ. ಮರುಮರು ಕಾಣಿಸಿಕೊಂಡ ಬೆನ್ನು ಸಮಸ್ಯೆಗಳ ಕಾರಣದಿಂದ ನಾನು ಅತ್ಯುನ್ನತ ಮಟ್ಟದಲ್ಲಿ ತರಬೇತಿ ಮತ್ತು ಸ್ಪರ್ಧೆ ನಡೆಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದಾರೆ. ಈ ಪರಿಸ್ಥಿತಿಯನ್ನು ಒಪ್ಪಿಕೊಳ್ಳುವುದು ತುಂಬಾ ಕಷ್ಟವಾಗಿತ್ತು. ಆದರೆ ಈಗ ನನ್ನ ದೇಹ ಮುಂದುವರಿಯಲು ಅವಕಾಶ ನೀಡುತ್ತಿಲ್ಲ ಎಂದರು.




ಆಕ್ಸೆಲ್ಸನ್ 2010ರಲ್ಲಿ ಜೂನಿಯರ್ ವಿಶ್ವ ಚಾಂಪಿಯನ್ ಆಗಿ ಮೊದಲ ಬಾರಿಗೆ ಗಮನ ಸೆಳೆದಿದ್ದರು. ಬಳಿಕ ಅವರು ಟೋಕಿಯೋ ಒಲಿಂಪಿಕ್ಸ್ ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸತತ ಚಿನ್ನದ ಪದಕಗಳನ್ನು ಗೆದ್ದರು. ಜೊತೆಗೆ 2016ರ ಒಲಿಂಪಿಕ್ಸ್‌ನಲ್ಲೂ ಅವರು ಕಂಚಿನ ಪದಕ ಗೆದ್ದಿದ್ದರು. ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಅವರು 2017 ಮತ್ತು 2022ರಲ್ಲಿ ಪ್ರಶಸ್ತಿಗಳನ್ನು ಜಯಿಸಿದ್ದರು. ಹಾಗೆಯೇ 2021ರಿಂದ 2023ರವರೆಗೆ ನಡೆದ ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್‌ನಲ್ಲಿ ಮೂರು ಬಾರಿ ಸತತವಾಗಿ ಗೆದ್ದಿದ್ದರು. ಮೂರು ಬಾರಿ ಯುರೋಪಿಯನ್ ಚಾಂಪಿಯನ್ ಆಗಿರುವ ಅವರು, 2016ರಲ್ಲಿ ಡೆನ್ಮಾರ್ಕ್ ತಂಡವನ್ನು ಥಾಮಸ್ ಕಪ್‌ನಲ್ಲಿ ಮೊದಲ ಬಾರಿಗೆ ಚಾಂಪಿಯನ್ ಮಾಡಿದರು.

ಪುರುಷರ ಬ್ಯಾಡ್ಮಿಂಟನ್ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅವರು ಒಟ್ಟು 183 ವಾರಗಳ ಕಾಲ ನಂ.1 ಸ್ಥಾನದಲ್ಲಿದ್ದರು. ಈ ಪಟ್ಟಿಯಲ್ಲಿ ಲೀ ಚೊಂಗ್ ವೀ (398 ವಾರಗಳು) ಮತ್ತು ಲಿನ್ ದಾನ್ (211 ವಾರಗಳು) ಅವರ ನಂತರ ಮೂರನೇ ಸ್ಥಾನದಲ್ಲಿದ್ದಾರೆ. ನಾನು ಮೊದಲ ಬಾರಿಗೆ ರಾಕೆಟ್ ಹಿಡಿದ ದಿನದಿಂದಲೇ ವಿಶ್ವದ ಅತ್ಯುತ್ತಮ ಆಟಗಾರನಾಗಬೇಕೆಂಬ ಕನಸು ಕಂಡಿದ್ದೆ. ಈ ಕ್ರೀಡೆಗೆ ನಾನು ಎಲ್ಲವನ್ನೂ ಅರ್ಪಿಸಿದ್ದೇನೆ. ಇದು ನನಗೆ ಕೇವಲ ವೃತ್ತಿಯಲ್ಲ, ನನ್ನ ಜೀವನವೇ ಆಗಿತ್ತು ಎಂದು ಆಕ್ಸೆಲ್ಸನ್ ತಿಳಿಸಿದ್ದಾರೆ. ಗಮನಾರ್ಹವಾಗಿ, ಅವರು ಕಳೆದ ವರ್ಷದ ಅಕ್ಟೋಬರ್‌ನಲ್ಲಿ ನಡೆದ ಫ್ರೆಂಚ್ ಓಪನ್ ನಂತರದಿಂದ ಸ್ಪರ್ಧೆಯಿಂದ ದೂರವಾಗಿದ್ದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5955

ಎಡದಿಂದ ಬಲಕ್ಕೆ
1.ರಾಮಾಯಣದಲ್ಲಿ ಬರುವ ಲಂಕೆಯ ರಾಜ (3)
3.ಪಶ್ಚಿಮ ಭಾರತದ ಕರಾವಳಿ ಪ್ರದೇಶ (3)
7.ಪ್ರಾಣವನ್ನು ಕಡೆಯಲ್ಲಿಟ್ಟುಕೊಂಡ ತಾವರೆ (3)
8.ಮಧ್ಯೆ ವಿರಾಮವಿಲ್ಲದೆ ಮುಂದುವರೆಯುವ ಸ್ಥಿತಿ (4)
10.ಮಾರುತ್ತಾ ಇರುವಾಗಿನ ಅಸ್ತವ್ಯಸ್ತತೆ ತಿರುಗಿದೆ (4)
12.ನಿರಾಕಾರ ಬ್ರಹ್ಮನ ಸ್ವರೂಪ-ಶಂಕರ (4)
15.ಪಟ್ಟಣವಾಸಿ-ಸುಸಂಸ್ಕೃತ ತನಿಲ್ಲಿ ತಿರುಗಿದ್ದಾನೆ (4)
17.ಕಾಯ ಕಡೆಯಲ್ಲಿರುವ ಗುಮಾನಿ (3)
18.ಸಾಮಾನುಗಳನ್ನು ಮಾರುವ ಸ್ಥಳ (3)
19.ಇಂದಿನ ಮಧ್ಯಪ್ರದೇಶದ ಪಶ್ಚಿಮಭಾಗ (3)

ಮೇಲಿನಿಂದ ಕೆಳಕ್ಕೆ
2.ಕಾಡ ಜನ ಪೂಜಿಸುವ ದೇವತೆ (4)
4.ಸ್ವಾತಂತ್ರ್ಯಹೋರಾಟಗಾರರಿಗೆ ಅಂಡಮಾನ್‌ನಲ್ಲಿ ನೀಡುತ್ತಿದ್ದ ಕಠಿಣ ಶಿಕ್ಷೆ (4)
5.ಅಂಚುಳ್ಳ, ಅಗಲವಾದ ದೊಡ್ಡ ಲೋಹದ ತಟ್ಟೆ (3)
6.ಅವರು ತರಲು ಹೋದದ್ದು ತಮ್ಮ ಈ ಹುಟ್ಟೂರಿಗೆ (3)
9.ದೇವಾಲಯದ ಗೋಪುರವಿಲ್ಲಿ ಉಲ್ಟಾ ಕಾಣುತ್ತಿದೆ (3)
11.ನಮೂನೆ-ಆದರ್ಶದ ಸಮಾನಪದ (3)
13.ಕಾಳಗ ನಡೆಯುವ ಸ್ಥಳ-ಯುದ್ಧಭೂಮಿ (4)
14.ಗಿಡ-ಮರಗಳು ಚಿಗುರುವ ಋತು (3)
15.ಕಳೆಯ ನಡುವೆ ತುತ್ತೂರಿಯಿದೆ (3)
16.ಮದುವೆ ಮಂಟಪದಲ್ಲಿ ನುಡಿಸುವ ಮಂಗಳವಾದ್ಯ (4)

5954 ಉತ್ತರ

ಎಡದಿಂದ ಬಲಕ್ಕೆ:
1.ಅಪಾರ 3.ಶರ್ವಾಣಿ
5.ವಿಜಯಪುರ
6.ಚಂದ್ರಹಾಸ
7.ಜಾಗತಿಕ 9.ಸಹಪಾಠಿ
11.ರಾಮಸೀತೆ
14.ದಾನವಾಂತಕ
16.ವಿವರ 17.ರಿಕಾಮು

ಮೇಲಿನಿಂದ ಕೆಳಕ್ಕೆ :
1.ಅಕ್ಷಿ 2.ರವಿಚಂದ್ರ
3.ಶರವೇಗ 4.ಗಿಣಿ
6.ಸರಸ 8.ಕವಿತೆ
10.ಪಾಲುದಾರ
12.ಮಧುಕರ 13.ಬಾಪಿ
15.ತಂಪು

ಕಿರುಸುದ್ದಿ

ಆಸ್ಪತ್ರೆ ಕ್ಯಾಶ್ವಾಲಿಟಿಯಲ್ಲಿ ಗದ್ದಲ: ತಡೆಯಲೆತ್ತಿಸಿದ ಸೆಕ್ಯೂರಿಟಿ ನೌಕರನಿಗೆ ಹಲ್ಲೆ

ಕುಂಬಳೆ: ಅಸೌಖ್ಯದಲ್ಲಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ತಲುಪಿಸಿದ ತಂಡ ಕ್ಯಾಶ್ವಾಲಿಟಿಯಲ್ಲಿ ವಾಗ್ವಾದ ನಡೆಸಿ ಗದ್ದಲ ಸೃಷ್ಟಿಸಿದ್ದು, ಬಳಿಕ ಆಸ್ಪತ್ರೆಯ ಸೆಕ್ಯೂರಿಟಿ ನೌಕರನ ಮೇಲೆ ಹಲ್ಲೆಗೈದ ಬಗ್ಗೆ ದೂರಲಾಗಿದೆ.

ಕುಂಬಳೆ ಜಿಲ್ಲಾ ಸಹಕಾರಿ ಆಸ್ಪತ್ರೆಯ ಸೆಕ್ಯೂರಿಟಿ ನೌಕರ ಮಂಡೆಕಾಪು ನಿವಾಸಿ ಗೌತಮ್ ಟಿ. (28) ಹಲ್ಲೆಯಿಂದ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಇದೇ ವೇಳೆ ಘಟನೆಗೆ ಸಂಬಂಧಿಸಿ ಕುಂಬಳೆ ಶಾಂತಿಪಳ್ಳ ನಿವಾಸಿ ಚಂದ್ರು ಎಂಬಾತನ ವಿರುದ್ಧ ಕುಂಬಳೆ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ.

ಜಿಲ್ಲಾ ಸಹಕಾರಿ ಆಸ್ಪತ್ರೆಯಲ್ಲಿ

ಕುಂಬಳೆ ಜಿಲ್ಲಾ ಸಹಕಾರಿ ಆಸ್ಪತ್ರೆಯಲ್ಲಿ ಘಟನೆ ನಡೆದಿತ್ತು. ಅಸೌಖ್ಯ ಬಾಧಿಸಿದ ವ್ಯಕ್ತಿಯನ್ನು ಚಂದ್ರು ಒಳಗೊಂಡ ತಂಡ ಅಸ್ಪತ್ರೆಗೆ ತಲುಪಿಸಿತ್ತು. ಬಳಿಕ ಇದೇ ತಂಡ ಕ್ಯಾಶ್ವಾಲಿಟಿಯಲ್ಲಿ ವಾಗ್ವಾದ ನಡೆಸಿ ಗಲಭೆ ಉಂಟು ಮಾಡಿತು. ಈ ವೇಳೆ ಅಲ್ಲಿಗೆ ತಲುಪಿದ ಗೌತಮ್ ತಂಡದೊಂದಿಗೆ ಸದ್ದು ಮಾಡದಂತೆ ವಿನಂತಿಸಿದಾಗ ತಂಡವು ಗೌತಮ್‌ರ ಮೇಲೆ ಹಲ್ಲೆ ನಡೆಸಿರುವುದಾಗಿ ದೂರಲಾಗಿದೆ.

ಜೀವನಾಡಿ ಬಜೆ ಅಣೆಕಟ್ಟಿನಲ್ಲಿ ನೀರಿನ ಬಳಕೆ ಕಡಿತ | ಆದರೂ ಜಲಮಟ್ಟದಲ್ಲಿ ಸತತವಾಗಿ ಕುಸಿತ

ಉಡುಪಿಗೆ ವರದಾನವಾಗಿದೆ ವಾರಾಹಿ!

ಉಡುಪಿ: ಉಡುಪಿ ನಗರ ಹಾಗೂ ಮಣಿಪಾಲದ ಜೀವನಾಡಿ ಬಜೆ ಅಣೆಕಟ್ಟಿನಲ್ಲಿ ಈ ವರ್ಷ ನೀರಿನ ಮಟ್ಟವು ಆತಂಕಕಾರಿ ರೀತಿಯಲ್ಲಿ ಕುಸಿಯುತ್ತಿದೆ!

ಆಚ್ಚರಿಯ ವಿಷಯವೆಂದರೆ, ನಗರಸಭೆಯು ಈ ಬಾರಿ ಬಜೆ ಅಣೆಕಟ್ಟಿನಿಂದ ನೀರು ಬಳಸುವ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಿದ್ದರೂ ಸಹ, ನೀರಿನ ಮಟ್ಟ ಮಾತ್ರ ಇಲ್ಲಿ ದಿನದಿಂದ ದಿನಕ್ಕೆ ಇಳಿಕೆಯಾಗುತ್ತಿರುವುದು ಭವಿಷ್ಯದ ದಿನಗಳ ದೃಷ್ಟಿಯಿಂದ ಚಿಂತಾಜನಕ ವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಅಣೆಕಟ್ಟಿನಲ್ಲಿ ನೀರಿನ ಸಂಗ್ರಹವು ಸುಮಾರು ಒಂದು ಮೀಟರ್‌ನಷ್ಟು ಇಳಿಕೆ ಕಂಡಿರುವುದು ಅಧಿಕಾರಿಗಳ ಮತ್ತು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ.

ವರದಾನವಾದ ವಾರಾಹಿ ಯೋಜನೆ

ನೀರಿನ ಮಟ್ಟದಲ್ಲಿ ಈ ರೀತಿ ಕುಸಿತ ಕಂಡು ಬರುತ್ತಿದ್ದರೂ, ಉಡುಪಿ ಮತ್ತು ಮಣಿಪಾಲದ ಜನತೆಗೆ ಈ ಬಾರಿ ವಾರಾಹಿ ಯೋಜನೆಯು ಅಕ್ಷರಶಃ ವರದಾನವಾಗಿ ಪರಿಣಮಿಸಿದೆ. ನಗರಸಭೆಯು ಈಗ ನೀರಿನ ನಿರ್ವಹಣೆಗಾಗಿ ವಿಭಿನ್ನ ತಂತ್ರಗಳನ್ನು ಅನುಸರಿಸುತ್ತಿದೆ. ಅಣೆಕಟ್ಟಿನಲ್ಲಿ ನೀರು ನೈಸರ್ಗಿಕವಾಗಿ ಸಂಗ್ರಹವಾಗಲು ಅನುವು ಮಾಡಿಕೊಡುವ ಸಲುವಾಗಿ ಈಗ ಪ್ರತಿದಿನ ಕೇವಲ 15 ರಿಂದ 16 ಗಂಟೆಗಳ ಕಾಲ ಮಾತ್ರ ಪಂಪ್‌ಗಳ ಮೂಲಕ ನೀರೆತ್ತಲಾಗುತ್ತಿದೆ. ಉಳಿದ ಸಮಯದಲ್ಲಿ ಪಂಪಿಂಗ್ ನಿಲ್ಲಿಸಿ ನೀರಿನ ಸಂಗ್ರಹಕ್ಕೆ ಒತ್ತು ನೀಡಲಾಗುತ್ತಿದೆ. ನೀರಿನ ಕೊರತೆಯನ್ನು ನೀಗಿಸಲು ಹಾಲಾಡಿ ಅಣೆಕಟ್ಟಿನಿಂದಲೂ ಪೂರೈಕೆ ಮಾಡಲಾಗುತ್ತಿದ್ದು, ಇದು ಬಜೆ ಅಣೆಕಟ್ಟಿನ ಮೇಲಿನ ಹೊರೆಯನ್ನು ತಗ್ಗಿಸಿದೆ. ವಾರಾಹಿ ಯೋಜನೆಯಿಂದ ಸತತವಾಗಿ ನೀರು ಹರಿದುಬರುತ್ತಿರುವುದರಿಂದ ಸದ್ಯಕ್ಕೆ ನಗರದಲ್ಲಿ ಯಾವುದೇ ನೀರಿನ ಅಭಾವ ಕಾಣಿಸಿಕೊಂಡಿಲ್ಲ.

ಪೂರೈಕೆಯಲ್ಲಿ ದೊಡ್ಡ ವ್ಯತ್ಯಾಸವಾಗಿಲ್ಲ

ಪ್ರಸ್ತುತ ಪರಿಸ್ಥಿತಿಯಲ್ಲಿ ಉಡುಪಿಯ ನೀರಿನ ಹಂಚಿಕೆಯಲ್ಲಿ ವಾರಾಹಿ ಯೋಜನೆ ಸಿಂಹಪಾಲು ವಹಿಸುತ್ತಿದೆ. ನಗರಕ್ಕೆ ಪೂರೈಕೆಯಾಗುತ್ತಿರುವ ಒಟ್ಟು ನೀರಿನಲ್ಲಿ ಹೆಚ್ಚಿನ ಭಾಗವು ವಾರಾಹಿಯಿಂದಲೇ ಬರುತ್ತಿದೆ. ಇದರಿಂದಾಗಿ ಬಜೆ ಅಣೆಕಟ್ಟಿನಲ್ಲಿ ನೀರಿನ ಮಟ್ಟ ಇಳಿಕೆಯಾಗುತ್ತಿದ್ದರೂ ನಗರಕ್ಕೆ ಒದಗುವ ನೀರಿನ ಪ್ರಮಾಣದಲ್ಲಿ ದೊಡ್ಡ ವ್ಯತ್ಯಾಸವಾಗಿಲ್ಲ. ಬೇಸಿಗೆಯ ಬಿಸಿಲು ಇನ್ನೂ ಹೆಚ್ಚಾಗುವ ಸಾಧ್ಯತೆ ಇರುವುದರಿಂದ, ನೀರಿನ ಮೂಲಗಳನ್ನು ಸಂರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ.



ಇಲ್ಲಿ ಸತತವಾಗಿ ಇಳಿಕೆಯಾಗುತ್ತಲೇ ಇದೆ ನೀರಿನ ಮಟ್ಟ

ಪ್ರಸ್ತುತ ಜಿಲ್ಲೆಯಲ್ಲಿ ಸುಡುತ್ತಿರುವ ಬಿಸಿಲಿನ ಝಳ ಮತ್ತು ಆವಿಯಾಗುವಿಕೆಯ ಪ್ರಮಾಣ ಹೆಚ್ಚಿರುವುದು ಇದಕ್ಕೆ ಪ್ರಮುಖ ಕಾರಣವಿರಬಹುದು ಎಂದು ಅಂದಾಜಿಸಲಾಗಿದೆ. ಕಳೆದ ವರ್ಷ ಮತ್ತು ಈ ವರ್ಷದ ಅಂಕಿ-ಅಂಶಗಳನ್ನು ವಿಶ್ಲೇಷಿಸಿದರೆ ನೀರಿನ ಮಟ್ಟದ ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುತ್ತದೆ. 2025ರ ಏಪ್ರಿಲ್ 9 ರಂದು ಅಣೆಕಟ್ಟಿನ ನೀರಿನ ಮಟ್ಟ 4.95 ಮೀಟರ್ ದಾಖಲಾಗಿದ್ದರೆ, ಈ ವರ್ಷದ ಏಪ್ರಿಲ್ 9 ರಂದು ಅದು ಕೇವಲ 3.97 ಮೀಟರ್‌ಗೆ ಕುಸಿದಿದೆ. ಹಾಗೆಯೇ, ಏಪ್ರಿಲ್ 10 ರಂದು ಕಳೆದ ವರ್ಷ 4.90 ಮೀಟರ್ ಇದ್ದರೆ, ಈ ಬಾರಿ ಅದು 3.94 ಮೀಟರ್‌ಗೆ ಇಳಿದಿದೆ. ಏಪ್ರಿಲ್ 11 ರಂದು ಕಳೆದ ವರ್ಷ 4.86 ಮೀಟರ್ ಮಟ್ಟ ದಾಖಲಾಗಿತ್ತು, ಆದರೆ ಈ ವರ್ಷ ಅದು ಕೇವಲ 3.89 ಮೀಟರ್‌ಗೆ ತಲುಪಿದ್ದು, ಒಂದು ವರ್ಷದ ಅಂತರದಲ್ಲಿ ನಿಖರವಾಗಿ 0.97 ಮೀಟರ್‌ನಷ್ಟು ಅಂತರ ಕಂಡುಬಂದಿದೆ.

> **ಸಮಸ್ಯೆ ಬಾರದು**
>
> ಬಜೆ ಅಣೆಕಟ್ಟಿನಿಂದ ಸದ್ಯ ನೀರು ಪೂರೈಕೆ ಮಾಡುವುದನ್ನು ಕಡಿಮೆ ಮಾಡಿದ್ದೇವೆ. ವಾರಾಹಿ ಯೋಜನೆಯಲ್ಲಿ ಜೂನ್ 30ರ ವರೆಗೆ ಅಗತ್ಯ ನೀರು ಲಭ್ಯವಿದೆ. ಬಳಿಕ ಮಳೆ ಬರುವ ಕಾರಣ ಸಮಸ್ಯೆ ಎದುರಾಗದು. ಪ್ರಸ್ತುತ ವಾರಾಹಿ ಯೋಜನೆಯಿಂದ 45 ಎಂಎಲ್‌ಡಿ ಮತ್ತು ಬಜೆ ಅಣೆಕಟ್ಟಿನಿಂದ 10-15 ಎಂಎಲ್‌ಡಿ ನೀರು ಪೂರೈಕೆ ಮಾಡಲಾಗುತ್ತಿದೆ.
>
> ■ ಮಹಾಂತೇಶ ಹಂಗರಗಿ, ಪೌರಾಯುಕ್ತರು, ನಗರಸಭೆ

ಶಾರದಾ: ಎಸ್ಸೆಸೆಲ್ಸಿಯಲ್ಲಿ ಕಳೆದ 28 ವರ್ಷದಿಂದ ಸತತ 100% ಫಲಿತಾಂಶ

ಮಂಗಳೂರು: ಕೊಡಿಯಾಲ್‌ಬೈಲಿನಲ್ಲಿ ಖಾಸಗಿ ಕೇಂದ್ರೀಯ (ಸಿ.ಬಿ.ಎಸ್.ಇ) ಪಠ್ಯಕ್ರಮದೊಂದಿಗೆ 1992ರಲ್ಲಿ ಪ್ರಾರಂಭವಾದ ಪ್ರಪ್ರಥಮ ವಿದ್ಯಾಸಂಸ್ಥೆ ಶಾರದಾ ವಿದ್ಯಾಲಯ, ಈ ವರ್ಷ ನಡೆದ 10ನೇ ತರಗತಿಯ ಪರೀಕ್ಷೆಯಲ್ಲಿ ಸತತ ಶೇಕಡಾ 100 ಫಲಿತಾಂಶ ಸಾಧಿಸಿ ಶ್ಲಾಘನೆಗೆ ಪಾತ್ರವಾಗಿದೆ.

ತುಳುನಾಡು ಎಜುಕೇಶನಲ್ ಟ್ರಸ್ಟ್ ನಡಿಯಲ್ಲಿ ಕಾರ್ಯಾಚರಿಸುತ್ತಿರುವ ಶಾರದಾ ವಿದ್ಯಾಲಯದ ಕೇಂದ್ರೀಯ ಮಾಧ್ಯಮಿಕ ಪರೀಕ್ಷೆಗೆ ಹಾಜರಾದ ಒಟ್ಟು 189 ವಿದ್ಯಾರ್ಥಿಗಳಲ್ಲಿ ಶೇ. 95-100 ಅಂಕಗಳನ್ನು 30 ವಿದ್ಯಾರ್ಥಿಗಳು, ಶೇ. 90-94 ಅಂಕಗಳನ್ನು 46 ವಿದ್ಯಾರ್ಥಿಗಳು, ಶೇ.80-89 ಅಂಕಗಳನ್ನು 53 ವಿದ್ಯಾರ್ಥಿಗಳು, 70-79 ಅಂಕಗಳನ್ನು 29 ವಿದ್ಯಾರ್ಥಿಗಳು ಹಾಗೂ ಶೇ.60-69 ಅಂಕಗಳನ್ನು 19 ವಿದ್ಯಾರ್ಥಿಗಳು, ಶೇ. 50-59 ಅಂಕಗಳನ್ನು 10 ವಿದ್ಯಾರ್ಥಿಗಳು, ಶೇಕಡಾ 45-50 ಅಂಕಗಳನ್ನು 2 ವಿದ್ಯಾರ್ಥಿಗಳು ಪಡೆದು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆಗೈದು ಗಮನ ಸೆಳೆದಿದ್ದಾರೆ.

ಶಾರದಾ ವಿದ್ಯಾಲಯವು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳೆರಡರಲ್ಲೂ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವ ಸಾಧನೆ ಮಾಡಿದ್ದು, ಈಗಾಗಲೇ ವಿದ್ಯಾಲಯದ ವಿದ್ಯಾರ್ಥಿಗಳು ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಅನೇಕ ಪ್ರಶಸ್ತಿ-ಗೌರವಗಳಿಗೆ ಪಾತ್ರರಾಗಿದ್ದಾರೆ.

> **ಡಾ.ಪುರಾಣಿಕ್ ಅಭಿನಂದನೆ**
>
> ಶಾರದಾ ವಿದ್ಯಾಲಯವು ಕಳೆದ 33 ವರ್ಷಗಳಿಂದ ನಿರಂತರವಾಗಿ ಸಾಧನೆ ಮಾಡುತ್ತಲೇ ಬಂದಿದೆ. ಈ ಸಲವೂ ಪರೀಕ್ಷೆಗೆ ಹಾಜರಾದ 189 ವಿದ್ಯಾರ್ಥಿಗಳಲ್ಲಿ 147 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಸಾಧನೆಗೈದಿರುವುದು ಸಂತಸ ತಂದಿದೆ. ಈ ವರ್ಷದ ಫಲಿತಾಂಶದಲ್ಲಿ ಮಾ. ಅದ್ವೈ ಕಿಗ್ಗಲ್ ಪ್ರದೀಪ್ - 498 (99.6%) ಅಂಕಗಳನ್ನು ಗಳಿಸುವ ಮೂಲಕ ತಮ್ಮ ಶೈಕ್ಷಣಿಕ ಸಾಧನೆ ಮೆರೆದಿದ್ದಾರೆ. ವಿದ್ಯಾರ್ಥಿಗಳ ಜೊತೆಗೆ ಅವರ ಪೋಷಕರನ್ನು, ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳನ್ನು, ಪ್ರಾಂಶುಪಾಲರು ಹಾಗೂ ಶಿಕ್ಷಕ ವೃಂದದವರನ್ನು ಶಾರದಾ ವಿದ್ಯಾಲಯದ ಅಧ್ಯಕ್ಷ ಡಾ.ಎಂ.ಬಿ.ಪುರಾಣಿಕ್ ಹಾಗೂ ಆಡಳಿತ ಮಂಡಳಿಯ ಸದಸ್ಯರು ಅಭಿನಂದಿಸಿದ್ದಾರೆ.



ಗ್ರಾಹಕರಿಗೆ ಬದ್ಧತೆಯೊಂದಿಗೆ ಡಿಜಿಟಲ್ ಸೇವೆ: ಡಾ. ಎಂ.ಎನ್. ರಾಜೇಂದ್ರ ಕುಮಾರ್ ವಿಶ್ವಾಸ

ಮಂಗಳೂರು: ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ನವೀನ ಹೆಜ್ಜೆ ಇಟ್ಟಿರುವ ಎಸ್‌ಸಿಡಿಸಿಸಿ ಬ್ಯಾಂಕ್, ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯಗಳನ್ನು ಪರಿಚಯಿಸುವ ಮೂಲಕ ಗ್ರಾಹಕರಿಗೆ ಆಧುನಿಕ ಹಾಗೂ ವೇಗವಾದ ಹಣಕಾಸು ಸೇವೆಗಳನ್ನು ಒದಗಿಸುತ್ತಿದೆ. ಈ ಹೊಸ ಯೋಜನೆಗಳಿಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರ ಕುಮಾರ್ ತಿಳಿಸಿದ್ದಾರೆ.

ಬುಧವಾರ ಬ್ಯಾಂಕ್‌ನಲ್ಲಿ ಆಯೋಜಿಸಲಾದ ಡಿಜಿಟಲ್ ಬ್ಯಾಂಕಿಂಗ್ ಹಾಗೂ ಸೈಬರ್ ಭದ್ರತೆ ಕುರಿತ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಬ್ಯಾಂಕಿಂಗ್ ಕ್ಷೇತ್ರದಲ್ಲಿ ತ್ವರಿತ ಮತ್ತು ಸುರಕ್ಷಿತ ಸೇವೆಗಳು ಅತ್ಯಗತ್ಯವಾಗಿದ್ದು, ಗ್ರಾಹಕರ ನಿರೀಕ್ಷೆಗಳಿಗೆ ತಕ್ಕಂತೆ ಸೇವೆಗಳನ್ನು ವಿಸ್ತರಿಸುವುದು ಬ್ಯಾಂಕಿನ ಪ್ರಮುಖ ಗುರಿಯಾಗಿದೆ ಎಂದರು.



ಬ್ಯಾಂಕ್ ಈಗಾಗಲೇ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯೊಂದಿಗೆ ಆರ್‌ಟಿಜಿಎಸ್, ನೆಫ್ಟ್, ಸಿಟಿಎಸ್, ಎಸ್‌ಎಂಎಸ್ ಅಲರ್ಟ್, ಎಟಿಎಂ, ಮೊಬೈಲ್ ಬ್ಯಾಂಕಿಂಗ್ ಮತ್ತು ಪಿಒಎಸ್ ಸೇರಿದಂತೆ ಹಲವು ಡಿಜಿಟಲ್ ಸೇವೆಗಳನ್ನು ಯಶಸ್ವಿಯಾಗಿ ನೀಡುತ್ತಿದೆ. ಇತ್ತೀಚಿನ ತಾಂತ್ರಿಕ ಅಭಿವೃದ್ಧಿಗಳ ಹಿನ್ನೆಲೆಯಲ್ಲಿ, ಗ್ರಾಹಕರು ಮೊಬೈಲ್ ಅಪ್ಲಿಕೇಶನ್‌ಗಳ ಮೂಲಕ ಸುಲಭ ಮತ್ತು ವೇಗವಾದ ಸೇವೆಯನ್ನು ನಿರೀಕ್ಷಿಸುತ್ತಿದ್ದಾರೆ ಎಂದು ಅವರು ಹೇಳಿದರು. ಈ ಅಗತ್ಯವನ್ನು ಮನಗಂಡು, ಗ್ರಾಹಕರಿಗೆ ಇನ್ನಷ್ಟು ಸುಲಭ ಮತ್ತು ಸುರಕ್ಷಿತ ಸೇವೆಗಳನ್ನು ಒದಗಿಸುವ ಉದ್ದೇಶ ದಿಂದ ಯುಪಿಐ ಮತ್ತು ಐಎಂಪಿಎಸ್ ವ್ಯವಸ್ಥೆಗಳನ್ನು ಜಾರಿಗೆ ತರಲಾಗಿದೆ. ಈ ಸೇವೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಬ್ಯಾಂಕ್ ಸಿಬ್ಬಂದಿಗೆ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್, ಮಹಾಪ್ರಬಂಧಕ ಸುನಿಲ್ ಕುಮಾರ್ ಹೊಳ್ಳ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಧಾರ್ಮಿಕ ದತ್ತಿ ಇಲಾಖೆ ಕರ್ನಾಟಕ ಸರಕಾರ

ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಶ್ರೀ ಕ್ಷೇತ್ರ ಕರಾಯ

ಕರಾಯ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲೂಕು ದ.ಕ-574326



ಕರಾಯ

ಸಹಸ್ರ ಕಲಶ ಸಹಿತ ಅಷ್ಟಬಂಧ ಬ್ರಹ್ಮಕಲಶೋತ್ಸವ

ದಿನಾಂಕ : 15-04-2026 ಬುಧವಾರ ದಿಂದ 25-04-2026 ಶನಿವಾರದವರೆಗೆ

ಶ್ರೀ ದೇವರಿಗೆ ನೂತನ ರಾಜಗೋಪುರ, ಕೊಡಿಮರ, ತೀರ್ಥಮಂಟಪ, ಬ್ರಹ್ಮರಥ ಸಮರ್ಪಣೆ ಮತ್ತು ಸಹಸ್ರ ಕಲಶ ಸಹಿತ ಅಷ್ಟಬಂಧ ಬ್ರಹ್ಮಕಲಶ ಮತ್ತು ಜಾತ್ರಾ- ಬ್ರಹ್ಮರಥೋತ್ಸವ ಹಾಗೂ ನೇಮೋತ್ಸವ

ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ್ ತಂತ್ರಿಗಳ ನೇತೃತ್ವದಲ್ಲಿ ಪರಮಪೂಜ್ಯ ಡಾ|| ಡಿ. ವೀರೇಂದ್ರ ಹೆಗ್ಗಡೆಯವರು, ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ ಇವರ ಮಾರ್ಗದರ್ಶನದಲ್ಲಿ ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀ ಪಾದಂಗಳವರು ಶ್ರೀ ಎಡನೀರು ಮಠ, ಕಾಸರಗೋಡು ಇವರ ದಿವ್ಯ ಉಪಸ್ಥಿತಿಯಲ್ಲಿ ಶ್ರೀ ದೇವರಿಗೆ ನೂತನ ರಾಜಗೋಪುರ, ಕೊಡಿಮರ, ತೀರ್ಥಮಂಟಪ, ಬ್ರಹ್ಮರಥ ಸಮರ್ಪಣೆ ಮತ್ತು ಸಹಸ್ರ ಕಲಶ ಸಹಿತ ಅಷ್ಟಬಂಧ ಬ್ರಹ್ಮಕಲಶ ಮತ್ತು ಜಾತ್ರಾ- ಬ್ರಹ್ಮರಥೋತ್ಸವ ಹಾಗೂ ನೇಮೋತ್ಸವವು ನಡೆಯಲಿದೆ.

ಕಾರ್ಯಕ್ರಮಕ್ಕೆ ಆತ್ಮೀಯವಾಗಿ ಆಮಂತ್ರಿಸುವ



ಶ್ರೀ ಹರೀಶ್ ಪೂಂಜ
ಮಾನ್ಯ ಶಾಸಕರು
ಗೌರವಾಧ್ಯಕ್ಷರು



ಶ್ರೀ ನಾಗಾರ್ಜುನ ರಾವ್ ಬೆಂಗಳೂರು
ಗೌರವಾಧ್ಯಕ್ಷರು



ಶ್ರೀ ಅನಂತಕೃಷ್ಣ ಕುದ್ದಣ್ಣಾಯ
ಅಧ್ಯಕ್ಷರು,
ವ್ಯವಸ್ಥಾಪನ ಸಮಿತಿ



ಶ್ರೀ ಅತುಲ್ ಕುಮಾರ್ ಕೆ.ಎಸ್. ಹಲೇಜಿ
ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ



ಶ್ರೀ ಸುದರ್ಶನ್,'ಸುಪ್ರಭಾತ' ಕೊಲ್ಲಿ
ಅಧ್ಯಕ್ಷರು,
ಜೀರ್ಣೋದ್ಧಾರ ಸಮಿತಿ

ಶ್ರೀ ಕೃಷ್ಣಪ್ರಸಾದ್ ಕುದ್ದಣ್ಣಾಯ
ಕರಾಯ ಮನೆ , ಪವಿತ್ರಪಾಣಿ

ಶ್ರೀ ದುರ್ಗೇಶ್ ವಿ. ಕೆದಿಲಾಯ
ಪ್ರಧಾನ ಕಾರ್ಯದರ್ಶಿ ಬ್ರಹ್ಮಕಲಶೋತ್ಸವ ಸಮಿತಿ

ಶ್ರೀ ಸಾಮ್ರಾಟ್ ಕರ್ಕೇರ
ಕೋಶಾಧಿಕಾರಿ ಬ್ರಹ್ಮಕಲಶೋತ್ಸವ ಸಮಿತಿ

ಶ್ರೀ ಶಶಿಕಾಂತ್ ಕೆ. ರಾವ್, ಅರ್ಚಕರು

ವ್ಯವಸ್ಥಾಪನಾ ಸಮಿತಿ, ಜೀರ್ಣೋದ್ಧಾರ ಸಮಿತಿ, ಬ್ರಹ್ಮಕಲಶೋತ್ಸವ ಸಮಿತಿ ಮತ್ತು ಅರ್ಚಕರು ಹಾಗೂ ಊರ ಭಕ್ತಾದಿಗಳು

ಪುರಾತನ ಪ್ರಸಿದ್ಧಿ ಕ್ಷೇತ್ರ ಕರಾಯ. ಕರದಿಂದ ಉದ್ಭಗೊಂಡ ಲಿಂಗ ಹಾಗಾಗಿ ಕರಾಯ ಎಂಬ ಹೆಸರು ಜನಜನಿತವಾಗಿದೆ. ಉಪ್ಪಿನಂಗಡಿ-ಗುರುವಾಯನಕೆರೆ ರಾಜ್ಯ ಹೆದ್ದಾರಿ ಬದಿಯಲ್ಲಿ ಕರಾಯ ಎಂಬ ಪ್ರದೇಶದಲ್ಲಿ ಈ ದೇಗುಲವಿದೆ. ಕರಾಯ ಮಹಾಲಿಂಗೇಶ್ವರ ಸನ್ನಿಧಿಯಲ್ಲಿ ಭಕ್ತಿಯಿಂದ ಪ್ರಾರ್ಥಿಸಿದ್ದಲ್ಲಿ ಇಷ್ಟಾರ್ಥಗಳು ಈಡೇರಿದ ಪುರಾವೆಗಳಿವೆ. ಜಲ ಮೂಲಕ್ಕೆ, ಕಂಕಣ ಭಾಗ್ಯ, ಸಂತಾನ ಭಾಗ್ಯ ಹೀಗೆ ಇನ್ನಿತರ ಅಭೀಷ್ಟೆಗಳು ಇಲ್ಲಿ ನೆನೆದಲ್ಲಿ ಈಡೇರಿದ ನಿದರ್ಶನ ಗಳಿವೆ. ರಂಗಪೂಜೆ, ಶತ ರುದ್ರಾಭೀಷೇಕ ಸಹಿತ ನಾನಾ ಸೇವೆಗಳನ್ನು ಭಕ್ತರು ದೇವರಿಗೆ ಸಲ್ಲಿಸುತ್ತಾರೆ.

■ **ಹರೀಶ್ ಪೂಂಜ,** ಗೌರವಾಧ್ಯಕ್ಷರು

ಕಾರ್ಯಕ್ರಮಗಳು

ದಿನಾಂಕ :16-04-2026 ಗುರುವಾರ

ಬೆಳಿಗ್ಗೆ 5-30 : ಉಷಃಪೂಜೆ, ಮಹಾಗಣಪತಿ ಹೋಮ, ಅಂಕುರ ಪೂಜೆ, ಚತುಃಶುದ್ಧಿಧಾರೆ,ಅವಗಾಹ, ಪಂಚಕ ಬಿಂಬಶುದ್ಧಿ, ಖನನಾದಿ ಸ್ಥಳಶುದ್ಧಿ, ಪ್ರೋಕ್ತ ಹೋಮ, ಪ್ರಾಯಶ್ಚಿತ್ತ ಹೋಮಗಳು. ಮಧ್ಯಾಹ್ನ 12-00: ಹೋಮಗಳ ಕಲಶಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ಸಂಜೆ 05-30 : ದೀಪಾರಾಧನೆ, ಅಂಕುರಪೂಜೆ, ಕುಂಡಶುದ್ಧಿ, ದುರ್ಗಾಪೂಜೆ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ.

ಧಾರ್ಮಿಕ ಸಭಾ ಕಾರ್ಯಕ್ರಮ- ರಾತ್ರಿ 7-00 ರಿಂದ 8-30

ಅಧ್ಯಕ್ಷತೆ : ಶ್ರೀ ಹರೀಶ್ ಪೂಂಜಾ,
ಮಾನ್ಯ ಶಾಸಕರು ವಿಧಾನ ಸಭಾ ಕ್ಷೇತ್ರ, ಬೆಳ್ತಂಗಡಿ
ಧಾರ್ಮಿಕ ಉಪನ್ಯಾಸ : ಶ್ರೀ ಹರಿಕೃಷ್ಣ ಬಂಟ್ವಾಳ,
ಮುಖ್ಯ ಅತಿಥಿಗಳು : ಶ್ರೀ ಪ್ರತಾಪಸಿಂಹ ನಾಯಕ್,
ಮಾನ್ಯ ವಿಧಾನಪರಿಷತ್ ಸದಸ್ಯರು ಕರ್ನಾಟಕ ಸರಕಾರ
: ಶ್ರೀ ಡಿ. ವಿ. ಸದಾನಂದ ಗೌಡ,
ಮಾಜಿ ಮುಖ್ಯಮಂತ್ರಿಗಳು ಕರ್ನಾಟಕ ಸರಕಾರ

ಸಾಂಸ್ಕೃತಿಕ ಕಾರ್ಯಕ್ರಮ- ಬೆಳಗ್ಗೆ 10-00: ತಾಳಮದ್ದಳೆ. ಸಂಜೆ 4-00 ರಿಂದ 6-30: "ಭಕ್ತಿಗಾನ ಸುಧಾ" ನಾದ ಬ್ರಹ್ಮ ಸಂಗೀತ ಬಳಗ, ಮಂಗಳೂರು . ರಾತ್ರಿ 9-00 : ಶಾರದ ಕಲಾ ಕೇಂದ್ರ ಟ್ರಸ್ಟ್(ರಿ) ದರ್ಬೆ, ಪುತ್ತೂರು ಇವರಿಂದ ನೃತ್ಯಾರ್ಚನೆ ಮತ್ತು ಶ್ರೀ ನಿವಾಸ ಕಲ್ಯಾಣ ನೃತ್ಯರೂಪಕ

ದಿನಾಂಕ:17-04-2026ನೇ ಶುಕ್ರವಾರ

ಬೆಳಿಗ್ಗೆ 5-30: ಉಷಃಪೂಜೆ, ಮಹಾಗಣಪತಿ ಹೋಮ, ಅಂಕುರ ಪೂಜೆ, ಸ್ವಶಾಂತಿ, ಶ್ವಾನಶಾಂತಿ, ಅದ್ಭುತಶಾಂತಿ, ಚೋರಶಾಂತಿ, ಹೋಮಾದಿಗಳು. ಮಧ್ಯಾಹ್ನ 12-00 : ಹೋಮಗಳ ಕಲಶಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ಸಂಜೆ 05-30 : ದೀಪಾರಾಧನೆ, ಅಂಕುರಪೂಜೆ, ಕುಂಭೇಶ ಕರ್ಕರೀಪೂಜೆ, ಅನುಜ್ಞಾ ಕಲಶ ಪೂಜೆ, ಪರಿಕಲಶ ಪೂಜೆ, ಅಧಿವಾಸ ಹೋಮ, ಕಲಶಾಽವಾಸ, ದುರ್ಗಾಪೂಜೆ, ಮಹಾಪೂಜೆ, ಪ್ರಸಾದವಿತರಣೆ, ಅನ್ನಸಂತರ್ಪಣೆ.

ಧಾರ್ಮಿಕ ಸಭಾ ಕಾರ್ಯಕ್ರಮ ರಾತ್ರಿ 7-00 ರಿಂದ 8-30

ಅಧ್ಯಕ್ಷತೆ : ಶ್ರೀ ಸುದರ್ಶನ್, 'ಸುಪ್ರಭಾತ' ಕೊಲ್ಲಿ,
ನಿವೃತ್ತ ಸರ್ಕಲ್ ಇನ್ಸ್‌ಪೆಕ್ಟರ್
ಧಾರ್ಮಿಕ ಉಪನ್ಯಾಸ : ಶ್ರೀ ಕೇಶವ ಬಂಗೇರ,
ಉಪನ್ಯಾಸಕರು, ಕುದ್ರೋಳಿಗೋಕರ್ಣನಾಥೇಶ್ವರ ಕಾಲೇಜು
ಮುಖ್ಯ ಅತಿಥಿಗಳು : ಕ್ಯಾಪ್ಟನ್ ಬ್ರಿಜೇಶ್ ಚೌಟ,
ಮಾನ್ಯ ಸಂಸದರು, ಮಂಗಳೂರು
: ಉಮಾನಾಥ್ ಕೋಟ್ಯಾನ್,
ಮಾನ್ಯ ಶಾಸಕರು ಮೂಲ್ಕಿ-ಮೂಡಬಿದಿರೆ ವಿಧಾನಸಭಾ ಕ್ಷೇತ್ರ
: ರಾಜೇಶ್ ನ್ಯಾಕ್, ಮಾನ್ಯ ಶಾಸಕರು ಬಂಟ್ವಾಳ

ಸಾಂಸ್ಕೃತಿಕ ಕಾರ್ಯಕ್ರಮ: ಬೆಳಗ್ಗೆ 10-00 ಶ್ರೀಮತಿ ಶಾಂತಾ ಕುಂಟಿನಿ ಸಾರಥ್ಯದ ಸತ್ಯ ಶಾಂತ ಪ್ರತಿಷ್ಠಾನ ಅರ್ಪಿಸುವ "ಗಾನ ನೃತ್ಯ ಸಂಭ್ರಮ". ಸಂಜೆ 4-00 ರಿಂದ 6-30 "ಸುಗಮ ಸಂಗೀತ". ರಾತ್ರಿ 9-00 : ಶ್ರೀ ಆದಿ ಧೂವ. ಾವತಿ ಶ್ರೀ ದೇಯಿ ಬೈದೆತಿ ಕೃಪಾಪೋಷಿತ ಯಕ್ಷಗಾನ ಮಂಡಳಿ ಗೆಜ್ಜೆಗಿರಿ ಇವರಿಂದ "ಓಂ ನಮಃ ಶಿವಾಯ"

ದಿನಾಂಕ: 18-04-2026ನೇ ಶನಿವಾರ

ಬೆಳಿಗ್ಗೆ 5-30 : ಉಷಃಪೂಜೆ, ಅಂಕುರಪೂಜೆ, ಮಹಾಗಣಪತಿ ಹೋಮ, ತ್ರಿಕಾಲ ಪೂಜೆ, ತತ್ವ ಹೋಮ, ತತ್ವ ಕಲಶ ಪೂಜೆ, ತತ್ವ ಕಲಶಾಭಿಷೇಕ, ಅನುಜ್ಞಾ ಕಲಶಾಭಿಷೇಕ. ಮಧ್ಯಾಹ್ನ 12-00 : ತ್ರಿಕಾಲ ಪೂಜೆ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ಸಂಜೆ 05-00 : ದೀಪಾರಾಧನೆ, ನೂತನ ವಾಹನ ಬಿಂಬ ಪರಿಗ್ರಹ, ನೇತ್ರೋನ್ಮೀಲನ, ನೂತನ ವಾಹನಬಿಂಬ ಜಲಾಧಿವಾಸ, ತ್ರಿಕಾಲ ಪೂಜೆ, ಮಹಾಪೂಜೆ, ಅನ್ನಸಂತರ್ಪಣೆ.

ಧಾರ್ಮಿಕ ಸಭಾ ಕಾರ್ಯಕ್ರಮ ರಾತ್ರಿ ಗಂಟೆ 7-00 ರಿಂದ 8-30

ಅಧ್ಯಕ್ಷತೆ : ಶ್ರೀ ಅನಂತಕೃಷ್ಣ ಕುದ್ದಣ್ಣಾಯ
ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಕರಾಯ.
ಧಾರ್ಮಿಕ ಉಪನ್ಯಾಸ : ಶ್ರೀ ಲಕ್ಷ್ಮೀಶ ಗಬ್ಲಡ್ಕ
ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರು

ಮುಖ್ಯ ಅತಿಥಿಗಳು :

ದಿನೇಶ್ ಗುಂಡುರಾವ್, ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಆರೋಗ್ಯ ಸಚಿವರು ಕರ್ನಾಟಕ ಸರಕಾರ.
ಕೋಟ ಶ್ರೀನಿವಾಸ ಪೂಜಾರಿ, ಲೋಕಸಭಾ ಸದಸ್ಯರು ಉಡುಪಿ. **ವೇದವ್ಯಾಸ ಕಾಮತ್**, ಮಾನ್ಯ ಶಾಸಕರು ಮಂಗಳೂರು. **ಅಶೋಕ್ ಕುಮಾರ್ ರೈ**, ಮಾನ್ಯ ಶಾಸಕರು ವಿಧಾನಸಭಾ ಕ್ಷೇತ್ರ, ಪುತ್ತೂರು. **ವೈ.ಭರತ್ ಶೆಟ್ಟಿ**, ಮಾನ್ಯ ಶಾಸಕರು, ಮಂಗಳೂರು ಉತ್ತರ. **ರಕ್ಷಿತ್ ಶಿವರಾಮ**, ಅಧ್ಯಕ್ಷರು, ಬೆಸ್ಟ್ ಫೌಂಡೇಶನ್ ಬೆಳ್ತಂಗಡಿ.

ಸಾಂಸ್ಕೃತಿಕ ಕಾರ್ಯಕ್ರಮ : ಬೆಳಿಗ್ಗೆ 11-00 ರಿಂದ 12-00 ಶಾಸ್ತ್ರೀಯ ಸಂಗೀತ. ಸಂಜೆ 4-00 ರಿಂದ 6-30 ತಾಳಮದ್ದಳೆ ಧೀಶಕ್ತಿ ಮಹಿಳಾ ಯಕ್ಷ ಬಳಗ ತೆಂಕಿಲ ಪುತ್ತೂರು ಪ್ರಸಂಗ: "ವಾಲಿ ಮೋಕ್ಷ". ರಾತ್ರಿ 9-00 : "ನೃತ್ಯ ಗಾನ ವೈಭವ"

ದಿನಾಂಕ: 19-04-2026ನೇ ಆದಿತ್ಯವಾರ

ಬೆಳಿಗ್ಗೆ 5-30: ಉಷಃಪೂಜೆ, ಅಂಕುರಪೂಜೆ, ಮಹಾಗಣಪತಿ ಹೋಮ, ಮಂಟಪ ಸಂಸ್ಕಾರ, ಅಗ್ನಿಜನನ, ಕುಂಭೇಶ ಕರ್ಕರೀ ಪೂಜೆ, ಬ್ರಹ್ಮಕಲಶ ಪೂಜೆ, ಪರಿಕಲಶ ಪೂಜೆ, ಶಯ್ಯಾಪೂಜೆ, ಮಂಡಲ ಪೂಜೆ. ಮಧ್ಯಾಹ್ನ 12.30 : ಪ್ರಸಾದ ವಿತರಣೆ, ಅನ್ನಸಂತರ್ಪಣೆ. ಸಂಜೆ 05-30 : ದೀಪಾರಾಧನೆ, ಮಹಾಬಲಿಪೀಠಾಽವಾಸ, ನೂತನ ವಾಹನ ಬಿಂಬ ಧ್ಯಾನಾಽವಾಸ ಕ್ರಿಯೆ, ಅಽವಾಸ ಹೋಮ, ನೂತನ ಧ್ವಜಸ್ತಂಭ ಅಽವಾಸ ಕ್ರಿಯೆ, ನೂತನ ಬ್ರಹ್ಮರಥ ಪರಿಗ್ರಹ, ರಥ ಶುದ್ಧಿ, ಮಹಾಪೂಜೆ, ಪ್ರಸಾದ ವಿತರಣೆ ಅನ್ನಸಂತರ್ಪಣೆ.

ಧಾರ್ಮಿಕ ಸಭಾ ಕಾರ್ಯಕ್ರಮ ರಾತ್ರಿ ಗಂಟೆ 7-00 ರಿಂದ 8-30

ಅಧ್ಯಕ್ಷತೆ : ಶ್ರೀ ಶಶಿಧರ ಶೆಟ್ಟಿ ಬರೋಡ
ನವಶಕ್ತಿ, ಅಧ್ಯಕ್ಷರು ತುಳು ಸಂಘ, ಉದ್ಯಮಿಗಳು
ಧಾರ್ಮಿಕ ಉಪನ್ಯಾಸ : ಶ್ರೀ ಡಾ। ಪ್ರದೀಪ್ ನಾವೂರು
ಮುಖ್ಯ ಅತಿಥಿಗಳು : ರಮಾನಾಥ ರೈ, ಮಾಜಿ ಶಾಸಕರು ಬಂಟ್ವಾಳ ತಾಲೂಕು.
ಕಿಶೋರ್‌ಕುಮಾರ್ ಬೊಟ್ಯಾಡಿ, ವಿಧಾನ ಪರಿಷತ್ ಸದಸ್ಯರು ಕರ್ನಾಟಕ ಸರಕಾರ.
ಶ್ರೀ ಕೆ. ಹರೀಶ್ ಕುಮಾರ್, ಅಧ್ಯಕ್ಷರು, ಮೆಸ್ಕಾಂ ನಿಗಮ ಮಂಡಳಿ ಮಂಗಳೂರು.
ಸಂಜೀವ ಮಠಂದೂರು, ಮಾಜಿ ಶಾಸಕರು, ಪುತ್ತೂರು.
ಶ್ರೀಮತಿ ಶಕುಂತಳ ಶೆಟ್ಟಿ, ಮಾಜಿ ಶಾಸಕರು ಪುತ್ತೂರು

ಸಾಂಸ್ಕೃತಿಕ ಕಾರ್ಯಕ್ರಮ : ಬೆಳಗ್ಗೆ 10-00:ತಾಳಮದ್ದಳೆ ಪ್ರಸಂಗ: "ಶ್ವೇತ ಕುಮಾರ ಚರಿತ್ರೆ" ಮಧ್ಯಾಹ್ನ 2-00 ರಿಂದ 4-00 ಸ್ವರತರಂಗ ಉರಿಮಜಲು ಇವರಿಂದ ಭಕ್ತಿ ಭಾವ-ಗಾನ. ಸಂಜೆ 4-30 ರಿಂದ 6-30 ಕೂಚಿಪುಡಿ. ಕುಮಾರಿ ಕೃತಿ ಆರ್ ಐತಾಳ್ ಬೆಂಗಳೂರು ಭರತನಾಟ್ಯ. ರಾತ್ರಿ 9-00 : ಗಯಾಪದ ಕಲಾವಿದೆರ್ ಉಬಾರ್ ಅಭಿನಯಿಸುವ ನಾಟಕ : ನಾಗಮಾಣಿಕ್ಯ

ದಿನಾಂಕ: 20-04-2026ನೇ ಸೋಮವಾರ

ಬೆಳಿಗ್ಗೆ 5.00 : ಮಹಾಗಣಪತಿ ಹೋಮ, ನಾಂದೀ ಪುಣ್ಯಾಹ, **ಗಂಟೆ 10-00 ರಿಂದ 11-02 ವರೆಗೆ ನಡೆಯುವ ಮಿಥುನ ಲಗ್ನ ಶುಭಮುಹೂರ್ತದಲ್ಲಿ ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀ ಪಾದಂಗಳವರು ಶ್ರೀ ಎಡನೀರು ಮಠ, ಕಾಸರಗೋಡು, ಇವರ ದಿವ್ಯ ಉಪಸ್ಥಿತಿಯಲ್ಲಿ, ಶ್ರೀ ಮಹಾಲಿಂಗೇಶ್ವರ ದೇವರಿಗೆ ಅಷ್ಟಬಂಧಕ್ರಿಯೆ, ಬ್ರಹ್ಮಕಲಶಾಭಿಷೇಕ, ಶ್ರೀ ಮಹಾಗಣಪತಿ ದೇವರ ಪುನಃ ಪ್ರತಿಷ್ಠೆ, ದುರ್ಗಾದೇವಿಯ ಪುನಃ ಪ್ರತಿಷ್ಠೆ, ನೂತನ ಧ್ವಜಸ್ತಂಭ ಪ್ರತಿಷ್ಠೆ, ವಾಹನ ಪ್ರತಿಷ್ಠೆ, ನಿದ್ರಾಕಲಶಾಭಿಷೇಕ, ನೂತನ ಬ್ರಹ್ಮರಥ ಸಮರ್ಪಣೆ, ಮಹಾಬಲಿಪೀಠ ಪ್ರತಿಷ್ಠೆ, ಪರಿವಾರ ಪ್ರತಿಷ್ಠೆ.** ಮಧ್ಯಾಹ್ನ 12.30 : ಮಹಾಪೂಜೆ, ಅವಸ್ರವ ಪ್ರೋಕ್ಷಣೆ, ವೈದಿಕ ಮಂತ್ರಾಕ್ಷತೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ಸಂಜೆ 6-00 : ದೀಪಾರಾಧನೆ, ಧ್ವಜಾರೋಹಣ, ಮಹಾಪೂಜೆ, ಶ್ರೀ ಭೂತಬಲಿ ಮಹೋತ್ಸವ, ಅನ್ನಸಂತರ್ಪಣೆ.

ಧಾರ್ಮಿಕ ಸಭಾ ಕಾರ್ಯಕ್ರಮ ರಾತ್ರಿ ಗಂಟೆ 7-00 ರಿಂದ 8-30

ಅಧ್ಯಕ್ಷತೆ : ಶ್ರೀ ಅತುಲ್ ಕುಮಾರ್ ಕೆ. ಎಸ್., ಹಲೇಜಿ,
ಅಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ ಕರಾಯ
ಧಾರ್ಮಿಕ ಉಪನ್ಯಾಸ : ಶ್ರೀ ಶ್ರೀ ಕಾಂತ್ ಶೆಟ್ಟಿ, ಕಾರ್ಕಳ ಪತ್ರಕರ್ತರು
ಮುಖ್ಯ ಅತಿಥಿ : ಶ್ರೀ ರಾಮಲಿಂಗ ರೆಡ್ಡಿ,
ಮುಜರಾಯಿ ಇಲಾಖೆ ಹಾಗೂ ಸಾರಿಗೆ ಸಚಿವರು, ಕರ್ನಾಟಕ ಸರಕಾರ

ಸಾಂಸ್ಕೃತಿಕ ಕಾರ್ಯಕ್ರಮ: ಬೆಳಿಗ್ಗೆ 11.00ರಿಂದ 12.30- ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕತ ನಾದವಿಶಾರದ ಬಿರುದಾಂಕಿತ ಕೃಷ್ಣಪ್ರಸಾದ್ ದೇವಾಡಿಗ ಸಾರಥ್ಯದ ರಾಗಾಮೃತ ತಂಡದ ವಾದ್ಯಗೋಷ್ಠಿ. ಮಧ್ಯಾಹ್ನ 1-00 ರಿಂದ 3-00: 'ಕುಸಾಲ್ದ ಗುರಿಕಾರೆ' ದಿನೇಶ್ ಕೋಡಪದವು ಸಾರಥ್ಯದಲ್ಲಿ. ಜಿಲ್ಲೆಯ ಪ್ರಸಿದ್ಧ ಹಾಸ್ಯ ಕಲಾವಿದರ ಸಮಾಗಮದೊಂದಿಗೆ, ಯಕ್ಷ ತೆಲಿಕೆ- ಯಕ್ಷ ಹಾಸ್ಯ ವೈಭವ. ಸಂಜೆ 3-00 ರಿಂದ 6-30: ಹವ್ಯಾಸಿ ಕಲಾವಿದರ ಕೂಡುವಿಕೆಯಿಂದ "ಯಕ್ಷ-ಗಾನ-ನಾಟ್ಯ-ಅರ್ಥ-ವೈಭವ " ಪ್ರಸಂಗ: ಇಂದ್ರಜಿತು ಕಾಳಗ. ರಾತ್ರಿ 9-00 ರಿಂದ ರಾಘು ಮಾಸ್ತ್ರ - ತುಳು ಹಾಸ್ಯ ನಾಟಕ, ನಿರ್ದೇಶನ: ಪ್ರಸನ್ನ ಬೈಲೂರು, ಪ್ರಾಯೋಜಕರು: ಶ್ರೀಮತಿ ಆಶ್ವಿನಿ ಸೋಮಯಾಜಿ ಮತ್ತು ಶ್ರೀ ವಸಂತ ಸೋಮಯಾಜಿ ಕರಾಯ, ನಿರ್ದೇಶನ: ಪ್ರಸನ್ನ ಬೈಲೂರು.

ದಿನಾಂಕ: 21-04-2026ನೇ ಮಂಗಳವಾರ

ಬೆಳಿಗ್ಗೆ 6-30 : ಉಷಃಪೂಜೆ, ದೇವರ ಬಲಿಹೊರಟು ಉತ್ಸವ. ಮಧ್ಯಾಹ್ನ 12.00 : ನವಕ ಕಲಶಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ರಾತ್ರಿ 07-00 : ಮಹಾಪೂಜೆ, ದೇವರ ಬಲಿ ಹೊರಟು ಶ್ರೀ ಭೂತಬಲಿ ಉತ್ಸವ, ವಸಂತ ಕಟ್ಟೆ ಪೂಜೆ, ಅನ್ನಸಂತರ್ಪಣೆ.

ಅಧ್ಯಕ್ಷತೆ : ಶ್ರೀ ನಾಗಾರ್ಜುನ ರಾವ್, ಉದ್ಯಮಿಗಳು ಬೆಂಗಳೂರು
ಧಾರ್ಮಿಕ ಉಪನ್ಯಾಸ : ಶ್ರೀ ಡಾ। ತುಕರಾಮ ಪೂಜಾರಿ,
ಮುಖ್ಯಸ್ಥರು ರಾಣಿ ಅಬ್ಬಕ್ಕ ತುಳು ಅಧ್ಯಯನ ಪೀಠ, ಸಂಚಯಗಿರಿ ಬಂಟ್ವಾಳ

ಸಾಂಸ್ಕೃತಿಕ ಕಾರ್ಯಕ್ರಮ: ಬೆಳಿಗ್ಗೆ 11-00 ರಿಂದ 12-30 **"ಭಕ್ತಿ ಭಾವ ಗಾನ ಸಂಭ್ರಮ".** ಸಂಜೆ 5-00 ರಿಂದ 6-30 "ಗಾನನೃತ್ಯ ವೈಭವ". ರಾತ್ರಿ 9-00 ರಿಂದ: ಮಾನಸ ಡ್ಯಾನ್ಸ್ ಕ್ರೀವ್ ಕಲ್ಲೇರಿ, ಇವರಿಂದ ನೃತ್ಯ.

ದಿನಾಂಕ: 22-04-2026ನೇ ಬುಧವಾರ

ಬೆಳಿಗ್ಗೆ 6-30 : ಉಷಃಪೂಜೆ. ಬೆಳಿಗ್ಗೆ 8-30 : ದೇವರ ಬಲಿ ಹೊರಟು ಉತ್ಸವ. ಬೆಳಿಗ್ಗೆ 10.30: ದರ್ಶನ ಬಲಿ, ಬಟ್ಟಲು ಕಾಣಿಕೆ ಮಧ್ಯಾಹ್ನ 12.00 : ನವಕ ಕಲಶಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ರಾತ್ರಿ 07-00: ಮಹಾಪೂಜೆ, ದೇವರ ಬಲಿ ಹೊರಟು ಶ್ರೀ ಭೂತಬಲಿ ಉತ್ಸವ, ನಡುದೀಪ ಮಹೋತ್ಸವ, ವಸಂತ ಕಟ್ಟೆ ಪೂಜೆ, ನೃತ್ಯಬಲಿ, ಅನ್ನಸಂತರ್ಪಣೆ.

ಧಾರ್ಮಿಕ ಸಭಾ ಕಾರ್ಯಕ್ರಮ ರಾತ್ರಿ ಗಂಟೆ 7-00 ರಿಂದ 8-30

ವಿಶ್ವ ಹಿಂದೂ ಪರಿಷತ್ ಬಜರಂಗದಳ, ಮಾತೃಶಕ್ತಿ, ದುರ್ಗಾವಾಹಿನಿ ಕರಾಯ ಘಟಕ ಇದರ ವತಿಯಿಂದ **ಭಾರತ ಮಾತಾ ಪೂಜನಾ** ಕಾರ್ಯಕ್ರಮ

ಅಧ್ಯಕ್ಷರು : ಶ್ರೀ ಅತುಲ್ ಕುಮಾರ್ ಕೆ. ಎನ್. ಹಲೇಜಿ
ಅಧ್ಯಕ್ಷರು,ಬ್ರಹ್ಮಕಲಶೋತ್ಸವ ಸಮಿತಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಕರಾಯ
ಬೌದ್ಧಿಕ್ : ಶ್ರೀ ಗೋಪಾಲ್ ಜೀ ನಾಗರಕಟ್ಟೆ ವಿಶ್ವ ಹಿಂದೂ ಪರಿಷತ್ ಕೇಂದ್ರೀಯ ಸಹ ಕಾರ್ಯದರ್ಶಿ

ಸಾಂಸ್ಕೃತಿಕ ಕಾರ್ಯಕ್ರಮ- ಬೆಳಗ್ಗೆ 10-00 ರಿಂದ ಯಕ್ಷಗಾನ ತಾಳಮದ್ದಳೆ. ಸಂಜೆ 6-00 ರಿಂದ 7-00 ರಾಮಾಯಣ ನೃತ್ಯ ರೂಪಕ. ರಾತ್ರಿ 9-00 ರಿಂದ: ದಿ। ಶೇಖರ್ ಗುಜರನ್ ಕಾರ್ಕಳ ವಿರಚಿತ ನಮ್ಮೂರ ಕಲಾವಿದರು ಕರಾಯ ಇವರಿಂದ- ನಾಗರತ್ನ- ತುಳು ಸಾಮಾಜಿಕ ಹಾಸ್ಯಮಯ ನಾಟಕ

ದಿನಾಂಕ: 23-04-2026ನೇ ಗುರುವಾರ

ಬೆಳಿಗ್ಗೆ 6-30 : ಉಷಃಪೂಜೆ, ದೇವರ ಬಲಿಹೊರಟು ಉತ್ಸವ, ಮಧ್ಯಾಹ್ನ 12.00 : ನವಕ ಕಲಶಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ರಾತ್ರಿ 7-00: ಮಹಾಪೂಜೆ, ದೇವರ ಬಲಿ ಹೊರಟು ಉತ್ಸವ, ವಸಂತ ಕಟ್ಟೆ ಪೂಜೆ, ಬ್ರಹ್ಮರಥೋತ್ಸವ, ಶ್ರೀ ಭೂತಬಲಿ ಶಯನೋತ್ಸವ, ಕವಾಟ ಬಂಧನ, ಅನ್ನಸಂತರ್ಪಣೆ.

ಧಾರ್ಮಿಕ ಸಭಾ ಕಾರ್ಯಕ್ರಮ ರಾತ್ರಿ ಗಂಟೆ 7-00 ರಿಂದ 8-30

ಅಧ್ಯಕ್ಷತೆ : ಶ್ರೀಮತಿ ಭಾಗೀರಥಿ ಮುರುಳ್ಯ, ಮಾನ್ಯ ಶಾಸಕರು ಸುಳ್ಯ
ಧಾರ್ಮಿಕ ಉಪನ್ಯಾಸ : ಶ್ರೀಮತಿ ಸಹನಾ ಕುಂದರ್ ಸೂಡ
ವಕೀಲರು ಉಡುಪಿ ಹಾಗೂ ಸಾಮಾಜಿಕ ಕಾರ್ಯಕರ್ತೆ

ಸಾಂಸ್ಕೃತಿಕ ಕಾರ್ಯಕ್ರಮ: ಸಂಜೆ 5-30 ರಿಂದ 7-00 ಸ್ಫೂರ್ತಿದಾಯಕ ತಂಡದಿಂದ ನೃತ್ಯ ವೈಭವ

ದಿನಾಂಕ: 24-04-2026ನೇ ಶುಕ್ರವಾರ

ಬೆಳಿಗ್ಗೆ 6-30:ಕವಾಟೋದ್ಘಾಟನೆ, ಮಂಗಳ ದರ್ಶನ ಅಭಿಷೇಕ, ಪಂಚಾಮೃತ ಅಭಿಷೇಕ, ಉಷಃಪೂಜೆ, ಶಯನೋತ್ಸವದ ಪ್ರಸಾದ ವಿತರಣೆ, ಯಾತ್ರಾ ಹೋಮ. ಮಧ್ಯಾಹ್ನ 12.00 : ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ರಾತ್ರಿ 7-00: ದೇವರ ಬಲಿ ಹೊರಟು ಅವಬೃತ ಉತ್ಸವ, ಕೆರೆಯಲ್ಲಿ ಶ್ರೀ ದೇವರ ಅವಭೃತ ಮಂಗಳ ಸ್ನಾನ. ರಾತ್ರಿ 10-00 : ಕೆರೆಯಲ್ಲಿ ದೇವರ ಅವಭೃತ ಸ್ನಾನ ಮುಗಿಸಿ ದೇವಸ್ಥಾನಕ್ಕೆ ಹಿಂದಿರುಗಿ ಧ್ವಜಾವರೋಹಣ, ಮಹಾಪೂಜೆ, ವೈದಿಕ ಮಂತ್ರಾಕ್ಷತೆ ನಂತರ ಕ್ಷೇತ್ರದ ದೈವಗಳ ಭಂಡಾರ ತೆಗೆದು ನೇಮೋತ್ಸವ, ಅನ್ನಸಂತರ್ಪಣೆ.

ಸಾಂಸ್ಕೃತಿಕ ಕಾರ್ಯಕ್ರಮ: ಬೆಳಿಗ್ಗೆ 10-00 ರಿಂದ ತಾಳಮದ್ದಳೆ. ಸಂಜೆ 6-00 ರಿಂದ 7-00 ಗಾನಸುಧೆ. ಸಂಜೆ 7-00 ರಿಂದ- ಗೋಲ್ಡನ್ ಬುಕ್ ಆಫ್ ವಲ್ಡ್ ರೆಕಾರ್ಡ್ ಮಾಡಿರುವ ಶಮಿಕ ಎಂ.ಕೆ ಇವರಿಂದ ಗಾಂಧಾರಿ ವಿದ್ಯೆಯಲ್ಲಿ "ಸ್ಯಾಂಡ್ ಆರ್ಟ್ ಪ್ರದರ್ಶನ"

ದಿನಾಂಕ: 25-04-2026ನೇ ಶನಿವಾರ

ಬೆಳಿಗ್ಗೆ 7-30 : ಉಷಃ ಪೂಜೆ, ಮಹಾಗಣಪತಿ ಹೋಮ, ಸಂಪ್ರೋಕ್ಷಣಾ ಕಲಶ. ಮಧ್ಯಾಹ್ನ 12.00: ಕಲಶಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ.

ದಿನಾಂಕ: 30-04-2026ನೇ ಗುರುವಾರ

ರಾತ್ರಿ ದೇವರಕಾಡಿನಲ್ಲಿ : ಕಲ್ಕುಡ, ಕಲ್ಲುರ್ಟಿ, ಪಂಜುರ್ಲಿ ದೈವಗಳಿಗೆ ನೇಮ

ದಿನಾಂಕ 07-06-2026ನೇ ಆದಿತ್ಯವಾರ

ಮಧ್ಯಾಹ್ನ ಶ್ರೀ ದೇವರಿಗೆ ದೃಢಕಲಶಾಭಿಷೇಕ ನಡೆಯಲಿರುವುದು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ ಸಂಗಮ
ರಾಷ್ಟ್ರ ಜಾಗೃತಿಯ ದೈನಿಕ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು



ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ವರ್ಷಾವಧಿ ಜಾತ್ರೆಯ ಅಂಗವಾಗಿ ದೇವರ ಚಿನ್ನದ ರಥೋತ್ಸವ ನಡೆಯಿತು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಥೋತ್ಸವವನ್ನು ಕಣ್ತುಂಬಿಕೊಂಡರು.

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
35^0 26^0	33^0 27^0

ಊಟ, ಮೀನು ಖಾದ್ಯ ರೇಟು ಏಕಾಏಕಿ ಏರಿಕೆ

ಬಂಗುಡೆ ಫ್ರೈ @200!

ಬೇಕಾಬಿಟ್ಟಿ ನಿರ್ಧಾರಕ್ಕೆ ಗ್ರಾಹಕರ ಆಕ್ಷೇಪ

ಮಂಗಳೂರು: ಬಂಗುಡೆ 180 ರಿಂದ–200, ಬೂತಾಯಿ ಪ್ಲೇಟ್ 80, ಅಂಜಲ್, ಮಾಂಜಿ ಕೇಳುವುದೇ ಬೇಡ.

ಇದೇನು ಲೆಕ್ಕಾ ಅಂತ ಗಲಿಬಿಲಿ ಗೊಳ್ಳ ಬೇಡಿ. ಇದು ಕೆಜಿಯೊಂದರ ಮೀನಿನ ದರವಲ್ಲ; ಮೀನು ಫ್ರೈ ದರ!, ಈ ರೀತಿಯ ಮೀನು ಫ್ರೈ ದರವನ್ನು ನೀವು ಮಂಗಳೂರಿನಲ್ಲಿ ಮಾತ್ರ ಕಾಣಲು ಸಾಧ್ಯ.

ದರ ದುಪ್ಪಟ್ಟು ಏರಿಕೆ

ಅಡುಗೆ ಅನಿಲ ಸಮಸ್ಯೆ ಬಂಡವಾಳವಾಗಿಸಿಕೊಳ್ಳುತ್ತಿರುವ ಹೋಟೆಲ್ ಮಾಲಕರು ಊಟ ಸೇರಿದಂತೆ ಇತರೆ ಖಾದ್ಯಗಳ ಬೆಲೆ ದುಪ್ಪಟ್ಟು ಮಾಡಿಬಿಟ್ಟಿದ್ದಾರೆ. ಹೋಟೆಲ್‌ಗಳನ್ನೇ ನಂಬಿರುವ ಕೂಲಿ ಕಾರ್ಮಿಕರು, ಜನಸಾಮಾನ್ಯರು ಹೋಟೆಲ್ ಮೆಟ್ಟಿಲು ಹತ್ತದ ಸ್ಥಿತಿ ನಗರದಲ್ಲಿ ನಿರ್ಮಾಣವಾಗುತ್ತಿದೆ.

ಬೇರೆಲ್ಲೂ ಈ ತರ ಇಲ್ಲ

ದಕ್ಷಿಣ ಕನ್ನಡವಾಗಲಿ, ಉಡುಪಿಯಾಗಲಿ, ಇತರ ಯಾವುದೇ ಹೋಟೆಲ್‌ಗಳಲ್ಲಿ ಈ ತರದ ದುಬಾರಿ ಮೀನು ಫ್ರೈ ದರ, ಊಟದ ದರವನ್ನು ನೀವು ಕಾಣಲು ಸಾಧ್ಯವಿಲ್ಲ. ಗ್ಯಾಸ್ ಬೆಲೆ ಏರಿಕೆಯ ಜೊತೆ ಜೊತೆಗೆ ಮೀನು ಫ್ರೈ ಬೆಲೆಯೂ ಹೆಚ್ಚಿಸಲಾಗಿದೆ. ಮಂಗಳೂರಿನ ಸಣ್ಣ ಕ್ಯಾಂಟೀನ್‌ಗಳಿಂದ ಹಿಡಿದು ಇತರೆ ಸಾಮಾನ್ಯ ಹೋಟೆಲ್‌ಗಳಲ್ಲೂ ಒಂದೊಂದು ತರದ ದರವಿದೆ.

ಕಡಿಮೆಯಂತೂ ಎಲ್ಲೂ ಇಲ್ಲ

ಮಾರುಕಟ್ಟೆಯಲ್ಲಿ ಬಂಗುಡೆ ಕೆ.ಜಿ.ಯೊಂದಕ್ಕೆ 350 ರೂಪಾಯಿ ದರವಿದ್ದರೆ ಹೋಟೆಲ್‌ಗಳಲ್ಲಿ ಕೇವಲ ಒಂದು ಬಂಗುಡೆ ಫ್ರೈಗೆ 180–ರಿಂದ 200 ರೂಪಾಯಿ ಪಾವತಿಸಬೇಕಾಗುತ್ತಿದೆ. ಈ ದರ ಮಾತ್ರ ಗ್ರಾಹಕರ ತಲೆಮೇಲೆ ನೇರವಾಗಿ ಹೊಡೆದಂತಿದೆ.



ಕಾರ್ಮಿಕರು ಕಂಗಾಲು

ನಗರದಲ್ಲಿ ಹೆಚ್ಚಿನ ಕಾರ್ಮಿಕರು, ಜನಸಾಮಾನ್ಯರು ಸಣ್ಣ ಪುಟ್ಟ ಹೋಟೆಲ್‌ಗಳನ್ನೇ ಅವಲಂಬಿಸಿದ್ದಾರೆ. ಅವರ ವೇತನದಲ್ಲಿ ಯಾವುದೇ ವ್ಯತ್ಯಯವಾಗಿಲ್ಲ ಆದರೆ ಹೋಟೆಲ್‌ಗಳಲ್ಲಿ ಚಹಾ, ತಿಂಡಿ, ಊಟದ ದರ ಏರಿಕೆಯಿಂದ ದುಡಿದ ಅರ್ಧದಷ್ಟು ಹಣವನ್ನು ಇದಕ್ಕಾಗಿಯೇ ಸುರಿಯಬೇಕಾದ ಸ್ಥಿತಿ ಎದುರಾಗಿದೆ. ಕೆಲವು ಹೋಟೆಲ್‌ಗಳು ಗ್ಯಾಸ್ ಸಮಸ್ಯೆಯನ್ನೇ ಮುಂದಿಟ್ಟುಕೊಂಡು ದರ ಏರಿಸಿಕೊಂಡಿವೆ.

ದರ ಕಡಿಮೆಯಾಗಿಲ್ಲ

ಆರಂಭದಲ್ಲಿ ಇದ್ದಷ್ಟು ಗ್ಯಾಸ್ ಸಮಸ್ಯೆ ಸದ್ಯ ಇಲ್ಲವಾದರೂ ಹೋಟೆಲ್‌ಗಳಲ್ಲಿನ ದರ ಮಾತ್ರ ಕಡಿಮೆಯಾಗಿಲ್ಲ. ತಿಂಗಳ ಹಿಂದೆ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಸಮಸ್ಯೆ ತಲೆದೋರಿದಾಗ ಇದರ ನೆಪದಲ್ಲಿ ಎಲ್ಲೆಡೆ ಹೋಟೆಲ್‌ಗಳು ತಮಗಿಷ್ಟಬಂದಂತೆ ಊಟೋಪಚಾರದ ದರ ಏರಿಸಿಕೊಂಡಿದ್ದವು. ಆದರೆ ಇದೇ ದರ ಮುಂದುವರಿಯುವಂತೆ ಕಾಣುತ್ತಿದೆ.

6000 ಮೆ. ವ್ಯಾಟ್ ದಾಟಿದ 'ಮೀಟರ್'

ಕೇರಳದಲ್ಲೀಗ ದಾಖಲೆ ಬರೆದ ವಿದ್ಯುತ್ ಬಳಕೆ

ತಾಪಮಾನದ ಹೆಚ್ಚಳದಿಂದ ಸಮಸ್ಯೆ

ಕಾಸರಗೋಡು: ಉಷ್ಣತೆಯು ತೀವ್ರಗೊಳ್ಳುತ್ತಿರುವುದರಿಂದ ಕಾಸರಗೋಡು ಜಿಲ್ಲೆಯೂ ಸಹಿತ ಕೇರಳದಲ್ಲಿ ವಿದ್ಯುತ್ ಬಳಕೆ ದಾಖಲೆಯನ್ನು ತಲುಪಿದೆ. ಇತಿಹಾಸದಲ್ಲಿ ಮೊದಲ ಬಾರಿಗೆ ರಾಜ್ಯದಲ್ಲಿ ವಿದ್ಯುತ್ ಬಳಕೆ 6000 ಮೆಗಾವ್ಯಾಟ್ ದಾಟಿದೆ.

ಮಂಗಳವಾರ ಸಂಜೆ ವಿದ್ಯುತ್ ಬಳಕೆ 6012 ಮೆಗಾವ್ಯಾಟ್ ತಲುಪಿದೆ.

ಭಾರಿ ಏರಿಕೆ ಕಂಡುಬಂದಿದೆ

ವಿದ್ಯುತ್ ಬಳಕೆ ತೀವ್ರವಾಗಿ ಏರಿಕೆಯಾಗಿರುವುದರಿಂದ ಕೆಎಸ್‌ಇಬಿ ಕಳವಳ ವ್ಯಕ್ತಪಡಿಸಿದೆ. ತೀವ್ರ ಶಾಖದಲ್ಲಿ ಫ್ಯಾನ್‌ಗಳು, ಕೂಲರ್‌ಗಳು ಮತ್ತು ಎಸಿಗಳ ಬಳಕೆಯಲ್ಲಿ ಭಾರಿ ಏರಿಕೆ ಕಂಡುಬಂದಿದೆ. ಇದು ವಿದ್ಯುತ್ ಬಳಕೆಯನ್ನು ಹೆಚ್ಚಿಸಿದೆ.

ಬಳಕೆ 6000 ಮೆಗಾವ್ಯಾಟ್ ದಾಟಿದರೆ ಬಿಕ್ಕಟ್ಟು ಉಂಟಾಗಲಿದೆ ಎಂದು ಕೆಎಸ್‌ಇಬಿ ಮೊದಲೇ ಎಚ್ಚರಿಸಿತ್ತು. ಮಂಗಳವಾರದ ಒಟ್ಟು ವಿದ್ಯುತ್ ಬಳಕೆ 112.52 ಮಿಲಿಯನ್ ಯೂನಿಟ್‌ಗಳು. ಏಪ್ರಿಲ್‌ನಲ್ಲಿ ಅತೀ ಹೆಚ್ಚು ವಿದ್ಯುತ್ ಬಳಕೆ ಮಂಗಳವಾರ ದಾಖಲಾಗಿದೆ. ಇದು ದೇಶೀಯ ಉತ್ಪಾದನೆಯನ್ನು ಹೆಚ್ಚಿಸುತ್ತದೆ ಎಂದು ಕೆಎಸ್‌ಇಬಿ ಅಭಿಪ್ರಾಯಪಟ್ಟಿದೆ.



- 6000 ಮೆಗಾವ್ಯಾಟ್ ದಾಟಿ ವಿದ್ಯುತ್ ಬಳಕೆಯಲ್ಲಿ ದಾಖಲೆ ಬರೆದ ಕೇರಳ
- ಉಷ್ಣತೆ ಹೆಚ್ಚುತ್ತಿರುವುದರಿಂದ ತೀವ್ರ ಶಾಖದಲ್ಲಿ ಫ್ಯಾನ್‌ಗಳು, ಕೂಲರ್, ಎಸಿಗಳ ಬಳಕೆಯು ಹೆಚ್ಚುತ್ತಿರುವುದರಿಂದ ಸಮಸ್ಯೆ

ವಿದ್ಯುತ್ ಬಳಕೆ ನಿಯಂತ್ರಸಬೇಕು

ವಿದ್ಯುತ್ ಬಿಕ್ಕಟ್ಟನ್ನು ತಪ್ಪಿಸಲು ಪೀಕ್ ಸಮಯದಲ್ಲಿ (ಬೆಳಗ್ಗೆ 6 ರಿಂದ ರಾತ್ರಿ 11ರ ವರೆಗೆ) ವಿದ್ಯುತ್ ಬಳಕೆಯನ್ನು ನಿಯಂತ್ರಿಸಲು ಪ್ರಯತ್ನಿಸಬೇಕು ಎಂದು ಕೆಎಸ್‌ಇಬಿ ತಿಳಿಸಿದೆ.

ಸುತ್ತ ಮುತ್ತ

ಮಟ್ಕಾ ಜುಗಾರಿ ಆಟ ನಡೆಸುತ್ತಿದ್ದ ವ್ಯಕ್ತಿಯ ಬಂಧನ: ಸೊತ್ತು ವಶಕ್ಕೆ

ಕುಂದಾಪುರ: ಗಂಗೊಳ್ಳಿ ಗ್ರಾಮದ ಗಂಗೊಳ್ಳಿ ಸಿದ್ದಿಕ್ ಪ್ಯಾಕ್ಟರಿಗೆ ಹೋಗುವ ರಸ್ತೆಯ ಬಳಿಯ ಸಾರ್ವಜನಿಕ ಸ್ಥಳದಲ್ಲಿ ಮಟ್ಕಾ ಜುಗಾರಿ ಆಟ ನಡೆಸುತ್ತಿದ್ದ ಮಧುಕರ ಮೇಸ್ತ ಎಂಬುವರನ್ನು ಬಂಧಿಸಿ ಮಟ್ಕಾ ಜುಗಾರಿ ಆಟಕ್ಕೆ ಬಳಸಿದ ನಗದು ಒಟ್ಟು 860 ರೂ. ನಗದು, ಮಟ್ಕಾ ಚೀಟಿ, ಹಾಗೂ ಇನ್ನಿತರ ವಸ್ತುಗಳ ವಶಪಡಿಸಿಕೊಂಡಿದ್ದಾರೆ.

ತಾಪಮಾನ ಏರಿಕೆ: ದಡ ಸೇರುತ್ತಿವೆ ಬೋಟ್‌ಗಳು

ಮಂಗಳೂರು: ಕರಾವಳಿಯಲ್ಲಿ ದಿನೇ ದಿನೇ ತಾಪಮಾನ ಏರಿಕೆಯಾಗುತ್ತಿದ್ದು, ಇದು ಮೀನುಗಾರಿಕೆ ಮೇಲೆ ಹೊಡೆತ ನೀಡುತ್ತಿದೆ. ಕಡಲಿಗಿಳಿದಿದ್ದ ಬೋಟು ಒಂದೊಂದಾಗಿ ದಡ ಸೇರುತ್ತಿವೆ. ಉರಿಬಿಸಿಲಿನ ನಡುವೆ ಒಂದೆಡೆ ಇಂಧನ ಕೊರತೆ ಮೀನುಗಾರರನ್ನು ಕಾಡುತ್ತಿದ್ದು, ಆಳ ಸಮುದ್ರ ಮೀನುಗಾರಿಕೆಗೆ ತೆರಳುವ ಮಂದಿ ಗ್ಯಾಸ್ ಸಮಸ್ಯೆ ಕಾರಣ ಹಿಂದೇಟು ಹಾಕುತ್ತಿದ್ದಾರೆ. ಈಗಾಗಲೇ ಶೇ.85ರಷ್ಟು ಬೋಟುಗಳು ಧಕ್ಕೆಯಲ್ಲಿ ಲಂಗರು ಹಾಕಿವೆ. ಕೇವಲ ಶೇ.15ರಷ್ಟು ಬೋಟು ಮಾತ್ರ ಕಡಲಿಗಿಳಿಯುತ್ತಿವೆ ಎನ್ನುತ್ತಾರೆ ಟ್ರಾಲ್ ಬೋಟ್ ಅಸೋಸಿಯೇಶನ್ ಅಧ್ಯಕ್ಷ ಚೇತನ್ ಬೆಂಗ್ರೆ.

ಬಾಲಕನಿಗೆ ಹಲ್ಲೆ: ಇಬ್ಬರ ವಿರುದ್ಧ ಕೇಸು ದಾಖಲು

ಕುಂಬಳೆ: ಹದಿನೇಳರ ಹರೆಯದ ಬಾಲಕನಿಗೆ ಹಲ್ಲೆ ನಡೆಸಿದ ದೂರಿನಂತೆ ಇಬ್ಬರ ವಿರುದ್ಧ ಕುಂಬಳೆ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಬಂಬ್ರಾಣ ನಿವಾಸಿಯಾಗಿರುವ ಬಾಲಕ ದೂರು ನೀಡಿದ್ದು, ಅದರಂತೆ ಹೈದರಾಲಿ ಮತ್ತು ಇಷಾಕ್ ಎಂಬವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಕರಾವಳಿಯಲ್ಲಿ ಹೆಚ್ಚಿದ ತಾಪಮಾನ | ಹವಾಮಾನ ಇಲಾಖೆ ಮಾಹಿತಿ

ಗುಡುಗು, ಮಳೆ ನಿರೀಕ್ಷೆಯಲ್ಲಿ ಉಡುಪಿ ಜಿಲ್ಲೆ

ಉಡುಪಿ: ಹವಾಮಾನ ಇಲಾಖೆ ನೀಡಿರುವ ಮಾಹಿತಿಯನ್ವಯ ಉಡುಪಿ ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ ಮುಂದಿನ ಐದು ದಿನಗಳ ಕಾಲ ಬಿಸಿಲು ಮತ್ತು ಮಳೆಯಾಗುವ ಸಾಧ್ಯತೆ ಇದೆ. ಏಪ್ರಿಲ್ 15 ಮತ್ತು 16 ರಂದು ಜಿಲ್ಲೆಯ ಒಂದೆರಡು ಕಡೆಗಳಲ್ಲಿ ಹಗುರವಾದ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದ್ದು, ಇದರ ಬೆನ್ನಲ್ಲೇ ಏಪ್ರಿಲ್ 17 ರಿಂದ 19 ರವರೆಗೆ ಮಳೆಯ ತೀವ್ರತೆಯು ಸ್ವಲ್ಪ ಮಟ್ಟಿಗೆ ಹೆಚ್ಚಾಗುವ ಮುನ್ಸೂಚನೆಯಿದೆ. ಈ ಅವಧಿಯಲ್ಲಿ ಜಿಲ್ಲೆಯ ಹಲವೆಡೆ ಹಗುರದಿಂದ ಸಾಧಾರಣ ಮಳೆಯಾಗಲಿದ್ದು, ಸಂಜೆ ಅಥವಾ ರಾತ್ರಿಯ ಸಮಯದಲ್ಲಿ ಗುಡುಗು ಸಹಿತ ಮಳೆ ಬರುವ ಸಂಭವ ಹೆಚ್ಚಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಮಳೆಯ ಮುನ್ಸೂಚನೆಯ ನಡುವೆ ಜಿಲ್ಲೆಯಲ್ಲಿ ಸುಡುತ್ತಿರುವ ಬಿಸಿಲಿನ ತಾಪ ಕಡಿಮೆಯಾಗುವ ಲಕ್ಷಣಗಳು ಕಾಣುತ್ತಿಲ್ಲ. ಹವಾಮಾನ ಇಲಾಖೆಯ ಅಂಕಿ–ಅಂಶಗಳ ಪ್ರಕಾರದಲ್ಲಿ ಮುಂದಿನ ಐದು ದಿನಗಳ ಕಾಲವು ಗರಿಷ್ಠ ತಾಪಮಾನವು ಏರಿಕೆಯಾಗುವ ಪ್ರವೃತ್ತಿ ಹೊಂದಿದ್ದು, ವಾತಾವರಣವು ಅತ್ಯಂತ ಬಿಸಿಯಾಗಿರಲಿದೆ.



- ಉಡುಪಿ ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ ಮುಂದಿನ ಐದು ದಿನಗಳ ಕಾಲ ಬಿಸಿಲು ಮಳೆಯ ಜುಗಲ್ ಬಂಧಿ ಸಾಧ್ಯತೆ
- ಗುಡುಗು ಸಹಿತ ಮಳೆಯ ಮನ್ಸೂಚನೆ

ಮುನ್ನೆಚ್ಚರಿಕೆ ವಹಿಸಲು ಸೂಚನೆ

ಕರಾವಳಿಯ ಭಾಗದಲ್ಲಿ ಗಾಳಿಯಲ್ಲಿನ ಆರ್ದ್ರತೆ ಹೆಚ್ಚಿರುವುದರಿಂದ ಜನರಿಗೆ ಅತಿಯಾದ ಸೆಖೆ ಮತ್ತು ಉಸಿರುಗಟ್ಟುವಿಕೆಯ ಅನುಭವ ಹೆಚ್ಚಾಗಲಿದೆ. ಈ ತೀವ್ರ ಬಿಸಿಲು ಮತ್ತು ತೇವಾಂಶದ ಕಾರಣದಿಂದ ಹವಾಮಾನ ಇಲಾಖೆಯು ಜಿಲ್ಲೆಯಾದ್ಯಂತ ಹೆಚ್ಚಿನ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಿದೆ.

ತೋಡಿಗೆ ಬಿದ್ದ ಕಾರು: ಪ್ರಯಾಣಿಕರು ಪಾರು



ವಿಟ್ಲ–ಸಾಲೆತ್ತೂರು ರಸ್ತೆಯ ಕೊಡಂಗಾಯಿ ಸೇತುವೆ ಬಳಿ ಚಾಲಕನ ನಿಯಂತ್ರಣ ತಪ್ಪಿದ ಮಾರುತಿ ಕಾರು ರಸ್ತೆ ಬದಿಯ ತೋಡಿಗೆ ಪಲ್ಟಿಯಾಗಿದೆ. ಚಾಲಕ ಮತ್ತು ಮಕ್ಕಳಿಬ್ಬರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದರೂ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಉತ್ತಮ ಆದಾಯ ಗಳಿಸುತ್ತಿದೆ ಚೀಮೇನಿ ತೆರೆದ ಜೈಲಿನಲ್ಲಿ ಆರು ವರ್ಷಗಳ ಹಿಂದೆ ಆರಂಭಿಸಿದ ಪೆಟ್ರೋಲ್ ಬಂಕ್

ಇಲ್ಲೀಗ ಪ್ರತೀ ದಿನ ಸರ್ಕಾರದ ಬೊಕ್ಕಸ ಸೇರುತ್ತಿದೆ ಐದೂವರೆ ಲಕ್ಷ ರೂಪಾಯಿ!

ಸಂಗಮ ವಿಶೇಷ

ಕಾಸರಗೋಡು: ಚೀಮೇನಿ ತೆರೆದ ಜೈಲಿನಲ್ಲಿ ಆರು ವರ್ಷಗಳ ಹಿಂದೆ ಆರಂಭಿಸಿದ ಪೆಟ್ರೋಲ್ ಪಂಪ್‌ನಿಂದ ಉತ್ತಮ ಆದಾಯ ಲಭಿಸುತ್ತಿದೆ. ಇದುವರೆಗೆ ಎಲ್ಲಾ ಖರ್ಚುಗಳು ಕಳೆದು ಒಂದೂವರೆ ಕೋಟಿ ರೂ.ಲಾಭ ಸರಕಾರಕ್ಕೆ ಲಭಿಸಿದೆ. ಇಲ್ಲಿ ಪ್ರತೀದಿನ ಸರಾಸರಿ ಐದೂವರೆ ಲಕ್ಷ ರೂ. ಆದಾಯ ಸಂಗ್ರಹವಾಗುತ್ತಿದೆ.

ನಾಲ್ವರು ಕೈದಿಗಳು ದುಡಿಯುತ್ತಿದ್ದಾರೆ

ಗತ ವರ್ಷಗಳಲ್ಲಿ ಏಳೂವರೆ ಲಕ್ಷ ರೂ. ವರೆಗೆ ಲಭಿಸಿತ್ತು. ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಪೆಟ್ರೋಲ್ ಪಂಪ್ ಕಾರ್ಯಾಚರಿಸುತ್ತಿದೆ. ನಾಲ್ವರು ಕೈದಿಗಳು ಪಾಳಿ ವ್ಯವಸ್ಥೆಯಲ್ಲಿ ಪೆಟ್ರೋಲ್ ಪಂಪ್‌ನಲ್ಲಿ ದುಡಿಯುತ್ತಿದ್ದಾರೆ.

13 ಕೋ.ರೂ. ಆದಾಯ

2024–25ನೇ ವರ್ಷದಲ್ಲಿ ಪೆಟ್ರೋಲ್ ಪಂಪ್ ಮೂಲಕ ಚೀಮೇನಿ ತೆರೆದ ಜೈಲಿಗೆ 13 ಕೋಟಿ ರೂಪಾಯಿ ಅಷ್ಟು ಆದಾಯ ಲಭಿಸಿತ್ತು.

ಆದಾಯಕ್ಕೆ ಕುತ್ತು ಬಂದಿಲ್ಲ

ಚೆರುವತ್ತೂರಿನಿಂದ ತೆರೆದ ಜೈಲಿನ ಪೆಟ್ರೋಲ್ ಪಂಪ್ ವರೆಗಿನ ಚಿತ್ತಾರಿಕ್ಕಲ್–ಚೆರುವತ್ತೂರುಪುಯ ರಸ್ತೆ ಯಲ್ಲಿ ಈ ಹಿಂದೆ ಒಂದು ಪೆಟ್ರೋಲ್ ಪಂಪ್ ಮಾತ್ರವೇ ಇತ್ತು. ಆದರೆ ಎರಡು ವರ್ಷಗಳಲ್ಲಿ ಈ ರಸ್ತೆ ಯಲ್ಲಿ ಎರಡು ಪೆಟ್ರೋಲ್ ಪಂಪ್‌ಗಳು ಕಾರ್ಯಾಚರಿಸುತ್ತಿವೆ. ಆದರೂ ಚೀಮೇನಿ ತೆರೆದ ಜೈಲಿನ ಪೆಟ್ರೋಲ್ ಪಂಪ್‌ನ ಆದಾಯಕ್ಕೆ ಇದರಿಂದ ಯಾವುದೇ ಕುತ್ತು ಬಂದಿಲ್ಲ.

ಕೆಂಪುಕಲ್ಲಿನಿಂದ ಉತ್ತಮ ಆದಾಯ

ಚೀಮೇನಿ ತೆರೆದ ಜೈಲಿನಲ್ಲಿ ಕೆಂಪುಕಲ್ಲು ಇನ್ನೊಂದು ಪ್ರಧಾನ ಆದಾಯವಾಗಿದೆ. 305 ಎಕರೆಯಷ್ಟು ವಿಸ್ತಾರವಿರುವ ತೆರೆದ ಜೈಲಿನ ಬಹುಭಾಗ ಪಾರೆ ಪ್ರದೇಶವಾಗಿದೆ. ವರ್ಷಗಳಿಂದ ಜೈಲಿನಲ್ಲಿ ಕಲ್ಲು ಗಣಿಗಾರಿಕೆ ನಡೆಸಲಾಗುತ್ತದೆ. ಜೈಲಿನ ನೂತನ ಕಟ್ಟಡ ಹಾಗೂ ಬೃಹತ್ ಗೋಡೆಯನ್ನು ಇಲ್ಲಿನ ಕೆಂಪು ಕಲ್ಲಿನಿಂದಲೇ ನಿರ್ಮಿಸಲಾಗಿದೆ. ಆದರೂ ಉಪಯೋಗಿಸಿ ಉಳಿದ ಕಲ್ಲುಗಳನ್ನು ಹೊರಗಡೆ ನೀಡಲಾಗುತ್ತದೆ. 2024–25ರಲ್ಲಿ ಆರೂವರೆ ಲಕ್ಷದಷ್ಟು ಕೆಂಪುಕಲ್ಲು ಮಾರಾಟದ ಮೂಲಕ ಲಭಿಸಿದೆ. ಅಗತ್ಯ ಇರುವವರಿಗೆ ಮುಂಚಿತವಾಗಿ ಹಣ ಪಾವತಿಸಿ ವಾಹನದೊಂದಿಗೆ ಬಂದು ಕೆಂಪು ಕಲ್ಲುಗಳನ್ನು ಸಾಗಿಸಬಹುದಾಗಿದೆ.

ಕಲ್ಲು ಗಣಿಗಾರಿಕೆ

ಪ್ರಥಮ ದರ್ಜೆಯ ಕೆಂಪುಕಲ್ಲಿಗೆ 16.75 ರೂ. ಬೆಲೆಯಾಗಿದೆ. ಜೈಲಿನದ್ದು ಉತ್ತಮ ಕಲ್ಲುಗಳಾಗಿವೆ. ದ್ವಿತೀಯ ದರ್ಜೆಯ ಕಲ್ಲುಗಳನ್ನು ಉಪಯೋಗಿಸಿ ಜೈಲಿನ ಗೋಡೆ ನಿರ್ಮಿಸಲಾಗುತ್ತಿದೆ. 15 ಕೈದಿಗಳು ಎರಡು ಯಂತ್ರಗಳ ಸಹಾಯದೊಂದಿಗೆ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದಾರೆ.



- ಚೀಮೇನಿ ತೆರೆದ ಜೈಲಿನಲ್ಲಿ ಆರು ವರ್ಷಗಳ ಹಿಂದೆ ಆರಂಭಿಸಿದ ಪೆಟ್ರೋಲ್ ಪಂಪ್‌ನಿಂದ ಲಭಿಸಿದೆ ಉತ್ತಮ ಆದಾಯ
- ಪ್ರತೀದಿನ ಸರಾಸರಿ ಐದೂವರೆ ಲಕ್ಷ ರೂ. ಆದಾಯ ಸಂಗ್ರಹ

ಸಮಯ ಬದಲಾವಣೆ

ಬೇಸಿಗೆ ದಿನಗಳಾಗಿರುವುದರಿಂದ ಪ್ರಸ್ತುತ ಕೈದಿಗಳ ನೌಕರಿ ಸಮಯವನ್ನು ಬೆಳಗ್ಗೆ 5.30 ರಿಂದ 11.30ರ ವರೆಗೆ ಬದಲಾಯಿಸಲಾಗಿದೆ. ಕೆಂಪು ಕಲ್ಲು ತೆಗೆದ ಹೊಂಡದಲ್ಲಿ ಮಣ್ಣು ತುಂಬಿಸಿ ಕೃಷಿ ನಡೆಸಲು ಉಪಯೋಗಿಸಲಾಗುತ್ತದೆ.

ಪುತ್ತೂರು ದೇವಸ್ಥಾನದ ಜಾತ್ರೆ: ನಗರದ ಸಂಚಾರ ಮಾರ್ಗದಲ್ಲಿ ಬದಲಾವಣೆ 2
ಹಿಂದು ಧರ್ಮದ ಉಳಿವಿಗಾಗಿ ನಾವೆಲ್ಲರೂ ಒಟ್ಟಾಗಬೇಕು 3
ಕಡತಕ್ಕೆ ಮಾತ್ರ ಸೀಮಿತವಾಗಿದ್ದ ರಸ್ತೆಗೆ ಡಾಮರೀಕರಣ ಭಾಗ್ಯ! 5
ಶೈಕ್ಷಣಿಕ ಕ್ರಾಂತಿಗೈದ ಡಾ.ಸುಧಾಕರ್ ಶೆಟ್ಟಿ ಶಿಕ್ಷಣ ಬ್ರಹ್ಮ: ಡಾ.ವೀರಪ್ಪ ಮೊಯ್ಲಿ 6

ಸುತ್ತ ಮುತ್ತ

ನಂದನಹಿತ್ಲು ದೈವಸ್ಥಾನ: ಮಾರಿ ಪೂಜೆ

ಬಂಟ್ವಾಳ: ಇಲ್ಲಿಯ ನಂದನಹಿತ್ಲು ಶ್ರೀ ವೈದ್ಯನಾಥ, ಅರಸು, ಜುಮಾದಿ ಬಂಟ ದೈವಸ್ಥಾನದ ವತಿಯಿಂದ



ಆಚರಿಸಲಾಗುವ ವರ್ಷಾವಧಿ 'ಮಾರಿ ಪೂಜೆ'ಯು ಮಂಗಳವಾರ ರಾತ್ರಿ ಸಂಪನ್ನಗೊಂಡಿತು. ಬಂಟ್ವಾಳ ಕಾಲೇಜು ರಸ್ತೆಯಲ್ಲಿ ಸಿದ್ಧಪಡಿಸಲಾದ ಮಾರಿ ಗೊಂಬೆಯನ್ನು ಹೊತ್ತುಕೊಂಡು ಸೂಟೆ, ವಾದ್ಯಗೋಷ್ಠಿ ಮೂಲಕ ಬಡ್ಡಕಟ್ಟೆಯ ನಿಗದಿತ ಸ್ಥಳಕ್ಕೆ ತಂದು ಪ್ರತಿಷ್ಠಾಪಿಸಲಾಯಿತು. ಬಳಿಕ ಇಲ್ಲಿ ವಿವಿಧ ಪೂಜೆ ಸಹಿತ ವಿಧಿವಿಧಾನಗಳು ನೆರವೇರಿತು. ಬೆಳಗ್ಗಿನ ಜಾವ ಇಲ್ಲಿಂದ ಮಾರಿಗೊಂಬೆಯನ್ನು ಮಣಿಹಳ್ಳದತ್ತ ಕೊಂಡೊಯ್ದು ಪ್ರತಿಷ್ಠಾಪಿಸಲಾಯಿತು. ನೂರಾರು ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು. ನಂದನ ಹಿತ್ಲು ದೈವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಗಣೇಶ್ ಸುವರ್ಣ ತುಂಬೆ, ಕ್ಷೇತ್ರದ ನಾಲ್ಕು ಮನೆತನದವರಾದ ವಿಶ್ವನಾಥ ಪೊಣ್ಣಂಗಿಲಗುತ್ತು, ಲೋಕೇಶ್ ಬಂಗೇರ ಗಾಣದಪಡ್ಪು, ಲೋಕನಾಥ ಬಡಕೊಟ್ಟು, ಸಂಜೀವ ಪೆಲತ್ತಿಮಾರು, ಶಶಿಕಿರಣ್ ತುಂಬೆ, ಮಹಾಬಲ ಬಂಗೇರ ಹಾಗೂ ಸ್ಥಳೀಯ ಪ್ರಮುಖರು ಉಪಸ್ಥಿತರಿದ್ದರು.

ಕಡೆಗುಂಡ್ಯ ದೇವಸ್ಥಾನದಲ್ಲಿ ದೃಢ ಕಲಶಾಭಿಷೇಕ

ಕೈಕಂಬ: ಮಂಗಳೂರು ತಾಲೂಕಿನ ಕೊಳವೂರು ಗ್ರಾಮದ ಕಡೆಗುಂಡ್ಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ದೃಢಕಲಶಾಭಿಷೇಕ ಬುಧವಾರ ನಡೆಯಿತು. ಬುಧವಾರ ಬೆಳಿಗ್ಗೆ ಗಣಹೋಮ



ಬಳಿಕ ಕಲಶಾಭಿಷೇಕ ಪೂರ್ವ ಧಾರ್ಮಿಕ ವಿಧಿವಿಧಾನಗಳು ನಡೆದು ಮಧ್ಯಾಹ್ನ 12ಕ್ಕೆ ಶ್ರೀ ಮಹಾಲಿಂಗೇಶ್ವರ ದೇವರಿಗೆ ಶ್ರೀ ಮಹಾಗಣಪತಿ ದೇವರಿಗೆ, ಶ್ರೀ ಮಹಾವಿಷ್ಣು ದೇವರಿಗೆ ದೃಢ ಕಲಾಶಾಭಿಷೇಕ ನಡೆಯಿತು. ಕೋಟಿ–ಚೆನ್ನಯ ಸಾನಿಧ್ಯದಲ್ಲಿ ಕಲಶಾಭಿಷೇಕ ಮತ್ತು ವಿಶೇಷ ಪ್ರಾರ್ಥನೆ ನಡೆಯಿತು. ಬಳಿಕ ಬ್ರಹ್ಮಕಲಶೋತ್ಸವದ ಯಶಸ್ವಿಗೆ ದುಡಿದ ವಿವಿಧ ಉಪ ಸಮಿತಿಗಳು ಮತ್ತು ಕರಸೇವಕಗೆ ಕೃತಜ್ಞತಾರ್ಪಣಾ ಸಭೆ ನಡೆಯಿತು. ದೇವಸ್ಥಾನದ ಆಡಳಿತ ಮೊಕ್ತೇಸರ ಪಿ. ಎ. ಶೆಟ್ಟಿ ಕಡೆಗುಂಡ್ಯ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ, ಮಾಜಿ ಶಾಸಕ ಎನ್.ಎಂ. ಅಡ್ಯಂತಾಯ ನಿಟ್ಟೆಗುತ್ತು, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಮಂಜಯ್ಯ ಶೆಟ್ಟಿ ಕಡೆಗುಂಡ್ಯ, ಶ್ರೀ ಮಹಾಲಿಂಗೇಶ್ವರ ಸೇವಾ ಸಮಿತಿಯ ಅಧ್ಯಕ್ಷ ಸತೀಶ್ ಪೂಜಾರಿ ಬಳ್ಳಾಜೆ, ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ವಿಜಯಕುಮಾರ್ ಶೆಟ್ಟಿ, ಮುತ್ತೂರು ಪಂಚಾಯತ್ ನಿಕಟಪೂರ್ವ ಅಧ್ಯಕ್ಷ ಪ್ರವೀಣ್ ಆಳ್ವ ಗುಂಡ್ಯ ಕೃತಜ್ಞತೆ ಸಲ್ಲಿಸಿದರು. ಉಪ ಆಡಳಿತ ಮೊಕ್ತೇಸರ ಶಾಂತಾ ಎಂ. ಅಡ್ಯಂತಾಯ, ಟ್ರಸ್ಟಿಗಳು, ಕೊರಗಣ್ಣ ಶೆಟ್ಟಿ ಕುಟುಂಬಸ್ಥರು, ನಾರ್ಯಗುತ್ತು ಶ್ರೀನಿವಾಸ್ ಶೆಟ್ಟಿ, ಸದಾನಂದ ಶೆಟ್ಟಿ ಕುಲವೂರುಗುತ್ತು, ಬಾಬು ಆಳ್ವ ಕಂಗಿನಡಿ, ಖ್ಯಾತ ಕಲಾ ನಿರ್ದೇಶಕ ಶಶಿಧರ್ ಅಡಪ ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಮಹಾಬಲ ಸಾಲ್ಯಾನ್ ಮತ್ತಿತರರು ಇದ್ದರು. ಯಶವಂತ ಅಗರಿ ನಿರೂಪಿಸಿ, ವಂದಿಸಿದರು. ಸಂಜೆ ಕಟೀಲು ಮೇಳದವರಿಂದ 'ಅನಂಗ ರಂಗ' ಎಂಬ ಯಕ್ಷಗಾನ ಬಯಲಾಟ ಜರಗಿತು.

ವಿಶೇಷ ಉತ್ಸವ

ಪುತ್ತೂರು: ಹತ್ತು ದಿನಗಳ ಪುತ್ತೂರು ಶ್ರೀ ಮಹಾಲಿಂಗೇಶ್ವರ ಜಾತ್ರೆ ವೈಭವದಿಂದ ನಡೆಯುತ್ತಿದ್ದು, ಬುಧವಾರ ತುಳುನಾಡಿನ ಹೊಸ ವರ್ಷವಾದ ಬಿಸುಪರ್ಬದ ಪ್ರಯುಕ್ತ ಬೆಳಗ್ಗೆ ವಿಶೇಷ ಉತ್ಸವ ನಡೆಯಿತು. ಭಾರೀ ಸಂಖ್ಯೆಯ ಭಕ್ತರು ಭಾಗಿಯಾಗಿದ್ದರು. ಬೆಳಗ್ಗೆ ದೇಗುಲದ ಗರ್ಭಗುಡಿಯ ಎದುರು ಬಿಸು ಪರ್ಬದ ಪ್ರಯುಕ್ತ ಕಣಿ ಇಟ್ಟು ಪ್ರಾರ್ಥಿಸಲಾಯಿತು. ಪ್ರಧಾನ ಅರ್ಚಕ ವಿ.ಎಸ್. ಭಟ್ ಮತ್ತು ವಸಂತ ಕೆದಿಲಾಯ ಅವರ ನೇತೃತ್ವದಲ್ಲಿ ಫಲ ವಸ್ತುಗಳನ್ನು ಬಿಸು ಕಣಿ ರೂಪದಲ್ಲಿ ದೇವರಿಗೆ ಸಮರ್ಪಿಸಲಾಯಿತು. ಬಳಿಕ ಶ್ರೀದೇವರ ಉತ್ಸವ ಬಲಿ ಆರಂಭಗೊಂಡಿತು. ಚೆಂಡೆ ಸುತ್ತು, ಉಡಿಕೆ ಸುತ್ತು ಸೇರಿದಂತೆ ಮಂಗಳವಾದ್ಯಗಳ ಮೂಲಕ ಬಲಿ ನಡೆಯಿತು.

ತಂತ್ರಿಗಳಾದ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ ನೇತೃತ್ವದಲ್ಲಿ ಶ್ರೀದೇವರಿಗೆ ಒಳಾಂಗಣದ ವಸಂತ ಕಟ್ಟೆಯಲ್ಲಿ ವಿಶೇಷ ಪೂಜೆ ನಡೆಯಿತು. ಸಂಜೆ ದೇವರು ಹೊರಟು ಒಳಾಂಗಣ ಮತ್ತು ಹೊರಾಂಗಣದಲ್ಲಿ ಉತ್ಸವ ಬಲಿ ನಡೆದು ಖಂಡನಾಯಕನ ಕಟ್ಟೆಯಲ್ಲಿ ಸೇವಾಕರ್ತರ ಕಟ್ಟೆ ಪೂಜೆ ನಡೆಯಿತು. ಮುಸ್ಸಂಜೆ ಬಳಿಕ ದೇವರ ಪೇಟೆ ಸವಾರಿ 6ನೇ ದಿನದಲ್ಲಿ ನಡೆಯಿತು. ಬನ್ನೂರು, ಅಶೋಕನಗರ, ರೈಲ್ವೆ ಮಾರ್ಗದಲ್ಲಿ ಆರಾಟ ನಡೆಯಿತು.

ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜಾತ್ರಾ ಸಂಭ್ರಮ | ಮದ್ಯ ಮಾರಾಟ ನಿಷೇಧಿಸಿ ಡಿಸಿ ಆದೇಶ

ಪುತ್ತೂರು ನಗರದ ಸಂಚಾರ ಮಾರ್ಗದಲ್ಲಿ ಬದಲಾವಣೆ

ಪುತ್ತೂರು: ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವರ್ಷಾವಧಿ ಜಾತ್ರೆಯ ಪ್ರಯುಕ್ತ ಏ.16ರಂದು ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಭೇಟಿ, ಕೆರೆ ಉತ್ಸವ, ತೆಪ್ಪೋತ್ಸವ ಹಾಗೂ ಏ.17ರಂದು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮರಥೋತ್ಸವ ಕಾರ್ಯಕ್ರಮ ಮತ್ತು ಏ.18ರಂದು ದೇವರು ಅವಭೃತ ಸ್ನಾನಕ್ಕೆ ವೀರಮಂಗಲಕ್ಕೆ ಹೋಗಲಿದ್ದು, ಈ ವೇಳೆ ಸಾವಿರಾರು ಜನ ಭಕ್ತಾದಿಗಳು ಸೇರುವ ನಿರೀಕ್ಷೆಯಿರುತ್ತದೆ. ಪುತ್ತೂರು ಪರಿಸರವು ಸೂಕ್ಷ್ಮ ಪ್ರದೇಶವಾಗಿರುವುದರಿಂದ ಈ ಸಮಯದಲ್ಲಿ ಕಿಡಿಗೇಡಿಗಳು ಅಮಲು ಪದಾರ್ಥ ಸೇವಿಸಿ ಅಹಿತಕರ ಘಟನೆಗಳಿಗೆ ಕಾರಣರಾಗಿ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಉಂಟಾಗುವ ಸಾಧ್ಯತೆ ಇರುವುದರಿಂದ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಪುತ್ತೂರು ನಗರ ಠಾಣಾ ವ್ಯಾಪ್ತಿಯಲ್ಲಿ ಬರುವ ಬಾರ್ ಮತ್ತು ವೈನ್ ಶಾಪ್‌ಗಳನ್ನು ಏ.17ರಂದು ಬೆಳಗ್ಗೆ 6ರಿಂದ ಏ.18ರ ಬೆಳಗ್ಗೆ 6 ಗಂಟೆಯವರೆಗೆ ಮುಚ್ಚಲು ಹಾಗೂ ಈ ಸಮಯದಲ್ಲಿ ಎಲ್ಲಾ ರೀತಿಯ ಅಮಲು



ಪದಾರ್ಥಗಳ ಮಾರಾಟವನ್ನು ಮಾಡದಂತೆ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಆದೇಶಿಸಿದ್ದಾರೆ.

ಏ.17ರಂದು ಬ್ರಹ್ಮರಥೋತ್ಸವ

ಜಾತ್ರೆಯ ಪ್ರಯುಕ್ತ ಏ.16ಕ್ಕೆ ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಭಂಡಾರದ ಆಗಮನದ ದಿನ ಮತ್ತು ಏ.17ರಂದು ಬ್ರಹ್ಮರಥೋತ್ಸವ ನಡೆಯಲಿರುವುದರಿಂದ ನಿಗದಿತ ದಿನದಂದು ವಾಹನಗಳ ಸುಗಮ ಸಂಚಾರದ ದೃಷ್ಟಿಯಿಂದ ಪುತ್ತೂರು ನಗರ ವ್ಯಾಪ್ತಿಯಲಿ ಸಂಜೆ 4ರ ನಂತರ ಸಂಚಾರ ಮಾರ್ಗ ಬದಲಾವಣೆ ಮಾಡಿ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಆದೇಶಿಸಿದ್ದಾರೆ.

ಏ.16ಕ್ಕೆ ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಮಾಮೂಲು ಪ್ರಕಾರ ಬರುವ ಕಿರುವಾಳು ಬಪ್ಪಳಿಗೆಯಲ್ಲಿ ಹೆದ್ದಾರಿ ದಾಟಿ ಹೋಗುವ ಸಮಯ 1 ಗಂಟೆಗಳ ಸುಗಮ ಸಂಚಾರಕ್ಕಾಗಿ, ಸಂಪ್ಯ ಕಡೆಯಿಂದ ಮಂಗಳೂರು–ಕಬಕ ಕಡೆಗೆ ಹೋಗುವ ವಾಹನ ಅಶ್ವಿನಿ ಜಂಕ್ಷನ್ ದರ್ಬೆ ಜಂಕ್ಷನ್–ಬೆದ್ರಾಳ–ಸಾಲ್ಮರ–ಪಡೀಲ್ ಮೂಲಕ ಸಂಚರಿಸಬೇಕು. ಮಂಗಳೂರು–ವಿಟ್ಲ–ಕಬಕ ಕಡೆಯಿಂದ ಬರುವ ವಾಹನಗಳು ಲಿನೆಟ್ ಜಂಕ್ಷನ್–ಬೊಳುವಾರು ಜಂಕ್ಷನ್–ಪಡೀಲ್–ಕೊಟೇಚಾ ಹಾಲ್ ಕ್ರಾಸ್–ಸಾಲ್ಮರ–ಎಪಿಎಂಸಿ–ದರ್ಬೆ–ಅಶ್ವಿನಿ ಜಂಕ್ಷನ್ ಮೂಲಕ ಸಂಚರಿಸಬೇಕು.

ಬಸ್ ಮಾರ್ಗ ಬದಲಾವಣೆ

ಬಸ್ ನಿಲ್ದಾಣದಿಂದ ಹೊರಡುವ ಎಲ್ಲಾ ಸಾರಿಗೆ ಬಸ್‌ಗಳು ಎಂ.ಟಿ ರಸ್ತೆಯ ಮೂಲಕ ತೆರಳಿ, ಮುಂದೆ ಎಡಕ್ಕೆ ತಿರುಗಿ, ಪರ್ಲಡ್ಕ ಬೈಪಾಸ್ ಮೂಲಕ ತೆರಳಬೇಕು. ಕಬಕ–ಮಂಗಳೂರು ಕಡೆಯಿಂದ ಬರುವ ಎಲ್ಲಾ ಸಾರಿಗೆ ಬಸ್‌ಗಳು ಲಿನೆಟ್–ಬೊಳುವಾರು–ಪಡೀಲ್–ಕೊಟೆಚಾ ಹಾಲ್ ಕ್ರಾಸ್–ಸಾಲ್ಮರ–ಎಪಿಎಂಸಿ ಮೂಲಕ ಬಸ್ ನಿಲ್ದಾಣಕ್ಕೆ ಸಂಚರಿಸಬೇಕು. ಉಪ್ಪಿನಂಗಡಿ ಕಡೆಯಿಂದ ಬರುವ ಎಲ್ಲಾ ಸಾರಿಗೆ ಬಸ್‌ಗಳು–ಪಡೀಲ್–ಕೊಟೆಚಾ ಹಾಲ್ ಕ್ರಾಸ್–ಸಾಲ್ಮರ–ಎಪಿಎಂಸಿ ಮೂಲಕ ಬಸ್ ನಿಲ್ದಾಣಕ್ಕೆ ಸಂಚರಿಸಬೇಕು. ಸುಳ್ಯ–ಸಂಪ್ಯ–ಮಡಿಕೇರಿ ಕಡೆಯಿಂದ ಬರುವ ಎಲ್ಲಾ ಸಾರಿಗೆ ಬಸ್‌ಗಳು ಅಶ್ವಿನಿ ಜಂಕ್ಷನ್–ದರ್ಬೆ–ಅರುಣಾ ಥಿಯೇಟರ್ ಮೂಲಕ ಬಸ್ ನಿಲ್ದಾಣಕ್ಕೆ ಸಂಚರಿಸಬೇಕು.

ಆಟೋರಿಕ್ಷಾ ಸಂಚರಿಸುವ ಮಾರ್ಗದ ವಿವರ

ನೆಹರೂನಗರ–ಬೊಳುವಾರು ಕಡೆಯಿಂದ ಬರುವ ಆಟೋರಿಕ್ಷಾಗಳು ಮಯೂರ ಇನ್ ಲ್ಯಾಂಡ್ ಬಳಿ ಪ್ರಯಾಣಿಕರನ್ನು ಇಳಿಸಿ, ಉಲಾರ್ ಒಡಿ ಕ್ರಾಸ್ ಮೂಲಕ ವಾಪಸ್ಸು ಸಂಚರಿಸಬೇಕು. ದರ್ಬೆ ಕಡೆಯಿಂದ ಬರುವ ಆಟೋರಿಕ್ಷಾಗಳು ಎಪಿಎಂಸಿ ರಸ್ತೆಯ ಮುಖಾಂತರ ನೆಲ್ಲಿಕಟ್ಟೆ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಮುಂಭಾಗದಿಂದ ಗಾಂಧಿಕಟ್ಟೆ ಕಡೆಗೆ ಬಂದು ಪ್ರಯಾಣಿಕರನ್ನು ಇಳಿಸಿ, ವಾಪಸ್ಸು ಮುಖ್ಯ ರಸ್ತೆಯಾಗಿ ದರ್ಬೆ ಕಡೆಗೆ ಸಂಚರಿಸಬೇಕು. ಪರ್ಲಡ್ಕ–ಬಪ್ಪಳಿಗೆ ಕಡೆಯಿಂದ ಬರುವ ಆಟೋರಿಕ್ಷಾಗಳು ಕಿಲ್ಲೆ ಮೈದಾನದ ಬಳಿ ಪ್ರಯಾಣಿಕರ ಇಳಿಸಿ, ವಾಪಾಸು ಸಂಚರಿಸಬೇಕು.

ವಾಹನಗಳ ಪಾರ್ಕಿಂಗ್ ವಿವರ

ಉಪ್ಪಿನಂಗಡಿ, ಕೋಡಿಂಬಾಡಿ, ಬನ್ನೂರು ಮಾರ್ಗದಿಂದ ಬರುವ ವಾಹನಗಳನ್ನು ಎಪಿಎಂಸಿ ಆವರಣ, ಕೊಂಬೆಟ್ಟು ಬೋರ್ಡ್ ಹೈಸ್ಕೂಲ್ ಮೈದಾನ, ಬಂಟರ ಭವನ, ನೆಲ್ಲಿಕಟ್ಟೆ ಪ್ರಾಥಮಿಕ ಶಾಲಾ ಮೈದಾನದಲ್ಲಿ ಪಾರ್ಕಿಂಗ್ ಮಾಡಬೇಕು. ಸಂಪ್ಯ, ಸುಳ್ಯ, ಬೆಟ್ಟಂಪಾಡಿ, ಪಾಣಾಜೆ, ಪರ್ಲಡ್ಕ, ಪುರುಷರಕಟ್ಟೆ ಮಾರ್ಗದಿಂದ ಬರುವ ವಾಹನಗಳನ್ನು ತೆಂಕಿಲ ಗೌಡ ಸಮುದಾಯ ಭವನ, ತೆಂಕಿಲ ವಿವೇಕಾನಂದ ಶಾಲಾ ಮೈದಾನ, ಕಿಲ್ಲೆ ಮೈದಾನ, ತೆಂಕಿಲ ಗೌಡ ಸಮುದಾಯ ಭವನದ ಎದುರುಗಡೆ ಇರುವ ಖಾಲಿ ಜಾಗದಲ್ಲಿ ಪಾರ್ಕಿಂಗ್ ಮಾಡಬೇಕು. ವಿಟ್ಲ, ಕಬಕ, ನೆಹರೂ ನಗರ ಮಾರ್ಗದಿಂದ ಬರುವ ವಾಹನಗಳನ್ನು ಜೈನ ಭವನದ ಪಾರ್ಕಿಂಗ್ ಜಾಗ, ಅಸ್ಮಿ ಲಾಡ್ಜ್ ಬಳಿ ಇರುವ ಖಾಲಿ ಜಾಗ, ತೆಂಕಿಲ ದರ್ಶನ್ ಹಾಲ್ ಪಕ್ಕದ ಖಾಲಿ ಜಾಗದಲ್ಲಿ ಪಾರ್ಕಿಂಗ್ ಮಾಡಬೇಕು ಎಂದು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಕಡಬದ ಕೋರಿಯಾರ್ ಪ್ರದೇಶಕ್ಕೆ ಶಾಸಕಿ ಭಾಗೀರಥಿ ಮುರುಳ್ಯ ಭೇಟಿ

ಕೃಷಿ ಹಾನಿಗೊಳಗಾದ ರೈತರಿಗೆ ಪರಿಹಾರ ನೀಡಿ

ಕಡಬ: ಕಡಬ ತಾಲೂಕಿನ 102ನೇ ನೆಕ್ಕಿಲಾಡಿ ಗ್ರಾಮದ ಕೋರಿಯಾರ್ ಕುಮಾರಧಾರ ನದಿ ತೀರದ ಪ್ರದೇಶದಲ್ಲಿ ಆನೆ ದಾಳಿಯಿಂದಾಗಿ ಕೃಷಿ ಹಾನಿಗೀಡಾದ ಪ್ರದೇಶಕ್ಕೆ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರು ಅರಣ್ಯ ಇಲಾಖಾಧಿಕಾರಿಗಳು ಹಾಗೂ ಕೃಷಿಕರ ಜೊತೆ ಮಾತುಕತೆ ನಡೆಸಿದರು.

ಘಟನೆ ಕುರಿತು ಮಾಹಿತಿ ಪಡೆದುಕೊಂಡ ಶಾಸಕರು ಅರಣ್ಯ ಇಲಾಖೆಯ ಉನ್ನತಾಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿ ಬೆಳೆ ಹಾನಿಗೊಳಗಾದ ರೈತರಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಬಳಿಕ ಸ್ಥಳೀಯರ ಜೊತೆ ಮಾತನಾಡಿದ ಅವರು ಹಲವಾರು ಅಡೆತಡೆಗಳಿಂದ ಆದೇಶವಾಗದೇ ಬಾಕಿಯಾಗಿದ್ದ ಆನೆ ಕಾರ್ಯಪಡೆ ರಚನೆಯನ್ನು ಶೀಘ್ರ ಕಾರ್ಯಗತ ಮಾಡಬೇಕೆಂದು ಮುಖ್ಯಮಂತ್ರಿಗಳು ಮತ್ತು ಅರಣ್ಯ ಸಚಿವರಿಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಈಗಾಗಲೇ ಆನೆ ಕಾರ್ಯಪಡೆ ರಚನೆಯಾಗಿ ಕಾರ್ಯರೂಪಕ್ಕೆ ಬಂದಿದೆ. ಆದರಿಂದಾಗಿ ಆನೆ ದಾಳಿಯ ಸಂಧರ್ಭಗಳಲ್ಲಿ ತುರ್ತು ಕಾರ್ಯಾಚರಣೆ ನಡೆಸಲು ಸಹಾಯವಾಗಲಿದೆ. ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧೆಡೆ ಆನೆ ಸೇರಿದಂತೆ



ಕಾಡುಪ್ರಾಣಿಗಳಿಂದ ಕೃಷಿಕರು ಹಾಗೂ ಜನ ಸಾಮಾನ್ಯರಿಗೆ ತೊಂದರೆಯಾಗುತ್ತಿರುವ ಬಗ್ಗೆ ಅಧಿವೇಶನದಲ್ಲಿಯೂ ಸರಕಾರ ಗಮನ ಸೆಳೆಯಲಾಗಿದೆ ಎಂದರು.

ಕಡಬ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರಮೇಶ್ ಕಲ್ಪುರೆ, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಜನಾರ್ದನ ಗೌಡ ಪುತ್ತಿಲ, ಹರೀಶ ಕೋಡಂದೂರು, ಎಪಿಎಂಸಿ ಮಾಜಿ ಸದಸ್ಯ ಬಿಜೆಪಿ ಸುಬ್ರಹ್ಮಣ್ಯ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಮಧುಸೂಧನ ಕೊಂಬಾರು, ಮೇದಪ್ಪ ಗೌಡ ಡೆಪ್ಪುಣಿ, ಕಡಬ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯೆ ವಸಂತಿ ಪೊಯಿಲ, ಹರೀಶ ಕೋರಿಯಾರ್, ಪ್ರತೀಶ್ ಮಾಯಿಪಾಜೆ, ಅನುದೀಪ್ ಪುತ್ತಿಲ, ಚಂದ್ರಶೇಖರ ಗೌಡ ಅಚ್ಚಿಮನೆ, ನಾರಾಯಯ ಗೌಡ ಪೊಯಿಲ, ಅರಣ್ಯ ಇಲಾಖಾಧಿಕಾರಿಗಳು ಹಾಗೂ ಆರಕ್ಷಕ ಸಿಬಂದಿಗಳು ಶಾಸಕರ ಭೇಟಿಯ ಸಂದರ್ಭದಲ್ಲಿ ಹಾಜರಿದ್ದರು.

ಅಪಾರ ಕೃಷಿ ಹಾನಿ

ಕೆಲ ದಿನಗಳ ಹಿಂದೆ ಕೋರಿಯಾರ್ ಸಮೀಪ 8 ಕಾಡಾನೆಗಳ ಹಿಂಡು ಕೃಷಿ ತೋಟಗಳಿಗೆ ಹಾನಿಗೈದು ಸ್ಥಳೀಯ ರಲ್ಲಿ ಆತಂಕಕ್ಕೆ ಕಾರಣವಾಗಿತ್ತು. ಕೋರಿಯಾರ್ ಹಾಗೂ ಮಾಯಿಪಾಜೆ ಭಾಗಗಳಲ್ಲಿ ಆನೆಗಳು ಸಂಚರಿಸಿ, ಕೃಷಿ ತೋಟಗಳಿಗೆ ಹಾನಿ ಮಾಡಿತ್ತು. ಬಳಿಕ ಅರಣ್ಯ ಇಲಾಖೆ ಹಾಗೂ ಹೊಸದಾಗಿ ರಚನೆಗೊಂಡ ಆನೆ ಕಾರ್ಯಪಡೆಯ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಆನೆ ಹಿಂಡನ್ನು ಕಾಡಿನೊಳಗೆ ಅಟ್ಟಿದ್ದರು.

ಉಳ್ಳಾಲ ಶಾರದಾನಿಕೇತನ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜನೆ

ಏ.18: 'ಅಬ್ಬಕ್ಕ-500' ಸರಣಿಯ ಸಮಾರೋಪ

ಉಳ್ಳಾಲ: ರಾಣಿ ಅಬ್ಬಕ್ಕಳ 500ನೇ ಜನ್ಮ ವರ್ಷಾಚರಣೆಯ ಅಂಗವಾಗಿ 'ಅಬ್ಬಕ್ಕ 500' ಪ್ರೇರಣಾದಾಯಿ 100 ಉಪನ್ಯಾಸ ಸರಣಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದ್ದು, ಈ ಸರಣಿಯ ಸಮಾರೋಪ ಸಮಾರಂಭ ಹಾಗೂ 'ಅಬ್ಬಕ್ಕ ನೆನಪಿನ್ಯೆಸಿರಿ' ಸಂಚಿಕೆ ಲೋಕಾರ್ಪಣೆ ಕಾರ್ಯಕ್ರಮವು ಏ.18ಕ್ಕೆ ಸಂಜೆ 5ಕ್ಕೆ ಉಳ್ಳಾಲದ ಶಾರದಾನಿಕೇತನ ಸಭಾಂಗಣದಲ್ಲಿ ನಡೆಯಲಿದೆಯೆಂದು ನಿರ್ಮಲ ಭಾರತ್ ಟ್ರಸ್ಟ್‌ನ ಮುಖ್ಯಸ್ಥ ಜಿತೇಂದ್ರ ಶೆಟ್ಟಿ ತಲಪಾಡಿಗುತ್ತು ತಿಳಿಸಿದರು.

ತೊಕ್ಕೊಟ್ಟುವಿನ ಉಳ್ಳಾಲ ಪ್ರೆಸ್ ಕ್ಲಬ್ ನಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ದೇಶ ಮೊದಲು ಎಂಬ ಚಿಂತನೆಯೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಎಬಿಆರ್‌ಎಸ್‌ಎಂ ಹಾಗೂ ಅದರ ಅಂಗ ಸಂಸ್ಥೆಯಾದ ಕೆಆರ್ ಎಂಎಸ್‌ಎಸ್ 2015ರಿಂದ ರಾಜ್ಯದಲ್ಲಿ ವಿನೂತನ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಕ್ರಾಂತಿ ನಡೆಸಿದೆ. ತುಳುನಾಡಿನ ವೀರ ವನಿತೆ ರಾಣಿ ಅಬ್ಬಕ್ಕಳ ಇತಿಹಾಸವನ್ನು ಯುವಜನತೆಗೆ ಪರಿಚಯಿಸುವ ಉದ್ದೇಶದಿಂದ ದ.ಕ., ಉಡುಪಿ, ಕೊಡಗು ಜಿಲ್ಲೆಗಳ ವಿವಿಧ ವಿದ್ಯಾ ಸಂಸ್ಥೆಗಳಲ್ಲಿ 100 ಉಪನ್ಯಾಸ ನಡೆಸಲಾಗಿದೆ ಎಂದರು.

ಏ.18ಕ್ಕೆ ಸಂಜೆ ಉಳ್ಳಾಲ ಶಾರದಾ



ನಿಕೇತನದಲ್ಲಿ 'ಅಬ್ಬಕ್ಕ–500'ರ ಸಮಾರೋಪಕಾರ್ಯಕ್ರಮನಡೆಯಲಿದೆ. ನಿರ್ಮಲ ಭಾರತ್ ಚಾರಿಟೇಬಲ್ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಲಾಗಿರುವ ಈ ಕಾರ್ಯಕ್ರಮವನ್ನು ಧರ್ಮಸ್ಥಳದ ಅಬ್ಬಕ್ಕ ವಂಶಸ್ಥರಾದ ಅನಿತಾ ಸುರೇಂದ್ರ ಕುಮಾರ್ ಉದ್ಘಾಟಿಸಲಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್ ಸುಧೀರ್ ಸಮಾರೋಪ ಭಾಷಣ ಮಾಡಲಿದ್ದಾರೆ. ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘ ಉಚ್ಚಿಲದ ಅಧ್ಯಕ್ಷರಾದ ಜಯ ಸಿ. ಕೋಟ್ಯಾನ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪ್ರವೀಣ್ ಕುಮಾರ್ ಇಂದ್ರ, ಹೊಸದಿಗಂತ ಪತ್ರಿಕೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಎಸ್. ಪ್ರಕಾಶ್, ಡಾ. ಗುರುನಾಥ ಬಡಿಗೇರ್, ಸಂದೀಪ್ ಬೂದಿಹಾಳ್, ಕೆ.ರಮೇಶ್ ಮೊದಲಾದವರು ಭಾಗವಹಿಸಲಿರುವರು. ಇದೇ ವೇಳೆ ಬಂಟ್ವಾಳ ಸಂಚಯಗಿರಿ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಸಂಸ್ಥಾಪಕ ಡಾ.ತುಕಾರಾಮ ಪೂಜಾರಿ ಮತ್ತು ಡಾ.ಆಶಾಲತಾ ಎಸ್. ಸುವರ್ಣ ಅವರಿಗೆ ಗೌರವ ಸಮರ್ಪಣೆ ನಡೆಯಲಿದೆ ಎಂದರು. ಬಳಿಕ ಕೊಲ್ಯ ನಾಟ್ಯನಿಕೇತನದ ರಾಜಶ್ರೀ ಉಳ್ಳಾಲ್ ಅವರ ಶಿಷ್ಯ ವೃಂದದಿಂದ ನೃತ್ಯ ಮೋಹನ ಹಾಗೂ ವೀರರಾಣಿ ಅಬ್ಬಕ್ಕ ಕಿರು ನೃತ್ಯ ರೂಪಕ ಪ್ರದರ್ಶನ ನಡೆಯಲಿದೆ ಎಂದು ಜಿತೇಂದ್ರ ಶೆಟ್ಟಿ ತಿಳಿಸಿದರು.

ರಾಜ್ಯ ಮಹಾ ವಿದ್ಯಾಲಯ ಶಿಕ್ಷಕ ಸಂಘದ ಸದಸ್ಯ ಡಾ.ಶರತ್ ಕುಮಾರ್ ಶೆಟ್ಟಿ ಮಂಗಳಾದೇವಿ, ಶ್ರೀ ಭಗವತಿ ಎಜುಕೇಶನ್ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂದ್ರಹಾಸ್ ಉಳ್ಳಾಲ್, ವಿಹಿಂಪ ಮಂಗಳೂರಿನ ಜಿಲ್ಲಾ ಸಹ ಕಾರ್ಯದರ್ಶಿ ಗುರು ಪ್ರಸಾದ್ ಉಳ್ಳಾಲ್ ಉಪಸ್ಥಿತರಿದ್ದರು.

ಪುತ್ತೂರು ದೇವಳದ ಅರ್ಚಕ ವಿ.ಎಸ್. ಭಟ್ಟರಿಗೆ 'ಬಾರ್ಯ ಪ್ರಶಸ್ತಿ'



ಮಂಗಳೂರು: ಮಾತಾಪಿತರನ್ನು ಗೌರವದಿಂದ ಕಾಣುವುದು ಮತ್ತು ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿ ಕೊಳ್ಳುವುದು ತಪಸ್ಸಿಗೆ ಸಮಾನ. ಅವರ ಸ್ಮರಣೆಯಲ್ಲಿ, ಸಾಧಕರನ್ನು ಗುರುತಿಸಿ ಸನ್ಮಾನಿಸುವುದು ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುತ್ತದೆ ಎಂದು ಕುಂಟಾರು ಶ್ರೀಧರ ತಂತ್ರಿ ತಿಳಿಸಿದರು.

ಪುತ್ತೂರು ಪರ್ಲಡ್ಕದ ಅಗಸ್ತ್ಯ ನಿವಾಸದ ಶಾರದಮ್ಮ ವೇದಿಕೆಯಲ್ಲಿ ಜರಗಿದ ಸಮಾರಂಭದಲ್ಲಿ 26ನೇ ವರ್ಷದ ಬಾರ್ಯ ಪ್ರಶಸ್ತಿಯನ್ನು ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ವೆಂಕಟೇಶ ಸುಬ್ರಹ್ಮಣ್ಯ ಭಟ್ ಅವರಿಗೆ ಪ್ರದಾನ ಮಾಡಿ ಅವರು ಮಾತನಾಡಿದರು. ಸನ್ಮಾನ ಸ್ವೀಕರಿಸಿದ ವಿ. ಎಸ್. ಭಟ್ಟರು ಕಳೆದ ನಾಲ್ಕು ದಶಕಗಳಿಂದ ಮಹಾಲಿಂಗೇಶ್ವರ ದೇವರ ಸೇವೆಯನ್ನು ಮಾಡುತ್ತಿದ್ದು ಜೀವನೋಪಾಯಕ್ಕಾಗಿ ಬೇರೆ ಬೇರೆ ವೃತ್ತಿಗಳನ್ನು ಮಾಡಿಕೊಂಡಿದ್ದ ನನಗೆ ಅರ್ಚಕ ವೃತ್ತಿ ಸಾರ್ಥಕತೆಯನ್ನು ನೀಡಿದೆ ಎಂದರು.

ವಿಜಯಕುಮಾರ ತಂತ್ರಿ ಬೆಳ್ಮಣ್ಣು, ಪ್ರತ್ಯೂಷ್ ಬಾರ್ಯ, ಪ್ರಜ್ಞಾ ಬಾರ್ಯ, ಗುರುಪ್ರಸಾದ್ ನೂರಿತ್ತಾಯ, ಡಾ. ಆದಿತ್ಯ ತಂತ್ರಿ ಮೊದಲಾದವರು ಇದ್ದರು. ವಿಷ್ಣುಮೂರ್ತಿ ನೂರಿತ್ತಾಯ ಪ್ರತಿಷ್ಠಾನದ ಅಧ್ಯಕ್ಷ ಭಾಸ್ಕರ ಬಾರ್ಯ ಪ್ರಸ್ತಾವನೆಯೊಂದಿಗೆ ಅಭಿನಂದನಾ ಭಾಷಣ ಮಾಡಿದರು. ಟಿ ರಂಗನಾಥ ರಾವ್ ಬೊಳುವಾರು ಸನ್ಮಾನ ಪತ್ರ ವಾಚಿಸಿದರು. ವೈದಿಕರಾದ ಶಿವಕುಮಾರ್ ಎಡಮಂಗಲ, ಅಖಿಲ ಕರ್ನಾಟಕ ಹಿರಿಯರ ಸೇವಾ ಪ್ರತಿಷ್ಠಾನದ ಪುತ್ತೂರು ಘಟಕದ ಅಧ್ಯಕ್ಷ ಚಂದ್ರಶೇಖರ ಆಳ್ವ ಪಡುಮಲೆ ಅವರನ್ನು ಗೌರವಿಸಲಾಯಿತು. ಸ್ವರ್ಣಲತಾ ಭಾಸ್ಕರ ಸ್ವಾಗತಿಸಿ, ಪ್ರತಿಷ್ಠಾನದ ಸಂಚಾಲಕ ದಿವಾಕರ ಆಚಾರ್ಯ ಗೇರುಕಟ್ಟೆ ನಿರೂಪಿಸಿದರು.

ಶಿಬಿರದಿಂದ ವಿದ್ಯಾರ್ಥಿಗಳಿಗೆ ಮೌಲ್ಯಯುತ ಶಿಕ್ಷಣ: ಉಮೇಶ್ ಕೆ.



ಮಂಗಳೂರು: ನಮೆಲ್ಲಾ ಸಂಸ್ಕಾರ ಕೇಂದ್ರಗಳು ದೇಶಕ್ಕೆ ಉತ್ತಮ ಪ್ರಜೆಗಳನ್ನು ಕೊಡುವಂತಾಗಬೇಕು. ಉತ್ತಮ ಪ್ರಜೆಗಳಾಗಲು ಏನೆಲ್ಲಾ ಮೌಲ್ಯಗಳು ಬೇಕೋ ಅದು ಇಂತಹ ಶಿಬಿರಗಳಿಂದ ಸಿಗುತ್ತದೆ. ಎಂದು ಸಂಘದ ಪ್ರಚಾರಕ, ಕರ್ನಾಟಕ ಪ್ರಾಂತ ಬಾಲಗೋಕುಲದ ಪ್ರಮುಖರಾದ ಉಮೇಶ್ ಕೆ. ಹೇಳಿದರು.

ಅವರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ದೇವಿಪುರ ಮತ್ತು ಕೇಶವ ಶಿಶು ಮಂದಿರ ಕಿನ್ಯ ಇದರ ಜಂಟಿ ಆಶ್ರಯದಲ್ಲಿ ಹಾಗೂ ಊರಿನ ಸಂಘ ಸಂಸ್ಥೆಗಳ ಸಹಕಾರದಲ್ಲಿ ದೇವಸ್ಥಾನದ ಸಭಾಂಗಣದಲ್ಲಿ ಏ.11ರಂದು ಬೆಳಿಗ್ಗೆ ಉದ್ಘಾಟನೆಗೊಂಡ ಪ್ರತಿಭಾ ವಿಕಸನ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿ, ಮಾತನಾಡಿದರು.

ದೇವಸ್ಥಾನದ ನಿಕಟ ಪೂರ್ವ ಅರ್ಚಕ ಶ್ರೀನಿವಾಸ ನೆಲ್ಲಿತ್ತಾಯ, ತಲಪಾಡಿ ದೇವಸ್ಥಾನದ ಆಡಳಿತಾಧಿಕಾರಿ ಪ್ರವೀಣ್ ಕೆ., ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮಹಾ ವಿದ್ಯಾಲಯದ ಪ್ರಾಂಶುಪಾಲ ಡಾ. ನಂದೀಶ್ ಮಾಹಿತಿ ನೀಡಿದರು. ಪ್ರಮುಖರಾದ ಶೈಲೇಶ್ ಶೆಟ್ಟಿ ನಾರಾಯಣ ಕುಲಾಲ್, ರಘುನಾಥ ಶೆಟ್ಟಿ ಸಾಂತ್ಯಗಡದಗುತ್ತು, ಸತೀಶ್ ಶೆಟ್ಟಿ ಸಾಂತ್ಯ, ಪ್ರತಿಮಾ, ಸುಂದರ ಅಂಚನ್, ಸುಧಾಕರ ಆಳ್ವ, ಕೇಶವ ಕಜೆ, ಶೋಭಾ ಕಜೆ, ರಾಜೇಶ್ವರಿ ಪಿಲಿಕೂರ್ ರವಿ ಕನಕಮುಗೇರ್, ಬಬಿತ ಕನಕಮುಗೇರ್ ಸಚ್ಚಿದಾ ನಂದ, ಚೇತನ್ ಪಿಲಿಕೂರ್, ನಿತ್ಯಾನಂದ ಭಂಡಾರಿ, ಕರುಣಾಕರ ದೇವಾಡಿಗ, ರಾಜೇಶ್ ಗುಡ್ಡೆಮನೆ, ಗಣೇಶ್ ದೇವಾಡಿಗ, ಪೂರ್ಣಿಮಾ ಆಚೇಯ್, ಮಾತಾಜಿ ಅಶ್ವಿನಿ, ಸಹಾಯಕಿ ಪ್ರಜ್ಞಾ ಕನಕಮುಗೇರ್ ಮೊದಲಾದವರು ಭಾಗವಹಿಸಿದ್ದರು. ನಾರಾಯಣ ಕಜೆ ಪ್ರಸ್ತಾವಿಕ ನುಡಿಗಳನ್ನಾಡಿದರು. ನಯನ ಪಾರ್ಥ ಸಾರಥಿ ಸ್ವಾಗತಿಸಿ, ಆಶಾ ಶೆಟ್ಟಿ ವಂದಿಸಿದರು. ಸುಜಾತಾ ಕರುಣಾಕರ ನಿರೂಪಿಸಿದರು.



ಬೆಂಗಳೂರಿನ ಮುಖ್ಯಮಂತ್ರಿಗಳ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಯುವವಾಹಿನಿಯ ಪ್ರಮುಖರ ನಿಯೋಗವು ಏ.11ರಂದು ಸಿಎಂ ಅನ್ನು ಭೇಟಿಯಾಗಿ ಸಂಸ್ಥೆಯ ಚಟುವಟಿಕೆಗಳ ಬಗ್ಗೆ ಸಮಗ್ರ ಮಾಹಿತಿ ನೀಡಿ, ಸಂಸ್ಥೆಯ ಸಾಧನೆಯನ್ನೊಳಗೊಂಡ ಕಿರು ಹೊತ್ತಗೆಯನ್ನು ಹಸ್ತಾಂತರಿಸಲಾಯಿತು. ಯುವವಾಹಿನಿ ಕೇಂದ್ರ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು, ಸಾಂಸ್ಕೃತಿಕ ನಿರ್ದೇಶಕ ದಿನೇಶ್ ಸುವರ್ಣ ರಾಯಿ, ಸಾಮಾಜಿಕ ಜಾಲತಾಣ ಸಂಪಾದಕ ರಾಜೇಶ್ ಸುವರ್ಣ, ಯುವವಾಹಿನಿ ಬಂಟ್ವಾಳ ಘಟಕದ ಅಧ್ಯಕ್ಷ ನಾಗೇಶ್ ಪೂಜಾರಿ ನೈಬೇಲು, ಸಾಂಸ್ಕೃತಿಕ ನಿರ್ದೇಶಕ ಶೈಲೇಶ್ ಪೂಜಾರಿ ಕುಚ್ಚಿಗುಡ್ಡೆ, ಸಾಮಾಜಿಕ ಮುಂದಾಳು ಪ್ರಸನ್ನ ಅರಕಲಗೂಡು ಮತ್ತಿತರರು ಉಪಸ್ಥಿತರಿದ್ದರು.



ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಬುಧವಾರ ಬೆಳಿಗ್ಗಿನ ಜಾವ ಯುಗಾದಿ ದೀಪದ ಬಲಿ ನಡೆಯಿತು. ಚಂದ್ರಮಂಡಲದಲ್ಲಿ ದೇವರ ಉತ್ಸವ ನಡೆಯಿತು.

ಕರಾಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ ಸಂಭ್ರಮ

ಊರ, ಪರವೂರ ಭಕ್ತರಿಂದ ಹೊರೆಕಾಣಿಕೆ ಸಮರ್ಪಣೆ

ಬೆಳ್ತಂಗಡಿ: ಕರಾಯ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವ ಏ.15ರಿಂದ 25ವರೆಗೆ ಕ್ಷೇತ್ರದ ತಂತ್ರಿ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ್ ತಂತ್ರಿಗಳ ನೇತೃತ್ವದಲ್ಲಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮಾರ್ಗದರ್ಶನದಲ್ಲಿ ಎಡನೀರು ಸಚ್ಚಿದಾನಂದ ಭಾರತೀ ಶ್ರೀ ಸ್ವಾಮೀಜಿ ದಿವ್ಯ ಉಪಸ್ಥಿತಿಯಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ, ನೂತನ ಧ್ವಜಸ್ತಂಭ ಪ್ರತಿಷ್ಠೆ ನೂತನ ಬ್ರಹ್ಮರಥ ಸಮರ್ಪಣೆ, ವಾರ್ಷಿಕ ಜಾತ್ರಾ ಮಹೋತ್ಸವ ಮತ್ತು ಬ್ರಹ್ಮರಥೋತ್ಸವ ನಡೆಯಲಿದೆ.

ಏ.15ಕ್ಕೆ ಬೆಳಿಗ್ಗೆ ರಾಮಚಂದ್ರ ನಾಯಕ್ ಕರಾಯ ಹಾಗೂ ಅಚ್ಯುತ ಪ್ರಭು ಉಗ್ರಾಣ ಉದ್ಘಾಟಿಸಿದರು. ಶಾಸಕ ಹರೀಶ್ ಪೂಂಜ,



ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ನಾಗಾರ್ಜುನ್ ರಾವ್, ಅಧ್ಯಕ್ಷ ಅತುಲ್ ಕುಮಾರ್ ಕೆ.ಎನ್. ಹಲೇಜಿ, ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಅನಂತಕೃಷ್ಣ ಕುದ್ದಣ್ಣಾಯ, ಕಾರ್ಯಾಧ್ಯಕ್ಷ ಜಗದೀಶ್ ಶೆಟ್ಟಿ ಮೈರಾ ಹಾಗೂ ಜಯವಿಕ್ರಮ್ ಕಲ್ಲಾಪು, ಪ್ರಧಾನ ಕಾರ್ಯದರ್ಶಿ ದುರ್ಗೇಶ್ ವಿ.ಕೆದಿಲಾಯ, ಕೋಶಾಧಿಕಾರಿ ಸಾಮ್ರಾಟ್ ಕರ್ಕೇರ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸುದರ್ಶನ್ ಸುಪ್ರಭಾತ ಕೊಲ್ಲಿ, ಉಪಾಧ್ಯಕ್ಷ ಯುವರಾಜ್ ಅನಾರು, ತಣ್ಣೀರುಪಂತ ಪ್ಯಾಕ್ಸ್ ಅಧ್ಯಕ್ಷ ಜಯಾನಂದ ಕಲ್ಲಾಪು ಸಹಿತ ಮೊದಲಾದವರು ಇದ್ದರು. ಬಳಿಕ ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ ನಡೆಯಿತು.

ಸಂಜೆ ಕ್ಷೇತ್ರದ ತಂತ್ರಿಗಳಿಗೆ ಹಾಗೂ ಇತರ ಋತ್ವಿಜರಿಗೆ ಪೂರ್ಣಕುಂಭ ಸ್ವಾಗತ, ರಾತ್ರಿ ದೇವತಾ ಪ್ರಾರ್ಥನೆ, ಸ್ವಸ್ತಿ ಪುಣ್ಯಾಹವಾಚನ, ಆಚಾರ್ಯಾದಿ, ಋತ್ವಿಗ್ವರಣ, ಪ್ರಾಸಾದಶುದ್ಧಿ, ಅಂಕುರಾರೋಪಣ, ರಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಪೂಜಾಬಲಿ, ಮಹಾಪೂಜೆ ನಡೆಯಿತು.

ಹೊರಕಾಣಿಕೆ ಸಮರ್ಪಣೆ

ಕರಾಯ, ತಣ್ಣೀರುಪಂತ, ಕುಪ್ಪೆಟ್ಟಿ ಇಳಂತಿಲ, ಬಂದಾರು, ಮೊಗ್ರು, ಬಾರ್ಯ, ಪುತ್ತಿಲ, ಉರುವಾಲು, ಕಣಿಯೂರು, ತೆಕ್ಕಾರು, ಉಪ್ಪಿನಂಗಡಿ, ಶಾಂತಿನಗರ, ಮಠಂತಬೆಟ್ಟು ಕಡೆಗಳಿಂದ ಹಸಿರುವಾಣಿ ಹೊರಕಾಣಿಕೆ ಸಮರ್ಪಣೆ ನಡೆಯಿತು.

ಕೇಂದ್ರ ಸರ್ಕಾರದ ಕ್ರಮಕ್ಕೆ ಬಿಜೆಪಿ ಶಾಸಕಿ ಮುರುಳ್ಯ ಮೆಚ್ಚುಗೆ

'ನಾರಿ ಶಕ್ತಿ ವಂದನ ಕಾಯ್ದೆ' ಐತಿಹಾಸಿಕ

ಮಂಗಳೂರು: ನಾರಿ ಶಕ್ತಿ ವಂದನ ಕಾಯ್ದೆ ಭಾರತದ ಪ್ರಜಾಪ್ರಭುತ್ವ ಇತಿಹಾಸದಲ್ಲಿ ಒಂದು ಐತಿಹಾಸಿಕ ಕ್ಷಣವಾಗಿದ್ದು, ಈ ಕಾಯ್ದೆಗೆ ತಿದ್ದುಪಡಿ ಮೂಲಕ ದೇಶದ ಪ್ರಜಾಪ್ರಭುತ್ವದಲ್ಲಿ ಮಹಿಳೆಯರು ನೀತಿ ನಿರೂಪಣೆ ಮತ್ತು ನಿರ್ಧಾರ ಕೈಗೊಳ್ಳುವಲ್ಲಿ ಮಹತ್ವದ ಪಾತ್ರ ನಿರ್ವಹಿಸಲಿದ್ದಾರೆ ಎಂದು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಏ.16ರಿಂದ ಆರಂಭವಾಗುವ ಸಂಸತ್‌ನ ವಿಶೇಷ ಅಧಿವೇಶನದಲ್ಲಿ ನಾರಿ ಶಕ್ತಿ ವಂದನ ಕಾಯ್ದೆಗೆ ತಿದ್ದುಪಡಿ ಮೂಲಕ ಪ್ರಜಾಪ್ರಭುತ್ವದಲ್ಲಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ ಆಗಲಿದೆ. ಲೋಕಸಭೆ ಮತ್ತು ರಾಜ್ಯ ಶಾಸಕಾಂಗ ಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿ ನೀಡುವ ಈ ನಿಬಂಧನೆಯು ಪ್ರಾತಿನಿಧ್ಯವನ್ನು ಹೆಚ್ಚಿಸುವುದಕ್ಕೆ ಸೀಮಿತವಾಗಿಲ್ಲ, ಇದು ನೀತಿ ನಿರೂಪಣೆಯನ್ನು ಹೆಚ್ಚು ಸಮಗ್ರ, ಸೂಕ್ಷ್ಮ ಮತ್ತು ಪರಿಣಾಮಕಾರಿಯಾಗಿ ಮಾಡುವ ಕಡೆಗೆ ಒಂದು ಸಮರ್ಥ ಕ್ರಮವಾಗಿದೆ. ಈ ಕಾಯ್ದೆಯ ಆರಂಭಿಕ ಮತ್ತು ಪರಿಣಾಮಕಾರಿ ಅನುಷ್ಠಾನವು ಮಹಿಳೆಯರನ್ನು ನೀತಿಯ ಫಲಾನುಭವಿಗಳಿಂದ 'ನೀತಿ ರೂಪಿಸುವವರು' ಆಗಿ ಪರಿವರ್ತಿಸಲು ದಾರಿ ಮಾಡಿಕೊಡುತ್ತದೆ. ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾದಂತೆ, ಶಿಕ್ಷಣ, ಆರೋಗ್ಯ, ಪೋಷಣೆ, ಭದ್ರತೆ, ನೀರು ಮತ್ತು ನೈರ್ಮಲ್ಯದಂತಹ ವಿಷಯಗಳು ಹೆಚ್ಚಿನ ಆದ್ಯತೆ ಪಡೆದುಕೊಳ್ಳುತ್ತವೆ ಎಂದರು. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಬೇಟಿ ಬಚಾವೋ ಬೇಟಿ ಪಡಾವೋ ಅಭಿಯಾನ, ಸುಕನ್ಯಾ ಸಮೃದ್ಧಿ ಯೋಜನೆ, ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ, ಪೋಷನ್ 2.0 ಯಶಸ್ವಿಯಾಗಿ ಅನುಷ್ಠಾನಗೊಂಡಿದೆ ಎಂದರು.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯೆ ಸುಲೋಚನಾ ಜಿ.ಕೆ. ಭಟ್, ಮಹಿಳಾ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿಲ್ಪಾ ಸುವರ್ಣ, ಮಹಿಳಾ ಮೋರ್ಚಾ ರಾಜ್ಯ ಕಾರ್ಯದರ್ಶಿ ಶ್ವೇತಾ ಪೂಜಾರಿ, ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷೆ ಮಂಜುಳಾ ರಾವ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಸಂಧ್ಯಾ ವೆಂಕಟೇಶ್, ಲಖಿತಾ ಶೆಟ್ಟಿ ಉಪಸ್ಥಿತರಿದ್ದರು.

ಸುತ್ತಮುತ್ತ

ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ಕಾವೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ ಯೆಯ್ಯಾಡಿ ಮತ್ತು ಹರಿಪದವು ಫೀಡರ್‌ಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಏ. 16ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಮೇರಿಹಿಲ್, ಯೆಯ್ಯಾಡಿ, ಹರಿಪದವು, ಕುಂಟಲ್ಪಾಡಿ, ಕೆ.ಪಿ.ಟಿ, ಉದಯನಗರ, ಲ್ಯಾಂಡ್ ಲಿಂಕ್ಸ್, ಪೆರ್ಲಗುರಿ, ಪದವಿನಂಗಡಿ, ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಕೂಟ ಮಹಾಜಗತ್ತು ವೇದಪಾಠ ಶಿಬಿರ ನಾಳೆಯಿಂದ

ಮಂಗಳೂರು: ಕೂಟ ಮಹಾ ಜಗತ್ತು ಮಂಗಳೂರು ಅಂಗಸಂಸ್ಥೆಯ ವತಿಯಿಂದ ಬ್ರಾಹ್ಮಣ ಸಮಾಜದ ಮಕ್ಕಳಿಗಾಗಿ ಪ್ರತಿ ವರ್ಷದಂತೆ ಈ ವರ್ಷವೂ ವಸಂತ ವೇದ ಪಾಠ ಶಿಬಿರವು ಏ.16ರಿಂದ 21 ದಿನಗಳ ಕಾಲ ಪಾಂಡೇಶ್ವರದ ಶ್ರೀ ಗುರು ನರಸಿಂಹ ಸಭಾಭವನದಲ್ಲಿ ಜರಗಲಿದೆ. ವಿದ್ವಾನ್ ಶ್ರೀಕರ ಭಟ್ ಹಾಗೂ ಕಾರುಣ್ಯ ನಿಧಿ ಭಟ್ ಶಿಬಿರದ ಗುರುಗಳಾಗಿ ಭಾಗವಹಿಸಲಿರುವರು ಅಧ್ಯಕ್ಷ ಶ್ರೀಧರ ಹೊಳ್ಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಡ್ವಾಳ: ದೇವಳದಲ್ಲಿ ಗೊನೆ ಮುಹೂರ್ತ

ಸುಬ್ರಹ್ಮಣ್ಯ: ನಿಡ್ವಾಳ ಶ್ರೀ ಮಹಾವಿಷ್ಣು ದೇವಸ್ಥಾನದ ಅಷ್ಟಬಂಧ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಏ.24ರಿಂದ ಮೇ 3ರ ತನಕ ನಡೆಯಲಿದ್ದು, ಭರದ ಸಿದ್ಧತೆ ನಡೆಯಿತ್ತಿದೆ. ಬ್ರಹ್ಮಕಲಶೋತ್ಸವದ ಅಂಗವಾಗಿ ಬುಧವಾರ ಗೊನೆ ಮುಹೂರ್ತ ನೆರವೇರಿತು. ವಿವಿಧ ವೈದಿಕ ವಿಧಿ ವಿಧಾನಗಳ ಮೂಲಕ ಅಚಕರು ಗೊನೆ ಮುಹೂರ್ತ ನೆರವೇರಿಸಿದರು. ಬಳಿಕ ಶ್ರೀ ದೇವಳಕ್ಕೆ ಮೆರವಣಿಗೆಯಲ್ಲಿ ಗೊನೆಯನ್ನು ತರಲಾಯಿತು. ಈ ಸಂದರ್ಭ ಆಡಳಿತ ಮಂಡಳಿ ಅಧ್ಯಕ್ಷ ಚಂದ್ರಪ್ರಕಾಶ್ ಕಂಬಳ, ಪುನರ್ ನಿರ್ಮಾಣ ಮತ್ತು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನೇಮಿರಾಜ್ ಪಲ್ಲೋಡಿ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ಅಶೋಕ್ ಮೇಲ್ಪಾಡಿ, ಆಡಳಿತ ಮಂಡಳಿ ಕಾರ್ಯದರ್ಶಿ ಗುರುಪ್ರಸಾದ್ ತೋಟ, ಕೋಶಾಧಿಕಾರಿ ಕುಶಾಲಪ್ಪ ದೊಡ್ಡಮನೆ, ಆಡಳಿತ ಮಂಡಳಿ ಸದಸ್ಯ ದೇವಾನಂದ ಪುರಿಯ, ಅರ್ಚಕ ಅಕ್ಷಯ್ ಭಟ್ ಬಲ್ಗಾಯಬೆಟ್ಟು, ಪ್ರಮುಖರಾದ ಬಾಲಕೃಷ್ಣ ಕರಿಕ್ಕಳ, ವಸಂತ ಮೇಲ್ಪಾಡಿ, ಶರತ್ ಪುರಿಯ, ಹರೀಶ್ ಪುರಿಯ, ಪ್ರಶಾಂತ್ ಅಲೆಂಗಾರ, ಭಾಗೀರಥಿ ಪುಂಡಿಮನೆ, ಕೃಷ್ಣಪ್ಪ ಮರಕ್ಕಡ, ರತ್ನಾವತಿ ಕೃಷ್ಣಪ್ಪ ಚಿಲ್ಮೆ, ಮೇದಪ್ಪ ಅಲೆಂಗಾರ, ಸಚಿನ್ ಪುಂಡಿಮನೆ, ಗಿರಿಧರ ಮೇಲ್ಪಾಡಿ, ಜಯರಾಮ ಮೇಲ್ಪಾಡಿ ಮತ್ತಿತರರು ಉಪಸ್ಥಿತರಿದ್ದರು.

ತೋಕೂರಿನಲ್ಲಿ ಡಾ. ಅಂಬೇಡ್ಕರ್ ಜಯಂತಿ ಆಚರಣೆ

ಮುಲ್ಕಿ: ತೋಕೂರು ಫೇಮಸ್ ಯೂತ್ ಕ್ಲಬ್ ಮತ್ತು ಮಹಿಳಾ ಮಂಡಲದ ಆಶ್ರಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ದಿನಾಚರಣೆ ನಡೆಯಿತು ಫೇಮಸ್ ಯೂತ್ ಮಹಿಳಾ ಮಂಡಲದ ಅಧ್ಯಕ್ಷೆ ಪ್ರೇಮಲತಾ ಯೋಗೀಶ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ವಿರುದ್ಧ ಹೋರಾಟ ನಡೆಸಿದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಯುವ ಸಮುದಾಯಕ್ಕೆ ಸ್ಫೂರ್ತಿ ಎಂದರು. ಮುಖ್ಯ ಅತಿಥಿಗಳಾಗಿ ರೋಟರಿ ಸಮುದಾಯ ದಳದ ಅಧ್ಯಕ್ಷ ಮಹಮ್ಮದ್ ಶರೀಫ್, ಕ್ಲಬ್ ಸದಸ್ಯರಾದ ಬೋಜ ಅಮಿತ ದಿನಕರ್ ಮಿತ್ರ ಅರ್ಚನಾ ಮತ್ತಿತರರು ಉಪಸ್ಥಿತರಿದ್ದರು. ಕ್ಲಬ್ಬಿನ ಕೋಶಾಧಿಕಾರಿ ಇಂದಿರಾ ಸಂಜೀವ ಸ್ವಾಗತಿಸಿದರು. ರೇಷ್ಮ ಮೋಹನ್ ವಂದಿಸಿದರು. ಕ್ಲಬ್ಬಿನ ಕಾರ್ಯದರ್ಶಿ ಮೋಹನ್ ದಾಸ್ ನಿರೂಪಿಸಿದರು.

ಎಸ್‌ಎಸ್ ಪಿಯು ಕಾಲೇಜಿನಲ್ಲಿ ಅಂಬೇಡ್ಕರ್ ಜಯಂತಿ

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತದ ಎಸ್ ಎಸ್ ಪಿಯು ಕಾಲೇಜಿನಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸಲಾಯಿತು. ಕಾಲೇಜಿನ ಪ್ರಾಚಾರ್ಯ ಸೋಮಶೇಖರ ನಾಯಕ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಬಳಿಕ ಉಪನ್ಯಾಸಕರಾದ ಜಯಪ್ರಕಾಶ್ ಆರ್., ಗಿರೀಶ್, ಯೋಗಣ್ಣ ಎಂ.ಎಸ್., ದೈಹಿಕ ಶಿಕ್ಷಣ ಶಿಕ್ಷಕಿ ಸ್ಮಿತಾ, ಬೋಧಕೇತರ ಸಿಬ್ಬಂದಿ ಶಶಿಧರ ಕತ್ತಿಮಜಲು, ಹರೀಶ್ ಸುಬ್ರಹ್ಮಣ್ಯ ಸಹಿತ ವಿದ್ಯಾರ್ಥಿಗಳು ಪುಷ್ಪಾರ್ಚನೆ ನೆರವೇರಿಸಿದರು.

ಇಚ್ಲಂಪಾಡಿ ಸೇವಾಬಸ್ತಿಯಲ್ಲಿ ಸಂತರ ಪಾದ ಯಾತ್ರೆ, ಧಾರ್ಮಿಕ ಸಭೆ | ಶ್ರೀ ಮುಕ್ತಾನಂದ ಆಶೀರ್ವಚನ

ಹಿಂದು ಧರ್ಮದ ಉಳಿವಿಗಾಗಿ ನಾವೆಲ್ಲರೂ ಒಟ್ಟಾಗಬೇಕು

ಕಡಬ: ಹಿಂದೂ ಧರ್ಮದ ಉಳಿವಿಗಾಗಿ ನಾವೆಲ್ಲರೂ ಒಟ್ಟಾಗಬೇಕು ಜಾತಿ ಅಂತಸ್ತನ್ನು ತೊರೆದು ಧರ್ಮವನ್ನು ರಕ್ಷಣೆ ಮಾಡಬೇಕು. ಸಂಸ್ಕಾರ, ಸಂಪ್ರದಾಯ ಇವುಗಳನ್ನು ಹಿರಿಯರು ಮಾಡಿದಾಗ ಕಿರಿಯರಿಗೆ ಆದರ್ಶಪ್ರಾಯವಾಗಿರುತ್ತದೆ. ಭಜನೆ, ಸಂಸ್ಕಾರ, ಸ್ವಚ್ಚತೆ ಇವುಗಳಿಗೆ ಆದ್ಯತೆ ನೀಡಿದಾಗ ಎಲ್ಲವೂ ಉತ್ತಮ ರೀತಿಯಲ್ಲಿ ನಡೆಯುತ್ತದೆ. ಅದು ನಮ್ಮ ಧರ್ಮದ ಉಳಿವಿಗೆ ಪೂರಕವಾಗುತ್ತದೆ. ಇಲ್ಲಿನ ಕಾರ್ಯಕ್ರಮ ಎಲ್ಲಾ ಸೇವಾ ಬಸ್ತಿಯವರಿಗೆ ಮಾದರಿಯಾಗಿದೆ ಎಂದು ಮೂಡಬಿದರೆ ಕರಿಂಜೆ ಮಠದ ಸ್ವಾಮೀಜಿ ಶ್ರೀ ಮುಕ್ತಾನಂದ ಸ್ವಾಮೀಜಿ ಹೇಳಿದರು.

ವಿಶ್ವ ಹಿಂದೂ ಪರಿಷದ್ ಧರ್ಮ ಪ್ರಸಾರ ವಿಭಾಗ ಪುತ್ತೂರು ಜಿಲ್ಲೆ, ಕಡಬ ಪ್ರಖಂಡ ವತಿಯಿಂದ ಕಡಬದ ಇಚ್ಲಂಪಾಡಿ ಕೆಡಂಬೇಲು ಸೇವಾಬಸ್ತಿಯಲ್ಲಿ ನಡೆದ ಸಂತರ ಪಾದ ಯಾತ್ರೆ ಮತ್ತು ಧಾರ್ಮಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಸ್ವಾಮೀಜಿ ಆಶೀರ್ವಚನ ನೀಡಿದರು.



ಧರ್ಮ ಉಳಿವಿನಲ್ಲಿ ಭಜನೆ ಪಾತ್ರ

ಧರ್ಮಪ್ರಸಾರ ವಿಭಾಗದ ಪ್ರಾಂತ ಪ್ರಮುಖ್ ನಾರಾಯಣ ವರ್ಣೇಕರ್ ಶಿವಮೊಗ್ಗ ಮಾತನಾಡಿ, ಭಜನೆಯು ಧರ್ಮವನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ನಾವು ಇತರ ಧರ್ಮದವರ ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಹಿಂದೂ ಧರ್ಮವನ್ನು ಉಳಿಸುವಲ್ಲಿ ಪ್ರತಿಯೊಬ್ಬರು ಕಾರ್ಯಪ್ರವೃತರಾಗಬೇಕು. ಜೊತೆಗೆ ಬಾಲಸಂಸ್ಕಾರ ಕಾರ್ಯಕ್ರಮ, ಮಾತೆಯವರನ್ನು ಒಟ್ಟೂಗೂಡಿಸಿ ಭಜನೆ, ಸಂಸ್ಕಾರ ತಿಳಿಸುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಮಾಡಬೇಕು ಎಂದು ಅವರು ಹೇಳಿದರು.

- ಹಿಂದೂ ಧರ್ಮದ ಉಳಿವಿಗಾಗಿ ನಾವೆಲ್ಲರೂ ಒಟ್ಟಾಗಬೇಕು
- ಜಾತಿ ಅಂತಸ್ತನ್ನು ತೊರೆದು ಧರ್ಮವನ್ನು ರಕ್ಷಣೆ ಮಾಡಬೇಕು.
- ನಾವು ಇತರ ಧರ್ಮದವರ ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಹಿಂದೂ ಧರ್ಮವನ್ನು ಉಳಿಸುವಲ್ಲಿ ಕಾರ್ಯಪ್ರವೃತರಾಗಬೇಕು
- ಬಾಲಸಂಸ್ಕಾರ ಕಾರ್ಯಕ್ರಮ, ಮಾತೆಯವರನ್ನು ಒಟ್ಟುಗೂಡಿಸಿ ಭಜನೆ, ಸಂಸ್ಕಾರ ತಿಳಿಸುವ ನಿಟ್ಟಿನಲ್ಲಿ ಕಾರ್ಯ ಮಾಡಬೇಕು

ಕಾರ್ಯಕ್ರಮದಲ್ಲಿ ಕಡಬ ಪ್ರಖಂಡದ ಗೌರವಾಧ್ಯಕ್ಷ ಕಡ್ಯ ವಾಸುದೇವ ಭಟ್, ವಿಶ್ವ ಹಿಂದೂ ಪರಿಷತ್ ಪುತ್ತೂರು ಜಿಲ್ಲೆ ಸಹ ಕಾರ್ಯದರ್ಶಿ ಪ್ರಮೋದ್ ರೈ ನಂದಗುರಿ, ಧರ್ಮ ಪ್ರಸಾರ ಟೋಳಿ ಪ್ರಮುಖ್ ರಾಧಾಕೃಷ್ಣಕೋಲ್ಪೆ, ಎಲ್.ಡಿ. ಬ್ಯಾಂಕ್ ಅಧ್ಯಕ್ಷ ಭಾಸ್ಕರ ಗೌಡ ಇಚಿಲಂಪಾಡಿ, ಸೇವಾ ಬಸ್ತಿ ಪ್ರಮುಖರಾದ ತನಿಯಪ್ಪ, ಕುಂಞ, ಸುಂದರ, ಮಾತೃಶಕ್ತಿ ಕಡಬ ಪ್ರಖಂಡದ ಸಹ ಪ್ರಮುಖ್ ವೀಣಾ ಕೊಲ್ಲೆ ಸಾಗು, ಸದಸ್ಯರಾದ ಕವಿತಾ, ಪ್ರಮುಖರಾದ ಶ್ರೀನಿವಾಸ ಪೂಜಾರಿ, ದಿವ್ಯೇಶ್ ಕಲ್ಯ, ಸುಮನ್ ಕೆರ್ನಡ್ಕ, ಪೂವಪ್ಪ ಪುಲಿತ್ತಡಿ, ಭಜನಾ ಮಂಡಳಿ ಕಾರ್ಯದರ್ಶಿ ಶ್ವೇತಾ, ಬಜರಂಗದಳ ಸಹ ಸಂಯೋಜಕ ರಕ್ಷಿತ್ ಕೇಪು, ಕಡಬ ಪ್ರಖಂಡ ಪ್ರಚಾರ ಪ್ರಸಾರ ಪ್ರಮುಖ್ ಚೇತನ್ ಕೋಡಿಂಬಾಳ, ಜಯಂತ ಕಲ್ಲುಗುಡ್ಡೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕಡಬ ಪ್ರಖಂಡ ಮಾತೃಶಕ್ತಿ ಪ್ರಮುಖ್ ಪ್ರೇಮಲತ ಸ್ವಾಗತಿಸಿದರು. ಕಡಬ ಪ್ರಖಂಡದ ಕಾರ್ಯದರ್ಶಿ ಪ್ರಮೀಳಾ ಲೋಕೇಶ್ ವಂದಿಸಿದರು. ಕಾರ್ಯಕ್ರಮದ ಬಳಿಕ ಸ್ವಾಮೀಜಿಯವರು ಸೇವಾಬಸ್ತಿಯಲ್ಲಿರುವ ಮನೆಗಳಿಗೆ ಭೇಟಿ ನೀಡಿದರು.

ಪಾರೆಂಕಿ ಮಹಿಷಮರ್ದಿನಿ ದೇಗುಲ ಬ್ರಹ್ಮಕಲಶೋತ್ಸವ ಪೂರ್ವಭಾವಿ ಸಭೆ



ಬೆಳ್ತಂಗಡಿ: ಮಡಂತ್ಯಾರು ಶ್ರೀ ಕ್ಷೇತ್ರ ಪಾರೆಂಕಿ ಮಹಿಷಮರ್ದಿನಿ ದೇವಸ್ಥಾನದಲ್ಲಿ 2027ರಲ್ಲಿ ನಡೆಯಲಿರುವ ಅಷ್ಟಬಂಧ ಬ್ರಹ್ಮಕಲಶೋತ್ಸವ ಹಾಗೂ ಕ್ಷೇತ್ರದಲ್ಲಿ ನಡೆಯುಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ಸಮಾಲೋಚನೆಸಭೆ ದೇಗುಲದಸಭಾಂಗಣದಲ್ಲಿ ಏ. 15ರಂದು ನಡೆಯಿತು.

ಕ್ಷೇತ್ರದ ಅಭಿವೃದ್ಧಿ ಹಾಗೂ ಬ್ರಹ್ಮಕಲಶೋತ್ಸವ ಸಂದರ್ಭ ನಡೆಯಲಿರುವ ಜೀರ್ಣೋದ್ಧಾರ ಕಾಮಗಾರಿ ಗಳ ಬಗ್ಗೆ ಆಡಳಿತ ಮೋಕ್ತೆಸರರು ಹಾಗೂ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಪುನೀತ್ ಕುಮಾರ್ ಮಡಂತ್ಯಾರ್ ಮಾತನಾಡಿದರು.

ಪ್ರಧಾನ ಅರ್ಚಕರಾದ ವೇಜಾವರ ಟಿ. ವಿ. ಶ್ರೀಧರ ರಾವ್ ಮಾತನಾಡಿ, ಮೇ 17ರಂದು ಕ್ಷೇತ್ರದಲ್ಲಿ ಅಷ್ಟಮಂಗಲ ಪ್ರಶ್ನಾ ಚಿಂತನೆ ನಡೆಯಲಿದೆ. ದೇಗುಲದಲ್ಲಿ ಇತ್ತೀಚಿಗೆ ನಡೆದ ಅಭಿವೃದ್ಧಿ ಕಾಮಗಾರಿಗಳು ಬಗ್ಗೆ ಕೂಡ ವಿವರಿಸಿದರು. ನೂತನ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿ ವೀರೇಂದ್ರ ಕುಮಾರ್ ಮಡಂತ್ಯಾರ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಇವರೊಂದಿಗೆ 15 ಜನ ಸಮಿತಿ ಸದಸ್ಯರ ಜೀರ್ಣೋದ್ಧಾರ ಸಮಿತಿಯನ್ನು ರಚಿಸಲಾಯಿತು. ದೇಗುಲದ ಅಭಿವೃದ್ಧಿ ಕಾರ್ಯಕ್ಕೆ ಸರ್ವರೂ ಸಹಕರಿಸಬೇಕು ಎಂದು ವಿನಂತಿಸಿದರು.

ಮಾಜಿ ಆಡಳಿತ ಮೋಕ್ತೇಸರ ವಿಠಲ ಶೆಟ್ಟಿ ಮೂಡಾಯೂರು, ರತ್ನಾಕರ ಶೆಟ್ಟಿ ಮಾತನಾಡಿದರು. ಹಿರಿಯ ಗ್ರಾಮಸ್ಥರು ಸಲಹೆ ಸೂಚನೆ ನೀಡಿದರು.



ಮಂಗಳೂರು ಎಂಆರ್‌ಪಿಎಲ್ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 136ನೇ ಜನ್ಮ ದಿನಾಚರಣೆಯನ್ನು ಮಂಗಳವಾರ ಆಚರಿಸಲಾಯಿತು. ವ್ಯವಸ್ಥಾಪಕ ನಿರ್ದೇಶಕ ಎಂ. ಶ್ಯಾಮಪ್ರಸಾದ್ ಕಾಮತ್, ರಿಫೈನರಿ ವಿಭಾಗದ ನಿರ್ದೇಶಕ ನಂದಕುಮಾರ್ ವಿ. ಪಿಳ್ಳೈ ಹಾಗೂ ಹಣಕಾಸು ನಿರ್ದೇಶಕ ದೇವೇಂದ್ರ ಕುಮಾರ್ ಇದ್ದರು.

ಕಿನ್ನಿಗೋಳಿಯಲ್ಲಿ ಸಂಸ್ಕೃತಿ ಸಂಸ್ಕಾರ ಶಿಬಿರ



ಕಿನ್ನಿಗೋಳಿ: ಮಕ್ಕಳಲ್ಲಿ ಸಂಸ್ಕಾರ ನಮ್ಮ ಸಂಸ್ಕೃತಿ, ಶ್ರದ್ಧೆ ಜೀವನ ಮೌಲ್ಯವನ್ನು ತಿಳಿಸಿಕೊಡುತ್ತದೆ. ಆದುದರಿಂದ ಮಕ್ಕಳಿಗೆ ಬಾಲ್ಯದಲ್ಲಿ ಇಂತಹ ಧಾರ್ಮಿಕ ಪಾಠದ ಅಗತ್ಯವಿದೆ ಎಂದು ಕಿನ್ನಿಗೋಳಿ ಜಿ. ಎಸ್. ಬಿ ಅಧ್ಯಕ್ಷ ರಾಜೇಶ್ ನಾಯಕ್ ಹೇಳಿದರು.

ಅವರು ಕಿನ್ನಿಗೋಳಿ ಶ್ರೀ ರಾಮಮಂದಿರ ಸಭಾಭವನದಲ್ಲಿ ಕಿನ್ನಿಗೋಳಿ ಜಿಎಸ್‌ಬಿ ಹಾಗೂ ಮಾತೃ ಮಂಡಳಿಯ ಹಾಗೂ ಲೋಕಮುಖಿ ಟ್ರಸ್ಟ್ ಆಶ್ರಯದಲ್ಲಿ ಮಕ್ಕಳಿಗೆ ನಡೆದ ಸಂಸ್ಕೃತಿ ಸಂಸ್ಕಾರ ಶಿಬಿರದಲ್ಲಿ ಮಾತನಾಡಿದರು. ಗುರು ಡಾ.ಸೋಂಥಾ ಭಾಸ್ಕರ ಭಟ್, ಕಿನ್ನಿಗೋಳಿ ರಾಮ ಮಂದಿರ ಪ್ರಧಾನ ಅರ್ಚಕ ವೇದಮೂರ್ತಿ ಗಿರೀಶ್ ಭಟ್, ಮಾತೃ ಮಂಡಳಿಯ ರಂಜಿನಿ ರಾವ್, ಭಾರತೀ ಶೆಣೈ, ರಾಧಾ ಶೆಣೈ, ಪೂಜಾ ನಾಯಕ್ , ಅನಿತಾ ಪೃಥ್ವಿರಾಜ್ ಆಚಾರ್ಯ, ಸಂಧ್ಯಾ ಮಲ್ಯ, ಸ್ವಾತಿ ನಾಯಕ್, ನಂದಿತಾ ಕಾಮತ್, ರೇಷ್ಮಾ ಶೆಟ್ಟಿ ಇದ್ದರು.

ಮಲಯಾಳಿ ಸಮಾಜದವರಿಂದ ಸೌರಮಾನ ಯುಗಾದಿ ವಿಶು ಆಚರಣೆ



ಸುಂಟಿಕೊಪ್ಪ: ಕೊಡಗಿನಲ್ಲಿ ನೆಲೆ ನಿಂತಿರುವ ಮಲಯಾಳಿ ಸಮಾಜದವರು ಸೌರಮಾನ ಯುಗಾದಿ ವಿಶುವನ್ನು ಸಾಂಪ್ರದಾಯಿಕವಾಗಿ ಸಡಗರ ಸಂಭ್ರಮದಿಂದ ಆಚರಿಸಿದರು.

ಏ.14 ಮಧ್ಯರಾತ್ರಿ ಕಳೆದು ಏ.15ರ ಸೌರಮಾನ ಯುಗಾದಿಯಲ್ಲಿ ಮಲಯಾಳಿಗರು ಪಟಾಕಿ ಸಂಭ್ರಮಿಸುವುದು ವಾಡಿಕೆಯಾಗಿದೆ. ಬುಧವಾರ ವಿಶು ಮಲಯಾಳಿಗರು ಮನೆಯಲ್ಲಿ ಸಾಂಪ್ರದಾಯಿಕ ವಿಶು ಹಬ್ಬ ಆಚರಿಸಿದರು. ದೇವಾಲಯಕ್ಕೆ ತೆರಳಿ ದೇವರಿಗೆ ಅರ್ಚನೆ ಪೂಜೆಗಳನ್ನು ಸಲ್ಲಿಸುವ ಮೂಲಕ ಹೊಸ ವರುಷದ ಹಬ್ಬಕ್ಕೆ ಮುನ್ನುಡಿಯನ್ನು ಇಟ್ಟರು. ಮಲಯಾಳಿ ಸಮಾಜದ ಪ್ರತಿ ಮನೆಗಳಲ್ಲೂ ಏ.15ರಂದು ಬೆಳಿಗ್ಗೆ 4 ಗಂಟೆಗೆ ಮನೆಯ ಯಾಜಮಾನಿ ಹಾಗೂ ಮಹಿಳೆಯರು ವಿಶೇಷ ಪೂಜಾಕೈಂಕರ್ಯವನ್ನು ಶ್ರದ್ಧಾಭಕ್ತಿಯಿಂದ ದೇವರಲ್ಲಿ ಪ್ರಾರ್ಥಿಸುತ್ತಾರೆ.

ಆನಂತರ ವಿಶು ಹಬ್ಬದ (ಕೊನ್ನಪೂ) ಹೊನ್ನೆಹೂ, ವಿಶು ಕಣಿಗಳಾದ (ಅಡ) ತಿಂಡಿ ವಿವಿಧ ಬಗೆಯ ಹಣ್ಣು ಹಂಪಲು ತರಕಾರಿ ಧವಸಧ್ಯಾನ್ಯ ಬಾಳೆ ಹಣ್ಣು ಹಲಸಿನಗುಚ್ಚೆ, ಚಿನ್ನದ ಸರ ಹಾಗೂ ನಗದು ರೂ.ಗಳನ್ನು ದೇವರ ಕೋಣೆಯಲ್ಲಿ ಇರಿಸಿ ಹೊಸವರ್ಷದಿಂದ ಕುಟುಂಬ ವರ್ಗಕ್ಕೆ ಐಶ್ವರ್ಯ ಆರೋಗ್ಯ ನೆಮ್ಮದಿ ನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತಾರೆ. ಆನಂತರ ಮನೆಯ ಮಂದಿಯೆಲ್ಲ ಸೇರಿ ದೇವರಲ್ಲಿ ಪ್ರಾರ್ಥಿಸುವುದು ವಾಡಿಕೆಯಾಗಿದೆ. ಮನೆಯ ಕುಟುಂಬಸ್ಥರಿಗೆ ಮನೆಯ ಬಂಧು ಬಳಗದವರಿಗೆ ಆ ಮನೆಯ ಹಿರಿಯರು ಕಿರುಕಾಣಿಕೆ ಹಣ ನೀಡುವ ಹಿರಿಯರು ಕಿರಿಯರಿಗೆ ಆಶಿರ್ವಾದ ನೀಡುವುದು ವಿಶು ಹಬ್ಬದ ಪದ್ಧತಿ ಸಾಂಪ್ರಾದಾಯಿಕವಾಗಿ ಬೆಳೆದು ಬಂದ ಪದ್ಧತಿಯಾಗಿದೆ.

ಶ್ರೀ ನಂದಿಕೇಶ್ವರ ದೇವಸ್ಥಾನ ಪ್ರತಿಷ್ಠಾ ವರ್ಧಂತಿ, ಮುಖಮಂಟಪ ಉದ್ಘಾಟನೆ



ಕುಂದಾಪುರ: ಕುಂದಾಪುರ ಸರಕಾರಿ ಆಸ್ಪತ್ರೆ ಹಿಂಭಾಗದಲ್ಲಿರುವ ಶ್ರೀ ನಂದಿಕೇಶ್ವರ ದೇವಸ್ಥಾನದ ದ್ವಿತೀಯ ವರ್ಷದ ಪ್ರತಿಷ್ಠಾ ವರ್ಧಂತ್ಯುತ್ಸವ, ದೇವಸ್ಥಾನದ ಮುಖ ಮಂಟಪ ಮತ್ತು ಶ್ರೀ ದೇವರ ದ್ವಾರ ಬಾಗಿಲಿಗೆ ಹಿತ್ತಾಳೆ ಹೊದಿಕೆ ಉದ್ಘಾಟನಾ ಸಮಾರಂಭ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಮಂಗಳವಾರ ವಿಜೃಂಭಣೆಯಿಂದ ನಡೆಯಿತು.

ದ್ವಿತೀಯ ವರ್ಷದ ಪ್ರತಿಷ್ಠಾ ವರ್ಧಂತ್ಯುತ್ಸವದ ಪ್ರಯುಕ್ತ ಬೆಳಿಗ್ಗೆ ದೇವರಿಗೆ ಫಲ ಸಮರ್ಪಣೆ, ಗಣಪತಿ ಪೂಜೆ, ಪ್ರಧಾನ ಹೋಮ, ಕಲಶ ಸ್ಥಾಪನೆ, ಕಲಾಭಿವೃದ್ಧಿ ಹೋಮ, ಕಲಶಾಭಿಷೇಕ, ಮಹಾಪೂಜೆ, ಮಹಾ ಮಂಗಳಾರತಿ, ಪ್ರಸಾದ ವಿತರಣೆ, ಮಧ್ಯಾಹ್ನ ಅನ್ನಸಂತರ್ಪಣೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ಸಂಪನ್ನಗೊಂಡಿತು.

ನೂತನವಾಗಿ ನಿರ್ಮಿಸಿದ ದೇವಸ್ಥಾನದ ಮುಖ ಮಂಟಪವನ್ನು ಉಡುಪಿ ನಿರ್ಮಿತಿ ಕೇಂದ್ರದ ಪ್ರೊಜೆಕ್ಟ್ ಡೈರೆಕ್ಟರ್ ಗಣೇಶ ಪ್ರಸಾದ್ ಶೆಟ್ಟಿ ಮತ್ತು ಹಿತ್ತಾಳೆ ಹೊದಿಕೆಯ ದ್ವಾರ ಬಾಗಿಲನ್ನು ಯಡಾಡಿ-ಮತ್ಯಾಡಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಪ್ರಕಾಶ ಶೆಟ್ಟಿ ಉದ್ಘಾಟಿಸಿದರು. ದೇವಸ್ಥಾನದ ಅಧ್ಯಕ್ಷ ರಾಧಾಕೃಷ್ಣ ಯು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಚಂದ್ರ ಮರಕಾಲ, ಸ್ತ್ರೀರೋಗ ತಜ್ಞೆ ಡಾ. ಪ್ರಮೀಳಾ ನಾಯಕ್, ದೇವಸ್ಥಾನದ ಗೌರವ ಅಧ್ಯಕ್ಷ ಡಾ.ನಾಗೇಶ್ ಮೊದಲಾದವರು ಉಪಸ್ಥಿತರಿದ್ದರು. ಕಾರ್ಯದರ್ಶಿ ಕಿಶೋರ್ ಬಲ್ಲಾಳ್ ಕಾರ್ಯಕ್ರಮ ನಿರ್ವಹಿಸಿದರು.

ಶೇರಾ ಶಾಲೆಯಲ್ಲಿ ಮೆಟ್ರಿಕ್ ಮೇಳ, ಸಮುದಾಯದತ್ತ ಶಾಲೆ





ಬಂಟ್ವಾಳ: ತಾಲೂಕಿನಕಡೇಶಿವಾಲಯ ಗ್ರಾಮದ ಶೇರಾ ದ.ಕ.ಜಿ.ಪಂ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೆಟ್ರಿಕ್ ಮೇಳ, ಹಾಗೂ ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆಯಿತು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು. ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ವ್ಯವಹಾರದ ಪರಿಕಲ್ಪನೆಯನ್ನು ಮೂಡಿಸುವ ನಿಟ್ಟಿನಲ್ಲಿ ಮೆಟ್ರಿಕ್ ಮೇಳವನ್ನು ಆಯೋಜಿಸಲಾಯಿತು.

ಮಕ್ಕಳ ಪೋಷಕರು, ಉತ್ಸಾಹದಿಂದ ಭಾಗವಹಿಸಿ ಮಕ್ಕಳು ವ್ಯಾಪಾರಕ್ಕೆ ಇಟ್ಟ ತಿಂಡಿ ತಿನಿಸು, ತರಕಾರಿ ಗಳನ್ನು ಖರೀದಿಸಿ ಮಕ್ಕಳ ವ್ಯಾಪಾರಕ್ಕೆ ಪ್ರೋತ್ಸಾಹಿಸಿದರು.

ಗೋಪಾಲಗೌಡ ಕೆ. ನಿವೃತ್ತ ಸಹ ಶಿಕ್ಷಕರು ಶೇರಾ, ಉದ್ಯಮಿ ಗಂಗಾಧರ್ ಶೇರಾ, ಕಡೇಶಿವಾಲಯ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸುರೇಶ್ ಬನಾರಿ, ಶಾಲಾಭಿವೃದ್ಧಿ ಸಮಿತಿ ಸದಸ್ಯರುಗಳು, ಮಕ್ಕಳ ಪೋಷಕರು, ಹಿರಿಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶಾಲಾ ಪ್ರಭಾರ ಮುಖ್ಯ ಶಿಕ್ಷಕಿ ಅನಿತಾ ಕುಮಾರಿ ಸ್ವಾಗತಿಸಿ, ಶಿಕ್ಷಕಿ ಅಭಿಜ್ಞಾ ವಂದಿಸಿದರು. ಸಹಶಿಕ್ಷಕಿ ಜೋಸ್ನಾ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿಯರಾದ ಸುರಕ್ಷಾ, ಸುಮಲತಾ ಸಹಕರಿಸಿದರು.

ಸಂತ ಫಿಲೋಮಿನಾ ಕಾಲೇಜಿನಲ್ಲಿ ರಾಜ್ಯ ಮಟ್ಟದ ವಾಣಿಜ್ಯ ಉತ್ಸವ



ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ(ಸ್ವಾಯತ್ತ) ವಾಣಿಜ್ಯ ವಿಭಾಗದ ವತಿಯಿಂದ ಕಾಲೇಜಿನ ಸಿಲ್ವರ್ ಜುಬಿಲಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ 'ಎಂಪ್ರೆಸಾ 2ಕೆ26–ವಿಷನ್ ಟು ವಿಕ್ಟರಿ' ಎಂಬ ರಾಜ್ಯ ಮಟ್ಟದ ಅಂತರ್ ಕಾಲೇಜ್ ವಾಣಿಜ್ಯ ಹಬ್ಬದಲ್ಲಿ ಪುತ್ತೂರಿನ ವಿವೇಕಾನಂದ ಕಾಲೇಜ್ ಚಾಂಪಿಯನ್‌ಶಿಪ್ ಗೆದ್ದುಕೊಂಡಿತು. ಸುಬ್ರಹ್ಮಣ್ಯದ ಶ್ರೀ ಸುಬ್ರಹ್ಮಣ್ಯೇಶ್ವರ ಕಾಲೇಜ್ ರನ್ನರ್ಸ್ ಅಪ್ ಆಗಿ ಮೂಡಿ ಬಂತು.

ಕಾರ್ಗಿಲ್ ಬಿಸಿನೆಸ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್‌ನ ಕಾಂಪ್ಲೈಯನ್ಸ್ ಅನಲಿಸ್ಟ್ ಪವನಾ ಎ.ಜಿ. ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಧ್ಯಕ್ಷತೆ ವಹಿಸಿ ಮಾತಾನಾಡಿದ ಕಾಲೇಜಿನ ಪ್ರಾಂಶುಪಾಲ ಧರ್ಮಗುರು ವಂ. ಡಾ. ಆಂಟೋನಿ ಪ್ರಕಾಶ್ ಮೊಂತೆರೊ, ವಾಣಿಜ್ಯ ಶಿಕ್ಷಣದಲ್ಲಿ ನಾವೀನ್ಯತೆ ಮತ್ತು ಪ್ರಾಯೋಗಿಕ ಅನುಭವದ ಪ್ರಾಮುಖ್ಯತೆಯನ್ನು ಹೇಳಿದರು.

ಫೆಸ್ಟ್ ಸಂಯೋಜಕಿ ಪ್ರತೀಕ್ಷಾ ಶೆಟ್ಟಿ ಗಣ್ಯರನ್ನು ಪರಿಚಯಿಸಿದರು. ವಾಣಿಜ್ಯ ವಿಭಾಗದ ಮುಖ್ಯಸ್ಥ ಡೀನ್ ಪ್ರೊ. ಪ್ರೇಮಲತಾ ಕೆ. ಸ್ವಾಗತಿಸಿ, ಸಿಬ್ಬಂದಿ ಸಂಯೋಜಕ ಪ್ರವೀಣ ಡಿ. ವಂದಿಸಿದರು. ವಾಣಿಜ್ಯ ವಿಭಾಗದ ವಿದ್ಯಾರ್ಥಿ ಮುರ್ಝಾಮಿಲ್ ಕಾರ್ಯಕ್ರಮ ನಿರ್ವಹಿಸಿದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಜನಪ್ರಿಯ ಆಸ್ಪತ್ರೆಯ ಪಿಆರ್‌ಒ ಭಾತೀಷ ಅಲಕೆಮಜಲು ಮುಖ್ಯ ಅತಿಥಿಯಾಗಿ ಭಾಗವಹಿಸಿ, ಸಂಘಟಕರ ಕಾರ್ಯಕ್ರಮದ ಆಯೋಜನೆ ಮತ್ತು ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಭಾಗವಹಿಸುವಿಕೆಯನ್ನು ಶ್ಲಾಘಿಸಿದರು.

ನಿಧಾ ರೆಹಮತ್ ಗಣ್ಯರನ್ನು ಪರಿಚಯಿಸಿದರು. ಫೆಸ್ಟ್ ಸಂಯೋಜಕ ಅಬ್ದುಲ್ ಅಹದ್ ಸ್ವಾಗತಿಸಿ, ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಸ್ವಾತಿ ಶೆಟ್ಟಿ ಡಿ. ವಂದಿಸಿದರು. ಮೆಹರೂಫಾ ನಿರ್ವಹಿಸಿದರು.

ರಾಜ್ಯ ಮಟ್ಟದ ಅಂತರ್‌ಕಾಲೇಜ್ ಸಾಂಸ್ಕೃತಿಕ ಉತ್ಸವ 'ಆಚಾರ್ಯ ಹಬ್ಬ'ದಲ್ಲಿ ಚಿನ್ನ, ಬೆಳ್ಳಿ ಪದಕ

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಅಭೂತಪೂರ್ವ ಸಾಧನೆ

ಪುತ್ತೂರು: ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಜಿಯ ವಿದ್ಯಾರ್ಥಿಗಳು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ರಾಜ್ಯ ಮಟ್ಟದ ಅಂತರ್‌ಕಾಲೇಜು ಸಾಂಸ್ಕೃತಿಕ ಉತ್ಸವದಲ್ಲಿ ಒಂದು ಚಿನ್ನ, ಎರಡು ಬೆಳ್ಳಿ ಹಾಗೂ ಒಂದು ಕಂಚಿನ ಪದಕವನ್ನು ಗೆದ್ದುಕೊಂಡಿದ್ದಾರೆ.

ಬೆಂಗಳೂರಿನ ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನಡೆದ 'ಆಚಾರ್ಯ ಹಬ್ಬ-2026' ಸ್ಪರ್ಧೆಯಲ್ಲಿ ಕಾಲೇಜಿನ ಭೂಮಿಕಾ ಕಲಾ ಸಂಘದ ವಿದ್ಯಾರ್ಥಿಗಳ ತಂಡವು ತನ್ನ ಅಪೂರ್ವ ಪ್ರತಿಭೆಯನ್ನು ಪ್ರದರ್ಶಿಸಿ ವಿಶೇಷ ಸಾಧನೆಯನ್ನು ಮಾಡಿದೆ. ರಾಜ್ಯಾದ್ಯಂತ 100ಕ್ಕೂ ಹೆಚ್ಚು ಇಂಜಿನಿಯರಿಂಗ್ ಕಾಲೇಜ್‌ಗಳ ಕಲಾ ತಂಡಗಳ 2500ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು. ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಿಂದ 25 ವಿದ್ಯಾರ್ಥಿಗಳು 18 ಬಗೆಯ ವೈವಿಧ್ಯಮಯ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದು, ವಿಶೇಷ ಪ್ರದರ್ಶನದೊಂದಿಗೆ ತೀವ್ರ ಪೈಪೋಟಿಯನ್ನು ನೀಡಿದ್ದರು.



ಕಾಲೇಜಿನ ತೃತೀಯ ವರ್ಷದ ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿ ಮನ್ವಿತ್ ಎನ್. ಗೌಡ ಸ್ಪಾಟ್ ಪೈಂಟಿಂಗ್‌ನಲ್ಲಿ ಚಿನ್ನದ ಪದಕ ಹಾಗೂ ವ್ಯಂಗ್ಯಚಿತ್ರ ವಿಭಾಗದಲ್ಲಿ ಬೆಳ್ಳಿಯ ಪದಕವನ್ನು ಗೆದ್ದುಕೊಂಡಿದ್ದಾರೆ. ತಾಳ ವಾದ್ಯ ಸ್ಪರ್ಧೆಯಲ್ಲಿ ದ್ವಿತೀಯ ವರ್ಷದ ಕಂಪ್ಯೂಟರ್ ಸೈನ್ಸ್ ವಿಭಾಗದ ತನ್ಮಯಿ ಯು. ಬೆಳ್ಳಿಯ ಪದಕ ಹಾಗೂ ಶಾಸ್ತ್ರೀಯ ನೃತ್ಯ ವಿಭಾಗದಲ್ಲಿ ತೃತೀಯ ವರ್ಷದ ಇಲೆಕ್ಟ್ರಾನಿಕ್ಸ್ ವಿಭಾಗದ ವಿಭಾಶ್ರೀ ವಿ. ಗೌಡ ಕಂಚಿನ ಪದಕವನ್ನು ಗೆದ್ದುಕೊಂಡಿದ್ದಾರೆ.

ಕಾಲೇಜಿನ ಸಾಂಸ್ಕೃತಿಕ ವೇದಿಕೆ ಭೂಮಿಕಾ ಕಲಾ ಸಂಘದ ನಿರ್ದೇಶಕ ಪ್ರೊ. ಸುದರ್ಶನ್ ಎಂ.ಎಲ್. ಹಾಗೂ ಸಹನಿರ್ದೇಶಕಿ ಡಾ. ಶ್ವೇತಾಂಬಿಕಾ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಈ ಸಾಧನೆಯನ್ನು ಮಾಡಿದ್ದಾರೆ ಎಂದು ಪ್ರಾಂಶುಪಾಲ ಡಾ. ಮಹೇಶ್‌ಪ್ರಸನ್ನ ಕೆ. ತಿಳಿಸಿದ್ದಾರೆ.

ಗೊಂಬೆಯಾಟ ಅಕಾಡೆಮಿಯ 'ಪ್ರತಿಭೆ ನಿಮ್ಮದು, ವೇದಿಕೆ ನಮ್ಮದು'

ಮಹಿಳಾ ಯಕ್ಷಗಾನ ತಾಳಮದ್ದಳೆ

ಕುಂದಾಪುರ: ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ 'ಪ್ರತಿಭೆ ನಿಮ್ಮದು, ವೇದಿಕೆ ನಮ್ಮದು' ಸರಣಿಯಡಿ ಸತತ 118ನೇ ತಿಂಗಳ ಕಾರ್ಯಕ್ರಮ ಮತ್ತು ಮಹಿಳಾ ಯಕ್ಷಗಾನ ತಾಳಮದ್ದಳೆ ಭಾನುವಾರ ಜರುಗಿತು.

ವೈದ್ಯ ಡಾ. ಕಾಶೀನಾಥ್ ಪೈ ಗಂಗೊಳ್ಳಿ ಅಧ್ಯಕ್ಷತೆ ವಹಿಸಿದ್ದರು. ರಸರಂಗ ಕೋಟ ಇದರ ಮುಖ್ಯಸ್ಥೆ ಸುಧಾ ಮಣೂರು, ಶ್ರೀ ಅಮೃತೇಶ್ವರಿ ಮೇಳದ ಪ್ರದಾನ ಭಾಗವತ ರಾಘವೇಂದ್ರ ಮಯ್ಯ, ಶಿಕ್ಷಕಿ ಮಾಧುರಿ ಶ್ರೀರಾಮ್, ಕರ್ನಾಟಕ ಬ್ಯಾಂಕ್ ನಿವೃತ್ತ ಅಧಿಕಾರಿ ಜನಾರ್ದನ ಹಂದೆ ಮಂಗಳೂರು ಹಾಗೂ ಅಕಾಡೆಮಿ ಅಧ್ಯಕ್ಷ ಭಾಸ್ಕರ್ ಕೊಗ್ಗ ಕಾಮತ್ ಉಪಸ್ಥಿತರಿದ್ದರು.

ಸುಧಾ ಮಣೂರು ಹಾಗೂ ಮಾಧುರಿ ಶ್ರೀರಾಮ್ ಅವರನ್ನು ಅಕಾಡೆಮಿಯ ವತಿಯಿಂದ ಸಮ್ಮಾನಿಸಲಾಯಿತು. ರಾಜೇಂದ್ರ ಪೈ ವಂದಿಸಿದರು. ತದನಂತರ ರಸರಂಗ ಕೋಟ ಇದರ ಮಹಿಳಾ ಸದಸ್ಯೆಯರಿಂದ ನಡೆದ 'ಶಮಂತಕ ರತ್ನ' ಯಕ್ಷಗಾನ ತಾಳ ಮದ್ದಳೆ ನೆರೆದ ಪ್ರೇಕ್ಷಕರನ್ನು ರಂಜಿಸಿತು.



ಸುತ್ತ ಮುತ್ತ

ವಿವಿಧೆಡೆ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ

ಕುಂದಾಪುರ: ಇಲ್ಲಿನ ವಿಶ್ವನಾಥ ಯುವಕ ಮಂಡಲ ಗಂಗೊಳ್ಳಿ ಹಾಗೂ ಇಂದುಧರ ಯುವಕ ಮಂಡಲ ಗಂಗೊಳ್ಳಿ ಇವರ ಸಹಯೋಗದೊಂದಿಗೆ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಪ್ರಯುಕ್ತ 'ಭೀಮ ವಂದನೆ' ಕಾರ್ಯಕ್ರಮ ಶ್ರೀ ಇಂದುಧರ ದೇವಸ್ಥಾನ ಗಂಗೊಳ್ಳಿ ಇದರ ಸಭಾಂಗಣದಲ್ಲಿ ಮಂಗಳವಾರ ನಡೆಯಿತು. ದೇವಸ್ಥಾನದ ಅಧ್ಯಕ್ಷ ಗುರುರಾಜ್ ಗಂಗೊಳ್ಳಿ ಅಧ್ಯಕ್ಷತೆ ವಹಿಸಿದ್ದರು. ವಿಶ್ವ ಹಿಂದೂ ಪರಿಷತ್ ಬಜರಂಗದಳ ಸದಸ್ಯ ಶ್ರೀಧರ ಗಂಗೊಳ್ಳಿ ಕಾರ್ಯಕ್ರಮ ಉದ್ಘಾಟಿಸಿದರು. ದೇವಸ್ಥಾನದ ಕಾರ್ಯದರ್ಶಿ ವರದರಾಜ್ ಜಿ.ಟಿ. ಸ್ವಾಗತಿಸಿ, ಕೃಷ್ಣ ಜಿ.ಟಿ. ನಿರೂಪಿಸಿದರು. ಅಭಿನಂದನ್ ವಂದಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಾಲೂಕು ಸಮಿತಿ ಕುಂದಾಪುರ ವತಿಯಿಂದ ಕುಂದಾಪುರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಡಾ.ಬಿ.ಆರ್.ಅಂಬೇಡ್ಕರ್ ಜನ್ಮ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಹಿಂದುಳಿದ ಸಮಾಜದ ಮುಖಂಡ ಅಶೋಕ ಪೂಜಾರಿ ಬೀಜಾಡಿ ಭಾಗವಹಿಸಿ, ಮಾತನಾಡಿದರು. ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಇದರ ಪ್ರಧಾನ ಸಂಚಾಲಕ ಕೆ.ಸಿ ರಾಜು ಬೆಟ್ಟಿನಮನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಮುಖಂಡ ಚಂದ್ರಶೇಖರ ಡಾ.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು. ಕುಂದಾಪುರ ನಗರ ಯೋಜನ ಪ್ರಾಧಿಕಾರದ ಅಧ್ಯಕ್ಷ ವಿನೋದ್ ಕ್ರಾಸ್ತ, ಗ್ರಾಮ ಪಂಚಾಯತ್ ನೌಕರರ ಸಂಘದ ಉಪಾಧ್ಯಕ್ಷ ನಾರಾಯಣ ಬೀಜಾಡಿ, ವಿಮಾ ನೌಕರರ ಸಂಘದ ಭೋಜರಾಜ ಕೆ., ಸತೀಶ ಕಂಚುಗೋಡು ಉಪಸ್ಥಿತರಿದ್ದರು. ತಾಲೂಕು ಸಮಿತಿ ಕೋಶಾಧಿಕಾರಿ ಚಂದ್ರ ಕೊರ್ಗಿ ಸ್ವಾಗತಿಸಿ, ಸಮೀಕ್ಷಾ ಅಂಬೇಡ್ಕರ್ ಗೀತೆ ಹಾಡಿದರು. ರವಿ ಬನ್ನಾಡಿ ಕಾರ್ಯಕ್ರಮ ನಿರ್ವಹಿಸಿದರು. ಉದಯ ಕೊಳೂರು ವಂದಿಸಿದರು.

ಗಂಗೊಳ್ಳಿ ರಥಬೀದಿ ಶಾಲಾ ವಠಾರ

ಕುಂದಾಪುರ ಇಲ್ಲಿನ ಅಂಗನವಾಡಿ ಕೇಂದ್ರ ದಾಕುಹಿತ್ಲು ಗಂಗೊಳ್ಳಿ ಮತ್ತು ಕಲಾಶ್ರೀ ಶಿಕ್ಷಣ ಪ್ರೇಮಿ ಬಳಗ ಗಂಗೊಳ್ಳಿ ಇದರ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಗಂಗೊಳ್ಳಿ ರಥಬೀದಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಠಾರದಲ್ಲಿ ಮಂಗಳವಾರ ನಡೆಯಿತು. ಉಡುಪಿ ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘದ ಅಧ್ಯಕ್ಷೆ ಫಿಲೋಮಿನಾ ಫೆರ್ನಾಂಡಿಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗಂಗೊಳ್ಳಿ ರಥಬೀದಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಚಂದ್ರಕಲಾ ಅವರು ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಅಧಿಕ ಅಂಕ ಗಳಿಸಿದ ಸ್ಫೂರ್ತಿ ಮತ್ತು ರಮ್ಯ ಅವರನ್ನು ಗೌರವಿಸಲಾಯಿತು. ಗಂಗೊಳ್ಳಿ ಬಿಲ್ಲವ ಸೇವಾ ಸಂಘದ ಅಧ್ಯಕ್ಷ ಗೋಪಾಲ ಬಿಲ್ಲವ, ಡಾ.ಕಲಾಶ್ರೀ, ಜಿ.ಈಶ್ವರ ಮೊದಲಾದವರು ಉಪಸ್ಥಿತರಿದ್ದರು. ಸುಮಿತ್ರಾ ಸ್ವಾಗತಿಸಿದರು. ರೇಖಾ ಖಾರ್ವಿ ವಂದಿಸಿದರು.

ಕುಪ್ಪೆಪದವು: ಅಂಬೇಡ್ಕರ್ ಜಯಂತಿ, ಕಾನೂನು ಮಾಹಿತಿ

ಕೈಕಂಬ: ಆಟೋ ರಿಕ್ಷಾ ಚಾಲಕರ ಸಂಘ (ರಿ) ಕುಪ್ಪೆಪದವು ಇದರ ಬೆಳ್ಳಿಹಬ್ಬ ಸಂಭ್ರಮದ ಅಂಗವಾಗಿ ಶಿಕ್ಷಣ, ಮತ್ತು ಕಾನೂನು ಮಾಹಿತಿ ಕಾರ್ಯಕ್ರಮವು ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕುಪ್ಪೆಪದವಿನಲ್ಲಿ ನಡೆಯಿತು. ಮಂಗಳೂರಿನ ನ್ಯಾಯವಾದಿ ಚರಣ್ ಶೆಟ್ಟಿ ಭಾಗವಹಿಸಿ, ಮಾತನಾಡಿದರು. ಸಂಘದ ಅಧ್ಯಕ್ಷ ವಸಂತ ಆಚಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಂಗಳೂರಿನ ಇನ್ಸ್ಟಿಟ್ಯೂಟ್ ಆಫ್ ಇಂಡಿವಿಜುವಲ್ ಡವಲಪ್ಮೆಂಟ್ ನ ನಿರ್ದೇಶಕ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತುದಾರ ಪ್ರೊ. ರೊನಾಲ್ಡ್ ಪಿಂಟೋ, ಮುತ್ತೂರು ಗ್ರಾ.ಪಂ.ನ ನಿಕಟಪೂರ್ವ ಅಧ್ಯಕ್ಷ ಪ್ರವೀಣ್ ಆಳ್ವ ಗುಂಡ್ಯ, ನಿವೃತ್ತ ದೈಹಿಕ ಶಿಕ್ಷಕ ಭೋಜರಾಜ್ ಜೈನ್, ಸಂಘದ ಉಪಾಧ್ಯಕ್ಷ ಇದಿನಬ್ಬ ಪೂವಣಿಬೆಟ್ಟು, ಲಿಂಗಪ್ಪ ಕೋಟ್ಯಾನ್, ಮುಖಂಡ ಸದಾಶಿವ ದಾಸ್, ರಮೇಶ್ ಮಲ್ಲಿ, ಸಂಘದ ಪದಾಧಿಕಾರಿಗಳು, ರಿಕ್ಷಾ ಚಾಲಕರು, ಮಾಲಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಇದ್ದರು. ವಸಂತ ಆಚಾರಿ ಸ್ವಾಗತಿಸಿದರು. ರವಿ ಅಟ್ಟೆ ಪದವು ನಿರೂಪಿಸಿ, ಜಗದೀಶ್ ದುರ್ಗಾಕೋಡಿ ವಂದಿಸಿದರು.

ಸುಳ್ಯ ಕಾಂಗ್ರೆಸ್‌ನಿಂದ ಅಂಬೇಡ್ಕರ್ ಜಯಂತಿ

ಸುಳ್ಯ: ಸುಳ್ಯ ಬ್ಲಾಕ್ ಕಾಂಗ್ರೆಸ್ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ 135ನೇ ಜಯಂತಿ ಆಚರಣೆಯನ್ನು ಸುಳ್ಯದಲ್ಲಿ ನಿರ್ಮಾಣ ಕಾರ್ಯ ಕುಂಠಿತ ಗೊಂಡು ನೆನೆಗುದಿಗೆ ಬಿದ್ದಿರುವ ಅಂಬೇಡ್ಕರ್ ಭವನದ ಬಳಿಯಲ್ಲಿ ಆಡಳಿತಾರೂಡ ಕಾಂಗ್ರೆಸ್ ಪಕ್ಷದ ವತಿಯಿಂದ ನಡೆಯಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ಅಧ್ಯಕ್ಷತೆ ವಹಿಸಿದರು. ದ.ಕ. ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ ಮಾತನಾಡಿದರು. ಕಾಯರ್ತೋಡಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಎಂ. ವೆಂಕಪ್ಪ ಗೌಡ ಮತ್ತು ಜಿ. ಕೃಷ್ಣಪ್ಪ ಮಾತನಾಡಿದರು. ಯುವ ಕಾಂಗ್ರೆಸ್ ಅಧ್ಯಕ್ಷ ಚೇತನ್ ಕಜೆಗದ್ದೆ ಸಂವಿಧಾನ ಪೀಠಿಕೆ ಬೋಧಿಸಿದರು. ಕಾಂಗ್ರೆಸ್ ಮುಖಂಡರಾದ ಪಿ.ಎಸ್. ಗಂಗಾಧರ್, ಕೆ. ಗೋಕುಲ್‌ದಾಸ್, ನಂದರಾಜ್ ಸಂಕೇಶ್, ಶಾಫಿ ಕುತ್ತಮೊಟ್ಟೆ, ಶಾಹುಲ್ ಹಮೀದ್ ಕುತ್ತಮೊಟ್ಟೆ, ಶಶಿಧರ್ ಎಂ.ಜೆ., ರಾಜು ಪಂಡಿತ್, ಜಿ.ಕೆ. ಹಮೀದ್, ಎಸ್.ಕೆ. ಹನೀಫ್, ರಂಜಿತ್ ರೈ ಮೇನಾಲ ಉಪಸ್ಥಿತರಿದ್ದರು. ಸೂಡ ಅಧ್ಯಕ್ಷ ಕೆ.ಎಂ. ಮುಸ್ತಫಾ ಸ್ವಾಗತಿಸಿ, ಎಸ್‌ಸಿ ಘಟಕ ಅಧ್ಯಕ್ಷ ಮಹೇಶ್ ಬೆಳ್ಳಾರ್ಕರ್ ವಂದಿಸಿದರು. ರಾಜೀವ್ ಗಾಂಧಿ ಪಂ. ರಾಜ್ ಸಂಘಟನೆ ಜಿಲ್ಲಾ ಕಾರ್ಯದರ್ಶಿ ಭವಾನಿಶಂಕರ್ ಕಲ್ಮಡ್ಕ ನಿರ್ವಹಿಸಿದರು.

ಕಾಪಿಕಾಡು ಉಮಾಮಹೇಶ್ವರಿ ಕಬಡ್ಡಿ ಅಕಾಡೆಮಿಯ ಹತ್ತನೇ ವಾರ್ಷಿಕ ಮಹಾಸಭೆ | ಸಾಧಕರಿಗೆ ಸನ್ಮಾನ

ಬಡ ಕ್ರೀಡಾಪಟುಗಳ ಏಳಿಗೆಗಾಗಿ ಶ್ರಮಿಸಿ: ಡಾ. ಹೊನ್ನಪ್ಪ ಗೌಡ

ಉಳ್ಳಾಲ: ನಮ್ಮಲ್ಲಿ ಹುದುಗಿರುವ ಪ್ರತಿಭೆಯನ್ನ ಅಡಗಿಸಿಡಲು ಎಂದಿಗೂ ಸಾಧ್ಯವಿಲ್ಲ, ರಾಜಕೀಯ ಎಂಬುವುದು ಎಲ್ಲಾ ಕ್ಷೇತ್ರದಲ್ಲೂ ಇದೆ. ಆದನ್ನೆಲ್ಲ ಭೇದಿಸಿ ನಿಂತರೆ ಮಾತ್ರ ಸಾಧನೆಗೈಯಲು ಸಾಧ್ಯ. ಬಡ ಕ್ರೀಡಾಪಟುಗಳ ಏಳಿಗೆಗಾಗಿ ನಿಸ್ವಾರ್ಥ ಸೇವೆಗೈಯುತ್ತಿರುವ ಉಮಾಮಹೇಶ್ವರಿ ಕಬಡ್ಡಿ ಅಕಾಡೆಮಿಯ ಕಾರ್ಯ ಶ್ಲಾಘನೀಯ. ನಾವೆಲ್ಲರೂ ಒಟ್ಟಾಗಿ ಉತ್ತಮ ಆಟಗಾರರಿಗೆ ಅವಕಾಶಗಳನ್ನು ಕಲ್ಪಿಸಿ ಕೊಡಬೇಕಿದೆಯೆಂದು ಭಾರತ ಕಬಡ್ಡಿ ತಂಡದ ಮಾಜಿ ನಾಯಕರು, ಅರ್ಜುನ ಪ್ರಶಸ್ತಿ ವಿಜೇತರಾದ ಡಾ. ಹೊನ್ನಪ್ಪ ಗೌಡ ಅನಿಸಿಕೆ ವ್ಯಕ್ತಪಡಿಸಿದರು.

ತೊಕ್ಕೊಟ್ಟು ಕಾಪಿಕಾಡುವಿನ ಶ್ರೀ ಉಮಾಮಹೇಶ್ವರಿ ಕ್ಷೇತ್ರದಲ್ಲಿ ನಡೆದ ಶ್ರೀ ಉಮಾಮಹೇಶ್ವರಿ ಕಬಡ್ಡಿ ಅಕಾಡೆಮಿಯ 10ನೇ ವರುಷದ ಮಹಾಸಭೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪ್ಯಾರಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್‌ನ ನೂತನ ಸಮಿತಿಯ ಆಯ್ಕೆ ಪ್ರಕ್ರಿಯೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಹೊನ್ನಪ್ಪ ಗೌಡ ಅವರನ್ನ ಉಮಾಮಹೇಶ್ವರಿ ಕಬಡ್ಡಿ ಅಕಾಡೆಮಿ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು. ಕಬಡ್ಡಿಯಲ್ಲಿ ಸಾಧನೆಗೈದ ಯುವ ಪ್ರತಿಭೆಗಳಾದ ಯಶರಾಜ್, ಫಿಲಿಪ್ ಜಾರ್ಜ್, ನಾಗೇಶ್ ಎಚ್.ಕೆ ಅವರನ್ನ ಸನ್ಮಾನಿಸಲಾಯಿತು.



ಉಮಾಮಹೇಶ್ವರಿ ಕಬಡ್ಡಿ ಅಕಾಡೆಮಿಯ ಅಧ್ಯಕ್ಷ ಎ.ಜೆ. ಶೇಖರ್ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷ ಪ್ರೇಮನಾಥ್ ಉಳ್ಳಾಲ್, ಪ್ರಧಾನ ಕಾರ್ಯದರ್ಶಿ ಹರೀಶ್ಚಂದ್ರ, ಉಪಾಧ್ಯಕ್ಷ ಸುರೇಶ್ ಯೆಯ್ಯಾಡಿ,ಸಂಯೋಜಕರಾದ ಪುತ್ತು ಬಾವ, ವಕೀಲ ಮೋಹನ್ ದಾಸ್ ರೈ, ಪ್ರಸನ್ನ ಕುಮಾರ್ ಶೆಟ್ಟಿ ನವೀನ್ ಆಳ್ವ ಮೊದಲಾದವರು ಉಪಸ್ಥಿತರಿದ್ದರು. ಅಕಾಡೆಮಿಯ ಸಂಯೋಜಕ ಗೋಪಿನಾಥ್ ಕಾಪಿಕಾಡು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಭಗವಾನ್ ದಾಸ್ ಸ್ವಾಗತಿಸಿ, ನಿರೂಪಿಸಿದರು.

> ಹದಿಮೂರರನೇ ವಯಸ್ಸಲ್ಲಿ ರಾಷ್ಟ್ರೀಯ ಕಬಡ್ಡಿ ಸಬ್ ಜೂನಿಯರ್ ಪಂದ್ಯಾವಳಿ ಪ್ರತಿನಿಧಿಸಲು ಮಂಗಳೂರಲ್ಲಿ ನಡೆದಿದ್ದ ತರಬೇತಿ ಶಿಬಿರದಲ್ಲಿ ನಾನು ಪಾಲ್ಗೊಂಡಿದ್ದೆ. ಆ ಮೂಲಕ ಇಂದು ನಾನು ರಾಷ್ಟ್ರಪತಿ ಭವನಕ್ಕೆ ತೆರಳಿ ರಾಷ್ಟ್ರ ಪ್ರಶಸ್ತಿ ಪಡೆಯುವ ಮಟ್ಟಕ್ಕೆ ಬೆಳೆಯಲು ಈ ಜಿಲ್ಲೆಯೂ ಕಾರಣವಾಗಿದೆ. ಕಬಡ್ಡಿಯಲ್ಲಿ ಕ್ರೀಡಾಪುಟವಿನ ದೇಹ ಸಾಮರ್ಥ್ಯಕ್ಕಿಂತ ಧೈರ್ಯ ಅಗತ್ಯ. ಇಂದು ಬಹುತೇಕ ಕ್ರೀಡಾಪಟುಗಳು ಡ್ರಗ್ಸ್ ಸಿರಿಂಜ್ ಗಳನ್ನು ಪಡೆದು ತಮ್ಮ ಜೀವನವನ್ನೇ ಹಾಳು ಮಾಡುತ್ತಿದ್ದಾರೆ. ನೈಸರ್ಗಿಕವಾದ ಆಹಾರ ಸೇವಿಸಿ ಕಟ್ಟು ಮಸ್ತಾಗಿರಲು ಸಾಧ್ಯವಿದೆ.
>
> ● ಹೊನ್ನಪ್ಪ ಗೌಡ, ಭಾರತ ಕಬಡ್ಡಿ ತಂಡದ ಮಾಜಿ ನಾಯಕ

> ಕಳೆದ 10 ವರುಷಗಳಲ್ಲಿ ಅಕಾಡೆಮಿಯ ಮಕ್ಕಳಲ್ಲದೇ ಅದೆಷ್ಟೋ ಕ್ರೀಡಾ ಪಟುಗಳಿಗೆ ಆರ್ಥಿಕ ಪ್ರೋತ್ಸಾಹ ಮತ್ತು ವೈದ್ಯಕೀಯ ಚಿಕಿತ್ಸಾ ವೆಚ್ಚಗಳನ್ನು ಭರಿಸಲಾಗಿದೆ. ಕೇಂದ್ರದ ಮಾನ್ಯತೆಯ ಜಿಲ್ಲಾ ಪ್ಯಾರಾ ಅಮೆಚೂರು ಕಬಡ್ಡಿ ಅಸೋಸಿಯೇಷನ್ ಸಮಿತಿ ರಚಿಸುವ ಅವಕಾಶ ನಮಗೆ ಸಿಕ್ಕಿರುವುದೇ ಭಾಗ್ಯವಾಗಿದೆ. ಈ ಮೂಲಕ ಜಿಲ್ಲೆಯ ವಿಕಲಚೇತನ ಮಕ್ಕಳ ಭವಿಷ್ಯ ರೂಪಿಸಿದಂತಾಗುವುದು.ವಿಕಲಚೇತನ ಮಕ್ಕಳಿಗೆ ನಮ್ಮ ಅಕಾಡೆಮಿಯಲ್ಲೇ ತರಬೇತಿ ನೀಡುವ ಕಾರ್ಯ ನಡೆಸಲಿದ್ದೇವೆ. ಇದೇ ಸೆಪ್ಟೆಂಬರ್ ತಿಂಗಳಲ್ಲಿ ಉಳ್ಳಾಲದಲ್ಲಿ ಪ್ಯಾರಾ ಕಬಡ್ಡಿ ಫೆಡರೇಷನ್ ಕಪ್ ಆಯೋಜಿಸಲಾಗಿದೆ.
>
> ● ಗೋಪಿನಾಥ್ ಕಾಪಿಕಾಡು

ಬಸ್ ನಿಲ್ದಾಣ, ಹೈಮಾಸ್ಟ್ ದೀಪ ಉದ್ಘಾಟನೆ; ಕಾಮಗಾರಿಗೆ ಶಿಲಾನ್ಯಾಸ



ಕಿನ್ನಿಗೋಳಿ: ಇಲ್ಲಿನ ಪಟ್ಟಣ ಪಂಚಾಯತ್ ವ್ಯಾಪ್ತಿಯ ಕಟೀಲು ಮಂಜ ಬಳಿ ಬಸ್ ನಿಲ್ದಾಣ ಉದ್ಘಾಟನೆ, ಕೊಡೆತ್ತೂರು ಅರಸು ಕುಂಜರಾಯ ದೈವಸ್ಥಾನ ಬಳಿ ಹೈಮಾಸ್ಟ್ ದೀಪ ಉದ್ಘಾಟನೆ ಹಾಗೂ ಕೊಡೆತ್ತೂರು ಕಟ್ಟಪುಣಿ ಬಳಿ ರೂ. 11 ಲಕ್ಷದಲ್ಲಿ ಕಾಲು ಸಂಕ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಶಾಸಕ ಉಮಾನಾಥ ಕೋಟ್ಯಾನ್, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ, ಉಪಾಧ್ಯಕ್ಷೆ ಪದ್ಮಲತಾ, ಸದಸ್ಯರಾದ ದಾಮೋದರ ಶೆಟ್ಟಿ, ಶೈಲೇಶ್ ಅಂಚನ್, ಪ್ರಣೆಕ್, ಮಲ್ಲಿಕಾ, ಪ್ರಕಾಶ್ ಆಚಾರ್ಯ ಈಶ್ವರ ಕಟೀಲು ಕೇಶವ ಕರ್ಕೇರ, ಭುವನ ಉಡುಪ ಕಿಶೋರ್ ಶೆಟ್ಟಿ ಚಂದ್ರಶೇಖರಬರ್ಕೆ, ಜಯರಾಮಮುಕ್ಕಲ್ಡಿ, ದೇವಿ ಪ್ರಸಾದ್ ಶೆಟ್ಟಿ ಅಭಿಲಾಷ್ ಶೆಟ್ಟಿ ಸಹಿತ ಮೊದಲಾದವರು ಉಪಸ್ಥಿತರಿದ್ದರು.

ಕರ್ನಾಟಕ ಹಿರಿಯರ ಸೇವಾ ಪ್ರತಿಷ್ಠಾನದ ಕೇಂದ್ರ ಸಮಿತಿಯ ಸಭೆ



ಬಂಟ್ವಾಳ: ಮನಸ್ಸು ಮತ್ತು ಬುದ್ಧಿ ಪಕ್ವವಾಗಿರುವ ಹಿರಿಯರಿಂದ ನಾವು ಜೀವನದ ಪಾಠವನ್ನು ಅವರ ಒಡನಾಟ ದಿಂದ ಗಳಿಸಲು ಸಾಧ್ಯವಿದೆ. ಹಿರಿಯರು ಸೇರಿರುವಲ್ಲಿ ಜ್ಞಾನಾಮೃತವಿದೆ. ಇದು ನಮ್ಮ ಬದುಕಿಗೆ ದಾರಿದೀಪವಾಗುತ್ತದೆ ಎಂದು ಕರ್ನಾಟಕ ಸೇವಾ ಭಾರತಿ ವಿಭಾಗೀಯ ಸಂಚಾಲಕ ಚಂದ್ರಶೇಖರ ತಿಳಿಸಿದರು.

ದಾಸಕೋಡಿ ಕಂದೂರು ರಾಜಾರಾಮ ಐತಾಳ್ ಅವರ ನಿವಾಸದಲ್ಲಿ ಜರಗಿದ ಅಖಿಲ ಕರ್ನಾಟಕ ಹಿರಿಯರ ಸೇವಾ ಪ್ರತಿಷ್ಠಾನದ ಕೇಂದ್ರ ಸಮಿತಿಯ ಸಭೆಯಲ್ಲಿ ಅವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಅಖಿಲ ಕರ್ನಾಟಕ ಹಿರಿಯರ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಕಯ್ಯೂರು ನಾರಾಯಣ ಭಟ್ ವಹಿಸಿದ್ದರು.ಕೇಂದ್ರೀಯ ಸಮಿತಿಯ ಸಂಚಾಲಕ ಭಾಸ್ಕರ ಬಾರ್ಯ, ಕೋಶಾಧಿ ಕಾರಿ ಅನಾರು ಕೃಷ್ಣಶರ್ಮ. ಭವಾನಿ ಶಂಕರ ಶೆಟ್ಟಿ ಪುತ್ತೂರು, ಜಯರಾಮ ಪೂಜಾರಿ ನರಿಕೊಂಬು, ರಾಜಮಣಿ ರಾಮಕುಂಜ, ಭಾರತಿ ರಾಮಕುಂಜ ಉಪಸ್ಥಿತರಿದ್ದರು.ಪ್ರೊ. ವೇದವ್ಯಾಸ ರಾಮಕುಂಜ ಪ್ರಾರ್ಥಿಸಿದರು. ಚಂದ್ರಶೇಖರ ಆಳ್ವ ಪಡುಮಲೆ ಸ್ವಾಗತಿಸಿದರು. ಉದಯ ರೈ ಶಂಕರ ಪುಣಚ ವಂದಿಸಿದರು. ಕಾರ್ಯದರ್ಶಿ ದಿವಾಕರ ಆಚಾರ್ಯ ಗೇರುಕಟ್ಟೆ ಕಾರ್ಯಕ್ರಮ ನಿರೂಪಿಸಿದರು.



ಮೆಸ್ಕಾಂ ಕಚೇರಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್ ಕೆ. , ವ್ಯವಸ್ಥಾಪಕ ನಿರ್ದೇಶಕ ಜಯಕುಮಾರ್ ಆರ್., ಮುಖ್ಯ ಆರ್ಥಿಕ ಅಧಿಕಾರಿ ಮುರಳೀಧರ ನಾಯಕ್, ಮುಖ್ಯ ಇಂಜಿನಿಯರ್ ರವಿಕಾಂತ್ ಆರ್. ಕಾಮತ್ ಕವಿಪ್ರನಿನಿ ಅಧೀಕ್ಷಕ ಇಂಜಿನಿಯರ್ ಚೈತನ್ಯ, ಮಂಗಳೂರು ವೃತ್ತ ಅಧೀಕ್ಷಕ ಇಂಜಿನಿಯರ್ ಕೃಷ್ಣರಾಜ್ ಕೆ, ಪ್ರಧಾನ ವ್ಯವಸ್ಥಾಪಕ ರಘುರಾಮ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ತುಳುವರ ಆಚರಣೆಗಿದೆ ವಿಶೇಷ ಮಹತ್ವ: ಡಾ.ಮಾಧವ ಎಂ.ಕೆ. ಅಭಿಮತ



ಮಂಗಳೂರು: ಜಗತ್ತಿನ ಇತಿಹಾಸವನ್ನು ಅವಲೋಕಿಸಿದರೆ ಗ್ರೀಕ್, ರೋಮ್ ಹಾಗೂ ಸಿಂಧು ನಾಗರಿಕತೆ ಪ್ರಮುಖವಾಗಿವೆ. ಇವುಗಳಲ್ಲಿ ಗ್ರೀಕ್ ಮತ್ತು ರೋಮ್ ನಾಗರಿಕತೆಗಳುನಾಶವಾದರೂ, ಭಾರತೀಯ ಸಿಂಧು ನಾಗರಿಕತೆ ಮಾತ್ರ ಇಂದಿಗೂ ತನ್ನ ಅಸ್ತಿತ್ವ ಉಳಿಸಿಕೊಂಡಿದೆ. ಇದಕ್ಕೆ ಇಲ್ಲಿನ ಜನರ ಆಚರಣೆ, ನಂಬಿಕೆ, ನಡವಳಿಕೆ ಹಾಗೂ ಸಂಸ್ಕೃತಿಯೇ ಮುಖ್ಯ ಕಾರಣ ಎಂದು ಮಂಗಳೂರು ವಿವಿ ಕಾಲೇಜು ಪ್ರಾಧ್ಯಾಪಕ ಡಾ.ಮಾಧವ ಎಂ.ಕೆ. ಹೇಳಿದರು.

ತುಳುಕೂಟ ಕುಡ್ಲ ವತಿಯಿಂದ ಮಂಗಳಾದೇವಿ ದೇವಾಲಯದ ರಾಜಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ 'ಬಿಸು ಪರ್ಬ-2026'ದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಮಂಗಳಾದೇವಿ ದೇವಸ್ಥಾನದ ಮೊಕ್ತೇಸರ ಅರುಣ್ ಐತಾಳ್ ಉದ್ಘಾಟಿಸಿದರು. ತುಳುಕೂಟ ಕುಡ್ಲ ಅಧ್ಯಕ್ಷೆ ಹೇಮಾ ದಾಮೋದರ ನಿಸರ್ಗ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾವೂರು ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಲೋಕೇಶ್ ಭಂಡಾರಿ, ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷೆ ಶಾಲೆಟ್ ಪಿಂಟೊ ಉಪಸ್ಥಿತರಿದ್ದರು.ತುಳುಕೂಟ ಉಪಾಧ್ಯಕ್ಷ ಜೆ.ವಿ.ಶೆಟ್ಟಿ ಸ್ವಾಗತಿಸಿದರು. ಕೋಶಾಧಿಕಾರಿ ನಾರಾಯಣ ಬಿ.ಡಿ. ವಂದಿಸಿದರು. ಪಂಚಾಂಗ ಶ್ರವಣದೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ಪ್ರಧಾನ ಕಾರ್ಯದರ್ಶಿ ರವಿ ಅಲೆವೂರಾಯ ನಿರೂಪಿಸಿದರು. ಸಭಾ ಕಾರ್ಯಕ್ರಮ ಬಳಿಕ ಶರಭೇಶ್ವರ ಕಲಾವಿದರು ಕುಡ್ಲ ತಂಡದಿಂದ ಮೋಹನ್ ಕೆ.ಬೋಳಾರ್ ಸಾಹಿತ್ಯ ಮತ್ತು ನಾಗೇಶ್ ದೇವಾಡಿಗ ಕದ್ರಿ ನಿರ್ದೇಶನದಲ್ಲಿ 'ಮುಗ ಪುಂಚ' ತುಳು ಜಾನಪದ ನಾಟಕ ಪ್ರದರ್ಶನಗೊಂಡಿತು.

ರತ್ನವರ್ಮ ಹೆಗ್ಗಡೆ ಪ್ರಶಸ್ತಿ ಪ್ರದಾನ

ಅಪ್ರಕಟಿತ ನಾಟಕ ಕೃತಿ ಸ್ಪರ್ಧೆ ವಿಜೇತರಿಗೆ 'ಧರ್ಮಸ್ಥಳ ರತ್ನವರ್ಮ ಹೆಗ್ಗಡೆ ಪ್ರಶಸ್ತಿ-2026' ಪ್ರದಾನ ಮಾಡಲಾಯಿತು. ರಾಜೇಶ್ ಶೆಟ್ಟಿ ದೋಟ (ಕೃತಿ: ಒಂಜಿ ಗುತ್ತುದ ಕತೆ) ಪ್ರಥಮ, ವಿಲಾಸ್ ಕುಮಾರ್ ನಿಟ್ಟೆ (ಕೃತಿ: ಆಯೆ ಆನ್ ಮಗೆ) ದ್ವಿತೀಯ, ರಮ್ಯಾ ಬಿ.ಸಿ.ರೋಡ್(ಕೃತಿ: ಬಾಲೆ ಪ್ರಹ್ಲಾದೆ) ತೃತೀಯ ಬಹುಮಾನ ಪಡೆದರು.

ಬ್ರಹ್ಮರಕೂಟ್ಲು ಟೋಲ್‌ಗೇಟ್ ತೆರವಿಗೆ ಆಗ್ರಹಿಸಿ ಜನಾಂದೋಲನ ಮೆರವಣಿಗೆ



ಬಂಟ್ವಾಳ: ಬ್ರಹ್ಮರಕೂಟ್ಲು ಟೋಲ್ ಗೇಟ್ ತೆರವು ಹೋರಾಟ ಸಮಿತಿ, ಬಂಟ್ವಾಳ್ ಇದರ ವತಿಯಿಂದ ಹೋರಾಟದ ಮುಂದುವರಿದ ಭಾಗವಾಗಿ ಟೋಲ್ ಗೇಟ್ ತೆರವಿಗೆ ಆಗ್ರಹಿಸಿ ಏ.28ಸಂಜೆ ರಂದು ಜನಾಂದೋಲನ ಮೆರವಣಿಗೆ ಹಮ್ಮಿಕೊಳ್ಳಲು ನಿರ್ಧರಿಸಿದೆ.

ಅಂದು ಸಂಜೆ 4ಕ್ಕೆ ಬಿ.ಸಿ.ರೋಡಿನ ಬ್ರಹ್ಮಶ್ರೀ ನಾರಾಯಣ ಗುರು ವೃತ್ತದಿಂದ ಬ್ರಹ್ಮರಕೂಟ್ಲು ಟೋಲ್ ಗೇಟ್ ವರೆಗೆ ಜನಾಂದೋಲನ ನಡೆಗೆ ನಡೆಸಲು ಬುಧವಾರ ಬಂಟ್ವಾಳದಲ್ಲಿ ಸಮಿತಿಯ ಗೌರವಾಧ್ಯಕ್ಷರಾದ ಬಿ. ರಮಾನಾಥ ರೈ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಸಮಿತಿಯ ಪ್ರಕಟಣೆ ತಿಳಿಸಿದೆ. ಮಾಜಿ ಸಚಿವ ಬಿ ರಮಾನಾಥ ರೈ, ಟೋಲ್ ಗೇಟ್ ವಿರೋಧಿ ಹೋರಾಟಗಾರರಾದ ಮುನೀರ್ ಕಾಟಿಪಳ್ಳ ಜನಾಂದೋಲನ ಮೆರವಣಿಗೆಯ ರೂಪ ರೇಷೆಗಳ ಕುರಿತು ಸಭೆಗೆ ವಿವರಿಸಿದರು. ಸಮಿತಿಯ ಸಂಚಾಲಕ ಬಿ. ಶೇಖರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಚಾಲಕ ಮೋಹನ್ ಶೆಟ್ಟಿ ಸ್ವಾಗತಿಸಿ, ಬಂಟ್ವಾಳ ತಾಲೂಕಿನ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಸಾಮಾಜಿಕ ಕಾರ್ಯಕರ್ತರು ಇದ್ದರು. ಸಮಾನ ಮನಸ್ಕ ಸಂಘಟನೆಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ವಂದಿಸಿದರು.



ಕಾಪು ತಾಲೂಕು ಆಡಳಿತ, ತಾ.ಪಂ., ಪುರಸಭೆ, ಸಮಾಜ ಕಲ್ಯಾಣ ಇಲಾಖೆ, ಕಾಪು ತಾಲೂಕು ಇವರ ಸಂಯುಕ್ತ ಆಶ್ರಯದೊಂದಿಗೆ ಕಾಪು ಪ್ರಜಾಸೌಧದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಭಾಗವಹಿಸಿದರು. ತಹಶೀಲ್ದಾರ್ ಅನಂತ ಶಂಕರ್, ಮುಖ್ಯಾಧಿಕಾರಿ ನೀಲಕಂಠ ಮೇಸ್ತಾ, ಇಲಾಖೆಯ ಅಧಿಕಾರಿಗಳಾದ ವಿಜಯಲಕ್ಷ್ಮಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಕುಂದಾಪುರ ಬಿಜೆಪಿ ಮಂಡಲದಿಂದ ಆಚರಣೆ



ಕುಂದಾಪುರ: ಬಿಜೆಪಿ ಕುಂದಾಪುರ ಮಂಡಲ ವತಿಯಿಂದ ಕುಂದಾಪುರ ಬಿಜೆಪಿ ಕಚೇರಿಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಮಂಜುನಾಥ್ ಬಳ್ಕೂರು, ಮಂಡಲ ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ. ಎಸ್., ಮಂಡಲ ಉಪಾಧ್ಯಕ್ಷಸುನೀಲ್ ಶೆಟ್ಟಿಹೇರಿಕುದ್ರು, ಎಸ್ಸಿ ಮೋರ್ಚ ಉಪಾಧ್ಯಕ್ಷ ದಿನೇಶ್ ಸಟ್ವಾಡಿ, ಕಾರ್ಯದರ್ಶಿ ಸುರೇಶ್, ಯು., ಜಿಲ್ಲಾ ಕಾರ್ಯದರ್ಶಿ ಅನಿತಾ ಶ್ರೀಧರ್, ಮಂಡಲ ಕಾರ್ಯದರ್ಶಿ ರಾಜೇಶ್ ಶೆಟ್ಟಿ ಶಿರೂರು, ಯುವ ಮೋರ್ಚಾ ಅಧ್ಯಕ್ಷ ಕಿರಣ್ ಪೂಜಾರಿ ತೆಕ್ಕಟ್ಟೆ, ಒಬಿಸಿ ಮೋರ್ಚಾ ಅಧ್ಯಕ್ಷ ಸುರೇಂದ್ರ ಕಾಂಚನ್ ಸಂಗಮ್, ರೈತ ಮೋರ್ಚಾ ಅಧ್ಯಕ್ಷ ಜಯಶೀಲ ಶೆಟ್ಟಿ, ಮಹಿಳಾ ಮೋರ್ಚಾ ಅಧ್ಯಕ್ಷೆ ಸೌರಭಿ ಪೈ, ಕಾರ್ಯದರ್ಶಿ ರೋಹಿಣಿ ಪೈ, ಒಬಿಸಿ ಕಾರ್ಯದರ್ಶಿ ನವೀನ್ ಕುಂದಾಪುರ, ತಾ.ಪಂ. ಮಾಜಿ ಅಧ್ಯಕ್ಷ ಭಾಸ್ಕರ್ ಬಿಲ್ಲವ, ಪುರಸಭಾ ಮಾಜಿ ಸದಸ್ಯ ರತ್ನಾಕರ ಶೇರಿಗಾರ್, ಕಾರ್ಯಾಲಯದ ಸಹಾಯಕಿ ಆಶಾ ಮೊಗವೀರ ಇನ್ನಿತರರು ಇದ್ದರು. ಬಿಜೆಪಿ ನಿಕಟಪೂರ್ವ ಎಸ್.ಸಿ. ಮೋರ್ಚಾ ಜಿಲ್ಲಾ ಅಧ್ಯಕ್ಷ ಗೋಪಾಲ್ ಕಳಂಜಿ ಪ್ರಾಸ್ತಾವಿಕ ಮಾತನಾಡಿದರು.

ಕಡಬ ಕಾಂಗ್ರೆಸ್ ಕಚೇರಿಯಲ್ಲಿ ಆಚರಣೆ



ಕಡಬ: ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಕಾರ್ಯಕ್ರಮ ಕಡಬ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ನಡೆಯಿತು.

ಜಿ.ಪಂ. ಮಾಜಿ ಸದಸ್ಯ ಪಿ.ಪಿ. ವರ್ಗೀಸ್ ಹಾಗೂ ಕಡಬ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಭಿಲಾಷ್ ಪಿ.ಕೆ. ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು, ಮಾತನಾಡಿದರು.

ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸತೀಶ್ ನಾಯ್ಕ್ ಮೇಲಿನ ಮನೆ, ಉಪಾಧ್ಯಕ್ಷ ಷರೀಫ್ ಎ.ಎಸ್., ಸೇವಾದಳದ ಅಧ್ಯಕ್ಷ ಸುಜಿತ್ ಪಿ.ಕೆ., ಪಟ್ಟಣ ಪಂಚಾಯತ್ ಉಪಾಧ್ಯಕ್ಷೆ ನೀಲಾವತಿ ಶಿವರಾಮ್, ಸದಸ್ಯರಾದ ರೋಹಿತ್ ಗೌಡ, ಕೃಷ್ಣಪ್ಪ ನಾಯ್ಕ್, ಪ್ರಮುಖರಾದ ಅವಿನಾಶ್ ಬೈತಡ್ಕ, ವಸಂತ ಕುಬಲಾಡಿ, ಸತೀಶ್ ಮೀನಾ ಡಿ., ಆನಂದ, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರು, ಪಕ್ಷದ ವಿವಿಧ ಘಟಕದ ಮುಖಂಡರುಗಳು ಹಾಗೂ ಕಾರ್ಯಕರ್ತರು ಇದ್ದರು. ಕಡಬ ಬ್ಲಾಕ್ ಕಾಂಗ್ರೆಸ್ ಪರಿಶಿಷ್ಟ ಜಾತಿ ಘಟಕದ ಅಧ್ಯಕ್ಷ ಶಶಿಧರ್ ಬೋಟ್ಟಡ್ಕ ಕಾರ್ಯಕ್ರಮ ನಿರ್ವಹಿಸಿದರು.

ಬಂಟಕಲ್ಲು ಶಾಲಾ ಶತಮಾನೋತ್ಸವ ಸಂಭ್ರಮದಲ್ಲಿ ಶ್ರೀ ಕಾಳಹಸ್ತೇಂದ್ರ ಸರಸ್ವತೀ ಸ್ವಾಮೀಜಿ ಆಶೀರ್ವಚನ

ಶಿಕ್ಷಣ, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಕರಾವಳಿ ಜಿಲ್ಲೆಗಳು ದೇಶಕ್ಕೆ ಮಾದರಿ

ಶಿರ್ವ: ಕರಾವಳಿಯಲ್ಲಿ ಶತಮಾನಗಳನ್ನು ಕಂಡ ಅನೇಕ ಶಾಲೆಗಳಿವೆ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಶತಮಾನಗಳನ್ನು ಕಂಡ ಕರಾವಳಿ ಜಿಲ್ಲೆಯ ಬ್ಯಾಂಕ್ ಗಳಿವೆ. ಸಾಂಸ್ಕೃತಿಕ ಆಚರಣೆಗಳು, ಸಂಘಟನೆಗಳು, ಸ್ವಾತಂತ್ರ್ಯ ಪೂರ್ವದಿಂದಲೂ ಬೆಳೆದು ಬಂದಿವೆ. ಕರಾವಳಿಯ ಜನ ಅತ್ಯಂತ ದೂರದೃಷ್ಟಿತ್ವವನ್ನು ಹೊಂದಿದವರು, ಬುದ್ಧವಂತರು., ಇಂದಿಗೂ ಪ್ರತಿಭಾವಂತರ ಜಿಲ್ಲೆಯಾಗಿಯೇ ಉಳಿದಿದೆ. ಶಿಕ್ಷಣ ಮತ್ತು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಕರಾವಳಿ ಜಿಲ್ಲೆಗಳು ದೇಶಕ್ಕೆ ಮಾದರಿ ಎಂದು ಶ್ರೀಮತ್ ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠ ಕಟಪಾಡಿ, ಪಡುಕುತ್ಯಾರು ಇಲ್ಲಿನ ಶ್ರೀ ಕಾಳಹಸ್ತೇಂದ್ರ ಸರಸ್ವತೀ ಮಹಾ ಸ್ವಾಮೀಜಿ ನುಡಿದರು.

ಅವರು ಭಾನುವಾರ ಶತಮಾನೋತ್ಸವದ ಸಂಭ್ರಮಾಚರಣೆಯಲ್ಲಿರುವ ಬಂಟಕಲ್ಲು ಶ್ರೀ ದುರ್ಗಾಪರಮೇಶ್ವರೀ ಅನುದಾನಿತ ಹಿ.ಪ್ರಾ.ಶಾಲಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿ, ಶಾಲೆ ಇರುವುದು ಅಮ್ಮನವರ ಸನ್ನಿಧಿಯಲ್ಲಿ, ದೇವಸ್ಥಾನಗಳು ಕೇವಲ ಶ್ರದ್ಧಾ ಕೇಂದ್ರಗಳಲ್ಲ, ಐದು ವಿವಿಧಸಾನಿಧ್ಯವೃದ್ಧಿಗೆಪೂರಕವಾಗಬೇಕು. ಅರ್ಚಕರ ನಿಷ್ಠೆ ಜಪತಪ ಪಾರಾಯಣ ನಡೆಯುತ್ತಿರುತ್ತವೆ. ಪಾಠ ಶಾಲೆಗಳು ದೇವಸ್ಥಾನದ ಬದಿಯಲ್ಲಿಯೇ ಇರಬೇಕು. ಉತ್ಸವಗಳು,ಸಾಂಸ್ಕೃತಿಕ ವೈಭವಗಳು ಮಕ್ಕಳಿಗೆ ಪರಿಚಯ ಮಾಡಲು ಇದೇ ಕೇಂದ್ರವಗಿದೆ. ನಮ್ಮ ಮಕ್ಕಳು ನಮ್ಮ ಸಂಸ್ಕೃತಿಗೆ ಪೂರಕವಾಗಿ ಬೆಳೆಯಬೇಕು, ಉಳಿಯಬೇಕು. ಜಾತ್ಯಾತೀತ ಶಿಕ್ಷಣ ದಿಂದ ನಮ್ಮ ಭಾರತೀಯ ಸಂಸ್ಕೃತಿ ಅಧಃ ಪತನದತ್ತ ಸಾಗುತ್ತದೆ. ಇಂದಿನ ಪಠ್ಯಪುಸ್ತಕಗಳಲ್ಲಿ ಈ ಮಣ್ಣಿನ ಇತಿಹಾಸವನ್ನು ತಿಳಿಸುವ ವಿಷಯಗಳೇ ಇಲ್ಲ. ಒಳ್ಳೆಯ ಸಹವಾಸ ಮಾಡಿ, ಒಳ್ಳೆಯ ಭವಿಷ್ಯವನ್ನು ಕಟ್ಟಿಕೊಳ್ಳಬೇಕು ಎಂದರು.



> **ಶೈಕಣಿಕ ವ್ಯವಸ್ಥೆ ಪ್ರಮುಖ ಪಾತ್ರ**
>
> ದೇಶದ ಸಂಸ್ಕೃತಿ ಉಳಿಯಬೇಕಾದರೆ ಶೈಕ್ಷಣಿಕ ವ್ಯವಸ್ಥೆ ಬಲ ವಾಗಿರಬೇಕು. ಆ ನಿಟ್ಟಿನಲ್ಲಿ ವಿದ್ಯಾಸಂಸ್ಥೆಗಳು ಮಕ್ಕಳಿಗೆ ಶಿಕ್ಷಣ ನೀಡಬೇಕಿದೆ.
>
> ● ಕಾಳಹಸ್ತೇಂದ್ರ ಸರಸ್ವತೀ ಸ್ವಾಮೀಜಿ

ಈ ಸಂದರ್ಭದಲ್ಲಿ ಶಾಲಾ ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಮಾಧವ ಕಾಮತ್, ಶ್ರೀದೇವಳದ ಆಡಳಿತ ಮೊಕ್ತೇಸರ ಜಯರಾಮ ಪ್ರಭು, ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಶಶಿಧರ ವಾಗ್ಲೆ, ಶತಮಾನೋತ್ಸವಸಮಿತಿಯಪ್ರಧಾನಕಾರ್ಯದರ್ಶಿ ಕೆ.ಆರ್.ಪಾಟ್ಕರ್ ಸ್ವಾಮೀಜಿಯವರಿಗೆ ಫಲಪುಷ್ಪ ಸಮರ್ಪಿಸಿ ಫಲಮಂತ್ರಾಕ್ಷತೆ ಪಡೆದರು. ಬಂಟಕಲ್ಲು ವಿಶ್ವಕರ್ಮ ಸಂಘದ ಅಧ್ಯಕ್ಷ ಮುರಳಿಧರ ಆಚಾರ್ಯ, ಗಾಯತ್ರಿ ವೃಂದದ ಅಧ್ಯಕ್ಷೆ ವಿದ್ಯಾ ಹರೀಶ್, ಮಾಜಿ ಅಧ್ಯಕ್ಷರುಗಳಾದ ಮಾಧವ ಆಚಾರ್ಯ, ಜಗದೀಶ ಆಚಾರ್ಯ, ದಾಮೋದರ ಆಚಾರ್ಯ, ಶಾಲಾ ಮುಖ್ಯ ಶಿಕ್ಷಕಿ ಸಂಗೀತಾ ಆರ್ ಪಾಟ್ಕರ್, ಹಳೆವಿದ್ಯಾರ್ಥಿಗಳು, ಶಾಲಾ ವಿದ್ಯಾರ್ಥಿ ವೃಂದದವರು ಉಪಸ್ಥಿತರಿದ್ದರು.

ಸುತ್ತಮುತ್ತ

ಏ.25: ಕೊರಗಜ್ಜ ದೈವದ ಕೋಲ

ಕಾಸರಗೋಡು: ಅಣಂಗೂರು ಶ್ರೀ ಸ್ವಾಮೀ ಕೊರಗಜ್ಜ ದೈವ ಸನ್ನಿಧಿಯಲ್ಲಿ ವಾರ್ಷಿಕ ನೇಮ, ಹರಕೆ ಕೋಲ ಏ.25ರಂದು ನಡೆಯಲಿದೆ. ಬೆಳಿಗ್ಗೆ 7 ಗಂಟೆಗೆ ಗಣಪತಿ ಹೋಮ, 10.30ಕ್ಕೆ ಶ್ರೀ ಗುಳಿಗಜ್ಜ ದೈವದ ಕೋಲ, ರಾತ್ರಿ 8ಕ್ಕೆ ಕೊರಗಜ್ಜ ದೈವದ ಭಂಡಾರ ಆಗಮನ, 8.30ಕ್ಕೆ ಅನ್ನ ಸಂತರ್ಪಣೆ, 9.30ಕ್ಕೆ ಕೊರಗಜ್ಜ ದೈವದ ಕೋಲ, ಹರಕೆ ಕೋಲ ನಡೆಯಲಿದೆ.

ಏ.18ರಿಂದ ಕೊರಕೋಡು ಶ್ರೀ ಮಹಾದೇವಿ ದೇವಳದಲ್ಲಿ ಫಲರಾಶಿ ಪೂಜೆ

ಕಾಸರಗೋಡು: ಕೊರಕೋಡು ಆರ್ಯಕಾತ್ಯಾಯಿನಿ ಶ್ರೀ ಮಹಾದೇವಿ ದೇವಸ್ಥಾನದಲ್ಲಿ ಫಲರಾಶಿ ಪೂಜಾ ಮಹೋತ್ಸವ ಏ.18ರಿಂದ 20ರ ವರೆಗೆ ಜರಗಲಿದೆ. ಏ.18ರಂದು ಬೆಳಿಗ್ಗೆ ಭಂಡಾರ ಮನೆಯಿಂದ ಭಂಡಾರ ಹೊರಡುವುದು, ಧ್ವಜಾರೋಹಣ, ಉತ್ಸವ ಆರಂಭ, ಶಿವಾಜಿ ಜಯಂತಿ, ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರ ಪ್ರತಿಷ್ಠೆ ಭಜನೆ, ಮಧ್ಯಾಹ್ನ 1 ಗಂಟೆಗೆ ಪೂಜೆ, ರಾತ್ರಿ 9ಕ್ಕೆ ಪೂಜೆ, ವಸಂತೋತ್ಸವ, ಏ.19ರಂದು ಬೆಳಿಗ್ಗೆ ಭಜನೆ ಪ್ರಾರಂಭ, ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ, ದರ್ಶನ, ರಾತ್ರಿ 8.30ಕ್ಕೆ ಪೂಜೆ, ದರ್ಶನ, 11 ಗಂಟೆಗೆ ಫಲರಾಶಿ ಪೂಜಾ ಮಹೋತ್ಸವ, ಏ.20ರಂದು ಸಂಜೆ 6ಕ್ಕೆ ಮಹಾಪೂಜೆ, ದರ್ಶನ, ರಥೋತ್ಸವ ಬಳಿಕ ಭಂಡಾರ ನಿರ್ಗಮನಗೊಳ್ಳಲಿದೆ. ಮೇ 8ರಂದು ಮಧ್ಯಾಹ್ನ 12 ಗಂಟೆಗೆ ಉಚ್ಚಿಲ ಶ್ರೀ ಪದ್ಮನಾಭ ತಂತ್ರಿಯವರ ನೇತೃತ್ವದಲ್ಲಿ ಬ್ರಹ್ಮಕಲಶದ ವಾರ್ಷಿಕೋತ್ಸವ, ಮಹಾಪೂಜೆ, ದರ್ಶನ ನಡೆಯಲಿದೆ.

ರುಕ್ಮಿಣೀ ಸ್ವಯಂವರ ಶೋಭಾಯಾತ್ರೆ

ಬದಿಯಡ್ಕ: ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ



ಭಜನಾ ಮಂದಿರ ದಲ್ಲಿ ಲೋಕ ಕಲ್ಯಾಣಾರ್ಥ 'ಶ್ರೀಮದ್ ಭಾಗವತ ಸಪ್ತಾಹ' ಕಾರ್ಯಕ್ರಮ ಜರಗುತ್ತಿದ್ದು, ಪಂಚಮ ದಿನ ಮಂಗಳವಾರ ಶ್ರೀಕೃಷ್ಣಲೀಲೆ, ಕಾಳೀಯ ಮರ್ಧನ, ಕಾತ್ಯಾಯಿನೀ ಪೂಜೆ, ಗೋವರ್ಧನೋದ್ಧಾರ, ರಾಸಲೀಲೆ, ಕಂಸವಧೆ, ಉದ್ಧವ ದೌತ್ಯ, ರುಕ್ಮಿಣೀ ಸ್ವಯಂವರ ಜರಗಿತು. ರುಕ್ಮಿಣೀ ಸ್ವಯಂವರದ ಭಾಗವಾಗಿ ಮವ್ವಾರು ಶ್ರೀಕೃಷ್ಣ ಭಜನಾ ಮಂದಿರದಿಂದ ಆಗಮಿಸಿದ ವೈಭವದ ದಿಬ್ಬಣ ಮೆರವಣಿಗೆ ಆಕರ್ಷಣೀಯವಾಗಿತ್ತು. ಬುಧವಾರ ಬೆಳಗ್ಗೆ ಗಣಪತಿ ಹೋಮ, ಬೆಳ್ತಮ್ಮ ಪಾವೂರುಮೂಲೆ ಅವರಿಂದ ದೀಪಪ್ರಜ್ವಲನೆ, ಸಾಮೂಹಿಕ ಶ್ರೀ ವಿಷ್ಣುಸಹಸ್ರನಾಮ ಪಾರಾಯಣ, ಶ್ರೀಮದ್ ಭಾಗವತ ಪಾರಾಯಣ ಪ್ರವಚನ ನಡೆಯಿತು. ಸ್ಯಮಂತಕೋಪಾಖ್ಯಾನ, ಬಾಣ ಯುದ್ಧ ರಾಜಸೂಯ, ಕುಚೇಲ ಚರಿತೆ, ಸಂತಾನಗೋಪಾಲ, ಭಾಗವತ ಧರ್ಮಕಥಾನಕ, ಉದ್ಧವೋಪದೇಶ ಕಥಾಭಾಗದಲ್ಲಿ ಭಾಗವತಾ ಚಾರ್ಯ ಬ್ರಹ್ಮಶ್ರೀ ಶಂಕರನ್ ನಂಬೂದಿರಿ ಚೇಂದಮಂಗಲಂ ಪಯ್ಯನ್ನೂರು ಹಾಗೂ ತಂಡದವರು ಪಾರಾಯಣ ಪ್ರವಚನ ನಡೆಸಿಕೊಟ್ಟರು. ಏ.16ರಂದು ಭಾಗವತ ಸಪ್ತಾಹ ಸಮಾರೋಪಗೊಳ್ಳಲಿದೆ.



ವಿಷು ಹಬ್ಬದ ಅಂಗವಾಗಿ ಕಾಸರಗೋಡು ಪೇಟೆ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಬುಧವಾರ ಬೆಳಗ್ಗೆ ಸಿದ್ಧಪಡಿಸಿದ ವಿಷುಕಣಿ.



ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ಶ್ರೀಮದ್ ಭಾಗವತ ಸಪ್ತಾಹದ ಸಂದರ್ಭ ಬುಧವಾರ ಕಣಿದರ್ಶನ ನಡೆಯಿತು.

ಹೊಂಡಗುಂಡಿಯಲ್ಲಿ ವಾಹನ ಸಂಚಾರ ದುಸ್ತರವಾಗಿದ್ದ ಕುಂಟಾರು - ಅತ್ತನಾಡಿ ರಸ್ತೆ
ಕಡತಕ್ಕೆ ಮಾತ್ರ ಸೀಮಿತವಾಗಿದ್ದ ರಸ್ತೆಗೆ ಡಾಮರೀಕರಣ ಭಾಗ್ಯ

ಕಾಸರಗೋಡು: ಹೊಂಡಗುಂಡಿಗಳಿಂದ ತೀರಾ ಹದಗೆಟ್ಟು ವಾಹನ ಸಂಚಾರ ದುಸ್ತರವಾಗಿದ್ದ ಕುಂಟಾರು – ಅತ್ತನಾಡಿ ರಸ್ತೆಯ ಮರು ಡಾಮರೀಕರಣ ಕಾಮಗಾರಿ ಆರಂಭಗೊಂಡಿದೆ.

ಕೆಲವು ವರ್ಷಗಳಿಂದ ದುರಸ್ತಿ ಕಾಣದೆ ಸಂಪೂರ್ಣ ಹೊಂಡಗುಂಡಿಗಳಿಂದ ಕೂಡಿದ್ದ ರಸ್ತೆಯನ್ನು ಕಾರಡ್ಕ ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ನ ಸಹಕಾರದೊಂದಿಗೆ 9 ಲಕ್ಷ ರೂ. ವೆಚ್ಚದಲ್ಲಿ 2020ರಲ್ಲಿ ಡಾಮರೀಕರಿಸಲಾಗಿತ್ತು. ಆದರೆ ಮತ್ತೆ ಕಿತ್ತುಹೋದ ರಸ್ತೆಯನ್ನು ದುರಸ್ತಿಗೊಳಿಸಬೇಕೆಂಬ ಬೇಡಿಕೆಯೂ ಕೇವಲ ಕಡತಗಳಿಗೆ ಮಾತ್ರ ಸೀಮಿತವಾಗಿತ್ತು.

ಈ ರಸ್ತೆ ದುರಸ್ತಿಗೆ ಸಾರ್ವಜನಿಕರಿಂದ ಹಲವು ಬಾರಿ ಮನವಿ ಮಾಡಲಾಗಿತ್ತು. ಆದರಂತೆ ಈಗಾಗಲೇ ನೂತನ ಕಾರಡ್ಕ ಗ್ರಾ.ಪಂ. ಆಡಳಿತ ಸಮಿತಿಯು ಇಲ್ಲಿನ ರಸ್ತೆಯನ್ನು ಮರು ಡಾಮರೀಕರಣ ನಡೆಸುವ ಕಾಮಗಾರಿ ಆರಂಭಿಸಿದೆ.

ಕಾಸರಗೋಡು – ಸುಳ್ಯ ಪ್ರಧಾನ ರಸ್ತೆಗೆ ಸಂಪರ್ಕ ಕಲ್ಪಿಸುವ ಒಂದೂವರೆ ಕಿಲೋ ಮೀಟರ್ ಉದ್ದದ ಈ ರಸ್ತೆಯು ಹಲವು ವರ್ಷಗಳಿಂದ ಸಂಚಾರ



ಸಮಸ್ಯೆ ಎದುರಿಸುತ್ತಲೇ ಇತ್ತು. ಕಾರಡ್ಕ ಗ್ರಾಮ ಪಂಚಾಯತ್‌ನ 8ನೇ ವಾರ್ಡ್‌ಗೊಳಪಟ್ಟ ಕುಂಟಾರಿನಿಂದ ಅತ್ತನಾಡಿಗೆ ತೆರಳಲು ಅತೀ ನಿಕಟವಾದ ರಸ್ತೆ ಇದಾಗಿದೆ.

ಸಂಚಾರ ದುಸ್ತರವಾಗಿತ್ತು

ಶಾಲಾ ವಾಹನಗಳು ಸಹಿತ ಸಾಕಷ್ಟು ವಾಹನಗಳು ಈ ರಸ್ತೆಯ ಮೂಲಕ ಸಾಗುತ್ತಿವೆ. ರಸ್ತೆಯು ಸಾಕಷ್ಟು ಹದಗೆಟ್ಟಿರುವುದರಿಂದ ಆಟೋರಿಕ್ಷಾ ಚಾಲಕರು ಈ ರಸ್ತೆಯಲ್ಲಿ ಸಾಗಲು ಹಿಂದೇಟು ಹಾಕುತ್ತಿದ್ದರು. ಹದಗೆಟ್ಟ ರಸ್ತೆ. ಅತ್ತನಾಡಿಯನ್ನು ಸಂಪರ್ಕಿಸುವ ಪ್ರಧಾನವಾದ ಈ ಗ್ರಾಮೀಣ ರಸ್ತೆಯ ಮೂಲಕ ದಿನನಿತ್ಯ ಹಲವಾರು ವಾಹನಗಳು ಓಡಾಡುತ್ತಿವೆ.

ಸಾರ್ವಜನಿಕರಿಂದ ಮೆಚ್ಚುಗೆ

ರಸ್ತೆಯು ನಂದ್ಯಾರ್ ಪದವು ಪಾರಶಾಲಾ ಮಲೆನಾಡು ಹೆದ್ದಾರಿಯನ್ನು ಅತ್ತನಾಡಿಯಲ್ಲಿ ಸಂಪರ್ಕಿಸುವ ಕಾರಣ ಈ ರಸ್ತೆಗೆ ಹೆಚ್ಚಿನ ಪ್ರಾಧಾನ್ಯತೆ ಇದೆ. ಕುಂಟಾರಿನಿಂದ ನಿಕಟವಾದ ಕಾರಣ ಈ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಲೇ ಇರುತ್ತವೆ. ರಸ್ತೆಯ ಪ್ರಾಧಾನ್ಯತೆ ಮನಗಂಡು ನೂತನ ಆಡಳಿತ ದುರಸ್ತಿ ಕಾರ್ಯ ನಡೆಸಲು ಪ್ರಯತ್ನಿಸುತ್ತಿರುವುದಕ್ಕೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇದರ ಡಾಮರೀಕರಣ ಅಭಿನಂದನಾರ್ಹ.

ಚರಂಡಿ ವ್ಯವಸ್ಥೆ ಅತೀ ಅಗತ್ಯ

ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಈ ರಸ್ತೆ ಸಂಪೂರ್ಣ ಹದಗೆಡಲು ಕಾರಣವಾಗಿದೆ. ಚರಂಡಿ ವ್ಯವಸ್ಥೆ ಮಾಡಿದರೆ ಮಾತ್ರ ರಸ್ತೆ ಕೆಟ್ಟು ಹೋಗುವುದನ್ನು ತಡೆಯಬಹುದಾಗಿದೆ. ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಮಳೆಗಾಲದಲ್ಲಿ ನೀರು ರಸ್ತೆಯಲ್ಲಿಯೇ ಹರಿಯುತ್ತಿದ್ದು, ಇದರಿಂದ ರಸ್ತೆಯು ಮತ್ತಷ್ಟು ಹೊಂಡಗಳು ಸೃಷ್ಟಿಯಾಗುತ್ತದೆ.

ಕಾಂಕ್ರಿಟೀಕರಣಗೊಳಿಸಿದರೆ ಉತ್ತಮ

ಮಳೆಗಾಲದಲ್ಲಿ ನೀರು ರಸ್ತೆಯಲ್ಲೇ ಹರಿಯುವ ಕಾರಣ ಬೇಗನೇ ರಸ್ತೆಯು ಕೆಟ್ಟು ಹೋಗುವುದರಿಂದ ರಸ್ತೆ ಕಾಮಗಾರಿ ನಡೆಸುವಾಗಲೇ ಸೂಕ್ತ ರೀತಿಯಲ್ಲಿ ಚರಂಡಿ ನಿರ್ಮಿಸಬೇಕೆಂದು ಕರಾರುದಾರನಿಗೆ ತಿಳಿಸಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ. ಇಲ್ಲವಾದರೆ ಡಾಮರೀಕರಣ ನಡೆಸಿ ಮಳೆಗಾಲದಲ್ಲಿ ಮಳೆ ಬಂದರೆ ಪುನಃ ರಸ್ತೆಗಳಲ್ಲಿ ಹೊಂಡಗಳು ಉಂಟಾಗಬಹುದಾಗಿದೆ. ಹೀಗಾಗಿ ರಸ್ತೆ ಡಾಮರೀಕರಿಸುವ ಯೋಜನೆಯಲ್ಲಿಯೇ ಚರಂಡಿ ನಿರ್ಮಿಸುವುದನ್ನೂ ಒಳಪಡಿಸುವುದರಿಂದ ರಸ್ತೆಗಳು ಕೆಟ್ಟು ಹೋಗುವುದನ್ನು ತಡೆಯಬಹುದಾಗಿದೆ. ಈ ರಸ್ತೆಯನ್ನು ಡಾಮರೀಕರಣ ನಡೆಸುವ ಬದಲು ಕಾಂಕ್ರಿಟೀಕರಿಸಿದರೆ ಪದೇ ಪದೇ ರಸ್ತೆ ದುರಸ್ತಿಯ ಅನಿವಾರ್ಯತೆ ಬರಲಾರದು ಎಂಬ ಅಭಿಪ್ರಾಯವು ಸಾರ್ವಜನಿಕ ವಲಯದಿಂದ ಕೇಳಿ ಬರುತ್ತದೆ.

ಕನ್ನಡ ಭವನದ ರೂವಾರಿ ಸಂಧ್ಯಾರಾಣಿ ಟೀಚರ್‌ಗೆ ಶ್ರೀಕೃಷ್ಣಾನುಗ್ರಹ ಪ್ರಶಸ್ತಿ ಪ್ರದಾನ



ಕಾಸರಗೋಡು: ಕಥಾಬಿಂದು ಪ್ರಕಾಶನ ಉಡುಪಿ ಶಿರೂರು ಶ್ರೀ ಮಠ ಹಾಗೂ ಉಡುಪಿ ಶ್ರೀಕೃಷ್ಣ ಮಠ ಇದರ ಸಹಯೋಗದಲ್ಲಿ ಉಡುಪಿ ಶ್ರೀ ಮಠದ ರಾಜಾಂಗಣದಲ್ಲಿ ಭಾನುವಾರ ಕಥಾಬಿಂದು ಸಾಹಿತ್ಯ ಸಮ್ಮೇಳನ ನಡೆಯಿತು.

ಸಮ್ಮೇಳನದಲ್ಲಿ ಕಾಸರಗೋಡು ನುಳ್ಳಿಪ್ಪಾಡಿ ಕನ್ನಡ ಭವನದ ರೂವಾರಿ ಸಂಧ್ಯಾರಾಣಿ ಟೀಚರ್ ಅವರಿಗೆ ಶ್ರೀಕೃಷ್ಣಾನುಗ್ರಹ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಉಡುಪಿ ಶ್ರೀ ಮಠದ ರಮಣ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಮಾಜಿ ರಾಜ್ಯಾಧ್ಯಕ್ಷ, ಧರ್ಮದರ್ಶಿ, ಡಾ.ಹರಿಕೃಷ್ಣ ಪುನರೂರು, ಕಸಾಪ ದಕ್ಷಿಣ ಕನ್ನಡ ಜಿಲ್ಲಾ ಮಾಜಿ ಅಧ್ಯಕ್ಷ, ಕಲ್ಕೂರ ಪ್ರತಿಷ್ಠಾನ ರೂವಾರಿ ಪ್ರದೀಪ್‌ಕುಮಾರ್ ಕಲ್ಕೂರ, ಕಿನ್ನಿಗೋಳಿ ಭುವನಬಿರಾಮ ಉಡುಪ, ಕನ್ನಡ ಚುಟುಕು ಸಾಹಿತ್ಯ ಪರಿಷತ್ ರಾಜ್ಯ ಸಂಚಾಲಕ, ಜಯಾನಂದ ಪೆರಾಜೆ, ಕನ್ನಡ ಚುಸಾಪ ದ.ಕ. ಜಿಲ್ಲಾಧ್ಯಕ್ಷ ಡಾ.ಕೊಳಚಪ್ಪೆ ಗೋವಿಂದ ಭಟ್, ಕಥಾಬಿಂದು ಪ್ರಕಾಶನ ರೂವಾರಿ ಪಿ.ವಿ.ಪ್ರದೀಪ್ ಕುಮಾರ್, ಕಾಸರಗೋಡು ಕನ್ನಡ ಭವನ ಸ್ಥಾಪಕ ಅಧ್ಯಕ್ಷ ಡಾ.ವಾಮನ್ ರಾವ್ ಬೇಕಲ್ ಅತಿಥಿಗಳಾಗಿದ್ದರು.

ಶಿರೂರು ಮಠ ವ್ಯವಸ್ಥಾಪಕ ಶ್ರೀ ಭಾಗವತ್, ಸರ್ವಾಧ್ಯಕ್ಷ ರಮಣ್ ಆಚಾರ್ಯ, ಹರಿಕೃಷ್ಣ ಪುನರೂರು ಅವರು ಸಂಧ್ಯಾರಾಣಿ ಟೀಚರ್ ಅವರಿಗೆ ಶಾಲು, ಸ್ಮರಣಿಕೆ, ಪ್ರಮಾಣಪತ್ರ, ಫಲತಾಂಬೂಲದೊಂದಿಗೆ ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಂಧ್ಯಾರಾಣಿ ಟೀಚರ್ ಅವರಿಗೆ ಕರ್ನಾಟಕ ಸರಕಾರದ ಗಡಿ ಪ್ರದೇಶ ಪ್ರಾಧಿಕಾರದ ಗಡಿ ಚೇತನ ಪುರಸ್ಕಾರ ಅಂತರ್ದೇಶೀಯ ಮಟ್ಟದಲ್ಲಿ ದುಬೈಯಲ್ಲಿ, ಕಾಸರಗೋಡು ಜಿಲ್ಲಾ ಮಹಿಳಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ , ಇತ್ತೀಚಿಗೆ ಕರ್ನಾಟಕದ ಪ್ರತಿಷ್ಠಿತ ಹೊಯ್ಸಳ ಪ್ರಶಸ್ತಿ ಸಹಿತ ಹತ್ತಾರು ಪ್ರಶಸ್ತಿ, ಗೌರವಾರ್ಪಣೆಗಳಿಗೆ ಬಾಜನರಾಗಿದ್ದಾರೆ.

ಮೇ 8ರಿಂದ ಮಲ್ಲ ಶ್ರೀ ದೇವಸ್ಥಾನದಲ್ಲಿ ಶತ ಚಂಡಿಕಾಯಾಗ, ಲಕ್ಷಾರ್ಚನಾ ಕಲಶಾಭಿಷೇಕ

ಕಾಸರಗೋಡು: ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ಸತ್ಯನಾರಾಯಣ ಸ್ವಾಮಿಯ ಪ್ರತಿಷ್ಠಾ ಸುವರ್ಣ ಮಹೋತ್ಸವದ ಅಂಗವಾಗಿ ಶತ ಚಂಡಿಕಾಯಾಗ ಹಾಗೂ ಲಕ್ಷಾರ್ಚನಾ ಕಲಶಾಭಿಷೇಕ ಮೇ 8–12ರ ತನಕ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಮೇ 8ರಂದು ಬೆಳಿಗ್ಗೆ 8.30ಕ್ಕೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರ ದಿವ್ಯ ಸಾನಿಧ್ಯ ದಲ್ಲಿ ಅಷ್ಟೋತ್ತರ ಶತನಾಳಿಕೇರ ಗಣಪತಿಹವನ, ಸ್ವಸ್ತಿ ಪುಣ್ಯಾಹ ವಾಚನ, ಶತ ಚಂಡೀಋತ್ವಿಕ್‌ವರಣ, ಸಪ್ತಶತೀ ಪಾರಾಯಣ, ಚತುರ್ವೇದ ಪಾರಾಯಣ, ವಿಷ್ಣು ಭಾಗವತ, ದೇವಿ ಭಾಗವತ ಪಾರಾಯಣ ಆರಂಭಗೊಳ್ಳಲಿದೆ.

ಮೃತ್ಯುಂಜಯ ಹವನ

ಮೇ 9ರಂದು ಬೆಳಿಗ್ಗೆ 11.30ಕ್ಕೆ ಮೃತ್ಯುಂಜಯ ಹವನ ಜರಗಲಿದೆ. ಮೇ 10ರಂದು ಬೆಳಗ್ಗೆ 11.30ಕ್ಕೆ ಪವಮಾನ ವನ, ಏಕಮತ್ಯಹವನ, ಮೇ 11ರಂದು ಸಂಜೆ 6.30ಕ್ಕೆ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿದಾನಂಗಳವರಿಗೆ ಪೂರ್ಣಕುಂಭ ಸ್ವಾಗತ, ಶ್ರೀ ದೇವೀ ದರ್ಶನ, ಧೂಳೀ ಪಾದಪೂಜೆ, ಶ್ರೀ ಚಂದ್ರಮೌಳೀಶ್ವರ ದೇವರ ಪೂಜೆ ಜರಗಲಿದೆ.

ಮೇ 13ರಂದು ಬೆಳಿಗ್ಗೆ 9.30ಕ್ಕೆ ಶ್ರೀ



ಯಾಗ ಪೂರ್ಣಾಹುತಿ

ಮೇ 12ರಂದು ಬೆಳಿಗ್ಗೆ 11ಕ್ಕೆ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಗಳವರ ಸಾನಿಧ್ಯದಲ್ಲಿ ಶತ ಚಂಡಿಕಾ ಯಾಗದ ಪೂರ್ಣಾಹುತಿ, ಗುರುದರ್ಶನ, ಪಾದುಕಾಪೂಜೆ, ಭಿಕ್ಷಾವಂದನೆ, ಫಲಮಂತ್ರಾಕ್ಷತೆ, ರಾತ್ರಿ ಗುರುದರ್ಶನ, ಪಾದುಕಾಪೂಜೆ, ಶ್ರೀ ಚಂದ್ರಮೌಳೀಶ್ವರ ದೇವರ ಪೂಜೆ ಜರಗಲಿದೆ.

ವಿಧುಶೇಖರ ಭಾರತೀ ಸನ್ನಿಧಾನಂಗಳ ವರಿಂದ ಶ್ರೀ ಸತ್ಯನಾರಾಯಣ ದೇವರಿಗೆ ಲಕ್ಷಾರ್ಚನಾ ಕಲಶಾಭಿಷೇಕ, ಅನುಗ್ರಹ ಭಾಷಣ, ಶ್ರೀ ಗುರುದರ್ಶನ, ಪಾದುಕಾಪೂಜೆ, ಗುರುಕಾಣಿಕೆ, ಫಲಮಂತ್ರಾಕ್ಷತೆ ನಡೆಯಲಿರುವುದು.

ಚೇವಾರು ಎಸ್‌ಎಸ್‌ಯುಪಿ ಶಾಲೆ: ತ್ರಿದಿನ ರಂಗ ಸನಿವಾಸ ಶಿಬಿರ ಸಂಪನ್ನ



ಕುಂಬಳೆ: ಕಾಸರಗೋಡಿನ ಕನ್ನಡ ಅಧ್ಯಾಪಕರ ಸಾಂಸ್ಕೃತಿಕ ರಂಗಭೂಮಿ ವೇದಿಕೆಯಾದ ರಂಗಚೇತನ ಕಾಸರಗೋಡು ಇದರ ಆಶ್ರಯದಲ್ಲಿ ನಡೆದ 6ನೇ ವರ್ಷದ ಮಕ್ಕಳ ಬೇಸಿಗೆ ಸನಿವಾಸ ಶಿಬಿರ ಚಿಣ್ಣರ ದೃಶ್ಯ ಕಾವ್ಯ – ಚಿತ್ತಾರ 2026 ಚೇವಾರು ಎಸ್‌ಎಸ್ ಯುಪಿ ಶಾಲೆಯಲ್ಲಿ ಮಂಗಳವಾರ ಸಂಪನ್ನಗೊಂಡಿತು. ತ್ರಿದಿನ ಸನಿವಾಸ ಶಿಬಿರದಲ್ಲಿ 50 ಮಂದಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ರಂಗಕಲೆಯ ಮೂಲಪಾಠ, ಅಭಿನಯ, ಸಂವಹನ, ಮಿಯಾಜಾಲ, ಮಿಮಿಕ್ರಿ, ಪರಿಸರ ಮತ್ತು ಪಕ್ಷಿ ವೀಕ್ಷಣೆ, ಕಲಾವಿದರ ಗೃಹ ಸಂದರ್ಶನ, ನಾಟಕ – ಸಂಭಾಷಣೆ, ರಂಗಗೀತೆ, ರಂಗದ ನೆರಳು – ಬೆಳಕು, ರಂಗಪರಿಕರ ತಯಾರಿ, ಯೋಗ, ರಂಗವಿನ್ಯಾಸ, ಮುಂತಾದ ವಿಷಯಗಳನ್ನು ಶಿಬಿರಾರ್ಥಿಗಳು ಕರಗತಗೊಳಿಸಿದರು.

ಶಿಬಿರದ ನಿರ್ದೇಶಕರಾಗಿದ್ದ ದಿವಾಕರ ಬಲ್ಲಾಳ್, ಸದಾಶಿವ ಬಾಲಮಿತ್ರ, ಸಂಪನ್ಮೂಲ ವ್ಯಕ್ತಿಗಳಾದ ನಿರ್ಮಲ್ ಕುಮಾರ್, ಬಾಲಸುಬ್ರಹ್ಮಣ್ಯಂ, ಸುರೇಶ್ ಯಾದವ್, ರಾಜು ಕಿದೂರು, ವರ್ಣ ಕಲಾವಿದ ವಿಶ್ವಾಸ್, ಬಾಸುಮ ಕೊಡಗು, ಸುಕೇಶ್ ಕಾಸರಗೋಡು, ಪ್ರಕಾಶ್ ಕುಂಬಳೆ, ಸಾತ್ವಿಕ್, ವಸಂತ ಮೂಡಂಬೈಲು, ಕೃಷ್ಣಪ್ಪ ಬಂಬಿಲ ಮೊದಲಾದ ಕಲಾ ಪ್ರತಿಭೆಗಳು ಶಿಬಿರಾರ್ಥಿಗಳಿಗೆ ಉಪಯುಕ್ತ ತರಗತಿ ನಡೆಸಿದರು.

ಶಿಬಿರದ ಸಮಾರೋಪವನ್ನು ಕಾಸರಗೋಡು ಜಿಲ್ಲಾ ನಿವೃತ್ತ ಶಿಕ್ಷಣ ಉಪ ನಿರ್ದೇಶಕ ಇಬ್ರಾಹಿಂ ಬಿ. ಉದ್ಘಾಟಿ ಸಿದರು. ಸಂಘ ಟನೆ ಉಪಾಧ್ಯಕ್ಷ ವಿಜಯ ಕುಮಾರ್ ಬಿ. ಸ್ವಾಗತಿಸಿ, ಗೋಪಾಲ ಕಾಟುಕುಕ್ಕೆ ವಂದಿಸಿದರು. ಸಂಘಟನೆಯ ಪದಾಧಿಕಾರಿಗಳಾದ ರಂಗಕರ್ಮಿ ಅಶೋಕ್ ಕೊಡ್ಲಮೊಗರು, ಶಿವಪ್ರಸಾದ್ ರಾವ್ ಪೈವಳಿಕೆ, ಶಿವರಾಮ ಕಾಟುಕುಕ್ಕೆ, ಮೇಲ್ವಿನ್ ಪೆರ್ಮುದೆ, ರಾಜಕುಮಾರ್ ಕಾಟುಕುಕ್ಕೆ, ಉದಯ ಸಾರಂಗ್, ಪ್ರಮೀಳಾ ಟೀಚರ್, ಶಿವಪ್ರಸಾದ್ ಚೆರುಗೋಳಿ, ಪ್ರಸಾದ ಮುಗು ವಿವಿಧ ಜವಾಬ್ದಾರಿ ವಹಿಸಿದ್ದರು.

ಬೇಕಲ ಉಪಜಿಲ್ಲಾ ಶಿಕ್ಷಣಾಧಿಕಾರಿ ಅರವಿಂದ, ನಿವೃತ್ತ ಮುಖ್ಯೋಪಾಧ್ಯಾಯ ಪ್ರಕಾಶ್ ಮಾಸ್ತರ್, ಧರ್ಮತ್ತಡ್ಕ ಶಾಲೆ ಪ್ರಾಂಶುಪಾಲ ರಾಮಚಂದ್ರ ಭಟ್, ಕಾಸರಗೋಡು ಉಪ ಶಿಕ್ಷಣಾಧಿಕಾರಿ ನಾರಾಯಣ ದೇಲಂಪಾಡಿ, ಉದಯಗಿರಿ ಶಾಲಾ ಮುಖ್ಯೋಪಾಧ್ಯಾಯ ಶ್ರೀಧರ ಭಟ್, ಬಂಬ್ರಾಣ ಶಾಲಾ ಮುಖ್ಯ ಶಿಕ್ಷಕ ಸತ್ಯಪ್ರಕಾಶ್, ರಾಜೇಶ್ ಉಬ್ರಂಗಳ, ಪಬ್ಲಿಕ್ ಪ್ರಾಸಿಕ್ಯೂಟರ್ ಚಂದ್ರಮೋಹನ್, ನಿವೃತ್ತ ಅಧ್ಯಾಪಕ ವೆಂಕಟರಮಣ, ಸುನಿಲ್ ಕುಮಾರ್ ಮಯ್ಯಳ, ಗುರುರಾಜ್ ಕೋಳ್ಯೂರು ಶಿಬಿರಕ್ಕೆ ಭೇಟಿ ನೀಡಿದರು.

ಗೌರವ

ಚೇವಾರು ಶಾಲೆಯಿಂದ ಪ್ರಸಕ್ತ ವರ್ಷ ನಿವೃತ್ತರಾಗುವ ಮುಖ್ಯೋಪಾಧ್ಯಾಯ, ಸಂಘಟಕ ಶ್ಯಾಮ್ ಭಟ್ ಯು., ಎಸ್‌ಎಸ್‌ಕೆ ಯೋಜನಾಧಿಕಾರಿ ಆಗಸ್ಟಿನ್ ಬರ್ನಾಡ್, ಪಿಎಚ್‌ಡಿ ಪದವಿ ಪಡೆದ ರಂಗಚೇತನ ಅಧ್ಯಕ್ಷ ಡಾ.ಯತೀಶ್ ಕುಮಾರ್, ಇಬ್ರಾಹಿಂ ಬಿ. ಅವರನ್ನು ಗೌರವಿಸಲಾಯಿತು.


ಪೆರಡಾಲ ದೇವಳ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ

ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವವು ಏ.17 ಏ.28ರ ತನಕ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು.

ಎಡನೀರು ಮಠಾಧೀಶ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಪೂರ್ಣಾನುಗ್ರಹದೊಂದಿಗೆ ಬ್ರಹ್ಮಶ್ರೀ ವೇದಮೂರ್ತಿ ರವೀಶ ತಂತ್ರಿ ಕುಂಟಾರು ನೇತೃತ್ವದಲ್ಲಿ ಜರಗಲಿದೆ.

ಏಪ್ರಿಲ್ 17ರಂದು ಬೆಳಿಗ್ಗೆ 9.30ಕ್ಕೆ ಕೆಡೆಂಜಿ ಶ್ರೀ ಮಹಾವಿಷ್ಣು ಕ್ಷೇತ್ರದಿಂದ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, ಏ.18ರಂದು ನವೀಕರಿಸಿದ ರಾಜಗೋಪುರ, ರಾಜಾಂಗಣ ಮೇಲ್ಛಾವಣಿ ಮತ್ತು ನೂತನ ಭೋಜನ ಶಾಲೆ ಲೋಕಾರ್ಪಣೆ, ಏ.23ರಂದು 108 ತೆಂಗಿನಕಾಯಿಯ ಗಣಪತಿ ಹೋಮ, ಶ್ರೀದೇವರ ಪ್ರತಿಷ್ಠೆ ನಡೆಯಲಿರುವುದು. ಏ.26ರಂದು ಶ್ರೀ ದೇವರಿಗೆ ಸಹಸ್ರ ಕಲಶಾಭಿಷೇಕ, ಬ್ರಹ್ಮಕಲಶಾಭಿಷೇಕ ನಡೆಯಲಿದೆ. ನಟರಾಜ ವೇದಿಕೆ ಹಾಗೂ ಕೈಲಾಸ ವೇದಿಕೆ ಎಂಬ ಎರಡು ಕಡೆಗಳಲ್ಲಿ ನಿತ್ಯ ವಿವಿಧ ಪ್ರಸಿದ್ಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಲಿವೆ.

ಪ್ರತೀದಿನ ಸಂಜೆ ನಡೆಯುವ ಸಭಾಕಾರ್ಯಕ್ರಮದಲ್ಲಿ ನಾಡಿನ ಯತಿವರೇಣ್ಯರು, ಗಣ್ಯರು, ದಾನಿಗಳು, ವೇದಿಕೆಯನ್ನು



- **ಏ.17ರಂದು ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ**
- **ಏ.18ರಂದು ನವೀಕರಿಸಿದ ರಾಜಗೋಪುರ ಮತ್ತು ರಾಜಾಂಗಣ ಮೇಲ್ಛಾವಣಿ, ನೂತನ ಭೋಜನ ಶಾಲೆ ಲೋಕಾರ್ಪಣೆ**
- **ಏ.26ರಂದು ಬ್ರಹ್ಮಕಲಶಾಭಿಷೇಕ**
- **ಪ್ರಸಿದ್ಧ ವಾಗ್ಮಿಗಳಿಂದ ಧಾರ್ಮಿಕ ಭಾಷಣ**

ಅಲಂಕರಿಸಲಿದ್ದಾರೆ. ಪ್ರಸಿದ್ಧ ವಾಗ್ಮಿಗಳಿಂದ ಧಾರ್ಮಿಕ ಭಾಷಣ ನಡೆಯಲಿದೆ. ಒಟ್ಟು 12 ದಿನಗಳಲ್ಲಾಗಿ 3 ಲಕ್ಷದಷ್ಟು ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಸಮಿತಿಯ ಪದಾಧಿಕಾರಿಗಳು ತಿಳಿಸಿದ್ದಾರೆ.

ಏ.19ರಂದು ಕೂಡ್ಲು ಶ್ರೀ ಚಾಮುಂಡೇಶ್ವರಿ ದೇವಳದ ವಾರ್ಷಿಕ ಪ್ರತಿಷ್ಠಾ ಮಹೋತ್ಸವ

ಕಾಸರಗೋಡು: ಇತಿಹಾಸ ಪ್ರಸಿದ್ಧವಾದ ಕಾರಣಿಕವುಳ್ಳ ಕೂಡ್ಲು ಮಾರಿಗುಡಿ ಯೆಂದು ಖ್ಯಾತಿ ಪಡೆದಿರುವ ಕಾಸರಗೋಡು ರಾಮದಾಸನಗರದ ಕೂಡ್ಲು ಚಾಮುಂಡೇಶ್ವರಿ ಕಾಲಭೈರವ ದೇವಸ್ಥಾನದ ವಾರ್ಷಿಕ ಶುದ್ಧಿಕಲಶ ಪ್ರತಿಷ್ಠಾ ಮಹೋತ್ಸವ ವಿವಿಧ ಧಾರ್ಮಿಕ ಸಂಕೀರ್ತನಾ ಕಾರ್ಯಕ್ರಮಗಳೊಂದಿಗೆ ಏ.19ರಂದು ತಂತ್ರಿವರ್ಯರಾದ ಬ್ರಹ್ಮಶ್ರೀ ವಿಷ್ಣು ಪ್ರಕಾಶ ಪಟ್ಟೇರಿ ಕಾವುಮಠ ಅವರ ಮಾರ್ಗದರ್ಶನದಲ್ಲಿ ನಡೆಯಲಿದೆ.

ಕಾಸರಗೋಡು ದಕ್ಷಿಣ ಕನ್ನಡ ಉಡುಪಿ ಕೊಡಗು ಜಿಲ್ಲೆಯ ಭಗವದ್ಭಕ್ತರು ಹಾಗೂ ಕುಟುಂಬಸ್ಥರು ಆಸ್ತಿಕ ಮಹಾಜನರು, ಊರ ಪರವೂರಿನ ಭಕ್ತಾದಿಗಳು ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ. ಧಾರ್ಮಿಕ, ತಾಂತ್ರಿಕ ಸಂಪ್ರದಾಯದ ಪ್ರಕಾರ ಉತ್ಸವ ನಡೆಯಲಿದೆ.

ಕಲಶ ಪೂಜೆ

ಅಂದು ಬೆಳಿಗ್ಗೆ 7 ಗಂಟೆಗೆ ಗಣಪತಿಹೋಮ, 9.30ಕ್ಕೆ ಕ್ಷೇತ್ರದ ತಂತ್ರಿಗಳ ನೇತೃತ್ವದಲ್ಲಿ ಕಲಶಪೂಜೆ, ವಾರ್ಷಿಕ ಶುದ್ದಿ ಕಲಶ, ಪ್ರತಿಷ್ಠಾ ಮಹೋತ್ಸವ, ಮಧ್ಯಾಹ್ನ 12ಕ್ಕೆ ಮಹಾಪೂಜೆ ಹಾಗೂ ಶ್ರೀ ದೇವಿಯ ದರ್ಶನ ಸೇವೆ, 1.30ರಿಂದ ಅನ್ನಪ್ರಸಾದ, ರಾತ್ರಿ 7ರಿಂದ ಕೂಡ್ಲು ಶ್ರೀ ಚಾಮುಂಡೇಶ್ವರಿ ಭಜನಾ ಸಂಘದ ಭಜನಾ ಸಂಕೀರ್ತನಾ ಸೇವೆ ನಡೆಯಲಿದೆ.



ಪ್ರತಿಷ್ಠಾ ಮಹೋತ್ಸವದಂದು ಮೂಡುಬಿದ್ರೆ ಪ್ರಕಾಶ ರಂಜಿನಿ ಪ್ರಜ್ಞಿನಿ ವಂದನ್ ಬೇಕಲ್ ಅವರು ಅನ್ನದಾನ ಸೇವೆಯನ್ನು ನೀಡಲಿದ್ದಾರೆ.

ವಿಶೇಷ ಅಲಂಕಾರ ಪೂಜೆ

ಪ್ರತಿಷ್ಠಾ ಮಹೋತ್ಸವದಂದು ಹೂವಿನಿಂದ ವಿಶೇಷ ಅಲಂಕಾರ ಪೂಜೆಯು ನಡೆಯಲಿದೆ ಎಂದು ದೇವಸ್ಥಾನದ ಭಂಡಾರ ಮನೆಯ ಆಡಳಿತ ಮೋಕೇಸರ ಕೆ.ಲೀಲಾಧರ ಕೂಡ್ಲು, ಸೇವಾ ಸಮಿತಿಯ ಅಧ್ಯಕ್ಷ ಹಾಗೂ ಪಾತ್ರಿ ಮೋಹನ ಕೂಡ್ಲು ಕುಂಬಳೆ, ಪ್ರಧಾನ ಅರ್ಚಕ ಶ್ರೀಪತಿ ಅಡಿಗ, ಕೆ.ಉದಯಕುಮಾರ್ ಅಂಬಿಕಾರೋಡ್ ಹಾಗೂ ದೇವಸ್ಥಾನ ಸೇವಾ ಸಮಿತಿ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಶ್ರೀಕೃಷ್ಣ ಭಜನಾ ಮಂದಿರ ಕಾಸರಗೋಡು ಇದರ ರಜತ ಮಹೋತ್ಸವದ ಆಮಂತ್ರಣ ಪತ್ರಿಕೆಯನ್ನು ಸುಳ್ಯಕ್ಕೆ ತೆರಳಿ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರಿಗೆ ನೀಡಲಾಯಿತು. ಈ ಸಂದರ್ಭ ಉತ್ಸವ ಸಮಿತಿ ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ಪ್ರಧಾನ ಕಾರ್ಯದರ್ಶಿ ಗುಣಪಾಲ ಅಮ್ಮೈ, ಕಾರ್ಯದರ್ಶಿ ರಾಮಚಂದ್ರ, ರಾಜೇಶ್ ಮತ್ತು ಕೋಶಾಧಿಕಾರಿ ವೇಣುಗೋಪಾಲ ಉಪಸ್ಥಿತರಿದ್ದರು.

20 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ರಸ್ತೆ | ಅಧಿಕಾರಿಗಳ ಗಾಢ ಮೌನ
ನೀರ್ಚಾಲು-ಮುಗು ರಸ್ತೆ ದುರಸ್ತಿಗೆ ಸಾರ್ವಜನಿಕರ ಆಗ್ರಹ

ಬದಿಯಡ್ಕ: ನೀರ್ಚಾಲು ಸಾಯಿಮಂದಿರ ಮುಗುರಸ್ತೆ ಹಾಗೂ ಉರ್ಲಿತ್ತಡ್ಕ ಬೇಳ ರಸ್ತೆಯು ತೀರಾ ಶೋಚನೀಯಾವಸ್ಥೆಯಲ್ಲಿದೆ ಎಂದು ನಾಗರಿಕರು ದೂರಿದ್ದಾರೆ.

20 ವರ್ಷಗಳ ಹಿಂದೆ ಲೋಕೋಪಯೋಗಿ ಇಲಾಖೆ ಈ ರಸ್ತೆಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿತ್ತು. ಆದರೆ ಯಾವುದೇ ಅಭಿವೃದ್ಧಿ ಕಾರ್ಯ ನಡೆಸದಿರುವುದರಿಂದ ರಸ್ತೆಯು ಸಂಚಾರಕ್ಕೆ ಅಯೋಗ್ಯ ವಾಗಿದೆ. ಇತ್ತೀಚೆಗೆ ಕೇರಳ ಜಲಪ್ರಾಧಿಕಾರವು ರಸ್ತೆಯ ಎರಡೂ ಬದಿಗಳಲ್ಲಿ ಪೈಪ್ ಅಳವಡಿಸಲು ಹೊಂಡಗಳನ್ನು ತೋಡಿ ಅದನ್ನು ಸಮರ್ಪಕವಾದ ರೀತಿಯಲ್ಲಿ ಮುಚ್ಚದಿರುವುದು ವಾಹನ ಸಂಚಾರಕ್ಕೆ ಕಷ್ಟಕರವಾಗಿದೆ. ಸವಾರರು ಸ್ವಲ್ಪವೇ ಎಚ್ಚರ ತಪ್ಪಿದರೂ ಅಪಾಯಕಾರಿಯಾಗಿದೆ. ಇನ್ನು ಮಳೆಗಾಲ ಪ್ರಾರಂಭವಾದಲ್ಲಿ ಈ ರಸ್ತೆ ಸಂಚಾರ ದುಸ್ತರವಾಗಲಿದೆ.

20 ವರ್ಷಗಳಿಂದ ರಸ್ತೆಯ ಯಾವುದೇ ಗುಂಡಿ



ಮುಚ್ಚುವ ಕೆಲಸ ಅಥವಾ ದುರಸ್ತಿ ಕಾರ್ಯ ಇದುವರೆಗೆ ನಡೆದಿಲ್ಲ, ಈ ಬಗ್ಗೆ ಈಗಾಗಲೇ ಮಾಧ್ಯಮಗಳಲ್ಲಿ ವರದಿಗಳು ಪ್ರಕಟಗೊಂಡಿದ್ದರೂ ಇಲಾಖೆಯು ಮೌನ ವಹಿಸುತ್ತಿದೆ. ಲೋಕೋಪಯೋಗಿ ಇಲಾಖೆಯು 2 ತಿಂಗಳ ಹಿಂದೆ ಹಣ ಮಂಜೂರಾಗಿದೆ ಮತ್ತು ಟೆಂಡರ್ ಪ್ರಕ್ರಿಯೆ ಮುಗಿದಿದೆ ಎಂದು ಮಾಹಿತಿ ನೀಡಿದ್ದರೂ, ಇದುವರೆಗೆ ಯಾವುದೇ ಕಾಮಗಾರಿ ನಡೆದಿಲ್ಲ.

ಪ್ರತಿಭಟನೆಯ ಎಚ್ಚರಿಕೆ

ರಸ್ತೆ ದುರಸ್ತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ಗ್ರಾಮಸ್ಥರು ಮತ್ತು ವಾಹನ ಮಾಲೀಕರು ಲೋಕೋಪಯೋಗಿ ಇಲಾಖೆಯ ಕಚೇರಿ ಮುಂದೆ ಅಧಿಕಾರಿಗಳ ಅಸಡ್ಡೆ ಕಾರ್ಯವೈಖರಿಯ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಕನ್ನಡ ಝೇಂಕಾರ ಕಾರ್ಯಕ್ರಮ: ಡಾ.ವಾಮನ್ ರಾವ್ - ಸಂಧ್ಯಾರಾಣಿ ದಂಪತಿಗೆ 'ಗಡಿನಾಡು ಕನ್ನಡ ಪೋಷಕ' ಪ್ರಶಸ್ತಿ

ಕಾಸರಗೋಡು: ಮಂಗಳೂರಿನ ಖ್ಯಾತ ಕನ್ನಡ ಸಂಘಟಕಿ ರಾಣಿ ಪುಷ್ಪಲತಾ ದೇವಿ ಅಧ್ಯಕ್ಷೆಯಾದ ಕರ್ನಾಟಕ ಸಾಮಾಜಿಕ ಸಾಂಸ್ಕೃತಿಕ ಅಭಿವೃದ್ಧಿ ಪ್ರತಿಷ್ಠಾನದ ವತಿಯಿಂದ ಏ.25ರಂದು ಸಂಜೆ 5.30ಕ್ಕೆ ಮಂಗಳೂರು ಪುರಭವನದ ಎದುರಿನ ರಾಜಾಜಿ ಪಾರ್ಕ್‌ನಲ್ಲಿ ನಡೆಯುವ ಕನ್ನಡ ಝೇಂಕಾರ ಕಾರ್ಯಕ್ರಮ ನಡೆಯಲಿದೆ.

ಈ ಕಾರ್ಯಕ್ರಮದಲ್ಲಿ ಕಾಸರಗೋಡು ನುಳ್ಳಿಪ್ಪಾಡಿಯ ಕನ್ನಡ ಭವನ ಮತ್ತು ಗ್ರಂಥಾಲಯ, ಕನ್ನಡ ಭವನ ಪ್ರಕಾಶನ, ಕನ್ನಡ ಭವನ ಉಚಿತ ಸಾರ್ವಜನಿಕ ವಾಚನಾಲಯ, ಕನ್ನಡ ಭವನ ಉಚಿತ ವಸತಿ ಸೌಕರ್ಯ, ಕನ್ನಡ ಭವನ ಸ್ಥಾಪಿತ ಕೇರಳ ರಾಜ್ಯ – ಕನ್ನಡ ಚುಟುಕು ಸಾಹಿತ್ಯ ಪರಿಷತ್ತು ಮುಂತಾದ ಸಮೂಹ ಸಂಸ್ಥೆಗಳ ರೂವಾರಿಗಳಾದ



ಡಾ.ವಾಮನ್ ರಾವ್ ಬೇಕಲ್ ಮತ್ತು ಸಂಧ್ಯಾರಾಣಿ ದಂಪತಿಗೆ ಗಡಿನಾಡು ಕನ್ನಡ ಪೋಷಕ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಕರ್ನಾಟಕ ಸಾಮಾಜಿಕ ಸಾಂಸ್ಕೃತಿಕ ಅಭಿವೃದ್ಧಿ ಪ್ರತಿಷ್ಠಾನ ಅಧ್ಯಕ್ಷೆ ರಾಣಿ ಪುಷ್ಪಲತಾ ದೇವಿ ಪತ್ರ ತಿಳಿಸಿದ್ದಾರೆ.

ರಾಜಾಜಿ ಪಾರ್ಕ್ ನಲ್ಲಿ ನಡೆಯಲಿರುವ ಕನ್ನಡ ಝೇಂಕಾರ ಕಾರ್ಯಕ್ರಮದಲ್ಲಿ ವಿಚಾರ ಗೋಷ್ಠಿ – ಕವಿಗೋಷ್ಠಿ, ಗೀತಗಾಯನ, ಸಾಂಸ್ಕೃತಿಕ ಕಾರ್ಯಕ್ರಮ, ಪ್ರಶಸ್ತಿ ಪ್ರದಾನ, ನಡೆಯಲಿದೆ

ಕನ್ನಡ ಸೇವೆಗೆ ಸಂದ ಗೌರವ

ಗಡಿನಾಡು ಕಾಸರಗೋಡಿನಲ್ಲಿ ಕನ್ನಡ ಅಸ್ಮಿತೆ ಉಳಿಸಿ ಬೆಳೆಸುವಲ್ಲಿ ಅವಿರತ ಶ್ರಮ ವಹಿಸುತ್ತಿರುವ ಕನ್ನಡ ದಂಪತಿಯ ಕನ್ನಡ ಸೇವೆಯನ್ನು ಪರಿಗಣಿಸಿ ಇವರಿಗೆ ಸಂಸ್ಥೆಯ ಪ್ರತಿಷ್ಠಿತ ಗಡಿನಾಡು ಕನ್ನಡ ಪೋಷಕ ಪ್ರಶಸ್ತಿ ನೀಡಲಾಗುವುದು.

ಸುತ್ತ ಮುತ್ತ

ನಾಳೆ 'ಜನಪದ ಸಿರಿ' ಸಾಂಸ್ಕೃತಿಕ ವೈಭವ

ಕೋಟ: ಕರಾವಳಿಯ ಮಣ್ಣಿನಲ್ಲಿ ಮರೆಯಾಗುತ್ತಿರುವ ಜಾನಪದ ಕಲೆಗಳನ್ನು ಪ್ರೋತ್ಸಾಹಿಸುವ ಮತ್ತು ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಕೋಡಿ ಕನ್ಯಾಣದಲ್ಲಿ ಇದೇ ಏ.19ರಂದು ಅದ್ದೂರಿ 'ಜನಪದ ಸಿರಿ 2026' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಶಂಕರ್ ಕುಂದರ್ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋಟ ಸಿ.ಎ. ಬ್ಯಾಂಕ್ ಅಧ್ಯಕ್ಷ ಡಾ. ಕೃಷ್ಣ ಕಾಂಚನ್ ಮಾತನಾಡಿ ಶ್ರೀ ಬ್ರಾಹ್ಮಿ ಗ್ರೂಪ್ಸ್ ಕೋಡಿ ಕನ್ಯಾಣ, ವಿಶ್ವ ಮಾನವ ಫೌಂಡೇಶನ್ ಹಾಗೂ ತನ್ಮಯ್ ಪ್ರೊಡಕ್ಷನ್ಸ್ ಸಹಯೋಗದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಈ ಕಾರ್ಯಕ್ರಮ ನಡೆಯಲಿದೆ. ಏ. 19ರಂದು ಕೋಡಿ ಕನ್ಯಾಣದ ಶ್ರೀ ಮಹಾಸತೀಶ್ವರೀ ದೇವಸ್ಥಾನದ ಹತ್ತಿರ ಸಂಜೆ 6ರಿಂದ 9.30ರ ವರೆಗೆ 200ಕ್ಕೂ ಅಧಿಕ ಕಲಾವಿದರ ಸಂಗಮದಿಂದ ಕಾರ್ಯಕ್ರಮ ನಡೆಯಲಿದೆ.ಡೊಳ್ಳು ಕುಣಿತ, ಪೂಜಾ ಕುಣಿತ, ಕಂಸಾಳೆ, ವೀರಗಾಸೆ, ಲಂಬಾಣಿ ನೃತ್ಯ ಹಾಗೂ ಹುಲಿವೇಷದಂತಹ ವಿಶಿಷ್ಟ ಕಲಾ ಪ್ರಕಾರಗಳು ಈ ಉತ್ಸವದ ಪ್ರಮುಖ ಆಕರ್ಷಣೆಯಾಗಿರಲಿವೆ ಎಂದು ಡಾ.ಕೃಷ್ಣ ಕಾಂಚನ್ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಸಂಘಟಕರಾದ ಶಂಕರ್ ಬಂಗೇರ, ಸತೀಶ್ ತಿಂಗಳಾಯ, ವಸಂತ ಪುತ್ರನ್, ರಾಘವೇಂದ್ರ ಕರ್ಕೇರ, ಉದಯ ಸುವರ್ಣ ಹಾಗೂ ಲೋಕೇಶ್ ಮೆಂಡನ್ ಉಪಸ್ಥಿತರಿದ್ದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರ ಪ್ರವಾಸ

ಉಡುಪಿ: ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಡಾ. ಪುಷ್ಪಾ ಅಮರನಾಥ ಅವರು ಏ. 17 ಮತ್ತು 18ರಂದು ಉಡುಪಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.
ಏ. 17 ರಂದು ರಾತ್ರಿ ಉಡುಪಿಗೆ ಆಗಮಿಸಿ ವಾಸ್ತವ್ಯ ಮಾಡಲಿದ್ದು, ಏ. 18ರಂದು ಬೆಳಗ್ಗೆ 11 ಗಂಟೆಗೆ ಕಾಪು ತಾಲೂಕು ಪಂಚಾಯತ್ ಕಚೇರಿಯಲ್ಲಿ, ಕಾಪು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ನಗರಸಭೆ ಜನಗಣತಿ ಕಾರ್ಯಕ್ಕೆ ಸಹಕಾರ ನೀಡಿ

ಉಡುಪಿ: ಭಾರತ ಜನಗಣತಿ-2027ಕ್ಕೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆಯನ್ವಯ ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಏ.16ರಿಂದ ಜನಗಣತಿ ಕಾರ್ಯ ಆರಂಭಗೊಳ್ಳಲಿದೆ. ಜನಗಣತಿ ಕಾರ್ಯದಲ್ಲಿ ಪಾಲ್ಗೊಳ್ಳುವ ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು, ಶಾಲಾ ಶಿಕ್ಷಕ ವೃಂದದವರು ಮನೆ ಮನೆ ಭೇಟಿ ನೀಡಿ, ಮನೆಪಟ್ಟಿಯನ್ನು ಮಾಡಲಿದ್ದು, ಸಾರ್ವಜನಿಕರು ಜನಗಣತಿ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡುವಂತೆ ನಗರಸಭೆ ಪೌರಾಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ನಗರಸಭೆಯಿಂದ ವಿವಿಧ ಸೌಲಭ್ಯ: ಅರ್ಜಿ ಆಹ್ವಾನ

ಉಡುಪಿ: ಉಡುಪಿ ನಗರಸಭೆಯ 2025-26 ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿಯಡಿ (ಶೇ.24.10) ಪರಿಶಿಷ್ಟ ಜಾತಿಯ ಉಪಯೋಜನೆ (ಎಸ್‌ಸಿಎಸ್‌ಪಿ) ಅನುದಾನದ ವ್ಯಕ್ತಿ ಸಂಬಂಧಿತ ಕಾರ್ಯಕ್ರಮದಡಿ ಮನೆಯ ಮೇಲ್ಚಾವಣಿ ದುರಸ್ತಿ ಹಾಗೂ ಸಣ್ಣ ಉದ್ದಿಮೆಗೆ ಸಹಾಯಧನ ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಪೌರಾಯುಕ್ತರು, ನಗರಸಭೆ, ಉಡುಪಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಾಹನ ಡಿಕ್ಕಿ: ವ್ಯಕ್ತಿಗೆ ಗಂಭೀರ ಗಾಯ

ಕುಂದಾಪುರ: ಹೆಮ್ಮಾಡಿ -ಕೊಲ್ಲೂರು ರಸ್ತೆಯಲ್ಲಿ ಹೆಮ್ಮಾಡಿ ಕಡೆಯಿಂದ ಕೊಲ್ಲೂರು ಕಡೆಗೆ ಹೋಗುತ್ತಿದ್ದ ಬೈಕ್ ನಾನಾ ಆಗ್ರೋ ಫ್ಯಾಕ್ಟರಿ ಹತ್ತಿರ ರಸ್ತೆ ದಾಟುತ್ತಿದ್ದ ಕಟ್‌ಬೇಲ್ತೂರು ಗ್ರಾಮದ ಕುಪ್ಪ ಎಂಬುವರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಗಂಭೀರವಾಗಿ ಗಾಯಗೊಂಡು ಅರೆಪ್ರಜ್ಞಾವಸ್ಥೆಯಲ್ಲಿದ್ದ ಕುಪ್ಪ ಅವರನ್ನು ಚಿಕಿತ್ಸೆ ಬಗ್ಗೆ ಕುಂದಾಪುರ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿ ಹೆಚ್ಚಿನ ಚಿಕಿತ್ಸೆ ಬಗ್ಗೆ ಮಣಿಪಾಲ ಕೆಎಂಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಭೀಮ ಯಕ್ಷಶಿಕ್ಷಣ ಸನಿವಾಸ ಶಿಬಿರ'ದ ಸಮಾರೋಪದಲ್ಲಿ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಬಣ್ಣನೆ

ಯಕ್ಷ ಕಲಾರಂಗದ ಸೇವೆಯಲ್ಲಿ ಸಮಾಜಕ್ಕೊಂದು ಸಂದೇಶವಿದೆ

ಉಡುಪಿ: ಯಕ್ಷಗಾನ ಕಲಾರಂಗದ ಯಾವುದೇ ಕಾರ್ಯಕ್ರಮವಿರಲಿ, ಅದರಲ್ಲಿ ಸಮಾಜಕ್ಕೊಂದು ಉತ್ತಮ ಸಂದೇಶವಿರುತ್ತದೆ. ಶಿಬಿರಾರ್ಥಿಗಳು ಹಂಚಿಕೊಂಡ ಅನುಭವಗಳನ್ನು ಗಮನಿಸಿದರೆ ಈ ಶಿಬಿರವು ಅತ್ಯಂತ ಯಶಸ್ವಿಯಾಗಿರುವುದು ಸ್ಪಷ್ಟವಾಗುತ್ತದೆ ಎಂದು ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ನುಡಿದರು.
ನಗರದ ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಯಕ್ಷಶಿಕ್ಷಣ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ಒಂದು ವಾರದ 'ಭೀಮ ಯಕ್ಷಶಿಕ್ಷಣ ಸನಿವಾಸ ಶಿಬಿರ'ದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಎಲ್ಲರ ಪ್ರೀತಿ ವಿಶ್ವಾಸ ಗಳಿಸಿದೆ

ಸಮರ್ಪಣಾಭಾವದ ಸೇವೆಯಿಂದಾಗಿಯೇ ಕಲಾರಂಗವು ಇಂದು ಸಮಾಜದಲ್ಲಿ ಎಲ್ಲರ ಪ್ರೀತಿ ಮತ್ತು ವಿಶ್ವಾಸವನ್ನು ಗಳಿಸಲು ಸಾಧ್ಯವಾಗಿದೆ ಎಂದು ಅವರು ಶ್ಲಾಘಿಸಿದರು.



ಅಭಿಯಾನ ಬದ್ಧತೆಯ ಸಂಕೇತ

ಇದೇ ಸಂದರ್ಭದಲ್ಲಿ ಶಿಬಿರದ ನಿರ್ದೇಶಕ ಗುರು ಬನ್ನಂಜೆ ಸಂಜೀವ ಸುವರ್ಣರನ್ನು ಗೌರವಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿ, ಕಳೆದ 18 ವರ್ಷಗಳಿಂದ ಈ ಅಭಿಯಾನ ನಿರಂತರವಾಗಿ ನಡೆಯುತ್ತಿರುವುದು ಕಾರ್ಯಕರ್ತರ ಬದ್ಧತೆಯ ಸಂಕೇತ ಎಂದು ಪಣಂಬೂರು ವಾಸುದೇವ ಐತಾಳರು ಉಲ್ಲೇಖಿಸಿದರು.
ಮುಖ್ಯ ಅತಿಥಿಗಳಾಗಿ ಭೀಮ ಗೋಲ್ಡ್ ಪ್ರೈ. ಲಿ. ಸಂಸ್ಥೆಯ ಪ್ರತಿನಿಧಿ ಪೆರಂಪಳ್ಳಿ ರಾಘವೇಂದ್ರ ಭಟ್, ಡಾ. ಸಂದೀಪ ಶೆಟ್ಟಿ ರವೀಂದ್ರ ಶೆಟ್ಟಿ ಕೊಲ್ಲಬೆಟ್ಟು ಹಾಗೂ ಶ್ರೀನಿವಾಸ ರಾವ್ ಹಿರಿಯಡ್ಕ ಪಾಲ್ಗೊಂಡಿದ್ದರು.
ವೇದಿಕೆಯಲ್ಲಿದ್ದ ಗಣ್ಯರು ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ, ಗುಂಪು ಛಾಯಾಚಿತ್ರ ಹಾಗೂ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಿದರು. ಹತ್ತು ಮಂದಿ ಶಿಬಿರಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ಸಭಾ ಕಾರ್ಯಕ್ರಮದ ಮೊದಲು ಶಿಬಿರದ 103 ವಿದ್ಯಾರ್ಥಿಗಳು ತಾವು ಕಲಿತ ಹೆಜ್ಜೆ, ತಾಳ ಹಾಗೂ ಅಭಿನಯದ ತುಣುಕುಗಳನ್ನು ಸುಂದರವಾಗಿ ಪ್ರಸ್ತುತಪಡಿಸಿದರು.
ಯಕ್ಷಗಾನ ಕಲಾರಂಗದ ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ಪ್ರಸ್ತಾವನೆಯೊಂದಿಗೆ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ವಿ.ಜಿ. ಶೆಟ್ಟಿ ವೇದಿಕೆಯಲ್ಲಿದ್ದರು. ನಾರಾಯಣ ಎಂ. ಹೆಗಡೆ ವಂದಿಸಿದರು. ಶಿಬಿರದ ಸಂಯೋಜಕ ನಿರಂಜನ ಭಟ್ ಎಂ. ಹಾಗೂ ಸಂಸ್ಥೆಯ ಕಾರ್ಯಕರ್ತರು ಸಹಕರಿಸಿದರು. ಪ್ರೊ.ಕೆ. ಸದಾಶಿವ ರಾವ್, ಪ್ರೊ. ಎಂ.ಎಲ್. ಸಾಮಗ ಉಪಸ್ಥಿತರಿದ್ದರು.

ಗೌರವಾರ್ಪಣೆ

ಶಿಬಿರದ ಶಿಕ್ಷಕರಾದ ನರಸಿಂಹ ತುಂಗ, ಆದ್ಯತಾ ಭಟ್, ಶ್ರೀಧರ ಹೆಗಡೆ, ಮಹೇಶ್ ಮಂದಾರ್ತಿ, ಶಿಶಿರ್, ಮನೋಜ್, ಕಾರ್ತಿಕ್ ಭಟ್, ಶ್ರುತಿ ಬಂಗೇರ, ಪಲ್ಲವಿ ಕೊಡಗು ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಪವನ್ ಕಿರಣ್ಕೆರೆ, ಮಿಥುನ್ ನಾಯಕ್ ಅವರನ್ನು ಗೌರವಿಸಲಾಯಿತು.

ಪ್ರಶ್ನಿಸುವ ಗುಣ ಬೆಳೆಯಲಿ

"ಕಲಾವಿದರು ವೇದಿಕೆಯ ಮೇಲೆ ಅಪಸವ್ಯಗಳನ್ನು ಪ್ರದರ್ಶಿಸಿದಾಗ ಅದನ್ನು ಪ್ರಶ್ನಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಸದಭಿರುಚಿಯ ಯಕ್ಷಪ್ರೇಕ್ಷಕರ ನಿರ್ಮಾಣ ಯಕ್ಷಶಿಕ್ಷಣದಿಂದ ಮಾತ್ರ ಸಾಧ್ಯ.

- ಬನ್ನಂಜೆ ಸಂಜೀವ ಸುವರ್ಣ, ಶಿಬಿರದ ನಿರ್ದೇಶಕರು, ಗುರು

ಕೃಷಿ, ಆರೋಗ್ಯ ಕ್ಷೇತ್ರದಲ್ಲಿ ಹೆಚ್ಚೆಚ್ಚು ಸಂಶೋಧನೆ ನಡೆಯಲಿ: ಖಾದರ್



ಕುಂದಾಪುರ: ದೇಶದ ಬೆನ್ನೆಲುಬಾದ ಕೃಷಿ ಕ್ಷೇತ್ರದೊಂದಿಗೆ ಆರೋಗ್ಯ ಕ್ಷೇತ್ರದ ಬಗ್ಗೆ ಹೆಚ್ಚೆಚ್ಚು ಸಂಶೋಧನೆ ಆಗಬೇಕಾಗಿದೆ. ಸಂಶೋಧನೆ ಹೆಚ್ಚಾದಷ್ಟು ದೇಶಕ್ಕೆ ದೊಡ್ಡ ಕೊಡುಗೆ ಸಿಕ್ಕಂತಾಗಲಿದೆ. ನಾವು ಕೂಡ ಮುಂಚೂಣಿ ರಾಷ್ಟ್ರಗಳ ಸಾಲಿನಲ್ಲಿರಬೇಕಾದರೆ ಸಂಶೋಧನೆ ಹೆಚ್ಚಾಗಬೇಕು. ಆ ನಿಟ್ಟಿನಲ್ಲಿ ನಮ್ಮ ಶಿಕ್ಷಣ ಸಂಸ್ಥೆಗಳು ಕಾರ್ಯ ಪ್ರವೃತ್ತರಾಗಬೇಕು ಎಂದು ರಾಜ್ಯ ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಹೇಳಿದರು.
ಅವರು ಮೂಡ್ಲಕಟ್ಟೆ ಐಎಂಜೆ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಕ್ವಾಂಟಮ್ ಕಂಪ್ಯೂಟೇಶನ್, ಪ್ರಿಸಿಶನ್ ಇನ್ಸ್ಟ್ರುಮೆಂಟೇಶನ್ ಮತ್ತು ಎಮರ್ಜಿಂಗ್ ರಿಸರ್ಚ್ ಇನ್ಫ್ರಾಸ್ಟ್ರಕ್ಚರ್ ವಿಷಯದಲ್ಲಿ ನಡೆದ ರಾಷ್ಟ್ರೀಯ ಶೃಂಗಸಭೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.
ಐಎಂಜೆ ಕಾಲೇಜಿನಲ್ಲಿ ಕ್ವಾಂಟಮ್ ಕಂಪ್ಯೂಟೇಶನ್ ವಿಚಾರದಲ್ಲಿ ಸಂಶೋಧನಾ ಕೇಂದ್ರ ಆರಂಭಿಸಿರುವುದು ದೂರದೃಷ್ಟಿ ಶಿಕ್ಷಣದ ನಿದರ್ಶನ. ಇಂತಹ ಸಂಶೋಧನೆಗಳ ಕೇಂದ್ರಗಳಿಗೆ ಸರ್ಕಾರದಿಂದ ಸಬ್ಸಿಡಿ ಒದಗಿಸುವ ಬಗ್ಗೆ ಸಿಎಂ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಜೊತೆ ಮಾತನಾಡಲಾಗುವುದು ಎಂದರು.
ಎನ್ ಕ್ಯೂಎಂನ ಪ್ರಧಾನ ಸಂಶೋಧಕ ಪ್ರೊ. ಸಪ್ತರ್ಷಿ ಚೌಧರಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ ಸಿದ್ದಾರ್ಥ ಜೆ. ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಲ್ಕತ್ತಾದ ವಿಇಸಿಸಿಯ ಡಾ. ಪರ್ಣಿಕಾ ದಾಸ್, ಐಎಂಜೆಐಆರ್ ನಿರ್ದೇಶಕ ಡಾ. ಸತ್ಯಜಿತ್, ಎಂಐಟಿ ಪ್ರಾಂಶುಪಾಲ ಡಾ. ರಾಮಕೃಷ್ಣ ಹೆಗ್ಡೆ ಇದ್ದರು. ಡಾ. ಎಸ್. ಎನ್. ಭಟ್ ಸ್ವಾಗತಿಸಿ, ರಾಜೇಶ್ವರೀ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಬಸ್ರೂರು ಶ್ರೀ ತುಳುವೇಶ್ವರ ದೇಗುಲದಲ್ಲಿ ಅದ್ದೂರಿ ಬಿಸು ಆಚರಣೆ



ಕುಂದಾಪುರ: ಬಸ್ರೂರಿನ ಶ್ರೀ ತುಳುವೇಶ್ವರ ದೇವಸ್ಥಾನದಲ್ಲಿ ಬಿಸು ಸಂಕ್ರಮಣದ ಅಂಗವಾಗಿ ದೀಪಾ ಆರಾಧನೆ ಹಾಗೂ ಬುಲೆ ಸಮರ್ಪಣ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.
ಕಾರ್ಯಕ್ರಮದಲ್ಲಿ ಭಕ್ತರು ದೀಪಗಳನ್ನು ಬೆಳಗಿಸಿ, ಶ್ರೀ ತುಳುವೇಶ್ವರ ಹಾಗೂ ಪರಿವಾರ ದೈವಗಳಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಬುಲೆ ಸಮರ್ಪಣೆ ಮೂಲಕ ದೇವರ ಅನುಗ್ರಹವನ್ನು ಕೋರಲಾಯಿತು. ಅನೇಕ ಭಕ್ತರು ತುಳುನಾಡಿನ ಹೊಸ ವರ್ಷವಾದ ಬಿಸು ಹಬ್ಬವನ್ನು ಭಕ್ತಿಭಾವದಿಂದ ಸ್ವಾಗತಿಸಿ, ದೇವರ ಸನ್ನಿಧಿಯಲ್ಲಿ ಶಾಂತಿ, ಆರೋಗ್ಯ ಹಾಗೂ ಸಮೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ತುಳುವ ಮಹಾಸಭೆ ಮೂಲ್ಕಿ ತಾಲೂಕು ಸಮಿತಿಯಿಂದ ಬುಲೆ ಕಾಣಿಕೆ ಸಮರ್ಪಣೆ ನಡೆಯಿತು. ತುಳುವೇಶ್ವರ ದೇವಸ್ಥಾನದ ಪುನಃ ವೈಭವೀಕರಣಕ್ಕಾಗಿ ಭೂದಾನ ಸೇವೆಗೆ ಸಂಬಂಧಿಸಿದ ವಿಜ್ಞಾಪನ ಪತ್ರವನ್ನು ಬಿಡುಗಡೆ ಮಾಡಲಾಯಿತು.
ಅರ್ಚಕ ಮಹೇಶ್ ಕಿಣಿ, ತುಳುವರ್ಲ್ಡ್ ಫೌಂಡೇಶನ್ ನಿರ್ದೇಶಕ ಡಾ. ರಾಜೇಶ್ ಆಳ್ವ, ಕೃಷ್ಣಮೂರ್ತಿ ಅಡಿಗ ಬಸ್ರೂರು, ಭಾನುಮತಿ ಶೆಟ್ಟಿ ಕಕ್ವಗುತ್ತು, ಕೃಷ್ಣಮೂರ್ತಿ ರಾವ್ ಪಾದೆಬೆಟ್ಟು, ಸನ್ಮತ್ ಹೆಗ್ಡೆ ಬಸ್ರೂರು, ದಿನಕರ ಕಿಣಿ, ತುಳುವರ್ಲ್ಡ್ ಫೌಂಡೇಶನ್ ಪ್ರಧಾನ ಕಾರ್ಯದರ್ಶಿ ವಸಂತ ರೈ, ಕಾರ್ಯದರ್ಶಿ ಹರಿಪ್ರಸಾದ್ ರೈ ಜಿ.ಕೆ., ಮುಲ್ಕಿ ಬಂಟ್ಸ್ ಸಂಘ ಮಹಿಳಾ ಘಟಕ ಅಧ್ಯಕ್ಷೆ ರೋಹಿಣಿ ಶೆಟ್ಟಿ, ಮೂಲ್ಕಿ ಬಿಲ್ಲವ ಸಂಘ ಮಹಿಳಾ ಮಂಡಳಿ ಗೌರವಾಧ್ಯಕ್ಷೆ ಸರೋಜಿನಿ ಸುವರ್ಣ, ತುಳುವ ಮಹಾಸಭೆ ಸಂಚಾಲಕ ಗಣೇಶ್ ಬಂಗೇರ, ವಿನಯ ಆರ್. ಆಳ್ವಾ, ಗೀತಾ ಗಣೇಶ್, ಭಾರತಿ ರೈ ಮುಲ್ಕಿ, ಪ್ರಜ್ವಲ್ ಆಳ್ವ ಇದ್ದರು.

ಕುಂದಾಪುರದಲ್ಲಿ ಒಳಾಂಗಣ ಕಬಡ್ಡಿ, ವಾಲಿಬಾಲ್ ಕೋರ್ಟ್: ಶಾಸಕ ಕೊಡ್ಗಿ



ಕುಂದಾಪುರ: ಕುಂದಾಪುರದಲ್ಲಿ ಒಳಾಂಗಣ ಕಬಡ್ಡಿ ಮತ್ತು ವಾಲಿಬಾಲ್ ಕೋರ್ಟ್ ನಿರ್ಮಿಸಲಾಗುವುದು. ಕ್ರೀಡಾಪಟುಗಳು ಆಸಕ್ತಿ ತೋರಿಸಿದರೆ ಸೂಕ್ತ ಸಹಕಾರ ನೀಡಲಾಗುವುದು. ಕುಂದಾಪುರದಲ್ಲಿ ಒಂದು ಪ್ರಬಲ ವಾಲಿಬಾಲ್ ತಂಡ ಕಟ್ಟಲು ಪ್ರಯತ್ನಿಸಬೇಕು ಎಂದು ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಹೇಳಿದರು.
ಕುಂದಾಪುರ ವಾಲಿಬಾಲ್ ಅಕಾಡೆಮಿ ವತಿಯಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕುಂದಾಪುರ ಹಾಗೂ ಕುಂದಾಪುರ ಫ್ರೆಂಡ್ಸ್ ಕುಂದಾಪುರ ಸಹಯೋಗದೊಂದಿಗೆ ಕುಂದಾಪುರದ ಗಾಂಧಿ ಮೈದಾನದಲ್ಲಿ ಆಯೋಜಿಸಲಾಗಿರುವ ವಾಲಿಬಾಲ್ ತರಬೇತಿ ಶಿಬಿರಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.
ಕ್ರೀಡೆಯಲ್ಲಿ ನಿರಂತರವಾಗಿ ಅಭ್ಯಾಸ ಮಾಡುವುದರಿಂದ ಉತ್ತಮ ಕ್ರೀಡಾಪಟುವಾಗಿ ಬೆಳೆಯಬಹುದು. ಆಸಕ್ತಿ ಮತ್ತು ಪ್ರಯತ್ನವನ್ನು ಮುಂದುವರಿಸಬೇಕು ಎಂದರು.
ಮಂಗಳೂರು ವಿವಿ ವಾಲಿಬಾಲ್ ತಂಡದ ಮಾಜಿ ನಾಯಕ ರಾಜೇಶ ಕಾವೇರಿ ಮಾತನಾಡಿ, ವಾಲಿಬಾಲ್ ಆಟವನ್ನು ಉತ್ತೇಜಿಸುವ ಸಲುವಾಗಿ ಮತ್ತು ವಿದ್ಯಾರ್ಥಿಗಳಲ್ಲಿ ವಾಲಿಬಾಲ್ ಆಟವನ್ನು ಪ್ರೇರೇಪಿಸುವ ಉದ್ದೇಶದಿಂದ ತರಬೇತಿ ಶಿಬಿರ ಆಯೋಜಿಸಲಾಗಿದ್ದು, ಅವಿಭಜಿತ ಕುಂದಾಪುರ ತಾಲೂಕಿನ ಸುಮಾರು 35ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಶಿಬಿರದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದರು.
ಕುಂದಾಪುರಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಧಿಕಾರಿ ಸತ್ಯನಾರಾಯಣ, ಅಮೆಚೂರ್ ಕುಂದಾಪುರ ತಾಲೂಕು ಕಬಡ್ಡಿ ಅಸೋಸಿಯೇಶನ್ ಅಧ್ಯಕ್ಷ ಸುನೀಲ್ ಶೆಟ್ಟಿ ಹೇರಿಕುದ್ರು, ಹಿರಿಯ ವಾಲಿಬಾಲ್ ಆಟಗಾರ ಮೆಲ್ವಿನ್ ರೆಬೆಲ್ಲೊ, ತರಬೇತುದಾರರಾದ ಮೊಹಮ್ಮದ್ ಸಮೀರ್, ಶ್ರೀಧರ ಆಚಾರ್ಯ ಉಪಸ್ಥಿತರಿದ್ದರು. ತರಬೇತುದಾರ ಇಲಿಯಾಸ್ ಬಿ. ಕಾರ್ಯಕ್ರಮ ನಿರ್ವಹಿಸಿದರು.

ವಿದ್ಯಾರ್ಥಿ ಸಮುದಾಯ ಮಾದಕ ವಸ್ತುಗಳಿಂದ ದೂರವಿರಲಿ: ನಿರಂಜನ ಗೌಡ



ಕುಂದಾಪುರ: ವಿದ್ಯಾರ್ಥಿ ಸಮುದಾಯ ವಿವಿಧಬಗೆಯ ಮಾದಕ ವಸ್ತುಗಳಿಂದ ದೂರವಿರಬೇಕು. ಆರೋಗ್ಯಪೂರ್ಣ ಜೀವನ ಶೈಲಿಯನ್ನು ಅನುಸರಿಸಬೇಕು. ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಮೋಸಗಳು ಹೆಚ್ಚುತ್ತಿರುವುದರಿಂದ ವಿದ್ಯಾರ್ಥಿಗಳು ಈ ಕುರಿತು ಜಾಗೃತರಾಗಬೇಕು. ಅಪರಿಚಿತ ಲಿಂಕ್‌ಗಳು, ಫೋನ್ ಕರೆಗಳು ಮತ್ತು ಸಂದೇಶಗಳಿಗೆ ಎಚ್ಚರಿಕೆಯಿಂದ ಸ್ಪಂದಿಸಬೇಕು ಎಂದು ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸ್ ಉಪನಿರೀಕ್ಷಕ ನಿರಂಜನ ಗೌಡ ಹೇಳಿದರು.
ಕುಂದಾಪುರದ ಡಾ. ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳು ಹಾಗೂ ರ್‍ಯಾಗಿಂಗ್ ವಿರೋಧಿ ಮಾದಕ ದ್ರವ್ಯ ವಿರೋಧಿ ಘಟಕಗಳ ಜಂಟಿ ಆಶ್ರಯದಲ್ಲಿ ಕಾಲೇಜಿನ ಮೂಕಾಂಬಿಕಾ ಸಭಾಂಗಣದಲ್ಲಿ ಜರಗಿದ ನಶಾ ಮುಕ್ತ ಅಭಿಯಾನದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.
ವಿವಿಧ ಬಗೆಯ ಮಾದಕ ವಸ್ತುಗಳು ಹಾಗೂ ಅವುಗಳಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಮತ್ತು ಸೈಬರ್ ಕ್ರೈಮ್ ಕುರಿತು ಅವರು ಮಾಹಿತಿ ನೀಡಿದರು. ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಉಪ ಪ್ರಾಂಶುಪಾಲ ಡಾ. ಚೇತನ ಶೆಟ್ಟಿ ಕೋವಾಡಿ, ಎನ್.ಎಸ್.ಎಸ್. ಘಟಕ- 2ರ ಕಾರ್ಯಕ್ರಮ ಅಧಿಕಾರಿ ಪೂಜಾ ಕುಂದರ್, ರ್‍ಯಾಗಿಂಗ್ ವಿರೋಧಿ ಮಾದಕ ದ್ರವ್ಯ ವಿರೋಧಿ ಘಟಕದ ಸಂಚಾಲಕಿ ವಿಲ್ಮಾ ಶೆರಲ್ ಕರ್ನಾಲಿಯೊ ಇದ್ದರು. ರ್‍ಯಾಗಿಂಗ್ ವಿರೋಧಿ ಮಾದಕ ದ್ರವ್ಯ ವಿರೋಧಿ ಘಟಕದ ಸಂಚಾಲಕ ಸತೀಶ ಶೆಟ್ಟಿ ಹೆಸ್ಕತ್ತೂರು ಸ್ವಾಗತಿಸಿ, ಎನ್.ಎಸ್.ಎಸ್. ಘಟಕ- 1ರ ಕಾರ್ಯಕ್ರಮ ಅಧಿಕಾರಿ ರಾಜೇಶ ಶೆಟ್ಟಿ ವಕ್ವಾಡಿ ವಂದಿಸಿದರು. ಸಮರ್ಥ್ ನಿರೂಪಿಸಿದರು.

ವಿಶ್ವಕರ್ಮ ಬ್ಯಾಂಕಿನ ಉಡುಪಿ ಶಾಖೆಯಿಂದ '38ನೇ ಸ್ವಚ್ಛತಾ ಹೀ ಸೇವಾ'



ಉಡುಪಿ:: ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಈ ಹಿನ್ನೆಲೆಯಲ್ಲಿ ಮಕ್ಕಳು ಸಣ್ಣವರಿರುವಾಗಲೇ ಅವರಲ್ಲಿ ಸ್ವಚ್ಛತೆಯ ಅರಿವು ಮತ್ತು ಜಾಗೃತಿಯನ್ನು ಮೂಡಿಸುವುದು ಅತ್ಯಂತ ಅವಶ್ಯ ಹಾಗೂ ಈ ನಿಟ್ಟಿನಲ್ಲಿ ಪೋಷಕರು ಹಾಗೂ ಶಿಕ್ಷಣ ಸಂಸ್ಥೆಗಳ ಪಾತ್ರ ಅತ್ಯಂತ ನಿರ್ಣಾಯಕ ಹಾಗೂ ಮಹತ್ವವಾದದ್ದು ಎಂದು ವಿಶ್ವಕರ್ಮ ಬ್ಯಾಂಕಿನ ನಿರ್ದೇಶಕ ಜಗದೀಶ್ ಆಚಾರ್ಯ ಕಪ್ಪೆಟ್ಟು ಹೇಳಿದರು.
ಅವರು ವಿಶ್ವಕರ್ಮ ಬ್ಯಾಂಕಿನ ಉಡುಪಿ ಶಾಖೆಯ ವತಿಯಿಂದ 'ಸ್ವಚ್ಛತಾ ಹೀ ಸೇವಾ' ಎಂಬ ಧ್ಯೇಯದೊಂದಿಗೆ ಉಡುಪಿಯಲ್ಲಿ ನಡೆದ 38ನೇ ಸ್ವಚ್ಛತಾ ಶ್ರಮದಾನ ಉದ್ಘಾಟಿಸಿ ಅವರು ಮಾತನಾಡಿದರು.
ಯುವಕ ವೃಂದ ಮಠದಬೆಟ್ಟು ಅಧ್ಯಕ್ಷ ಆನಂದ್ ಸುವರ್ಣ ಹಾಗೂ ಬನ್ನಂಜೆ ಸರಸ್ವತಿ ಅನುದಾನಿತಾ ಶಾಲೆ ಶಿಕ್ಷಕಿ ಶಾಂತಿಲತಾ ಹಸಿರು ನಿಶಾನೆಯನ್ನು ತೋರಿಸಿ ಶ್ರಮದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಉಡುಪಿ ಬನ್ನಂಜೆ ಮಠದಬೆಟ್ಟು ಪರಿಸರದಲ್ಲಿ ಸ್ವಚ್ಛತೆಯ ಜಾಗೃತಿಯ ನಿಟ್ಟಿನಲ್ಲಿ ಶ್ರಮದಾನ ಕಾರ್ಯಕ್ರಮವು ನಡೆಯಿತು.
ವಿಶ್ವಕರ್ಮ ಬ್ಯಾಂಕಿನ ಉಪಾಧ್ಯಾಕ್ಷ ಜಗದೀಶ್ ಪಡುಪಣಂಬೂರು, ನಿರ್ದೇಶಕ ಜಗದೀಶ ಆಚಾರ್ಯ ಕಪ್ಪೆಟ್ಟು, ಮಠದಬೆಟ್ಟು ಯುವಕ ವೃಂದದ ಪ್ರಮುಖರಾದ ತಾರಾ ಸತೀಶ್, ಪವನ್, ಸ್ಥಳೀಯರಾದ ಜಯಕರ ಶೆಟ್ಟಿ, ಅನಂತ್ ಶೆಣೈ, ಮೋಹನ್, ಶ್ರೀಕಾಂತ್, ಸರಸ್ವತಿ ಅನುದಾನಿತಾ ಶಾಲೆ ಬನ್ನಂಜೆ ಶಾಲೆ ಶಿಕ್ಷಕಿ ಸುಜಾತಾ, ಅಂಗನವಾಡಿ ಶಿಕ್ಷಕಿಯಾದ ಹರಿಣಾಕ್ಷಿ, ಶಾಲೆಯ ವಿದ್ಯಾರ್ಥಿಗಳು, ವಿಶ್ವಕರ್ಮ ಸಹಕಾರ ಬ್ಯಾಂಕಿನ ಉಡುಪಿ ಶಾಖೆಯ ಶಾಖಾಧಿಕಾರಿ ಸುದೇಶ್ ಹಾಗೂ ಸಿಬ್ಬಂದಿ, ಸದಸ್ಯರು, ಗ್ರಾಹಕರು, ಸ್ಥಳೀಯರು ಶ್ರಮದಾನದಲ್ಲಿ ಸಹಕರಿಸಿದರು.

ಪಡುಪಾಲು ಶ್ರೀ ಬಬ್ಬುಸ್ವಾಮಿ ದೇವಸ್ಥಾನ: ನೂತನ ಶಾಶ್ವತ ತಗಡು ಚಪ್ಪರ ಉದ್ಘಾಟನೆ



ಉಡುಪಿ: ಶ್ರೀ ಬಬ್ಬುಸ್ವಾಮಿ ದೇವಸ್ಥಾನ (ಪಡುಪಾಲು) ಅಂಬಲಪಾಡಿ ಇದರ ನೇಮೋತ್ಸವ ಸಮಿತಿಯ ವತಿಯಿಂದ ದೈವಸ್ಥಾನದ ಪ್ರಾಂಗಣದಲ್ಲಿ ನಿರ್ಮಿಸಲ್ಪಟ್ಟ ವಿಸ್ತೃತ ಶಾಶ್ವತ ತಗಡು ಚಪ್ಪರವನ್ನು ಅಂಬಲಪಾಡಿ ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನದ ಧರ್ಮದರ್ಶಿ ಡಾ! ನಿ.ಬೀ. ವಿಜಯ ಬಲ್ಲಾಳ್ ಅವರು ಉದ್ಘಾಟಿಸಿದರು.
ಈ ಸಂದರ್ಭದಲ್ಲಿ ವೇದಮೂರ್ತಿ ಪುತ್ತೂರುಉದಯತಂತ್ರಿ, ನೇಮೋತ್ಸವ ಸಮಿತಿಯ ಉಪಾಧ್ಯಕ್ಷರಾದ ಪಠೇಲರ ಮನೆ ಭರತ್ ಶೆಟ್ಟಿ ಅಂಬಲಪಾಡಿ, ಕೆ.ಮಂಜಪ್ಪ ಸುವರ್ಣ, ಗೌರವ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಅಂಬಲಪಾಡಿ, ಪ್ರಧಾನ ಕಾರ್ಯದರ್ಶಿಗಳಾದ ಯೋಗೀಶ್ ಶೆಟ್ಟಿ, ಸುನಿಲ್ ಕುಮಾರ್, ಗೌರವ ಕೋಶಾಧಿಕಾರಿ ಭರತ್ ರಾಜ್ ಕೆ.ಎನ್., ಜತೆ ಕಾರ್ಯದರ್ಶಿಗಳಾದ ಕೃಷ್ಣ ಅಂಬಲಪಾಡಿ, ಲಕ್ಷ್ಮಣ ಪೂಜಾರಿ, ಕೋಶಾಧಿಕಾರಿಗಳಾದ ಕೇಳು ನಾರಾಯಣ, ಪಠೇಲರ ಮನೆ ಶರತ್ ಶೆಟ್ಟಿ, ಹತ್ತು ಸಮಸ್ತರ ಗುರಿಕಾರ ದೇವದಾಸ್, ಪ್ರಧಾನ ಅರ್ಚಕ ವಿಠಲ, ಪ್ರಮುಖರಾದ ಜಯರಾಮ್ ಶೆಟ್ಟಿ ಅಂಬಲಪಾಡಿ, ಶಿವಾನಂದ, ಹೊನ್ನಯ್ಯ, ಸದಾನಂದ, ರಮೇಶ್, ಕರುಣಾಕರ ಸಹಿತ ನೇಮೋತ್ಸವ ಸಮಿತಿ ಸದಸ್ಯರು, ಹತ್ತು ಸಮಸ್ತರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಅಜೆಕಾರು ಜ್ಞಾನಸುಧಾ ಪಿಯು ಕಾಲೇಜು ಲೋಕಾರ್ಪಣೆ | ತನ್ನೂರಿನ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲು ಮುಂದಾಗಿರುವುದು ಶ್ರೇಷ್ಠ ಕಾರ್ಯ

ಜ್ಞಾನಸುಧಾ ಸಂಸ್ಥೆ ಮೂಲಕ ಶೈಕ್ಷಣಿಕ ಕ್ರಾಂತಿಗೈದ ಡಾ.ಸುಧಾಕರ್ ಶೆಟ್ಟಿ ಶಿಕ್ಷಣ ಬ್ರಹ್ಮ: ಡಾ.ವೀರಪ್ಪ ಮೊಯ್ಲಿ

ಕಾರ್ಕಳ: ಜ್ಞಾನಸುಧಾ ಶಿಕ್ಷಣ ಸಂಸ್ಥೆ ಕ್ರಾಂತಿಯನ್ನೇ ಸೃಷ್ಟಿಸಿದೆ. ಇಲ್ಲಿನ ವಿದ್ಯಾರ್ಥಿಗಳು ಸಾಧನೆ ತೋರಿ ಕೇವಲ ರಾಜ್ಯ ಅಥವಾ ದೇಶಕ್ಕೆ ಸೀಮಿತವಾಗದೇ ಇಡೀ ಜಗತ್ತಿಗೆ ಜ್ಞಾನಸುಧಾದ ಸುಗಂಧವನ್ನು ಪಸರಿಸಿದ್ದಾರೆ ಎಂದು ಎಂದು ಮಾಜಿ ಮುಖ್ಯಮಂತ್ರಿ ಡಾ. ಎಂ. ವೀರಪ್ಪ ಮೊಯ್ಲಿ ಅಭಿಪ್ರಾಯಪಟ್ಟರು.
ಅವರು ಅಜೆಕಾರು ಜ್ಞಾನಸುಧಾ ಪಿಯು ಕಾಲೇಜು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.
ಡಾ. ಸುಧಾಕರ್ ಶೆಟ್ಟಿ ಶಿಕ್ಷಣ ಬ್ರಹ್ಮನಾಗಿ ಗುರುತಿಸಿಕೊಂಡವರು. ಜ್ಞಾನಸುಧಾದಂತಹ ಶ್ರೇಷ್ಠ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿ ಇದೀಗ ತನ್ನೂರಿನ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಮಹತ್ ಕಾರ್ಯಕ್ಕೆ ಮುಂದಾಗಿರುವುದು ಶ್ರೇಷ್ಠ ಕಾರ್ಯವೆಂದು ಮೊಯ್ಲಿ ಹೇಳಿದರು.



ಅಜೆಕಾರು ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ಲೋಕಾರ್ಪಣೆಗೊಳಿಸಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ, ಶಿಕ್ಷಣದ ನಿಜವಾದ ಅರಿವಿರುವವರು ವಿದ್ಯಾಸಂಸ್ಥೆ ಕಟ್ಟಿದಾಗ ಅಲ್ಲಿ ಗುಣಮಟ್ಟದ ಶಿಕ್ಷಣ ಲಭಿಸಲು ಸಾಧ್ಯ. ಆದರ್ಶ ಶಿಕ್ಷಕರಾಗಿರುವ ಡಾ. ಸುಧಾಕರ್ ಶೆಟ್ಟಿ ಅವರು ಈ ಭಾಗದಲ್ಲಿ ಸ್ವರ್ಗವೇ ಧರೆಗಿಳಿದಂತಹ ಅತ್ಯುತ್ತಮ ಶೈಕ್ಷಣಿಕ ವಾತಾವರಣ ಸೃಷ್ಟಿಸಿದ್ದಾರೆ ಎಂದರು.

ಜ್ಞಾನಸುಧಾ ರಾಜ್ಯಕ್ಕೇ ಮಾದರಿ

ಶಾಸಕ ವಿ. ಸುನಿಲ್ ಕುಮಾರ್ ಮಾತನಾಡಿ, 15 ವರ್ಷಗಳ ಹಿಂದೆ ಬಂಡೆಕಲ್ಲುಗಳಿಂದ ಕೂಡಿದ್ದ ಜಾಗವನ್ನು ಇಂದು ರಾಜ್ಯವೇ ಹೆಮ್ಮೆಪಡುವಂತಹ 'ಗಣಿತ ನಗರ'ವಾಗಿ ಪರಿವರ್ತಿಸಿದ ಡಾ. ಸುಧಾಕರ್ ಶೆಟ್ಟಿಯವರ ಪರಿಶ್ರಮ ಅಪಾರ ಎಂದರು.
ನಿಟ್ಟೆ ವಿವಿ ಕುಲಪತಿ ವಿಶಾಲ್ ಹೆಗ್ಡೆ ಮಾತನಾಡಿ, ಕ್ಯಾಂಪಸ್‌ಗೆ ಬಂದಾಗ ನನಗೆ ನಿಟ್ಟೆ ವಿದ್ಯಾ ಸಂಸ್ಥೆಯ ಆವರಣಕ್ಕೆ ಬಂದಷ್ಟೇ ಸಂತೋಷವಾಯಿತು. ನಮ್ಮ ಸಂಸ್ಥೆಯಂತೆ ಭವ್ಯವಾದ ಗಣಪತಿ ದೇವಸ್ಥಾನದ ಜೊತೆಗೆ ಸುಸಜ್ಜಿತವಾದ ಕಟ್ಟಡ ನಿರ್ಮಿಸಿದ್ದಾರೆ. ಅಜೆಕಾರಿನ ಮಕ್ಕಳಿಗೆ ಯಾವುದೇ ಶುಲ್ಕವಿಲ್ಲದೇ ಉಚಿತ ಶಿಕ್ಷಣ ನೀಡುತ್ತಿರುವುದು ಅರ್ಥಪೂರ್ಣ ಎಂದರು.
ಮಹಾಗಣಪತಿ ದೇವಸ್ಥಾನ ಸಮಿತಿ ಗೌರವಾಧ್ಯಕ್ಷ ಶಿವರಾಮ ಶೆಟ್ಟಿ ಮಾತನಾಡಿ, ಅಜೆಕಾರಿನ ಮಕ್ಕಳಿಗೆ ಉಚಿತ ಶಿಕ್ಷಣದ ಜೊತೆಗೆ ಮಧ್ಯಾಹ್ನದ ಊಟವನ್ನೂ ನೀಡಬೇಕೆಂಬ ಡಾ. ಸುಧಾಕರ್ ಶೆಟ್ಟಿ ಅವರ ಮಹತ್ವಾಕಾಂಕ್ಷೆಯ ಕನಸಿಗೆ ಮೆಚ್ಚುಗೆ ಸೂಚಿಸಿ ಬೆಂಬಲ ವ್ಯಕ್ತಪಡಿಸಿದರು.

ಸನ್ಮಾನ

ಮಾಜಿ ಮುಖ್ಯಮಂತ್ರಿ ಡಾ. ಎಂ. ವೀರಪ್ಪ ಮೊಯ್ಲಿ, ಗುರುನಾರಾಯಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ ಪೂಜಾರಿ ಮುದ್ರಾಡಿ, ಜೆಸಿಸಿ ಟಾಪರ್‌ಗಳಾದ ಕನಿಷ್ಕ್ ಅಮೀನ್, ಸೋಹನ್ ಗಿರಿರೆಡ್ಡಿ ಹಾಗೂ ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ 595ಕ್ಕಿಂತ ಅಧಿಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

10 ಲಕ್ಷ ರೂ. ಸಹಾಯಧನ

ಇದೇ ಸಂದರ್ಭದಲ್ಲಿ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ಡಯಾಲಿಸಿಸ್ ಪೇಶಂಟ್‌ಗಳ ಚಿಕಿತ್ಸೆಗಾಗಿ ಕಾರ್ಕಳ ರೋಟರಿ ಟಿಎಂಎ ಪೈ ಆಸ್ಪತ್ರೆಗೆ 10 ಲಕ್ಷ ರೂ.ವನ್ನು ವೀರಪ್ಪ ಮೊಯ್ಲಿಯವರ ಮೂಲಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಕೀರ್ತಿನಾಥ್ ಬಲ್ಲಾಳ್ ಅವರಿಗೆ ಹಸ್ತಾಂತರಿಸಲಾಯಿತು. ಡಾ. ಸುಧಾಕರ ಶೆಟ್ಟಿ ಸ್ವಾಗತಿಸಿದರು. ಯೋಗೀಶ್ ಕಿಣಿ ದೇಶಭಕ್ತಿ ಗೀತೆ ಹಾಡಿದರು. ಆಂಗ್ಲ ವಿಭಾಗದ ಮುಖ್ಯಸ್ಥೆ ಸಂಗೀತಾ ಕುಲಾಲ್ ಬೋಳ ನಿರೂಪಿಸಿದರು. ಟ್ರಸ್ಟಿ ಅನಿಲ್ ಕುಮಾರ್ ಜೈನ್ ವಂದಿಸಿದರು. ಸಂಸ್ಥೆ ಸಿಇಒ ದಿನೇಶ್ ಕೊಡವೂರು, ಪ್ರಾಂಶುಪಾಲ ಸಂತೋಷ್, ಗಣೇಶ್ ಶೆಟ್ಟಿ, ಶ್ರೀನಿಧಿ ಭಾಗವತ್, ಪಿಆರ್‌ಒ ಜ್ಯೋತಿ ಪದ್ಮನಾಭ ಭಂಡಿ, ಉಪಪ್ರಾಂಶುಪಾಲೆ ಸಾಹಿತ್ಯ ಸಹಕರಿಸಿದರು.